ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಅಕ್ಟೋ.-ನವೆಂ, ೨೦೧೭ ಸಂಪಾದಕ : ಡಿ.ಎಸ್.ನಾಗಭೂಷಣ ಸಂಪುಟ: ೬ ಸಂಚಿಕೆ: ೯-೧೦

ಚಂದಾ : ರೂ. ೨೦೦/-(ಅಕ್ಟೋ.೨೦೧೭ ರಿಂದ ಸೆಪ್ಟಂ. ೨೦೧೮) ಬಿಡಿ ಪ್ರತಿ: ರೂ. ೪೦/- ಪುಟ: ೪೦

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ *ಈ ಮೇಲ್:* dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ನನ್ನ ಅನಾರೋಗ್ಯವೂ ಸೇರಿದಂತೆ ಕೆಲ ಅನಿವಾರ್ಯ ಕಾರಣಗಳಿಂದ ನಿಂತಿದ್ದ 'ಹೊಸ ಮನುಷ್ಯ' ಪುನರಾರಂಭಗೊಂಡಿದೆ. ಇದರ ಹಿಂದೆ ಹಲವು ಓದುಗ ಮಿತ್ರರ ಒತ್ತಾಸೆಯೂ ಇದೆ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲವಷ್ಟೆ. ಓದುಗರು ಮತ್ತೆ ಪತ್ರಿಕೆಯ ಬಗ್ಗೆ ಅದೇ ಪ್ರೀತಿಯನ್ನು ತೋರುವರು ಎಂದು ನಂಬಿದ್ದೇನೆ.

ಪತ್ರಿಕೆಯ ಈ ಹಿಂದಿನ ಮಾರ್ಚ್ ಸಂಚಿಕೆ ಹೊರಬಂದಾಗಲೂ, ಯಾರೂ ನಿರೀಕ್ಷಿಸಿರಲಿಲ್ಲ, ಮೋದಿಯವರ ಜನಪ್ರಿಯತೆಯ ಅಲೆ ಹೀಗೆ ಇದ್ದಕ್ಕಿದ್ದಂತೆ ಇಳಿಮುಖ ಗತಿಗೆ ಈಡಾಗುವುದೆಂದು. ಆಗಲೂ ಸಹ ಮೋದಿ ಆಳ್ವಿಕೆ ಕನಿಷ್ಟ ಇನ್ನು ಹತ್ತು ವರ್ಷ ಖಚಿತವೆಂಬುದೇ ಎಲ್ಲರ ಅಭಿಪ್ರಾಯವಾಗಿತ್ತು. ದೇಶದ ರಾಜಕಾರಣದ ಮೇಲೆ ಅಷ್ಟು ಬಿಗಿ ಹಿಡಿತ ಸಾಧಿಸಿದ್ದರು ಮೋದಿ. ಜನ ಕೂಡ ಹತ್ತು ವರ್ಷಗಳ ಕಾಂಗ್ರೆಸ್ ಆಡಳಿತದ ಅನಾಹುತಗಳನ್ನು ನೋಡಿ ಇಂತಹ ಬಿಗಿ ಆಡಳಿತ ದೇಶಕ್ಕೆ ಬೇಕು ಎನ್ನುತ್ತಿದ್ದರು. ಆದರೆ ಕಳೆದ ಎರಡು ತಿಂಗಳುಗಳಿಂದೀಚೆಗೆ ದೇಶದ ರಾಜಕೀಯ ಹವಾದಲ್ಲಿ ನಿಚ್ಚಳ ಬದಲಾವಣೆಯೊಂದು ಕಾಣತೊಡಗಿದೆ. ಮೋದಿ ಈಗ ನಾವಾರೂ ಅಂದುಕೊಂಡಷ್ಟು ರಾಜಕೀಯವಾಗಿ ಭದ್ರರಾಗಿಲ್ಲ.

ಜನಪ್ರಿಯ ರಾಜಕಾರಣದಲ್ಲಿ ಯಾವಾಗಲೂ ಹೀಗೇ ಏನೋ! ಬದಲಾವಣೆಗಳು ಅನಿರೀಕ್ಷಿತವಾಗಿ ಬಂದೆರಗುತ್ತವೆ. ಮೋದಿಯವರ ಬಿಗಿ ಆಡಳಿತ ದೇಶಕ್ಕೆ ಏನು ಕೊಟ್ಟಿದೆ ಎಂದು ಜನವೀಗ ಆಲೋಚನೆ ಮಾಡಲು, ಪ್ರಶ್ನಿಸಲು ತೊಡಗಿದ್ದಾರೆ. ಅದಕ್ಕೆ ಕಾರಣಗಳು ಮೋದಿಯವರ ಆಡಳಿತ ವೈಖರಿಯಲ್ಲೇ ಇವೆ. ವಿದೇಶಗಳಲ್ಲಿದ್ದ ಕಪ್ಪು ಹಣ ತರಲಿಲ್ಲ. ಜನ ಕ್ಷಮಿಸಿದರು. ಆದರೆ ನಂತರದ ನೋಟು ರದ್ದತಿ ಯಾಕೆ ಮಾಡಿದರು? ಕಪ್ಪು ಹಣ ಹೊರತರಲು ಎಂದು ಮೋದಿ ಘೋಷಿಸಿದರು. ಆದರೆ ಕಪ್ಪುಹಣದ ಸಿಬಿರೂ ಅದರಿಂದ ಕಾಣಸಿಗಲಿಲ್ಲ. ರದ್ದಾದ ನೋಟುಗಳೆಲ್ಲ ಸಕ್ರಮವಾಗಿ ರಿಸರ್ವ್ ಬ್ಯಾಂಕ್ ಸೇರಿದೆ! ಆದರೆ ಇದರಿಂದಾಗಿ ನಮ್ಮ ಗ್ರಾಮಾಂತರ ಮತ್ತು ಸಣ್ಣ ಊರುಗಳಲ್ಲಿನ ರೈತರು, ಸಣ್ಣ ವ್ಯಾಪಾರಸ್ಥರ ಮತ್ತು ಉದ್ಯಮಿಗಳಂತಹ ಕಿರು ಬಂಡವಾಳ ನೆಚ್ಚಿರುವ ಜನ ಅನುಭವಿಸಿದ ಪಾಡು ಹೇಳತೀರದು. ರೈತರ ಇತ್ತೀಚಿನ ಅಶಾಂತಿ ಮತ್ತು ಆತ್ಮಹತ್ಯೆಗಳು ಇದರ ಪರಿಣಾಮಗಳೇ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಇನ್ನು ಇದರ ಪರೋಕ್ಷ ಪರಿಣಾಮಗಳಾದ ನಿರುದ್ಯೋಗ ಹೆಚ್ಚಳ ಮತ್ತು ವಿವಿಧ ಕ್ಷೇತ್ರಗಳಲ್ಲಿನ ಉತ್ಪಾದನೆಯಲ್ಲಿನ ಕುಸಿತ ಜನಜೀವನದ ಮೇಲೆ ಬೇರೆ ಬೇರೆ ರೀತಿಯ ಒತ್ತಡಗಳನ್ನು ಸೃಷ್ಟಿಸುತ್ತಿರುವುದರಿಂದಲೇ ಮೋದಿ ಸರ್ಕಾರದ ಬಗ್ಗೆ ಒಂದು ಸಣ್ಣ ಪುನರಾಲೋಚನೆ ಜನಸಾಮಾನ್ಯರ ಮಟ್ಟದಲ್ಲಿ ಆರಂಭವಾಯಿತು. ಲೋಕಸಭಾ ಚುನಾವಣೆಗಳನ್ನು ಗೆಲ್ಲಲು ಆಡಿದ ಕಪ್ಪು ಹಣ ವಾಪಸ್ ತರುವ ಮಾತಿನಂತೆಯೇ ಈ ಕಪ್ಪು ಹಣ ನಿರ್ಮೂಲನ ಮಾಡುವ ಮಾತೂ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ ಗೆಲ್ಲುವ ರಾಜಕೀಯ ತಂತ್ರವಾಗಿತ್ತೇ ಹೊರತು, ಅವುಗಳ ಹಿಂದೆ ಯಾವುದೇ ಸುಸಂಬದ್ಧ ಆರ್ಥಿಕ ಚಿಂತನೆ ಮತ್ತು ಸಿದ್ಧತೆ ಇರಲಿಲ್ಲ ಎಂದು ಜನ ಭಾವಿಸಿದ್ದರೆ ಆಶ್ಚರ್ಯವಿಲ್ಲ. ಮೋದಿಯವರ ವ್ಯಕ್ತಿತ್ವಕ್ಕೆ ತೊಡಿಸಲಾಗಿದ್ದ ರಾಜಕೀಯ ಮುತ್ಸದ್ದಿತನದ ಮುಖವಾಡ ನಿಧಾನವಾಗಿ ಕಳಚಿ ಬೀಳತೊಡಗಿದೆ.

ಈ ಮುಖವಾಡವನ್ನು ಬಲವಾಗಿ ಎಳೆಯುತ್ತಿರುವ ಇನ್ನೆರಡು ಕೈಗಳಲ್ಲಿ ಸಾಮಾನ್ಯ ಜನತೆಯ ಕಣ್ಣಿಗೂ ಬೀಳುತ್ತಿರುವ ಕೈ ಎಂದರೆ ಮೋದಿ ಸರ್ಕಾರ

ಹಳೆಯ ಚಂದಾದಾರಿಗೆ ಒಂದು ಮನವಿ

ಆರು ತಿಂಗಳ ಬಿಡುವಿನ ನಂತರ ಪತ್ರಿಕೆ ಪುನರಾರಂಭವಾಗಿದ್ದು, ನಮ್ಮ ಹಳೆಯ ಚಂದಾದಾರರಾದ ತಮಗೆ ಪತ್ರಿಕೆ ಇಷ್ಟವಾಗಿದ್ದು, ಚಂದಾ ನವೀಕರಿಸುವಿರಿ ಎಂದು ಭಾವಿಸಿ ಈ ಸಂಚಿಕೆಯನ್ನು ಕಳಿಸುತ್ತಿದ್ದೇವೆ. ದಯವಿಟ್ಟು ಮೇಲೆ ಸೂಚಿಸಿರುವ ಚಂದಾ ಮೊತ್ತವನ್ನು ಕೂಡಲೇ ಕಳಿಸಿ ಸಹಕರಿಸಬೇಕೆಂದು ಕೋರುತ್ತೇನೆ. ಚಂದಾ ಡಿಸೆಂಬರ ೧೫ರೊಳಗೆ ತಲುಪದಿದ್ದರೆ ಪತ್ರಿಕೆ ನಿಮಗೆ ಬೇಡವೆಂದು ಭಾವಿಸುತ್ತೇವೆ.

ಚಂದಾ ಕಳಿಸುವ ವಿಧಾನಕ್ಕಾಗಿ ೨೯ನೇ ಪುಟ ನೋಡಿ.-ಸಂಪಾದಕ

ಬಹು ಆಡಂಬರದಿಂದ ಜಾರಿಗೆ ತಂದ ಸರಕು ಮತ್ತು ಸೇವಾ ತೆರಿಗೆ (ಜಿಎಸ್ಟಿ) ವ್ಯವಸ್ಥೆ.. ಇದು ಮೋದಿ ಸರ್ಕಾರದ ಆರ್ಥಿಕ ವ್ಯವಹಾರಗಳ ನಿರ್ವಹಣೆ ಎಷ್ಟು ಅಪಕ್ವ ಎನ್ನುವುದನ್ನು ಅದು ಎಷ್ಟು ಜನಪೀಡಕವಾಗಿ ಪರಿಣಮಿಸಿತು ಎಂಬುದರ ಮೂಲಕವೇ ಜನತೆ ತಿಳಿಯುವಂತಾಯಿತು. ಮೋದಿ ಈಗ ತಮ್ಮ ಮಾತುಗಳೊಂದಿಗೆ ಉಗುಳನ್ನೂ ನುಂಗಿಕೊಂಡು ತಮ್ಮ ಆರ್ಥಿಕ ತಂಡವನ್ನು ಬದಲಾಯಿಸಿಕೊಂಡು ಪ್ರಯೋಗಗಳಲ್ಲಿ ತೊಡಗಿದ್ದಾರೆ. ಜನ ಫಲಗಳಿಗಾಗಿ ಕಾದು ನೋಡುತ್ತಿದ್ದಾರೆ.

ಮೋದಿ ಸರ್ಕಾರದ ಮುತ್ಸದ್ದಿತನದ ಬಗ್ಗೆ ಜನರಲ್ಲಿ ಭ್ರಮನಿರಸನ ಉಂಟು ಮಾಡಿರುವ ಇನ್ನೊಂದು ದೊಡ್ಡ ವೈಫಲ್ಯವೆಂದರೆ ಅವರ ಪಾಕಿಸ್ಥಾನ-ಕಾಶ್ಮೀರ ನೀತಿ. ಪಾಕಿಸ್ಥಾನದ ಬಗೆಗೆ ಕಾಂಗ್ರೆಸ್ ಸರ್ಕಾರದ್ದು ಮೃದು ನೀತಿ ಎಂದು ಸಾರಿ ಅಧಿಕಾರಕ್ಕೆ ಬಂದೊಡನೆ ಮೋದಿ ಮಾಡಿದ ಮೊದಲ ಕೆಲಸವೆಂದರೆ ಪಾಕಿಸ್ಥಾನಕ್ಕೆ ಏಕಪಕ್ಷೀಯವಾಗಿ ಸ್ನೇಹ ಹಸ್ತ ಚಾಚಿದ್ದು. ಈ ಭೋಳೆ ವಿದೇಶಾಂಗನೀತಿಯ ಪರಿಣಾಮವೆಂದರೆ ನಮ್ಮ ಸೇನಾನೆಲೆಗಳ ಮೇಲೆ ಪಾಕಿಸ್ಥಾನದ ನೆಲದಿಂದ ಬಂದ ಉಗ್ರರಿಂದ ಪದೇ ಪದೇ ದಾಳಿ. ಇನ್ನು ಕಾಶ್ಮೀರದಲ್ಲಿ ರಾಜಕೀಯ ಅಧಿಕಾರದ ಪಾಲು ಪಡೆಯುವ ಅವಸರದಲ್ಲಿ ಅಲ್ಲಿನ ಅನಪೇಕ್ಷಣೀಯ ರಾಜಕೀಯ ಶಕ್ತಿಗಳೊಂದಿಗೆ ಸೇರಿ ನಡೆಸಿದ ದಿಕ್ಕಿಲ್ಲದ ರಾಜಕಾರಣದಿಂದಾಗಿ ಈವರೆಗೆ ಭಾರತದ ಪರವಾಗಿದ್ದ ಅಲ್ಲಿನ ರಾಜಕೀಯ ಶಕ್ತಿಗಳು ಈಗ ತಮ್ಮ ನಿಲುವಿನ ಬಗ್ಗೆ ಪುನರಾಲೋಚನೆಗೆ ಮುಂದಾಗಿರುವುದು. ಇದರ ಒಟ್ಟು ಪರಿಣಾಮವೆಂದರೆ, ಕಾಶ್ಮೀರದ ಜನತೆ ಹಿಂದೆಂದೂ ಇಲ್ಲದಷ್ಟು ಭಾರತದ ವಿರೋಧಿಯಾಗಿರುವುದು. ಕಾಶ್ಮೀರದಲ್ಲಿ ಸರ್ಕಾರದ ಅವಧಿಯಲ್ಲಿ ಕಂಡಷ್ಟು ದಟ್ಟವಾದ ಅಶಾಂತಿಯು ಇತ್ತೀಚಿನ ವರ್ಷಗಳಲ್ಲಿ ಕಂಡಂತಿಲ್ಲದಿರುವುದು ಇದಕ್ಕೆ ಸಾಕ್ಷಿ.

ಮೋದಿ ಆಡಳಿತದ ಪವಾಡ ಕುರಿತ ಜನರ ನಿರೀಕ್ಷೆ ಹೀಗೆ ಹಲವು ನೆಲೆಗಳಲ್ಲಿ ಹುಸಿಯಾಗುತ್ತಿದೆ. ಅಮಿತ್ ಷಾ ಅವರ ಮಗ ಜಯ್ ಷಾನ ವ್ಯಾಪಾರ ವ್ಯವಹಾರ ಮೋದಿ ಸರ್ಕಾರದ ಅವಧಿಯಲ್ಲಿ ಸಾವಿರಾರು ಪಟ್ಟು ಹೆಚ್ಚಿದೆ ಎಂಬ ಸುದ್ದಿ ಸರ್ಕಾರದ ವಿಶ್ವಾಸಾರ್ಹತೆಗೆ ಪೆಟ್ಟು ನೀಡಿದೆ. ಆದರೆ ಇದೆಲ್ಲದಕ್ಕಿಂತ ದೊಡ್ಡ ಪೆಟ್ಟು ಬಿದ್ದಿರುವುದು ಸಂಘ ಪರಿವಾರದ ಕೆಲವು ಶಕ್ತಿಗಳ ಅಸಭ್ಯ ಮತ್ತು ಅನಾಗರಿಕ ವರ್ತನೆಗಳಿಂದಾಗಿ ಮತ್ತು ಅವನ್ನು ಖಂಡಿಸದ ಮತ್ತು ನಿಯಂತ್ರಿಸದ ಪಕ್ಷದ ನಾಯಕತ್ವದ ಉಡಾಳತನದಿಂದಾಗಿ. ಲವ್ ಜೆಹಾದ್, ತ್ರಿವಳಿ ತಲಾಖ್, ಗೋ ರಕ್ಷಣೆ, ತಾಜ್ ವಿವಾದ, ಹೀಗೆ ಒಂದೊಂದೇ ಕೀಟಲೆಯ ವಿಷಯಗಳನ್ನೆತ್ತಿಕೊಂಡು ಮತೀಯ ಸೌಹಾರ್ದತೆಯನ್ನು ಕದಡುತ್ತಾ, ಕೋಮು ಉನ್ಮಾದವನ್ನು ಹೆಚ್ಚಿಸುತ್ತಾ ದೇಶದಲ್ಲಿ ಅವರ ಕಲ್ಪನೆಯ ಹಿಂದೂ ಪ್ರಭುತ್ವವನ್ನು ನೆಲೆಸುವಂತೆ ಮಾಡುವ ಉದ್ದೇಶ ಹೊಂದಿರುವ ಈ ಶಕ್ತಿಗಳ ರೂಕ್ಷ ರಾಜಕಾರಣ

(೨೨ನೇ ಪುಟಕ್ಕೆ

ಲೋಹಿಯಾ ಜನ್ಮ ಶತಾಬ್ಧಿ ಪ್ರತಿಷ್ಠಾನ ವಾರ್ತೆ

ಪ್ರತಿಷ್ಠಾನದಿಂದ ನಾಲ್ಕು ಅಧ್ಯಯನ ಶಿಬಿರಗಳು

೧. ಅರಸೀಕೆರೆ : 'ಗಾಂಧಿ ಮತ್ತು ಸಮಾಜವಾದ':ಅಧ್ಯಯನ ಶಿಬಿರ



ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ಬೆಂಗಳೂರಿನ ಗಾಂಧಿ ಸ್ಮಾರಕ ನಿಧಿ ಹಾಗೂ ರಾಜ್ಯದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಡಿಯ 'ರಾಷ್ಟ್ರೀಯ ಸೇವಾ ಯೋಜನೆ'ಯ ಸಹಯೋಗದಲ್ಲಿ ಕಳೆದ ಜುಲೈ ೨೯ ಹಾಗೂ ೩೦ರಂದು ಅರಸೀಕೆರೆಯ ಕಸ್ತೂರಬಾ ಗಾಂಧಿ ಆಶ್ರಮದ ಆವರಣದಲ್ಲಿ ಕಾಲೇಜು ಅಧ್ಯಾಪಕರುಗಳಿಗಾಗಿ 'ಗಾಂಧಿ ಮತ್ತು ಸಮಾಜವಾದ' ವಿಷಯವಾಗಿ ಅಧ್ಯಯನ ಶಿಬಿರವೊಂದನ್ನು ಆಯೋಜಿಸಿತ್ತು.

ಶಿಬಿರದ ಆಶಯದ ಮಾತುಗಳನ್ನಾಡಿದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್. ನಾಗಭೂಷಣ ಅವರು, ನಮ್ಮಲ್ಲಿ ಹಲವು ಆಸೆಗಳನ್ನು ಹುಟ್ಟಿಸುತ್ತಾ ಬಂದು ಈಗ ಹಲವು ಸಮಸ್ಯೆಗಳಿಗೆ ಕಾರಣವಾಗಿರುವ ಜಾಗತೀಕರಣದ ಜಟಿಲ ಸವಾಲುಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಎದುರಿಸಲು ಗಾಂಧಿ ನಮಗೆ ನೆರವಾಗಬಲ್ಲರೇ ಎಂಬ ಪ್ರಶ್ನೆಯ ಪರಿಶೀಲನೆಯೇ ಈ ಶಿಬಿರದ ಆಯೋಜನೆಯ ಹಿಂದಿನ ಉದ್ದೇಶವಾಗಿದೆ ಎಂದರು.

ಶಿಬಿರವನ್ನು ಉದ್ಘಾಟಿಸಿದ ನಾಡಿನ ಹಿರಿಯ ಸಂಸ್ಕೃತಿ ಚಿಂತಕರಾದ ಲಕ್ಷ್ಮೀಶ ತೋಳ್ಪಾಡಿಯವರು ಗಾಂಧಿಯವರನ್ನು, ಅವರೊಂದಿಗೆ ಲೋಹಿಯಾ, ಜೆಪಿ, ಟ್ಯಾಗೋರ್, ಅಂಬೇಡ್ಕರ್ ಮುಂತಾದವರು ನಡೆಸಿದ ವಾಗ್ವಾದಗಳ ಜೊತೆಗೆ ಅರ್ಥ ಮಾಡಿಕೊಂಡಾಗ ಮಾತ್ರ ಅವರು ಇಂದಿಗೆ ಹೆಚ್ಚು ಪ್ರಸ್ತುತವಾಗುತ್ತಾರೆ ಎಂದರು.

ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವುಡೇ ಪಿ. ಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ನಿಧಿಯ ಉಪಾಧ್ಯಕ್ಷ ಜಿ.ಬಿ. ಶಿವರಾಜು, ಕಸ್ತೂರಬಾ ಗಾಂಧಿ ಆಶ್ರಮದ ರಾಷ್ಟ್ರೀಯ ಪ್ರತಿನಿಧಿ ಉಷಾ ಅಬ್ರಾಲ್ ಮತ್ತು ರಾಷ್ಟ್ರೀಯ ಸೇವಾ ಯೋಜನೆಯ ಸಮನ್ವಯಾಧಿಕಾರಿ ಡಾ. ಗಣನಾಥ ಎಕ್ಕಾರು ಉಪಸ್ಥಿತರಿದ್ದರು. ಲೋಹಿಯಾ ಜನ್ಮಶಾತಾಬ್ಧಿ ಪ್ರತಿಷ್ಠಾನದ ಕಾರ್ಯದರ್ಶಿ ಎನ್.ಎಂ. ಕುಲಕರ್ಣಿ ಸ್ವಾಗತಿಸಿದರು. ಗಾಂಧಿ ಸ್ಮಾರಕ ನಿಧಿಯ ಕಾರ್ಯದರ್ಶಿ ಈ. ಬಸವರಾಜು ವಂದಿಸಿದರು.

ನಂತರ ಎರಡೂ ದಿನಗಳ ನಾಲ್ಕು ಗೋಷ್ಠಿಗಳಲ್ಲಿ 'ಗಾಂಧಿ-ಜೆಪಿ ವಾಗ್ವಾದದಲ್ಲಿ ಮೂಡಿದ ಸಮಾಜವಾದ' ಕುರಿತು ಬೆಂಗಳೂರು ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕಿ ಡಾ. ಮೀನಾ ದೇಶಪಾಂಡೆ, 'ಗಾಂಧಿ-ಲೋಹಿಯಾ ವಾಗ್ವಾದಗಳಲ್ಲಿ ಮೂಡಿದ ಸಮಾಜವಾದ' ಕುರಿತು ಮಂಗಳೂರು ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಡಾ. ರಾಜಾರಾಂ ತೋಳ್ಪಾಡಿ, 'ಗಾಂಧಿಯವರ ಹಿಂದ್ ಸ್ವರಾಜ್: ಒಂದು ಸಮಾಜವಾದಿ ಓದು' ಕುರಿತು ತುಮಕೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕ ಡಾ. ನಿತ್ಯಾನಂದ ಬಿ. ಶೆಟ್ಟಿ ಹಾಗೂ 'ಜಾಗತೀಕರಣದ ಸವಾಲುಗಳಿಗೆ ಗಾಂಧಿ ಸಮಾಜವಾದ ಉತ್ತರವಾಗಬಲ್ಲುದೇ?' ಕುರಿತು ಕುವೆಂಪು ವಿಶ್ವವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕ ಡಾ. ರಾಜೇಂದ್ರ ಚೆನ್ನಿಯವರು ಮಾತನಾಡಿದರು. ಪ್ರತಿ ಗೋಷ್ಠಿಯ ನಂತರ ಶಿಬಿರಾರ್ಥಿಗಳೊಡನೆ ಪ್ರಶ್ನೋತ್ತರ/ಚರ್ಚೆ ನಡೆಯಿತು.

೨೯ರ ಸಂಜೆ ಡೇವಿಡ್ ಅಟೆನ್‌ಬರೋ ನಿರ್ದೇಶನದ 'ಗಾಂಧಿ' ಚಲನಚಿತ್ರ ಪ್ರದರ್ಶನ ಏರ್ಪಾಡಾಗಿತ್ತು. ೩೦ರ ಬೆಳಿಗ್ಗೆ ಈ ಚಲನಚಿತ್ರದ ಬಗ್ಗೆ ಶಿಬಿರಾರ್ಥಿಗಳಿಂದ ಅಭಿಪ್ರಾಯ ಮಂಡನೆಯಾಯಿತು. ೩೦ರ ಸಂಜೆ ಶಿಬಿರಾರ್ಥಿಗಳು ಒಟ್ಟೂ ಶಿಬಿರದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಮಂಡಿಸಿ, ಈ ಶಿಬಿರದ ಅನುಭವ-ಪ್ರಯೋಜನಗಳನ್ನು ಹಂಚಿಕೊಂಡರು.

ನಂತರ ನಡೆದ ಸಮಾರೋಪ ಸಮಾರಂಭದಲ್ಲಿ ಹಿರಿಯ ಸಮಾಜವಾದಿ ಮತ್ತು ರೈತ ಮುಖಂಡ ಕಡಿದಾಳು ಶಾಮಣ್ಣ ಮಾತನಾಡಿ ಅತಿಯಾದ ತಂತ್ರಜ್ಞಾನ ಹೇಗೆ ಜನರ ನಡುವಣ ಸಹಬಾಳ್ವೆಯನ್ನು ಹದಗೆಡಿಸುತ್ತಿದೆ ಎಂಬುದನ್ನು ಅಡಿಕೆ ಸುಲಿಯುವ, ಕಳೆ ಕೀಳುವ ಯಂತ್ರಗಳು ಮಾಡಿರುವ ಸಾಮಾಜಿಕ ದುಷ್ಪರಿಣಾಮಗಳ ಉದಾಹರಣೆಗಳ ಮೂಲಕ ವಿವರಿಸಿದರು. ಹಿರಿಯ ಸಮಾಜವಾದಿ ಪ.ಮಲ್ಲೇಶ್ ಅಧ್ಯಕ್ಷತೆ ವಹಿಸಿ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿದರು. ಕಸ್ತೂರಬಾ ಗಾಂಧಿ ಆಶ್ರಮದ ರಾಜ್ಯ ಪ್ರತಿನಿಧಿ ಶೋಭಾ ಮೂರ್ತಿ ಉಪಸ್ಥಿತರಿದ್ದರು. ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಖಜಾಂಚಿ ಎಂ ರಾಜು ಹಾಗೂ ಸದಸ್ಯೆ ಸವಿತಾ ನಾಗಭೂಷಣ ಅವರು ಕ್ರಮವಾಗಿ ಸ್ವಾಗತ ಮತ್ತು ವಂದನಾರ್ಪಣೆಗಳನ್ನು ನಡೆಸಿಕೊಟ್ಟರು.

ರಾಜ್ಯದ ವಿವಿಧ ಭಾಗಗಳ ವಿವಿಧ ಕಾಲೇಜುಗಳಿಂದ ಆಯ್ದ ಸುಮಾರು ಎಪ್ಪತ್ತು ಜನ ಅಧ್ಯಾಪಕರುಗಳು ಶಿಬಿರಾರ್ಥಿಗಳಾಗಿ ಭಾಗವಹಿಸಿದ್ದರು. ಆಶ್ರಮದ ನಿವಾಸಿ ಹೆಣ್ಣುಮಕ್ಕಳು ಶಿಬಿರದ ಗೋಷ್ಠಿಗಳ ಮಧ್ಯೆ ಹಾಡುಗಳನ್ನು ಹಾಡಿ ಶಿಬಿರಾರ್ಥಿಗಳ ಮೆಚ್ಚುಗೆ ಗಳಿಸಿದರು. ಡಿ.ಎಸ್. ನಾಗಭೂಷಣ ಅವರು ಈ ಶಿಬಿರದ ನಿರ್ದೇಶಕರಾಗಿದ್ದರೆ, ಜಿ.ಬಿ. ಶಿವರಾಜು ಅವರು ಸಂಚಾಲಕರಾಗಿದ್ದರು. ಇದು ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ಇತರ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ನಡೆಸುತ್ತಿರುವ ೨೦ನೇ ಅಧ್ಯಯನ ಶಿಬಿರವಾಗಿತ್ತು.

(ವರದಿ : **ಟಿ.ಎಲ್. ರೇಖಾಂಬ**)

ತೀರ್ಥಹಳ್ಳಿಯಲ್ಲಿ ಶಾಂತವೇರಿ ಗೋಪಾಲಗೌಡರ ನೆನಪು



ಸಮಾಜವಾದ ಈ ಮಣ್ಣಿನಲ್ಲಿ ಚಿಗುರೊಡೆದ ಸಿದ್ಧಾಂತವಾಗಿದ್ದು, ಅದನ್ನು ನಮ್ಮ ಸಮಾಜದಲ್ಲಿ ಇನ್ನೂ ಸಾಧಿಸಬೇಕಾದ ಸಮಾನತೆಗಾಗಿ ಅಳವಡಿಸಿಕೊಂಡು ಹೋಗಬೇಕಾದ ಅಗತ್ಯವಿದೆ ಎಂದು ಮಾಜಿ ಸಚಿವರೂ ಮತ್ತು ತೀರ್ಥಹಳ್ಳಿ ಕ್ಷೇತ್ರದ ಶಾಸಕರೂ ಆದ ಕಿಮ್ಮನೆ ರತ್ನಾಕರ ಹೇಳಿದರು. ಅವರು ಆಗಸ್ಟ್ ೯ರಂದು ಶಿವಮೊಗ್ಗದ ಲೋಹಿಯಾ ಜನ್ಮ ಶತಾಬ್ಧಿ ಪ್ರತಿಷ್ಠಾನವು 'ಭಾರತ ಬಿಟ್ಟು ತೊಲಗಿ' ಚಳುವಳಿಯ ೭೫ನೇ ವರ್ಷಾಚರಣೆಯ ಅಂಗವಾಗಿ ತೀರ್ಥಹಳ್ಳಿಯ ತುಂಗಾ ಮಹಾವಿದ್ಯಾಲಯದ ಸಹಯೋಗದಲ್ಲಿ ಆ ಕಾಲೇಜಿನ ರಜತ ಸಭಾಂಗಣದಲ್ಲಿ ಏರ್ಪಡಿಸಿದ್ದ 'ಶಾಂತವೇರಿ ಗೋಪಾಲಗೌಡ ; ಒಂದು ನೆನಪು' ಎಂಬ ವಿಷಯ ಕುರಿತ ವಿಚಾರಗೋಷ್ಠಿಯನ್ನು ಗೋಪಾಲಗೌಡರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟನೆ ಮಾಡಿದ ನಂತರ ಮಾತನಾಡುತ್ತಿದ್ದರು.

ಹೊಸ ತಲೆಮಾರು ಅನ್ಯಾಯದ ವಿರುದ್ಧ ಹೋರಾಡುವ ಕೆಚ್ಚನ್ನು ಮೂಡಿಸಿಕೊಳ್ಳಲು ಲೋಹಿಯಾ, ಜೆಪಿ, ಗೋಪಾಲಗೌಡರು ನಂಬಿದ್ದ

ಸಮಾಜವಾದಿ ವಿಚಾರಗಳನ್ನು ಅರಿಯಲು ಪ್ರಯತ್ನಿಸಬೇಕು ಎಂದು ಕರೆಕೊಟ್ಟ ಶಾಸಕರು ಗೋಪಾಲಗೌಡರ ಹುಟ್ಟೂರಾದ ಆರಗದಲ್ಲಿ ಅವರ ಸ್ಮಾರಕ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರ ಒಂದು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದೆ ಎಂದು ಈ ಸಂದರ್ಭದಲ್ಲಿ ಪ್ರಕಟಿಸಿದರು.

ಇದಕ್ಕೆ ಮುನ್ನ ಕಾರ್ಯಕ್ರಮದ ಆಶಯ ನುಡಿಗಳನ್ನಾಡಿದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಅಧ್ಯಕ್ಷ ಡಿ.ಎಸ್. ನಾಗಭೂಷಣ ಅವರು, ಆಗಸ್ಟ್ ೯ ಎಂಬುದು ಗೋಪಾಲಗೌಡರು ಶಾಲಾ ವಿದ್ಯಾರ್ಥಿಯಾಗಿದ್ದಾಗಲೇ ತಮ್ಮ ಅಭಿಮಾನದ ಮೇಷ್ಟ್ರು ಕಮಕೋಡು ನರಸಿಂಹ ಶಾಸ್ತ್ರಿಗಳ ಮಾತನ್ನು ಧಿಕ್ಕರಿಸಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ ದಿನವಾಗಿದ್ದು, ಅದರ ನೆನಪಿನಲ್ಲಿ ಈ ವಿಚಾರಗೋಷ್ಠಿಯನ್ನು ಹಮ್ಮಿಕೊಳ್ಳಲಾಗಿದೆ ಎಂದರು. ಗೋಪಾಲಗೌಡರು ತಮ್ಮ ನಾಯಕರಾದ ಲೋಹಿಯಾ, ಜೆಪಿಯವರಿಂದ ಕಲಿತ ಸಮಾಜವಾದಿ ಪಾಠಗಳು ಕೇವಲ ರಾಜಕೀಯ ಹೋರಾಟದ ಪಾಠಗಳಾಗಿರದೆ ಬದುಕನ್ನು ಅದರ ಹಲವು ಪಕ್ಕಗಳಿಂದ ಸೂಕ್ಷ್ಮವಾಗಿ ಗ್ರಹಿಸಿ ಅದನ್ನು ಸುಂದರ ಮತ್ತು ಸಮೃದ್ಧಗೊಳಿಸಿಕೊಳ್ಳಲು ಅನುವಾಗುವಂತಹ ಪಾಠಗಳೂ ಆಗಿದ್ದು, ಗೋಪಾಲಗೌಡರ ಬಹುಮುಖ ಆಸಕ್ತಿಗಳ ಬದುಕು ಇದಕ್ಕೊಂದು ಉದಾಹರಣೆಯಾಗಿದೆ ಎಂದರು. ಇಂದಿನ ಜಾಗತೀಕರಣದ ರಾಜಕಾರಣ ಭ್ರಷ್ಟಾಚಾರ...

ಭಯೋತ್ಪಾದನೆ, ಆತ್ಮಹತ್ಯೆ ಮತ್ತು ಅತ್ಯಾಚಾರಗಳ ಹಿಂಸಾತ್ಮಕ ರಾಜಕಾರಣವಾಗಿದ್ದು, ಇದರ ಪರಿಣಾಮವಾಗಿ ಸಂಭವಿಸುತ್ತಿರುವ ಬದುಕಿನ ಗುಣಮಟ್ಟದ ಅವನತಿಯನ್ನು ತಡೆಯಲು ಜಗತ್ತು ಭಾರತೀಯ ಸಮಾಜವಾದದತ್ತ ನೋಡುವಂತಾಗಿದೆ ಎಂದು ಹೇಳಿದರು. ಅಮೆರಿಕಾದಂತಹ ಅಮೆರಿಕಾ ದೇಶದಲ್ಲೇ ಈಗ ಬೆರ್ನಿ ಸ್ಯಾಂಡರ್ಸ್‌ರಂತಹ ಸಮಾಜವಾದಿ ನಾಯಕ ಮೂಡಿರುವುದನ್ನು ವಿಶೇಷವಾಗಿ ನಾವು ಗಮನಿಸಬೇಕು ಎಂದು ನಾಗಭೂಷಣ ಸೂಚಿಸಿದರು.

ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಮಾಜವಾದಿ ಮತ್ತು ಮಾಜಿ ಶಾಸಕ ಕೋಣಂದೂರು ಲಿಂಗಪ್ಪ ಅವರು ಸಮಾಜವಾದಿ ಚಳುವಳಿಯ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಶಕ್ತಿಗಳ ಬಗ್ಗೆ ಎಚ್ಚರಿಸಿ, ಲೋಹಿಯಾ ಮತ್ತು ಗೋಪಾಲಗೌಡರನ್ನು ಕುರಿತ ಎರಡು ಸ್ವರಚಿತ ಕವನಗಳನ್ನು ವಾಚಿಸಿದರು.

ನಂತರ ನಡೆದ ಮೊದಲ ಗೋಷ್ಠಿಯಲ್ಲಿ 'ಶಾಸನ ಸಭೆಯಲ್ಲಿ ಶಾಂತವೇರಿ' ಪುಸ್ತಕದ ಬಗ್ಗೆ ಡಾ. ಜೆ.ಕೆ. ರಮೇಶ್ ಅವರೂ, 'ಗೋಪಾಲಗೌಡರ ಡೈರಿ, ಪತ್ರಗಳು' ಪುಸ್ತಕದ ಬಗ್ಗೆ ಪ್ರೊ. ಎಂ.ಬಿ. ನಟರಾಜ್ ಅವರೂ ಮಾತನಾಡಿದರು. ಪ್ರಗತಿಪರ ರೈತ ಹಾಗೂ ಸಮಾಜವಾದಿ ಕೆ.ಆರ್. ದಯಾನಂದ ಅಧ್ಯಕ್ಷತೆ ವಹಿಸಿದ್ದರು. ಮಧ್ಯಾಹ್ನದ ಗೋಷ್ಠಿಯಲ್ಲಿ 'ನಮಗೆ ಸ್ಫೂರ್ತಿ ಶಕ್ತಿಯಾಗಿ ಗೋಪಾಲಗೌಡರು' ಎಂಬ ವಿಷಯ ಕುರಿತ ಎರಡನೇ ಗೋಷ್ಠಿಯಲ್ಲಿ ರೈತ ಚಳುವಳಿಯ ಕಾರ್ಯಕರ್ತ ನೆಂಪೆ ದೇವರಾಜ್ ಮತ್ತು ಪತ್ರಕರ್ತ ಶಿವಾನಂದ ಕರ್ಕಿ ಅವರು ಮಾತನಾಡಿ, ಜನಮನದಲ್ಲಿ ಮೂಡಿರುವ ಗೋಪಾಲಗೌಡರ ಚಿತ್ರವನ್ನು ನಿರೂಪಿಸಿದರು. ತುಂಗಾ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಕೌಲಾನಿ ಧರ್ಮಯ್ಯ ಅಧ್ಯಕ್ಷತೆ ವಹಿಸಿದ್ದರು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಹಿರಿಯ ಸಮಾಜವಾದಿ ಹಾಗೂ ರೈತ ಮುಖಂಡ ಕಡಿದಾಳು ಶಾಮಣ್ಣನವರು ಯುವ ಜನತೆ ವ್ಯವಸ್ಥೆಯನ್ನು ಪ್ರಶ್ನಿಸುವ ಛಾತಿಯನ್ನು ಬೆಳೆಸಿಕೊಳ್ಳಬೇಕೆಂದು ಕರೆ ನೀಡುತ್ತಾ, ೧೯೭೨ರ ವಿಧಾನಸಭಾ ಚುನಾವಣೆಯಲ್ಲಿ ತೀರ್ಥಹಳ್ಳಿ ಕ್ಷೇತ್ರದಿಂದ ಗೋಪಾಲಗೌಡರ ನೆನಪಿನಲ್ಲಿ ನಗರದ ಬಸ್ ನಿಲ್ದಾಣದ ಹಮಾಲಿಯ ಮಗನಾಗಿದ್ದ ಕೋಣಂದೂರು ಲಿಂಗಪ್ಪನವರನ್ನು ಪ್ರಬಲ ಕೋಮಿನ ಪ್ರಬಲ ಪಕ್ಷಗಳ ಅಭ್ಯರ್ಥಿಗಳ ವಿರುದ್ಧ ಸಮಾಜವಾದಿ ಅಭ್ಯರ್ಥಿಯಾಗಿ ನಿಲ್ಲಿಸಿ, ಜನರಿಂದಲೇ ಹಣ ಪಡೆದು ಗೆಲ್ಲಿಸಿದ ಪರಿಯನ್ನು ವಿವರಿಸಿದರು. ಇಂತಹ ಸ್ಫೂರ್ತಿಯಲ್ಲಿ ಮುಂದಿನ ವಿಧಾನಸಭೆಗೆ ಕನಿಷ್ಠ ಇಪ್ಪತ್ತು ಸಮಾಜವಾದಿ ಸದಸ್ಯರನ್ನು ಕಳಿಸಲಾಗದಿದ್ದರೆ ಯಾರಿಗೂ ಉಳಿಗಾಲವಿಲ್ಲ ಎಂದು ಅವರು ಅಭಿಪ್ರಾಯಪಟ್ಟರು. ತುಂಗಾ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಬಿ. ಗಣಪತಿ ಅಧ್ಯಕ್ಷತೆ ವಹಿಸಿದ್ದರು.

ಕಾಲೇಜಿನ ಆಯ್ದ ಎಂಬತ್ತೈದು ವಿದ್ಯಾರ್ಥಿಗಳೊಂದಿಗೆ ಹಲವು ಜನ ಸಾರ್ವಜನಿಕರು ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದರು. ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಟ್ರಸ್ಟಿಗಳಾದ ಎನ್.ಎಂ. ಕುಲಕರ್ಣಿ, ಎಂ.ರಾಜು ಮತ್ತು ಸವಿತಾ ನಾಗಭೂಷಣ ಹಾಗೂ ಪ್ರತಿಷ್ಠಾನದ ಹಿತೈಷಿಗಳಾದ ಡಾ. ಎ.ಎನ್ ನಾಗರಾಜ್ ಉಪಸ್ಥಿತರಿದ್ದರು.

(ವರದಿ: ಸವಿತಾ ನಾಗಭೂಷಣ)

ಮೈಸೂರಿನಲ್ಲಿ 'ಗ್ರಾಮಸ್ವರಾಜ್ಯ' ಕುರಿತ ಅಧ್ಯಯನ ಶಿಬಿರ



ಸೆಪ್ಟೆಂಬರ್ ೨೪ರಂದು ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ಮೈಸೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ ಮತ್ತು ಮೈಸೂರಿನ ಸಿದ್ಧಾರ್ಥನಗರದ ಪ್ರ.ದ.ಕಾಲೇಜಿನ ಸಹಯೋಗದಲ್ಲಿ ಮೈಸೂರಿನ ಮಾನಸ ಗಂಗೋತ್ರಿಯಲ್ಲಿನ ವಾಣಿಜ್ಯಶಾಸ್ತ್ರ ವಿಭಾಗದ ಸಭಾಂಗಣದಲ್ಲಿ 'ಗ್ರಾಮ ಸ್ವರಾಜ್ಯದ ಕನಸು' ಎಂಬ ವಿಷಯವಾಗಿ ಒಂದು ದಿನದ ಅಧ್ಯಯನ ಶಿಬಿರವೊಂದನ್ನು ಆಯೋಜಿಸಿತ್ತು.

ಶಿಬಿರವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿದ ಚಾಮರಾಜನಗರದ 'ದೀನಬಂಧು' ಅನಾಥಾಶ್ರಮದ ಕಾರ್ಯದರ್ಶಿ ಮತ್ತು ಚಿಂತಕ ಜಿ.ಎಸ್. ಜಯದೇವ ಅವರು, ಜಗತ್ತಿನಾದ್ಯಂತ ಗಾಂಧಿ ವಿಚಾರಗಳ ಅಧ್ಯಯನದ ಬಗ್ಗೆ ಆಸಕ್ತಿ-ಶ್ರದ್ಧೆ ಬೆಳೆಯುತ್ತಿರುವಾಗ ಭಾರತದಲ್ಲಿ ಅವರ ಬಗ್ಗೆ ವ್ಯವಸ್ಥಿತ ಅಪಪ್ರಚಾರ ಆರಂಭವಾಗಿರುವುದು ವಿಪರ್ಯಾಸಕರ ಎಂದರು. ಗಾಂಧಿಯುವರ 'ಹಿಂದ್ ಸ್ವರಾಜ್' ಕೃತಿ ಆಧುನಿಕ ಜಗತ್ತಿನ ಧರ್ಮಗ್ರಂಥವಾಗಬೇಕಿದೆ ಎಂದ ಅವರು, 'ಗ್ರಾಮ ಸ್ವರಾಜ್ಯ'ದ ಕಲ್ಪನೆ ಭಾರತದ ಮಟ್ಟಿಗಾದರೂ ಇಂದಿಗೂ ಪ್ರಸ್ತುತವಾಗಿದೆ ಎಂದು ಹೇಳಿದರು.

ಶಿಬಿರದ ಆಶಯ ನುಡಿಗಳನ್ನಾಡಿದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಅಧ್ಯಕ್ಷರೂ ಮತ್ತು ಈ ಶಿಬಿರದ ನಿರ್ದೇಶಕರೂ ಆದ ಡಿ.ಎಸ್. ನಾಗಭೂಷಣ ಅವರು ಗಾಂಧಿಯವರ 'ಗ್ರಾಮ ಸ್ವರಾಜ್ಯ' ಪರಿಕಲ್ಪನೆಯಲ್ಲಿನ ಗ್ರಾಮ ಎಂದರೆ ಅಂಬೇಡ್ಕರ್ ಮತ್ತು ನೆಹರೂ ಹೇಳುವ ಹಾಳುಕೊಂಪೆಗಳಂತಿರುವ ವರ್ತಮಾನದ ಹಳ್ಳಿಗಳಾಗಿರದೆ, ನಾವು ನವಭಾರತದ ನಿರ್ಮಾಣದ ಭಾಗವಾಗಿ ರೂಪಿಸಬೇಕಾಗಿದ್ದ ಎಲ್ಲ ಅಗತ್ಯ ನಾಗರಿಕ ಸೌಲಭ್ಯಗಳಿಂದ ಸುಸಜ್ಜಿತವಾದ ಹೊಸ ಹಳ್ಳಿಯಾಗಿತ್ತು ಎಂದರು. ಆಧುನಿಕ ನಾಗರೀಕತೆ ಎಲ್ಲೆಲ್ಲೂ ಹರಡುತ್ತಿದ್ದ ಮಿತಿಯಿಲ್ಲದ ಆಸೆಯ ಬದುಕಿನ ಮಾದರಿಯ ವಿರುದ್ಧ ತಾವು ಪ್ರತಿಪಾದಿಸಿದ ಮಿತಿಗಳುಳ್ಳ ಬದುಕಿನ ರೂಪಕವಾಗಿಯೂ ಗಾಂಧಿಯವರು 'ಗ್ರಾಮ ಸ್ವರಾಜ್ಯ'ದ ಕಲ್ಪನೆಯನ್ನು ನೀಡಿದರು ಎಂದು ಅವರು ವಿವರಿಸಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬೆಂಗಳೂರಿನ ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷರಾದ ಪ್ರೊ. ಜಿ.ಬಿ. ಶಿವರಾಜು ಅವರು ಮಿತಿಯಿಲ್ಲದ ಭೋಗದ ಮೋಹ ಹಬ್ಬುತ್ತಿರುವ ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಗಾಂಧಿ ವಿಚಾರಗಳನ್ನು ಅರಿತು ಹರಡಬೇಕಾದ ಗುರುತರವಾದ ಹೊಣೆಯನ್ನು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ನಿರ್ವಹಿಸಬೇಕಾಗಿದೆ ಎಂದು ಕರೆಕೊಟ್ಟರು.

'ಇಂದಿನ ಗ್ರಾಮಗಳು ಎಷ್ಟು ಸ್ವಾಯತ್ತ?' ಎಂಬ ವಿಷಯವಾಗಿ ಮೊದಲ ಗೋಷ್ಠಿಯಲ್ಲಿ ಮಾತನಾಡಿದ ಗಾಂಧಿವಾದಿ ಚಿಂತಕ ಡಾ. ರಾಜೇಗೌಡ ಹೊಸಳ್ಳಿ, ಎರಡನೆಯ ಗೋಷ್ಠಿಯಲ್ಲಿ 'ಗ್ರಾಮ ಸ್ವರಾಜ್ಯಕ್ಕಾಗಿ ಮಹಿಳಾ ಸ್ವಾಯತ್ತತೆ' ಎಂಬ ವಿಷಯವಾಗಿ ಮಾತನಾಡಿದ ಧಾರವಾಡದ 'ಜಾಗೃತಿ' ಸಂಸ್ಥೆಯ ಮಹಿಳಾ ಸಂಘಟಕಿ ಶಾರದಾ ಗೋಪಾಲ ಅವರು, ಮಧ್ಯಾಹ್ನದ ಮೂರನೆಯ ಗೋಷ್ಠಿಯಲ್ಲಿ 'ಗ್ರಾಮೀಣ ಹಣಕಾಸು ಎಷ್ಟು ಸ್ವಾಯತ್ತವಾಗಬಲ್ಲುದು?' ಎಂಬ ವಿಷಯವಾಗಿ ಮಾತನಾಡಿದ ಕನ್ನಡದ ಸುಪ್ರಸಿದ್ಧ ಕಥೆಗಾರರೂ ಮತ್ತು ಬೆಂಗಳೂರಿನ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್‌ನ ಪ್ರಾಧ್ಯಾಪಕ ಪ್ರೊ. ಎಂ.ಎಸ್. ಶ್ರೀರಾಮ್ ಅವರು.

(೨೨ನೇ ಪುಟಕ್ಕೆ

ರಷಿಯಾದ ಅಕ್ಟೋಬರ್ ಕ್ರಾಂತಿ : ನೂರರ ನೆನಪು

ಜಿ.ರಾಜಶೇಖರ



"ಅಕ್ಟೋಬರ್ ಕ್ರಾಂತಿಯ ನಂತರ ಅಸ್ತಿತ್ವಕ್ಕೆ ಬಂದ ಕಮ್ಯುನಿಸ್ಟ್ ಆಳ್ವಿಕೆ ಈಗ ಪತನಗೊಂಡಿದೆ, ನಿಜ. ಆದರೆ ಜಗತ್ತಿನಾದ್ಯಂತ ಜನ ಈಗಲೂ ಅಕ್ಟೋಬರ್ ಕ್ರಾಂತಿಯನ್ನು ನೆನೆಯುತ್ತಾರೆ. ಅಸಮಾನತೆ, ಕೋಮು ದ್ವೇಷ, ಜನಾಂಗ ದ್ವೇಷ, ಯುದ್ಧ ಹಾಗೂ ಸಾಮ್ರಾಜ್ಯ ಶಾಹಿಯ ನರಹತ್ಯೆಗಳು ಈ ಜಗತ್ತಿನಲ್ಲಿ ಮುಂದುವರಿಯುವಷ್ಟು ಕಾಲ, ಅದಕ್ಕೆ ಪ್ರತಿರೋಧ ತೋರಿಸಿದ ಅಕ್ಟೋಬರ್ ಕ್ರಾಂತಿಯ ನೆನಪು ಕೂಡ ಹಸುರಾಗಿರುತ್ತದೆ."

ರಷಿಯಾದಲ್ಲಿ ಕಮ್ಯುನಿಸ್ಟ್ ನೇತೃತ್ವದ ರಾಜ್ಯ ಕ್ರಾಂತಿ ನಡೆದು ೨೦೧೭ಕ್ಕೆ ನೂರು ವರ್ಷಗಳಾದವು. ಕ್ರಾಂತಿಯ ನಂತರ ಅಸ್ತಿತ್ವಕ್ಕೆ ಬಂದ ಸೋವಿಯತ್ ರಷಿಯಾದ ಕಮ್ಯುನಿಸ್ಟ್ ಸರಕಾರ ಅಧಿಕಾರ ಕಳೆದುಕೊಂಡು ಸೋವಿಯತ್ ಒಕ್ಕೂಟದ ರಾಜ್ಯಗಳು ಒಂದೊಂದಾಗಿ ಸ್ವತಂತ್ರವಾಗುವ ಪ್ರಕ್ರಿಯೆ ಪ್ರಾರಂಭವಾಗಿಯೇ ೨೫ ವರ್ಷಗಳು ಸಂದು ಹೋದವು. ಕಮ್ಯುನಿಸಂನ ವಿರೋಧಿಗಳು ಆ ಸಿದ್ಧಾಂತದ ಕಾಲ ಮುಗಿದಿದೆ'ಎಂದು ತೀರ್ಮಾನಿಸಿ ಅದನ್ನು ಈಗಾಗಲೇ ಚರಿತ್ರೆಯ ಅವಶೇಷಗಳ ಸಾಲಿಗೆ ಸೇರಿಸಿಯೂ ಆಗಿದೆ. ಆದರೆ ಜಗತ್ತಿನ ಕೆಲವು ದೇಶಗಳಲ್ಲಾದರೂ ಉದಾ : ಚೀನಾ, ವಿಯೆಟ್ ನಾಮ್, ಉ.ಕೊರಿಯಾ ಮತ್ತು ಕ್ಯೂಬಾಗಳಲ್ಲಿ ಈಗಲೂ ಕಮ್ಯೂನಿಸ್ಟ್ ಸರಕಾರಗಳು ಆಡಳಿತ ನಡೆಸುತ್ತಿವೆ ; ಹಲವು ದೇಶಗಳಲ್ಲಿ ಕಮ್ಯೂನಿಸ್ಟ್ ಪಕ್ಷ ಪ್ರಮುಖ ವಿರೋಧ ಪಕ್ಷವಾಗಿದೆ. ಇನ್ನುಕೆಲವು ದೇಶಗಳಲ್ಲಿ ಕಮ್ಯುನಿಸ್ಟ್ ಪಕ್ಷ, ಬಹಿಷ್ಕಾರ ಹಾಕಿ ಚಟುವಟಿಕೆಗಳನ್ನು ನಿಷೇಧಿಸುವಷ್ಟು ಅಪಾಯಕಾರಿ ಎಂದು ಭಾವಿಸಲಾಗಿದೆ. ಭಾರತದಲ್ಲಿ ಎರಡು ಪ್ರಮುಖ ಕಮ್ಯುನಿಸ್ಟ್ ಪಕ್ಷಗಳು (ಸಿ.ಪಿ.ಐ ಮತ್ತು ಸಿ.ಪಿ.ಐ–ಎಂ) ಹಾಗೂ ಕಮ್ಯುನಿಸಂನ ಹಲವು ಪಂಥಗಳು ಇಂದಿಗೂ ಸಕ್ರಿಯವಾಗಿವೆ. ಒಂದು ರಾಜಕೀಯ ಸಿದ್ಧಾಂತ ಮತ್ತು ಸಂಘಟನೆಯಾಗಿ ಕಮ್ಯುನಿಸಂ ತನ್ನ ಅಸ್ತಿತ್ವದ ಜೊತೆಗೆ ಜನಬೆಂಬಲವನ್ನು ಸಹ ಉಳಿಸಿಕೊಂಡಿರುವುದು ಏನನ್ನು ಸೂಚಿಸುತ್ತದೆ?

ರಷಿಯಾದ ೧೯೧೭ರ ಅಕ್ಟೋಬರ್ ಕ್ರಾಂತಿಗೆ ಸ್ಫೂರ್ತಿಯೂ ತಕ್ಷಣದ 'ಕಾರಣವೂ ಆಗಿದ್ದ ಸಮಾಜದ ಬಹುಜನರ ಸಮಾನತೆಯ ಅಭೀಪ್ಸೆ ಹಾಗೂ ವ್ಯವಸ್ಥೆಯ ಭಾಗವೇ ಆಗಿದ್ದ ಶೋಷಣೆ ಮತ್ತು ಅಸಮಾನತೆಗಳನ್ನು ಕ್ರಾಂತಿಕಾರಿಗಳು ಎದುರಿಸಿದ ರೀತಿ ಕರ್ನಾಟಕದ ೧೨ನೆಯ ಶತಮಾನದ ವಚನಕಾರರ ಚಳುವಳಿಯನ್ನು ನೆನಪಿಸುತ್ತದೆ. ವಚನ ಚಳವಳಿ ನಡೆದ ಬಿಜ್ಜಳನ ರಾಜ್ಯ ರಷಿಯಾಕ್ಕಿಂತ ವಿಸ್ತೀರ್ಣದಲ್ಲಿ ಚಿಕ್ಕದು. ಆದರ 'ಧರ್ಮವೂ ಸೇರಿದಂತೆ ಲೋಕಜೀವನವನ್ನೆಲ್ಲ ಒಳಗೊಂಡ ವೈಚಾರಿಕತೆ, ಹಾಗೂ ಕಾಲದೇಶದ ಮಿತಿಯನ್ನು ಮೀರಿ, ಬಹುಕಾಲ, ಬಹುದೇಶಗಳಿಗೆ ವ್ಯಾಪಿಸಿದ ಅದರ ಪ್ರಭಾವಗಳ ಮಟ್ಟಿಗೆ ಈ ಎರಡು ಆಂದೋಲನಗಳ ನಡುವೆ ಸಾಮ್ಯತೆ'ಇದೆ. ಅಕ್ಟೋಬರ್ ಕ್ರಾಂತಿಯ ಮೂಲಪಠ್ಯ ಎಂದು ಪರಿಗಣಿತವಾಗಿರುವ ಮಾರ್ಕ್ಸ್‌ವಾದ, ದುಡಿಮೆ ಒಂದೇ ಸಮಾಜದ ಚಾಲಕ ಶಕ್ತಿ ಎಂದು ಭಾವಿಸಿತು. ವಚನ ಚಳುವಳಿ ಕೂಡ ಕಾಯಕಕ್ಕೆ ಪ್ರಾಶಸ್ತ್ಯ ನೀಡಿದೆ. ರಷಿಯಾದ ದಿಕ್ಕೆಟ್ಟ ಬಡವರು ಮತ್ತು ಶೋಷಿತ ಜನರು ಅಕ್ಟೋಬರ್‌ಕ್ರಾಂತಿಯ ಕಾಲಾಳುಗಳಾದರೆ ೧೨ನೆಯ ಶತಮಾನದ ಬಿಜ್ಜಳನ ಸಾಮ್ರಾಜ್ಯ ಮತ್ತು ಅದರ ಆಸುಪಾಸಿನ ಕೆಳಜಾತಿಗಳ ಕಸುಬುಗಾರರು, ಅಸ್ಪೃಶ್ಯರು ಮತ್ತು ಇತರ ಉಪೇಕ್ಷಿತ ಜನಗಳು, ವಚನ ಚಳುವಳಿಯಲ್ಲಿ ಪಾಲುಗೊಂಡರು. ರಷಿಯಾದ ಕ್ರಾಂತಿ ಮತ್ತು ವಚನ ಚಳುವಳಿ ಎರಡರಲ್ಲೂ ಮಹಿಳೆಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದರು. ಈ ಎರಡು ಚಳುವಳಿಗಳ ನಡುವೆಇರುವಇನ್ನೊಂದು ಸಮಾನ ಅಂಶವೆಂದರೆ, ಕಾಲಕ್ರಮದಲ್ಲಿ ಅವೆರಡೂ ತಮ್ಮದೇ ಆದಕಾರಣಗಳಿಗೆ ಹಿಮ್ಮೆಟ್ಟಿದವು ;ಆದರೆ ನಾಶವಾಗಲಿಲ್ಲ. ಕರ್ನಾಟಕದಲ್ಲಿ ವಚನ ಚಳುವಳಿಯ ಕಾರಣ ಪುರುಷರೇ ಅದರ ತಾತ್ಕಾಲಿಕ ಸೋಲಿಗೂ ಸಾಕ್ಷಿಯಾದರು. ಅದಕ್ಕೆ ಹೋಲಿಸಿದರೆ ರಷಿಯಾದಲ್ಲಿ ಕ್ರಾಂತಿಯ ನಂತರ ಅಸ್ತಿತ್ವಕ್ಕೆ ಬಂದ ಸರಕಾರ ಹೆಚ್ಚು ಆಯಸ್ಸನ್ನು ಪಡೆದಿತ್ತು. ವಚನ ಚಳುವಳಿ ಎಂದೂ ರಾಜ್ಯಾಧಿಕಾರವನ್ನು ಪಡೆಯಲಿಲ್ಲ. ವಚನಕಾರರು, ಅಧಿಕಾರ ಕೇಂದ್ರದ ಜೊತೆ ನಡೆಸಿದ ಸಂಘರ್ಷದಲ್ಲಿ ಸೋತು ಬಿಜ್ಜಳನ ರಾಜಧಾನಿ ಕಲ್ಯಾಣ ಪಟ್ಟಣದಿಂದ ದಿಕ್ಕಾಪಾಲಾಗಿ ಚೆದುರಿ ಹೋದರು; ಆದರೂ ಚಳುವಳಿಯ ನೆನಪು ಮತ್ತು ಸ್ಫೂರ್ತಿ ಇಂದಿಗೂ ನಾಡಿನಲ್ಲಿ ಜಾಗೃತವಾಗಿದೆ.

ರಷಿಯಾದ ಅಕ್ಟೋಬರ್ ಕ್ರಾಂತಿಗೆ ತಾತ್ವಿಕ ತಳಹದಿಯಾದ ಮಾರ್ಕ್ಸ್‌ವಾದನ್ನು ರೂಪಿಸಿದ ಜರ್ಮನ್ ಚಿಂತಕ 'ಕಾರ್ಲ್ ಮಾರ್ಕ್ಸ್ ಮತ್ತುಇಂಗ್ಲೆಂಡಿನ ಫೆಡರಿಕ್ ಎಂಗೆಲ್ಸ್ ಕಮ್ಯುನಿಸ್ಟ್ ಕ್ರಾಂತಿಯ ಮುಂಚೂಣಿಯಲ್ಲಿ ಔದ್ಯಮಿಕ ಕಾರ್ಮಿಕವರ್ಗವಿರುತ್ತದೆ ಎಂದೂ ಆ ಕಾರಣಕ್ಕೆ ಜರ್ಮನಿಯಂತಹ ಮುಂದುವರಿದ'ಔದ್ಯಮಿಕ ರಾಷ್ಟ್ರದಲ್ಲೇ ಮೊದಲ ಕ್ರಾಂತಿ ಸಂಭವಿಸುತ್ತದೆ ಎಂದೂ ನಿರೀಕ್ಷಿಸಿದ್ದರು. ಆದರೆ ೨೦ನೆಯ ಶತಮಾನದ ಮೊದಲ ದಿನಗಳಲ್ಲಿ ಝಾರ್ ದೊರೆಗಳ ದುರಾಢಳಿತದಲ್ಲಿ ನಲುಗಿದ, ರಷಿಯಾದ ಬಡಜನರು ಮತ್ತು ರೈತರು ತಮ್ಮ ದೇಶದ ಊಳಿಗಮಾನ್ಯ ಕೃಷಿ ಪ್ರಧಾನ ಅರ್ಥವ್ಯವಸ್ಥೆಯ ಜೀತದಂತಹ ಒತ್ತಾಯದ ದುಡಿಮೆ, ಅವಿದ್ಯೆ, ಅಸಮಾನತೆ ಮತ್ತುಅಧಿಕಾರಸ್ಥರ ದಬ್ಬಾಳಿಕೆಗಳಿಗೆ ಮಾರ್ಕ್ಸ್‌ವಾದವೇ ಒಂದು ಪರ್ಯಾಯ ಮತ್ತು ಪರಿಹಾರ ಎಂದು ಭಾವಿಸಿದರು. ಅಕ್ಟೋಬರ್‌ಕ್ರಾಂತಿಯ ನಂತರ, ರಾಜ್ಯಾಧಿಕಾರವನ್ನು ವಹಿಸಿಕೊಂಡ ವಿ.ಐ.ಲೆನಿನ್ ನಾಯಕತ್ವದ ಕಮ್ಯುನಿಸ್ಟ್ ಸರಕಾರ, ಮೊತ್ತಮೊದಲ ಕೈಕೊಂಡಎರಡು ಕಾರ್ಯಕ್ರಮಗಳೆಂದರೆ

೧) ರಷಿಯಾದ ಸಮಸ್ತ ಕೃಷಿ ಭೂಮಿಯನ್ನು ದುಡಿಯುವ ರೈತರಿಗೆ ಸಮಾನವಾಗಿ ಹಂಚುವುದು.

೨) ಯುದ್ಧಕ್ಕೆ ವಿದಾಯ ಮತ್ತು ದೇಶದಲ್ಲಿ ಶಾಂತಿ ಎಲ್ಲ ಕಾಲಕ್ಕೂ ಪಭುತ್ವದ ಧೋರಣೆಯಾಗಿರುತ್ತದೆ ಎಂಬ ಘೋಷಣೆಯನ್ನು ಕಾರ್ಯಗತಗೊಳಿಸುವುದು.

೧೯೧೪ರಲ್ಲಿ ಪ್ರಾರಂಭವಾದ ಪ್ರಥಮ ಮಹಾಯುದ್ಧದಲ್ಲಿ ಜರ್ಮನಿ, ಆಸ್ಟ್ರಿಯಾ ಮತ್ತು ಟರ್ಕಿಗಳ 'ಕೂಟದ ವಿರುದ್ಧ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ಮೈತ್ರಿಕೂಟದಲ್ಲಿ ರಷಿಯಾ ಕೂಡ ಭಾಗೀದಾರನಾಗಿ ಪಾಲುಗೊಂಡಿತ್ತು. ರಷಿಯಾದ ಕಮ್ಯುನಿಸ್ಟ್ ಆಂದೋಲನದ ನಾಯಕ ಲೆನಿನ್ ಮೊದಲನಿಂದಲೂ ಯುದ್ಧವನ್ನು ಉಗ್ರವಾಗಿ ವಿರೋಧಿಸಿದ್ದ. 'ಈ ಯುದ್ಧ ಏಸ್ಯ, ಆಫ್ರಿಕಾ ಮತ್ತು ದ. ಅಮೇರಿಕಾ ಖಂಡಗಳ ವಸಾಹತು ದೇಶಗಳ ಸಂಪತ್ತನ್ನು ಲೂಟಿ ಮಾಡಲು ಯುರೋಪಿನ ಎರಡು ಬಣಗಳ ನಡುವೆ ನಡೆದಿರುವ ಕಚ್ಚಾಟ;ಇದರಲ್ಲಿ ಜನಸಾಮಾನ್ಯರಿಗೆ ಯಾವ ಪಾತ್ರವೂ ಇಲ್ಲ. ರಷಿಯಾಯುದ್ಧದಲ್ಲಿ ಭಾಗವಹಿಸಕೂಡದು' ಎಂಬುದು ಲೆನಿನ್ ವಾದವಾಗಿತ್ತು. ಅಕ್ಟೋಬರ್ ಕ್ರಾಂತಿಯ ನಂತರ ರಷಿಯಾ ಮೈತ್ರಿಕೂಟದಿಂದ ಹಿಂದೆ ಸರಿಯಿತು. ಆದರೆ ಅಸಂಖ್ಯ ಜನರ ಸಾವು ನೋವುಗಳಿಗೆ ಕಾರಣವಾದರೂ ಯುರೋಪ್‌ನ ಉದ್ಯಮಿಗಳಿಗೆ ಅಪಾರ ಲಾಭ ತಂದುಕೊಟ್ಟ ಪ್ರಥಮ ಮಹಾಯುದ್ಧ ಆನಂತರವೂ ಕೆಲವು ತಿಂಗಳ ಕಾಲ ನಡೆಯಿತು.

೧೯೯೨ರಲ್ಲಿ ರಷಿಯಾದ ಕಮ್ಯುನಿಸ್ಟ್ ಸರಕಾರದ ಅವಸಾನದ ನಂತರ 'ಕೂಡ ಜಗತ್ತಿನ'ಎಲ್ಲೆಡೆ ೧೯೧೭ರ ಅಕ್ಟೋಬರ್‌ಕ್ರಾಂತಿ, ಅಸಮಾನತೆಯ ವಿರುದ್ಧ ಜನರ ಹೋರಾಟಕ್ಕೆ ಸ್ಫೂರ್ತಿಯಾಗಿದೆ. ಅಕ್ಟೋಬರ್‌ಕ್ರಾಂತಿಯ 'ಗುರು' ಕಾರ್ಲ್ ಮಾರ್ಕ್ಸ್ ತನ್ನ ಉದ್ಗ್ರಂಥ 'ದಕ್ಯಾಪಿಟಲ್' ಅನ್ನು ಬರೆಯುತ್ತಿದ್ದ ಕಾಲದಲ್ಲಿ ಬಂಡವಾಳಶಾಹಿ ಮತ್ತು ವಸಾಹತು ಶಾಹಿಗಳೆರಡೂ ಯುರೋಪ್‌ನಲ್ಲಿ ಹರಳು ಗಟ್ಟಿಕೊಳ್ಳುತ್ತಿದ್ದವು. ಇಂಗ್ಲೆಂಡಿನಲ್ಲಿ ಅದು ಔದ್ಯಮಿಕ ಕ್ರಾಂತಿಯ ಕಾಲಘಟ್ಟ. ಅಲ್ಲಿನ ಆಸೆಬುರುಕ ಉದ್ಯಮಿಗಳು, ಪ್ರಾಯಕ್ಕೆ ಬಂದ ಕಾರ್ಮಿಕರು ಮಾತ್ರವಲ್ಲ, ೭–೮

ವರ್ಷ ಪ್ರಾಯದ ಮಕ್ಕಳನ್ನು ಕೂಡ ದಿನಕ್ಕೆ ೧೨ ರಿಂದ ೧೬ ಗಂಟೆಗಳಷ್ಟು ಅವಧಿಗೆ (ಒಮ್ಮೊಮ್ಮೆ ರಾತ್ರಿ ಪಾಳಿಯಲ್ಲು ಸಹ) ಚಿಕ್ಕಾಸಿನ ಸಂಬಳಕ್ಕೆ ದುಡಿಸುತ್ತಿದ್ದರು. ಆ ದುಡಿಮೆಗಾರರಾದರೋ ಕೃಷಿಯ ಅವಸಾನ ಮತ್ತು ಅರ್ಥ ವ್ಯವಸ್ಥೆಯ ಬಿಕ್ಕಟ್ಟುಗಳಿಂದ ದಿವಾಳಿ ಆದವರು. ಆ ಬಡಪಾಯಿಗಳು ನಗರಗಳಿಗೆ ವಲಸೆ ಬಂದು ತಮ್ಮ ಕನಿಷ್ಟ ಜೀವನ ನಿರ್ವಹಣೆಗೋಸ್ಕರ ಈ ಬಗೆಯ ದುಡಿಮೆಯಲ್ಲಿ ಜೀವ ತೇಯ ಬೇಕಾಯಿತು. ಇಂಗ್ಲೆಂಡ್‌ನ ಔದ್ಯಮಿಕ'ಕ್ರಾಂತಿ ಸಾಧ್ಯವಾದದ್ದು ವಸಾಹತು ದೇಶಗಳ ನಂಪನ್ಮೂಲಗಳ ಹಗಲು ದರೋಡೆ ಮತ್ತು ತಮ್ಮ ದೇಶದ ಬಡ ಕಾರ್ಮಿಕರ 'ಶೋಷಣೆಗಳಿಂದ. ಮಾರ್ಕ್ಸ್ ಈ ವಿದ್ಯಮಾನಗಳ ಸಾಕ್ಷೀ ಪ್ರಜ್ಞೆಯಾಗಿ ತನ್ನ ಮೇರುಕೃತಿ 'ದ ಕ್ಯಾಪಿಟಲ್'ನಲ್ಲಿ ಅದನ್ನು ಪಾಂಡಿತ್ಯ ಪೂರ್ಣವಾಗಿ ವಿಶ್ಲೇಷಿಸಿದ ಮಾತ್ರವಲ್ಲ; ಅಂತಹ ಶೋಷಣೆಯ ಜಗತ್ತನ್ನು ಈಗಿಂದೀಗ ಬದಲಾಯಿಸುವುದು ಹೇಗೆ ಎಂದು ಸಹ ಚಿಂತಿಸಿದ. ಮಾರ್ಕ್ಸ್ ತನ್ನ ವಿಶೇಷಣೆಯ ಮೂಲಕ ಕ್ರಾಂತಿಕಾರಿ ಸಿದ್ಧಾಂತವೊಂದನ್ನು ರೂಪಿಸುವುದ ಜೊತೆಗೆ ಸ್ವತಹ ಆ ಸಿದ್ದಾಂತದ ಕಾರ್ಯಕರ್ತನಾಗಿಯೂ ತನ್ನಕಾಲದ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗಿಯಾದ.

ಐರೋಪ್ಯ ವಸಾಹತುಶಾಹಿ ಕೊನೆಗೊಂಡಿದೆ. ಆದರೆ ಅದಕ್ಕೆ ಬದಲಾಗಿ ಅಮೇರಿಕಾದ ಸಾಮ್ರಾಜ್ಯಶಾಹಿ ಮತ್ತು ಬಹುರಾಷ್ಟ್ರೀಯ ಕಾರ್ಪೋರೇಟ್ ಬಂಡವಾಳಶಾಹಿ ಈಗ ಜಗತ್ತನ್ನು ಆಳುತ್ತಿವೆ. ಈ ಹೊಸ ವ್ಯವಸ್ಥಗೆ ಪರ್ಯಾಯವೇಇಲ್ಲಎಂದು ಅಮೇರಿಕದ ವಕ್ತಾರರು ಎಲ್ಲೆಡೆ ಪ್ರತಿಪಾದಿಸುತಿದ್ದಾರೆ. ಅಮೇರಿಕಾದ ಸಾಮ್ರಾಜ್ಯಶಾಹಿಯ ಕ್ರೌರ್ಯ ಮತ್ತು ಕಾರ್ಪೋರೇಟ್ ಬಂಡವಾಳಶಾಹಿಯ ದುರಾಸೆಗಳಿಗೆ ಒಂದು ಪರ್ಯಾಯವೆಂಬುದಿದ್ದರೆ ಅದು ಅಕ್ಟೋಬರ್‌ಕ್ರಾಂತಿಯನ್ನು ರೂಪಿಸಿದ ತಾತ್ವಿಕತೆಯೇ ಸರಿ. ದುಡಿಯುವವರು ಸೃಷ್ಟಿಸಿದ ಸಂಪತ್ತನ್ನು ದೋಚುವ ಆಸ್ತಿವಂತರು, ಅವರನ್ನು ರಕ್ಷಿಸುವುದೇ ತಮ್ಮ ಕರ್ತವ್ಯವೆಂದು ಭಾವಿಸಿರುವ ಪೋಲಿಸರು, ಆಸ್ತಿವಂತರ ಆಸ್ತಿ ರಕ್ಷಿಸಲೆಂದೇ ಕಾನೂನು ಇರುವುದು ಎಂಬಂತೆ ವರ್ತಿಸುವ ನ್ಯಾಯಾಲಯಗಳು, ಉಳ್ಳವರ ಪರವಾಗಿಯೆ ಶಾಸನಗಳನ್ನು ರೂಪಿಸುವ ಸರಕಾರ ಈ ಎಲ್ಲ ಜನವಿರೋಧಿ ಶಕ್ತಿಗಳಿಗೂ ದುಃಸ್ವಪ್ನವಾಗಿರುವ'ಅಕ್ಟೋಬರ್‌ಕ್ರಾಂತಿಯ ನೆನಪು ಈಗಲೂ ಈ ಸಮಾಜದ ದಿಕ್ಕೆಟ್ಟವರಿಗೆ ಉಳಿದಿರುವ ಒಂದೇ ಒಂದು ಭರವಸೆ.

ರಷಿಯಾದಲ್ಲಿ ಅಕ್ಟೋಬರ್ ಕ್ರಾಂತಿಯ ನಂತರ, ಇನ್ನೂ ಖಚಿತವಾಗಿ ಹೇಳಬೇಕು ಅಂದರೆ ಲೆನಿನ್ ಮರಣಾನಂತರ ಅಧಿಕಾರ ವಹಿಸಿಕೊಂಡ ಸ್ಟಾಲಿನ್‌ನ ಉಸ್ತುವಾರಿಯಲ್ಲಿ ದೇಶದಲ್ಲಿ ನಡೆದ ಅಗಾಧ ಜೀವ ಹಿಂಸೆಯನ್ನು ಈಗ ಯಾರೂ ಅಲ್ಲಗಳೆಯುವಂತಿಲ್ಲ. ಸ್ಟಾಲಿನ್ ಕಾಲಾನಂತರದ ರಷಿಯಾದ ಕಮ್ಯೂನಿಸ್ಟ್ ನಾಯಕತ್ವವೇ ಈ ಹಿಂಸಾಚಾರ ಮತ್ತು ಸಾಮೂಹಿಕ ಕಗ್ಗೊಲೆಗಳನ್ನು ಒಪ್ಪಿಕೊಂಡಿದೆ. ಹಾಗೆಯೇ ದ್ವಿತೀಯ ಮಹಾಯುದ್ಧದ ಸಂದರ್ಭದಲ್ಲಿ ಹಿಟ್ಲರ್ ನಾಯತ್ವದ ಜರ್ಮನಿ, ಇಟಲಿ, ಸ್ಪೇನ್ ಹಾಗೂಜಪಾನ್ ದೇಶಗಳ ಒಕ್ಕೂಟದ ಆಕ್ರಮಣವನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿ, ಫ್ಯಾಸಿಸಂ ವಿರುದ್ದ ನಿರ್ಣಾಯಕ ಯುದ್ಧದಲ್ಲಿರಷಿಯಾ ಜಯ ಸಾದಿಸಿದ್ದು ಕೂಡ ಸ್ಟಾಲಿನ್ ನಾಯಕತ್ವದಲ್ಲೇ ಎಂಬ ಸತ್ಯವನ್ನು ಸಹ ನಾವು ಗುರುತಿಸಬೇಕು.

ಅದು ಏನೇ ಇರಲಿ, ಕಳೆದ ಶತಮಾನದ ೯೦ರ ದಶಕದಲ್ಲಿ ರಷಿಯಾದ ವ್ಯವಸ್ಥೆ ಒಳಗಿಂದೂಳಗೆ ಜೀರ್ಣಶೀರ್ಣವಾಗುತ್ತ ನಡೆದುಅಂತಿಮವಾಗಿ ಸರಕಾರವೇ ಕುಸಿದು ಬಿದ್ದಾಗ, ರಷಿಯದ ಜನಸಾಮಾನ್ಯರು ಈ ಸರಕಾರ ಉಳಿಸಿಕೂಳ್ಳಲು ಮುಂದಾಗಲಿಲ್ಲ. ರಷಿಯಾದ ಕಮ್ಯೂನಿಸ್ಟ್ ಸರಕಾರದಲ್ಲಿ ಪ್ರಜೆಗಳು ನಂಬಿಕೆ ಕಳೆದುಕೊಂಡಿದ್ದರು. ಆದಾಗ್ಯೂ ೧೯೧೭ರ ರಷಿಯಾ ಅಕ್ಟೋಬರ್ ಕ್ರಾಂತಿಯ ನೆನಪು ಈಗಲೂ ಜಗತ್ತಿನಾದ್ಯಂತ ಹಸಿರಾಗಿದೆ. ಈ ಕ್ರಾಂತಿತನ್ನ ನೈತಿಕ ಮಾನದಂಡವನ್ನುತಾನೇ ರೂಪಿಸಿಕೊಂಡಿರುವುದರಿಂದ ರಷಿಯಾದ ಕಮ್ಯೂನಿಸ್ಟ್ ಸರಕಾರಕಮ್ಯುನಿಸಂನ ನೈತಿಕತೆಯನ್ನು ಪಾಲಿಸದೆ ಕ್ರಾಂತಿಯ ಆಶಯಗಳಿಗೂ ಜನತೆಗೂ ದ್ರೋಹವೆಸಗಿದೆ ಎಂಬ ಸತ್ಯ ನಿಚ್ಚಳವಾಗಿದೆ. ಕಮ್ಯೂನಿಸ್ಟ್ ರಷಿಯಾದ 'ಆಳುವ ವರ್ಗ' ತಾನು ವಿರೋಧಿಸುತ್ತೇನೆ ಎಂದು ಸದಾ ಹೇಳಿಕೊಳ್ಳುವ ಬಂಡವಾಳಶಾಹಿಯ ಎಲ್ಲಾ ಪಾಪ ಕೃತ್ಯಗಳಲ್ಲೂ ತಾನೇ ಭಾಗಿಯಾಗಿದದ್ದೇ ಅದು ಜನರ ವಿಶ್ವಾಸವನ್ನು ಕಳೆದುಕೊಳ್ಳಲು ಮುಖ್ಯ ಕಾರಣವಾಗಿದೆ. ಹಾಗಾಗಿ ರಷಿಯಾದ ಕಮ್ಯೂನಿಸ್ಟ್ ವ್ಯವಸ್ಥೆ ಕುಸಿದಿದೆ ಎಂಬ ವಾಸ್ತವದಿಂದ ಅಕ್ಟೋಬರ ಕ್ರಾಂತಿಯ ಚಾರಿತ್ರಿಕ ಮಹತ್ವವೇನೂ ಕಡಿಮೆಯಾಗುವುದಿಲ್ಲ.

ಭಾರತವು ಸೇರಿದಂತೆ ಜಗತ್ತಿನಾದ್ಯಂತ ವಸಾಹತು ರಾಷ್ಟ್ರಗಳ ಸ್ವಾತಂತ್ರ್ಯ ಹೋರಾಟಗಳಿಗೆ ಸೋವಿಯತ್ ರಷ್ಯಾ ಕೊಟ್ಟ ಬೆಂಬಲವನ್ನು ಈ ರಾಷ್ಟ್ರಗಳ ಜನ ಈಗಲೂ ಮರೆತಿಲ್ಲ. ಅಸಮಾನತೆ, ವರ್ಣಬೇಧ ನೀತಿ, ಜನಾಂಗ ದ್ವೇಷ ಮತ್ತು ಲಿಂಗ ತಾರತಮ್ಯಗಳ ವಿರುದ್ಧ ಜಗತ್ತಿನಲ್ಲಿ ಎಲ್ಲೇ ಹೋರಾಟ ನಡೆದರೂ ಅದಕ್ಕೆ ಸೋವಿಯತ್ ರಷ್ಯಾದ ಬೆಂಬಲವಿತ್ತು. ಅಕ್ಟೋಬರ್ ಕ್ರಾಂತಿ ಸಂಭವಿಸಿದ ನಂತರ ಭಾರತದಲ್ಲೂ ಅಂತಹ ಕ್ರಾಂತಿಗಾಗಿ ಹಂಬಲಿಸಿದವರಲ್ಲಿ ಆಗಿನ್ನೂ ಹದಿಹರೆಯದತರುಣನಾಗಿದ್ದತೀವ್ರವಾದೀ ಸ್ವಾತಂತ್ರ್ಯ ಹೋರಾಟಗಾರ ಭಗತ್‌ಸಿಂಗ್ ಕೂಡಾ ಒಬ್ಬನಾಗಿದ್ದ. ರಷಿಯಾದ 'ಅಕ್ಟೋಬರ್‌ಕ್ರಾಂತಿ ಕನ್ನಡ ಸಾಹಿತ್ಯವನ್ನು ಸಹ ಪ್ರಭಾವಿಸಿದೆ. ಆಧುನಿಕಕ'ನ್ನಡದ 'ಪ್ರಗತಿಶೀಲ'ಚಳುವಳಿಯಂತೂ ಅಕ್ಟೋಬರ್‌ಕ್ರಾಂತಿಯ ಮೌಲ್ಯಗಳನ್ನು ಇಡಿಯಾಗಿ ತನ್ನದಾಗಿಸಿಕೊಂಡಿತ್ತು. ರಷಿಯಾದ ಚಾರಿತ್ರಿಕ ವಿದ್ಯಮಾನಕ್ಕೆತಿ ೀವ್ರವಾಗಿ ಸ್ಪಂದಿಸಿದ ಕನ್ನಡ ಲೇಖಕರಲ್ಲಿ ಕುವೆಂಪು ಅಗ್ರಗಣ್ಯರು. ೧೯೪೪ರಲ್ಲಿ ಕುವೆಂಪು 'ಕೋಗಿಲೆ ಮತ್ತು ಸೋವಿಯಟ್‌ರಷ್ಯಾ' ಎಂಬ ಕವನ ಸಂಕಲನವನ್ನೇ ಹೊರತಂದರು. ಸಂಕಲನದ ಅದೇ ಶೀರ್ಷಿಕೆಯ ಕವಿತೆಯಲ್ಲಿ (ಕುವೆಂಪು ಸಮಗ್ರ ಕಾವ್ಯ-ಕನ್ನಡ ವಿಶ್ವವಿದ್ಯಾಲಯ ಹಂಪಿ- ೨೦೦೦- ಪುಟ ೩೪೫-೩೪೯) ರಷಿಯಾದ ಕ್ರಾಂತಿಯ ಬಗ್ಗೆ ಕವಿಗೆ ನಿರೀಕ್ಷೆಯ ಜೊತೆಗೆ ಆತಂಕವೂ ಇರುವುದನ್ನು ಕಾಣಬಹುದು. ಕವಿತೆ, ಸೋವಿಯಟ್ ರಷಿಯಾದ ಹೊಸ ನಾಗರಿಕತೆಯ ಬಗ್ಗೆ ಕವಿಗೆ ಇರುವ ಮೆಚ್ಚುಗೆ ಮತ್ತು ಹೇವರಿಕೆ, ವಿಶ್ವಾಸ ಮತ್ತು ಸಂದೇಹಗಳ ಸಂಕೀರ್ಣ ರಚನೆಯಾಗಿದೆ. ಕ್ರಾಂತಿಯ ಜೊತೆಜೊತೆಗೆ ತಲೆದೋರುವ ಹಿಂಸೆ, ಸಮಾನತೆಯ ಹೆಸರಿನಲ್ಲಿ ಬದುಕಿನ ವೈವಿಧ್ಯಗಳ ನಾಶ, ಜನರ ಬಾಯಿ ಮುಚ್ಚಿಸುವ'ಏಕರೂಪ, ಸಮವಸ್ತ್ರಗಳ ದಬ್ಬಾಳಿಕೆ, 'ಸಾಮ್ಯವಾದದ ಈ ವ್ಯಾಧಿಗಳ ಬಗ್ಗೆ ಕವಿಚಿಂತೆ ಹಚ್ಚಿಕೊಂಡಿದ್ದಾರೆ. ಇದಕ್ಕೆ ಪ್ರತಿಯಾಗಿ ಕ್ರಾಂತಿಯಕುರಿತು ತುಂಬು ಉತ್ಸಾಹದ ಕವಿತೆಗಳನ್ನೂ ಕವಿ ಬರೆದಿದ್ದಾರೆ. ಉದಾ : ಇದೇಸಂಕಲನದ 'ಹೊಸ ಬಾಳಿನಗೀತೆ' ಎಂಬ ಕವಿತೆ ಪ್ರಾರಂಭವಾಗುವುದೇ ಹೀಗೆ,

ಸರ್ವರಿಗೆ ಸಮಬಾಳು! ಸರ್ವರಿಗೆ ಸಮಪಾಲು!
ಎಂಬ ನವಯುಗ ವಾಣಿ ಘೋಷಿಸಿದೆ ಕೇಳಿ

ಇಡೀ ಕವಿತೆ, ಇದೇ ಧಾಟಿಯಲ್ಲಿ ಮುಂದೆ ಸಾಗುತ್ತದೆ.

(ಕುವೆಂಪು ಸಮಗ್ರಕಾವ್ಯ ಪುಟ ೩೭೩)

"ಓ ಬನ್ನಿ ಸೋದರರೆ ಬೇಗ ಬನ್ನಿ! ಎಂಬ ಶೀರ್ಷಿಕೆಯ ಇನ್ನೊಂದು ಕವಿತೆಯಲ್ಲಿ ಕವಿ ಹೀಗೆ ಕರೆಕೊಡುತ್ತಾರೆ.

"ಗುಡಿಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ
ಬಡತನವಬುಡಮಟ್ಟಕೀಳ ಬನ್ನಿ
ಮೌಢ್ಯತೆಯ ಮಾರಿಯನುಹೊರದೂಡಲೈತನ್ನಿ
ವಿಜ್ಞಾನ ದೀವಿಗೆಯಹಿಡಿಯ ಬನ್ನಿ


....

ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜ ಮತಕೆ
ಓ ಬನ್ನಿ ಸೋದರರೆ ವಿಶ್ವಪಥಕೆ

(ಕುವೆಂಪು ಸಮಗ್ರಕಾವ್ಯ ಪುಟ ೩೭೨)

ಸೋವಿಯಟ್ ರಷಿಯಾದ ಬಗ್ಗೆ ಇಂತಹ ಸರಳ ಹಾಗೂ ಸರಳ ಮನಸ್ಕ ಉತ್ಸಾಹ ಮಾತ್ರ ಕವಿಯ ನಿಲುವಲ್ಲ ಎಂಬುದು ಅವರ 'ಕೋಗಿಲೆ ಮತ್ತು ಸೋವಿಯಟ್‌ರಷ್ಯಾ' ಸಂಕಲನದ ಆದೇ ಹೆಸರಿನ ಕವಿತೆಯಿಂದಲೇ ಸ್ಪಷ್ಟವಾಗುತ್ತದೆ. ಅದಕ್ಕಿಂತ ಹೆಚ್ಚು ಧ್ವನಿ ಪೂರ್ಣವಾದ ತಮ್ಮ ಇನ್ನೊಂದು ಕವಿತೆ "ಕಲ್ಕಿ"ಯಲ್ಲಿ (ಪಾಂಚಜನ್ಯ ೧೯೬೩. ಕುವೆಂಪು ಸಮಗ್ರ ಕಾವ್ಯ ಪುಟ ೧೬೭- ೧೭೨) ಕುವೆಂಪು ಕ್ರಾಂತಿಯ ಕನಸಿನ ರಮ್ಯತೆ ಮತ್ತು ಅದು ವಾಸ್ತವದಲ್ಲಿ ಹಳವಂಡವಾಗುವ ಸಾಧ್ಯತೆಗಳನ್ನು ಕವಿತೆಯ ಭಾವಸಂಕೀರ್ಣತೆಗೆ ತಕ್ಕ ನುಡಿಗಟ್ಟು ರೂಪಕ ಮತ್ತು ಪ್ರತಿಮೆಗಳಲ್ಲಿ ಒಡಮೂಡಿಸಿದ್ದಾರೆ. ಆಧುನಿಕ ಕನ್ನಡಕಾವ್ಯದ ಬಹುಮುಖ್ಯ ಕವಿತೆಗಳಲ್ಲಿ ಒಂದಾಗಿರುವ 'ಕಲ್ಕಿ' ಕ್ರಾಂತಿಯ ಉತ್ಸಾಹದಲ್ಲೇ ೀಸೇರಿ ಹೋಗಿರುವ ಹಿಂಸೆಯಿಂದಾಗಿ ಮುಂದಿನ ದಾರಿ ಕಾಣದೆ ದಿಕ್ಕೆಟ್ಟ ನಮ್ಮ ಸದ್ಯದ ಸ್ಥಿತಿಗೆ ಕನ್ನಡಿ ಹಿಡಿಯುತ್ತದೆ.

ಅಕ್ಟೋಬರ್ ಕ್ರಾಂತಿಯ ನಂತರ ಅಸ್ತಿತ್ವಕ್ಕೆ ಬಂದ ಕಮ್ಯುನಿಸ್ಟ್ ಆಳ್ವಿಕೆ ಈಗ ಪತನಗೊಂಡಿದೆ, ನಿಜ. ಆದರೆ ಜಗತ್ತಿನಾದ್ಯಂತ ಜನ ಈಗಲೂ ಅಕ್ಟೋಬರ್ ಕ್ರಾಂತಿಯನ್ನು ನೆನೆಯುತ್ತಾರೆ. ಅಸಮಾನತೆ, ಕೋಮು ದ್ವೇಷ, ಜನಾಂಗ ದ್ವೇಷ, ಯುದ್ಧ ಹಾಗೂ ಸಾಮ್ರಾಜ್ಯ ಶಾಹಿಯ ನರಹತ್ಯೆಗಳು ಈ ಜಗತ್ತಿನಲ್ಲಿ ಮುಂದುವರಿಯುವಷ್ಟು ಕಾಲ, ಅದಕ್ಕೆ ಪ್ರತಿರೋಧ ತೋರಿಸಿದ ಅಕ್ಟೋಬರ್ ಕ್ರಾಂತಿಯ ನೆನಪು ಕೂಡ ಹಸುರಾಗಿರುತ್ತದೆ.



(ಉಡುಪಿಯ ಜಿ. ರಾಜಶೇಖರ ನಮ್ಮ ನಡುವಿನ ಬಹು ಗಂಭೀರ ಎಡಪಂಥೀಯ ಚಿಂತಕರಲ್ಲೊಬ್ಬರು)


ಅಕ್ಟೋಬರ್ ೧೨, ಲೋಹಿಯಾರ ಪುಣದಯ ಸ್ಮರಣೆಯ ದಿನ

ಇಂಗ್ಲಿಷ್ ಮೂಲ: ಅಮೃತ್ ಲಾಲ್
ಕನ್ನಡಕ್ಕೆ : ಟಿ.ಎಲ್ ರೇಖಾಂಬ

ಇಂದು ಮತ್ತೆ ನೆನಪಾಗುತ್ತಿರುವ ಲೋಹಿಯಾ

ಲೋಹಿಯಾ ನಮ್ಮನ್ನಗಲಿ ಐವತ್ತು ವರ್ಷಗಳೇ ಆಗಿವೆ. ಭಾರತದ ರಾಜಕಾರಣವನ್ನು ಬಡವರ, ವಂಚಿತರ ಪರವಾಗಿ ಪರಿವರ್ತಿಸುವ ಅವರ ಪ್ರಯತ್ನ ಅಂದು ಕಾಂಗ್ರೆಸ್ ವಿರೋಧಿ ರಾಜಕಾರಣವಾಗಿ 'ಕಾಂಗ್ರೆಸ್ಸೇತರವಾದದ ಹೆಸರಿನಲ್ಲಿ ಕ್ರಿಯಾಶೀಲವಾಗಿತ್ತು. ೧೯೬೭ರಲ್ಲಿ ಅವರು ಕೊನೆಯುಸಿರೆಳೆದಾಗ ಅವರ ಈ ಪ್ರಯತ್ನ ಫಲ ಕೊಡಲಾರಂಭಿಸಿತ್ತಾದರೂ, ನಂತರದ ಅವರ ರಾಜಕೀಯ ವಾರಸುದಾರರ ಒಳಜಗಳಗಳು ಮತ್ತು ಲೋಹಿಯಾ ವಿಚಾರಗಳ ರೂಕ್ಷ ಗ್ರಹಿಕೆ ಮತ್ತು ಅವಕಾಶವಾದಿ ರಾಜಕಾರಣದಿಂದಾಗಿ ಹಿನ್ನೆಲೆಗೆ ಸರಿಯುವಂತಾಯಿತು. ಆದರೆ ಈ ಐವತ್ತು ವರ್ಷಗಳ ಕಾಲ ಭಾರತದ ಮಣ್ಣಿನಲ್ಲಿ ಸುಪ್ತವಾಗಿ ಮಲಗಿದ್ದ, ಗಾಂಧಿ ತತ್ವದ ಅನನ್ಯ ಗ್ರಹಿಕೆಯಿಂದ ಹುಟ್ಟಿದ ಅವರ ನೆಲಮೂಲ ರಾಜಕೀಯ ವಿಚಾರ ಬೀಜಗಳು ಕಾಂಗ್ರೆಸ್ ಪಕ್ಷವು ಪ್ರಾಧಾನ್ಯತೆಯನ್ನು ಕಳೆದುಕೊಂಡು ದೇಶವೀಗ ಪ್ರವೇಶಿರುವ ಹೊಸ ತರಂಗಾಂತರಗಳ ರಾಜಕಾರಣದ ಸಂದರ್ಭದಲ್ಲಿ ಚಿಗುರೊಡೆಯುತ್ತಾ, ಇಂದಿನ ಆಳುವ (ಬಿಜೆಪಿ) ರಾಜಕಾರಣಕ್ಕೆ–ಅದೂ ಸಂದರ್ಭಾನುಸಾರ ಲೋಹಿಯಾ ಮಂತ್ರ ಜಪಿಸುತ್ತಿರುವ ವಿಪರ್ಯಾಸದ ಮಧ್ಯದಲ್ಲೇ– ಪ್ರತಿ ರಾಜಕಾರಣ ರೂಪಿಸುವ ಹವಣಿಕೆಯನ್ನು ತೋರುತ್ತಿವೆ.

ಹಾಗಾಗಿ ಇಂದು ಲೋಹಿಯಾರ ಮರು ಓದು ಅಗತ್ಯವೆನಿಸಿದೆ. ಅಂತಹ ಮರು ಓದಿಗೆ ಒಂದು ರಾಜಕೀಯ ಪರಿಪ್ರೇಕ್ಷ್ಯವನ್ನು ಒದಗಿಸುತ್ತದೆ ಈ ಲೇಖನ–ಸಂಪಾದಕ.



ರಾಮಮನೋಹರ ಲೋಹಿಯಾ ಅವರು ಮೂಲತಃ ಅದ್ಭುತ ವಿಚಾರಗಳನ್ನು ಹೊಂದಿದ್ದ ವ್ಯಕ್ತಿ.. ಅಂದಮಾತ್ರಕ್ಕೆ ಅವರ ಅಲ್ಪಾವಧಿಯ(೧೯೧೦–೧೯೬೭) ಬದುಕು ಕ್ರಿಯಾಶೀಲವಾಗಿರಲಿಲ್ಲವೆಂದಲ್ಲ. ಕ್ವಿಟ್ ಇಂಡಿಯಾ ಚಳುವಳಿ, ಗೋವಾ ಸ್ವಾತಂತ್ರ್ಯ ಹೋರಾಟ, ನೇಪಾಳದಲ್ಲಿ ಪ್ರಜಾಪ್ರಭುತ್ವಕ್ಕಾಗಿನ ಹೋರಾಟ ಇತ್ಯಾದಿಗಳಲ್ಲಿ ಲೋಹಿಯಾರ ಪಾತ್ರವಿದ್ದೇ ಇತ್ತು. ಆದರೆ ಭಾರತದಲ್ಲಿ ಒಂದು ಗಟ್ಟಿಯಾದ ಸಮಾಜವಾದಿ ಚಳುವಳಿಯನ್ನು ಕಟ್ಟುವ ಅವರ ಗುರಿ ಈಡೇರಲೇ ಇಲ್ಲ. ಅವರು ಯಾವ ಸಮಾಜವಾದಿ ಪಕ್ಷದ ಭಾಗವಾಗಿದ್ದರೋ ಆ ಪಕ್ಷ ಒಡೆದು ಹೋಳಾಗಿ ತನ್ನ ಸತ್ವವನ್ನು ಕಳೆದುಕೊಂಡಿತು. ಅವರಿದ್ದ ಪಕ್ಷಗಳು ಮತ್ತು ತೊಡಗಿದ್ದ ಚಳುವಳಿಗಳು ನೆಲಕಚ್ಚಿದ್ದರೂ, ಅವರ ವಿಚಾರಗಳು ಮತ್ತು ಸಿದ್ಧಾಂತಗಳು ಇನ್ನೂ ಜೀವಂತವಾಗಿ ಉಳಿದಿವೆ. ವಾಸ್ತವವಾಗಿ ಅವರ ವಿಚಾರಗಳು ಭಾರತೀಯ ರಾಜಕಾರಣದ ವ್ಯಾಕರಣವನ್ನೇ ಬದಲಾಯಿಸಿವೆ. ಅದರಲ್ಲೂ ವಿಶೇಷವಾಗಿ ಉತ್ತರಭಾರತದ ಅಧಿಕಾರ ರಾಜಕಾರಣದ ಸಮೀಕರಣಗಳನ್ನು ರೂಪಿಸುವ ಒಳಸುಳಿಗಳನ್ನು ವ್ಯಾಖ್ಯಾನಿಸಲು ಅದು ಒಂದು ಹೊಸ ಪರಿಭಾಷೆಯನ್ನೇ ಒದಗಿಸಿದೆ.

ಲೋಹಿಯಾ ಅವರು ತಮ್ಮ ೫೭ ನೇ ವಯಸ್ಸಿನಲ್ಲಿ, ನವದೆಹಲಿಯ ವಿಲ್ಲಿಂಗ್ಡನ್ ಆಸ್ಪತ್ರೆಯಲ್ಲಿ (ಲೋಹಿಯಾರ ನಂತರ ಅದನ್ನು ರಾಮಮನೋಹರ ಲೋಹಿಯಾ ಆಸ್ಪತ್ರೆ ಎಂದು ಹೆಸರಿಸಲಾಗಿದೆ) ಕೊನೆಯುಸಿರೆಳೆದು ಸರಿಯಾಗಿ ಐವತ್ತು ವರ್ಷಗಳಾಗಿರುವ ಈ ಹೊತ್ತಿಗೆ, ಡಬ್ಲ್ಯೂ ಹೆಚ್ ಆಡೆನ್‌ನ ಶೈಲಿಯಲ್ಲಿ ಹೇಳುವುದಾದರೆ, ಅವರು ಬರಿಯ ವ್ಯಕ್ತಿಯಾಗಿ ಕಾಣುವುದಿಲ್ಲ, ಇಡಿಯಾಗಿ ಒಂದು ದೃಷ್ಟಿಕೋನವಾಗಿ ಕಾಣುತ್ತಾರೆ. ಗಾಂಧಿವಾದಿ, ನೆಹರೂವಾದಿ, ಅಂಬೇಡ್ಕರ್‌ವಾದಿ, ಮಾರ್ಕ್ಸ್‌ವಾದಿ, ಮಾವೋವಾದಿ ಇತ್ಯಾದಿಗಳಂತೆ ಲೋಹಿಯಾವಾದಿಯೂ ಒಬ್ಬ ರಾಜಕೀಯ ವ್ಯಕ್ತಿ– ಉತ್ತರಪ್ರದೇಶ, ಬಿಹಾರ ಮತ್ತು ಕರ್ನಾಟಕದಂತಹ ಭಾರತದ ಕೆಲವು ದೊಡ್ಡ ರಾಜ್ಯಗಳಲ್ಲಿ ಅಧಿಕಾರ ಪಡೆದ ನಂತರದಲ್ಲಿ ತಮ್ಮ ರಾಜಕೀಯ ಗುರುತು ಅಳಿದುಹೋಗುವಷ್ಟರ ಮಟ್ಟಿಗೆ ಬದಲಾಗಿದ್ದರೂ ಸಹ. ಮುಲಾಯಂಸಿಂಗ್ ಯಾದವ್ ಮತ್ತು ಲಾಲೂ ಪ್ರಸಾದ್ ಯಾದವ್‌ರೂ ಸೇರಿ ಬಹಳಷ್ಟು ಜನ ಇತರರಂತೆ, ಹಾಲಿ ಮುಖ್ಯಮಂತ್ರಿಗಳಾಗಿರುವ ಇಬ್ಬರು, ಸಿದ್ಧರಾಮಯ್ಯ ಮತ್ತು ನಿತೀಶ್ ಕುಮಾರ್ ಅವರುಗಳು, ಲೋಹಿಯಾರಿಗೆ ತಾವು ಬೌದ್ಧಿಕವಾಗಿ ಋಣಿಗಳಾಗಿರುವುದನ್ನು ಒಪ್ಪಿಕೊಳ್ಳುತ್ತಾರೆ.

ಮಂಡಲ್ ಕ್ರಾಂತಿಯು ಉತ್ತರಭಾರತದ ರಾಜಕಾರಣದ ಚಹರೆಗಳನ್ನೇ ಬದಲಿಸಿಬಿಟ್ಟಿತು. ಆದರೆ, ಇತರ ಹಿಂದುಳಿದ ಜಾತಿಗಳ ಸಮುದಾಯದ(ಓಬಿಸಿ) ಸಬಲೀಕರಣಕ್ಕಾಗಿ ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ನೆಲೆಗಟ್ಟನ್ನು ಹಾಕಿಕೊಟ್ಟವರು ಲೋಹಿಯಾ. ಚುನಾವಣಾ ರಾಜಕೀಯ ಕ್ಷೇತ್ರದ ಹೊರಗೆ ಕೂಡಾ ಹಲವಾರು ಹೊಸ ಸಾಮಾಜಿಕ ಚಳುವಳಿಗಳು ಮತ್ತು ಅದರ ನಾಯಕರು, ಉದಾಹರಣೆಗೆ–ಮೇಧಾ ಪಟ್ಕರ್, ಲೋಹಿಯಾರ ಪ್ರಭಾವವಿರುವ ಒಂದು ರಾಜಕೀಯ ಧಾರೆಯ ಭಾಗವಾಗಿದ್ದಾರೆ.

ಇತ್ತೀಚಿನ ದಿನಗಳಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಲೋಹಿಯಾರ ಹೆಸರನ್ನು ಬಳಸುತ್ತಿರುವುದು ಕೇಳಿಬರುತ್ತಿದೆ. ಮೋದಿಯವರ ನೇತೃತ್ವದ ಬಿಜೆಪಿಯು ಕಾಂಗ್ರೆಸ್ಸನ್ನು ಗುರಿಯಾಗಿಸಿ ಆಡುತ್ತಿರುವ ಮಾತುಗಳು ಖಚಿತವಾಗಿ ಲೋಹಿಂಯಾರ ಬತ್ತಳಿಕೆಯಿಂದ ಎರವಲು ಪಡೆದ ಹತಾರಗಳಾಗಿದ್ದರೂ, ಸಾಮಾನ್ಯವಾಗಿ ಲೋಹಿಯಾರ ಹೆಸರನ್ನೆತ್ತದೇ ಅವರ ವಿಚಾರಗಳ ಜಾತ್ಯತೀತ ನೈತಿಕ ನೆಲೆಗಟ್ಟನ್ನು ಮರೆಮಾಚಿ ಬಳಸಿಕೊಳ್ಳುತ್ತಿದೆ. ಇಂದು ಎಲ್ಲ ಕಡೆಯೂ ಬಿಜೆಪಿ ಜಪಿಸುತ್ತಿರುವ ಕಾಂಗ್ರೆಸ್ ವಿರೋಧಿ ಮಂತ್ರವನ್ನು ಅಂದು ಲೋಹಿಯಾ ಬಳಸಿದ್ದು, ನೆಹರೂ ಕಾಂಗ್ರೆಸ್ಸಿಗೆದುರಾಗಿ: ಎಲ್ಲ ವಿರೋಧ ಪಕ್ಷಗಳನ್ನು ಬೆಸೆದು ಒಂದು ವಿರೋಧಿ ಒಕ್ಕೂಟವನ್ನು ಕಟ್ಟುವ ಸಲುವಾಗಿ. ಹಾಗೆ ೧೯೬೭ರಲ್ಲಿ ರಚಿತವಾದ 'ಸಂಯುಕ್ತ ವಿಧಾಯಕ ದಳ'ದ ಮಂತ್ರಿಮಂಡಲವೇ ಅಧಿಕಾರದ ಚುಕ್ಕಾಣಿ ಹಿಡಿದ ಉತ್ತರ ಭಾರತದ ಮೊದಲ ಕಾಂಗ್ರೆಸ್ ವಿರೋಧೀ ಒಕ್ಕೂಟ. ಪ್ರಾದೇಶಿಕ ಭಾಷೆಗಳನ್ನಾಡುತ್ತಿದ್ದ, ಸ್ಥಳೀಯ ಸಂಸ್ಕೃತಿಗಳಲ್ಲಿ ಆಳವಾಗಿ ಬೇರುಬಿಟ್ಟಿದ್ದ ಪ್ರಾಂತೀಯ ಭಾರತೀಯರನ್ನು ಹತ್ತಿಕ್ಕಲು ತನ್ನ ವರ್ಗದ ಸ್ಥಾನಮಾನವನ್ನು, ಇಂಗ್ಲಿಷ್ ಜ್ಞಾನದ ಹತಾರಗಳನ್ನು ಬಳಸುತ್ತಿದ್ದ ನೆಹರೂವಾದಿ ಇಂಗ್ಲಿಷ್‌ಪ್ರೇಮಿ ನಗರಕೇಂದ್ರಿತ ಮೇಲ್ವರ್ಗವನ್ನು ಲೋಹಿಯಾ ತೀವ್ರವಾಗಿ

ಟೀಕಿಸುತ್ತಿದ್ದರು. ಇವತ್ತು 'ರಾಜಪಥದ ಗಣ್ಯ ವರ್ಗ'ದ ವಿರುದ್ಧ ಎದ್ದಿರುವ ಟೀಕೆಗಳಲ್ಲಿ ಲೋಹಿಯಾರ ಮಾತುಗಳ ಛಾಯೆಯಿದೆ. ಇಂಗ್ಲಿಷ್‌ನ ಎದುರು ಲೋಹಿಯಾರ ಹಿಂದೀ ಭಾಷೆಯ ಪರ ವಕಾಲತ್ತು ಭಾಷಾಂಧತೆಯಿಂದ ಕೂಡಿರಲಿಲ್ಲ, ಬದಲಿಗೆ ಭಾರತೀಯ ಭಾಷೆಗಳನ್ನು ಆಡಳಿತ ಭಾಷೆಗಳಾಗಿ ಅಭಿವೃದ್ಧಿಪಡಿಸುವ ಸಲುವಾಗಿತ್ತು ಎಂಬುದು ಪೆರಿಯಾರ್ ಜೊತೆಗಿನ ಅವರ ಸಂವಾದದಲ್ಲಿ ಸ್ಪಷ್ಟವಾಗಿ ತೋರುತ್ತದೆ. ಇಂದು ಬಿಜೆಪಿಯು ಒಬಿಸಿ ಸಮುದಾಯದ ಪ್ರಧಾನಮಂತ್ರಿಯನ್ನು ಹೊಂದಿರುವುದನ್ನು ವೈಭವೀಕರಿಸುತ್ತಿರುವುದೂ ಕೂಡ ಅಧಿಕಾರವನ್ನು ದ್ವಿಜರಿಂದ ಶೂದ್ರರಿಗೆ ವರ್ಗಾಯಿಸುವ ಲೋಹಿಯಾರ ಚಿಂತನೆಯಿಂದ ಪ್ರೇರಿತವಾದದ್ದೇ.

ಲೋಹಿಯಾರಿಗೆ, ಇಂಥ ರಾಜಕೀಯ ವೈಚಾರಿಕ ರಚನೆಗಳು, ಸ್ವತಂತ್ರ ಭಾರತವನ್ನು ನಿರ್ವಸಾಹತೀಕರಣಗೊಳಿಸಿ ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ಸಮಸಮಾಜವನ್ನು ಕಟ್ಟಲು ಬೇಕಾದ ಹತಾರಗಳ ಒಂದು ಭಾಗವಾಗಿ ಕಂಡಿದ್ದವು. ಲೋಹಿಯಾರ ನೆಹರೂ ಬಗೆಗಿನ ಟೀಕೆಗಳು ವೈಯಕ್ತಿಕವಾದುದಾಗಿರಲಿಲ್ಲ. ಬದಲಿಗೆ, ಕೆಲ ಜಾತಿ, ಲಿಂಗ ಮತ್ತು ವರ್ಗಗಳ ಅಧಿಪತ್ಯವನ್ನು ಕಾಪಾಡಿಕೊಳ್ಳುವ ಯಥಾಸ್ಥಿತಿವಾದದ ರಾಜಕೀಯ ಮಾದರಿಯನ್ನು ನಿರಾಕರಿಸುವ ರೀತಿಯದ್ದಾಗಿತ್ತು. ಅಂದರೆ, ಅವರದೇ ಮಾತುಗಳಲ್ಲಿ ಹೇಳುವುದಾದರೆ, ವಾಲ್ಮೀಕಿ ಪರಂಪರೆಯ ಮೇಲೆ ವಸಿಷ್ಠ ಪರಂಪರೆಯ ಪ್ರಾಬಲ್ಯವನ್ನು ನಿರಾಕರಿಸುವುದಾಗಿತ್ತು. ಅಧಿಕಾರದ ಸ್ಥಾನಗಳಿಗೆ, ಒಬಿಸಿಗಳು, ಬುಡಕಟ್ಟು ಜನರು, ಮುಸ್ಲಿಮರು ಮತ್ತು ಮಹಿಳೆಯರನ್ನು ಹಿಡಿದೆತ್ತುವ ಮೇಲ್ವರ್ಗದ ಪರವಾಗಿ ಧನಾತ್ಮಕವಾದ ತಾರತಮ್ಯವನ್ನು (Positive discrimination) ಅವರು ಸಮರ್ಥಿಸಿದ್ದರು. ಎಲ್ಲ ಮಹಿಳೆಯರನ್ನೂ ಒಬಿಸಿಯ ಪರಿಧಿಯೊಳಗೆ ತರಬೇಕೆಂಬುದು ಲೋಹಿಯಾರ ಚಿಂತನೆಯಾಗಿತ್ತು. ಈ ರೀತಿಯಾಗಿ ಉತ್ತರ ಭಾರತದಲ್ಲಿ ಕಾಂಗ್ರೆಸ್ ವಿರೋಧಿ ನೆಲೆಗಟ್ಟನ್ನು ಲೋಹಿಯಾ ಸಿದ್ಧಪಡಿಸಿದ್ದರು. ಇದನ್ನೇ ಇಂದು ಬಿಜೆಪಿ ಆಕ್ರಮಿಸಿಕೊಳ್ಳಲು ಬಯಸುತ್ತಿರುವುದು. ಲೋಹಿಯಾರ ರಾಜಕಾರಣದ ಅಕ್ಷರಶಃ ಮರು-ಓದುವಿಕೆ ಇಂದು ಬಿಜೆಪಿಗೆ ಸುಲಭವೇ ಆಗಿಬಿಟ್ಟಿದೆ. ಏಕೆಂದರೆ, ಲೋಹಿಯಾ ಪರಂಪರೆಯ ರಾಜಕೀಯ ವಾರಸುದಾರರೆನಿಸಿಕೊಂಡವರು ಅಧಿಕಾರ ಪಡೆದುಕೊಂಡಮೇಲೆ ಸಾಮಾಜಿಕ ನ್ಯಾಯದ ರಾಜಕಾರಣವನ್ನು ಜಾತಿ ಪ್ರಾಬಲ್ಯ ಮತ್ತು ವಂಶ ಪಾರಂಪರ್ಯವನ್ನು ಓಲೈಸುವ ಮಟ್ಟಕ್ಕೆ ಇಳಿಸಿಬಿಟ್ಟಿರುವುದರಿಂದ.

ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಬೆಳಕಿಗೆ ಬಂದ ನಾಯಕರ ತಲೆಮಾರಿಗೆ ಸೇರುತ್ತಾರೆ ಲೋಹಿಯಾ. ೧೯೩೪ರಲ್ಲಿ ಕಾಂಗ್ರೆಸ್ಸಿನೊಳಗೇ ಸಮಾಜವಾದಿ ಕಾಂಗ್ರೆಸ್ ಪಕ್ಷವನ್ನು ಸ್ಥಾಪಿಸಿದ್ದ ಜಯಪ್ರಕಾಶ್ ನಾರಾಯಣ್ ಸಹಜವಾಗಿಯೇ ಈ ತಲೆಮಾರಿನ ನಾಯಕರಾಗಿದ್ದರು. ಈ ಇಬ್ಬರೂ ಗಾಂಧಿಯವರ ಬದುಕಿನ ಕೊನೆಯ ದಶಕದಲ್ಲಿ ಅವರಿಗೆ ಬಹಳ ಹತ್ತಿರವಾದರು. ಅದೇ ಹೊತ್ತಿಗೆ ಇವರ ಹಿಂದಿನ ತಲೆಮಾರಿನ ಹಿರಿಯ ರಾಜಕೀಯ ನಾಯಕರಾದ ನೆಹರೂ, ಪಟೇಲ್, ಮೌಲಾನಾ ಆಜಾದ್ ಮತ್ತಿತರರು ಮಹಾತ್ಮ ಗಾಂಧಿಯವರೊಂದಿಗೆ ತಾಳ್ಮೆಗೆಡುತ್ತಿದ್ದರು. ಭಾರತದ ವಿಭಜನೆಯನ್ನು ತಡೆಯಲು ಗಾಂಧಿ ಹತಾಶರಾಗಿ ಮಾತುಕತೆಯಲ್ಲಿ ತೊಡಗಿದ್ದಾಗ ಅಧಿಕಾರಕ್ಕಾಗಿ ಹವಣಿಸುತ್ತಿದ್ದ ಈ ನಾಯಕರುಗಳನ್ನು ಲೋಹಿಯಾ ತಮ್ಮ 'Guilty Men of India's Partition' ಎಂಬ ತಮ್ಮ ಪುಸ್ತಕದಲ್ಲಿ ಟೀಕಿಸದೇ ಬಿಟ್ಟಿಲ್ಲ. ೧೯೪೮ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸದಸ್ಯರು ಕಾಂಗ್ರೆಸ್‌ನಿಂದ ಹೊರನಡೆದು ಸಮಾಜವಾದಿ ಪಕ್ಷವನ್ನು ಕಟ್ಟಲು ಹೊರಟಾಗ ಇದ್ದದ್ದು ಈ ಇಬ್ಬರು ಜನಪ್ರಿಯ ನಾಯಕರು, ಜಯಪ್ರಕಾಶ್ ನಾರಾಯಣ್ ಮತ್ತು ಲೋಹಿಯಾ. ಸ್ವಾತಂತ್ರ್ಯ ಆಂದೋಲನದ ಮೂಲತತ್ವವನ್ನು ಪ್ರತಿನಿಧಿಸುವವರೂ, ಗಾಂಧಿ ಪರಂಪರೆಯ ಉತ್ತರಾಧಿಕಾರಿಗಳೂ ತಾವೇ ಎಂದು ಸಮಾಜವಾದಿಗಳು ಪ್ರತಿಪಾದಿಸಿದರು. ಗಾಂಧಿವಾದಿಗಳಲ್ಲಿ ಮೂರು ಬಗೆ ಎಂದು ಲೋಹಿಯಾ ಬರೆಯುತ್ತಾರೆ; ಮಠೀಯ, ಸರ್ಕಾರೀ ಮತ್ತು ಸಂಪ್ರದಾಯ ವಿರೋಧೀ(ಪಾಖಂಡೀ) ಎಂಬುದಾಗಿ. ಸಮಾಜವಾದಿ ಪಕ್ಷವೇ ಸಂಪ್ರದಾಯ ವಿರೋಧೀ(ಪಾಖಂಡೀ) ಗಾಂಧಿವಾದಿಗಳ ನೆಲೆ ಎಂದೂ ಬರೆಯುತ್ತಾರೆ. ಈ ವಾರಸುದಾರಿಕೆಯನ್ನು ಎಲ್ಲ ಸಮಾಜವಾದಿಗಳು ಒಪ್ಪುತ್ತಾರೆನ್ನುವುದು ಪ್ರಶ್ನಾರ್ಹ. ಆದರೆ ಲೋಹಿಯಾ ರಾಜಕಾರಣವನ್ನು ಮಾತ್ರ ಈ ಸಂಪ್ರದಾಯ ವಿರೋಧೀ ಗಾಂಧಿ ಪರಂಪರೆಯಲ್ಲೇ ನೆಲೆಗೊಳಿಸಬೇಕು. ಇವರ ಗಾಂಧಿ, ರಾಷ್ಟ್ರ ಪ್ರಭುತ್ವ, ಬಂಡವಾಳಶಾಹಿ ಮತ್ತು ಪಾಶ್ಚಿಮಾತ್ಯ ಆಧುನಿಕತೆಗಳನ್ನು ಆಳವಾಗಿ ಟೀಕಿಸುವ ನೆಲಮೂಲದ ಗಾಂಧಿ; ಧಾರ್ಮಿಕ ಸಂಸ್ಥೆಗಳನ್ನು ನಿರಾಕರಿಸಿಯೂ ಧಾರ್ಮಿಕವಾಗಿರುವ, ಕಾಲ ಮತ್ತು ದೇಶಗಳ ಆಕ್ರಮಣಗಳನ್ನೆದುರಿಸಿಯೂ ಜೀವಂತವಾಗುಳಿದಿರುವ ಗಾಂಧಿ.

ಲೋಹಿಯಾರ ಸಪ್ತಕ್ರಾಂತಿಗಳು: ಗಂಡು ಮತ್ತು ಹೆಣ್ಣಿನ ಸಮಾನತೆಗಾಗಿ; ರಾಜಕೀಯ, ಆರ್ಥಿಕ ಮತ್ತು ಜನಾಂಗೀಯ ತಾರತಮ್ಯಗಳ ವಿರುದ್ಧವಾಗಿ; ಜಾತಿವಿನಾಶಕ್ಕಾಗಿ; ವಿದೇಶೀ ಪ್ರಾಬಲ್ಯದ ವಿರುದ್ಧವಾಗಿ ಮತ್ತು ಪ್ರಜಾಪ್ರಭುತ್ವದ ವಿಶ್ವ ಸರ್ಕಾರಕ್ಕಾಗಿ; ಆರ್ಥಿಕ ಸಮಾನತೆಗಾಗಿ, ಯೋಜಿತ ಉತ್ಪಾದನೆಗಾಗಿ ಮತ್ತು ಖಾಸಗೀ ಸ್ವತ್ತಿನ ವಿರುದ್ಧವಾಗಿ; ಖಾಸಗೀ ಬದುಕಿನಲ್ಲಿನ ಹಸ್ತಕ್ಷೇಪದ ವಿರುದ್ಧವಾಗಿ ಮತ್ತು ಪ್ರಜಾಪ್ರಭುತ್ವಕ್ಕಾಗಿ; ಶಸ್ತ್ರಾಸ್ತ್ರಗಳು ಮತ್ತು ಆಯುಧಗಳ ವಿರುದ್ಧವಾಗಿ ಮತ್ತು ಸತ್ಯಾಗ್ರಹದ ಪರವಾಗಿ-ಇವು ಒಂದು ರೀತಿ ನಮ್ಮ ಕಾಲದ ವಿಸ್ತೃತ ಗಾಂಧಿ ತತ್ವದ ವ್ಯಾಖ್ಯಾನಗಳು. ಭಾರತವು ಸಮ ಸಮಾಜವನ್ನು ಕಟ್ಟಬೇಕೆಂದರೆ, ಜಿಡ್ಡುಗಟ್ಟಿದ ಜಾತಿವ್ಯವಸ್ಥೆ ತೊಲಗಬೇಕು ಎಂಬುದು ಲೋಹಿಯಾಗೆ ಸ್ಪಷ್ಟವಾಗಿತ್ತು. ಗಾಂಧಿಯೂ ಇದೇ ನಿಲುವಿಗೆ ಬಂದಿದ್ದರು. ೧೯೫೬ರಲ್ಲಿ ತಮ್ಮ ರಾಜಕಾರಣದ ಪರಿಧಿಯಲ್ಲಿ ಬಾಬಾಸಾಹೇಬ್ ಅಂಬೇಡ್ಕರ್‌ರನ್ನು ಒಳಗೊಳ್ಳಬೇಕೆಂದು ಲೋಹಿಯಾ ಆಶಿಸಿದ್ದು ಕೂಡ, ವಿಸ್ತಾರವಾದ ಸಾಮಾಜಿಕ ನ್ಯಾಯದ ಕಾರ್ಯಸೂಚಿಯೊಂದಿಗೆ ವಿಶಾಲವಾದ ತಳಹದಿಯ ಸಮಾಜವಾದಿ ಪಕ್ಷವನ್ನು ಕಟ್ಟಬೇಕೆಂಬ ಪ್ರಯತ್ನದ ಭಾಗವಾಗಿತ್ತು. ಆದರೆ ಲೋಹಿಯಾ ಮತ್ತು ಅಂಬೇಡ್ಕರ್ ಭೇಟಿಗೆ ಮುನ್ನವೇ ಅಂಬೇಡ್ಕರ್ ಅನಿರೀಕ್ಷಿತ ಅಸ್ವಸ್ಥತೆಯಿಂದಾಗಿ ಕಾಲವಶರಾದರು. ಅವರಿಬ್ಬರ ನಡುವಿನ ಪತ್ರವ್ಯವಹಾರದಲ್ಲಿ, ಕಳೆದುಹೋಗುತ್ತಿರುವ ಈ ಒಂದು ಅವಕಾಶದ ಬಗ್ಗೆ ಇಬ್ಬರೂ ಮಾತನಾಡಿಕೊಂಡಿದ್ದಾರೆ. ಲೋಹಿಯಾ, ಜಾತಿ ಮತ್ತು ವರ್ಗಗಳ ವಿನಾಶದ ಸಾಧನವಾಗಿ ಮೀಸಲಾತಿಯನ್ನು ಸಮರ್ಥಿಸುವ ಸಂದರ್ಭದಲ್ಲಿ ಬಂಡವಾಳಶಾಹಿ ಆಧುನಿಕತೆಯ ವಿಶ್ಲೇಷಣೆಯನ್ನು ಮಾಡಿದ್ದರು. ಒಂದು ರೀತಿಯಲ್ಲಿ ಅದು ಗಾಂಧಿ ಮತ್ತು ಅಂಬೇಡ್ಕರ್ ಲೋಕಗಳ ನಡುವಿನ ಸೇತುವೆಯಾಗಿದೆ.

ಲೋಹಿಯಾರಿಂದ ನಾವು ಪುನಃ ಪಡೆದುಕೊಳ್ಳಬೇಕಾಗಿರುವುದೇನನ್ನು? ನೀತಿ ಮತ್ತು ಮೌಲ್ಯಗಳನ್ನು ಅಭ್ಯಾಸ ಮಾಡುವುದೇ ರಾಜಕಾರಣ ಎಂದು ಪ್ರತಿಪಾದಿಸುವ ಲೋಹಿಯಾ-ಒಮ್ಮೆ ತಮ್ಮ ಪಕ್ಷ ಅಧಿಕಾರಕ್ಕೆ ಬಂದಿದ್ದಾಗ, ರಾಜಕೀಯ ಸಭೆಯೊಂದರ ಮೇಲೆ ಗೋಲಿಬಾರ್ ಮಾಡಲು ಪೋಲೀಸರಿಗೆ ಆದೇಶವಿತ್ತ ಕಾರಣ ಅದರ ರಾಜೀನಾಮೆಗಾಗಿ ಆಗ್ರಹಿಸಿದರು. ರಾಜಕಾರಣದ ಸೌಂದರ್ಯ ಮತ್ತು ಸೌಂದರ್ಯದ ರಾಜಕಾರಣಗಳ ಅದ್ಭುತವಾದ ಗ್ರಹಿಕೆಯನ್ನು ಹೊಂದಿದ್ದ ಸೈದ್ಧಾಂತಿಕ ವ್ಯಕ್ತಿಯಾದ ಲೋಹಿಯಾಗೆ ಗಾಂಧಿಯಂತೆಯೇ ' ದೈವಿಕತೆಯ(ಪವಿತ್ರವಾದದ್ದರ ಬಗ್ಗೆ) ಆಳವಾದ ಅರಿವಿತ್ತು ಮತ್ತು ಅವರು ಸದಾ ಸಾಮಾನ್ಯ ನಾಗರಿಕರ ದೃಷ್ಟಿಯಿಂದಲೇ ಯೋಚಿಸುತ್ತಿದ್ದರು. ರಾಷ್ಟ್ರ-ರಾಜ್ಯಗಳ ಪರಿಭಾಷೆಯನ್ನು ಬಳಸುತ್ತಿರಲಿಲ್ಲ. ತಾವು ಸಂಪಾದಿಸುತ್ತಿದ್ದ ಪತ್ರಿಕೆಯನ್ನು 'ಮ್ಯಾನ್‌ಕೈಂಡ್' ಎಂದು ಅವರು ಕರೆದಿದ್ದರಲ್ಲಿ ಆಶ್ಚರ್ಯವಿಲ್ಲ. ಅವರು ವಿಶ್ವ ಸರ್ಕಾರ ರಚನೆಯ ಬಗ್ಗೆ, ವಿಶ್ವ ನಾಗರಿಕತ್ವದ ಬಗ್ಗೆ ಮಾತನಾಡುತ್ತಿದ್ದರು. ಆದರೆ ಅದರ ಮೂಲವು ಸ್ಥಳೀಯ ಸಂಸ್ಕೃತಿ ಮತ್ತು ಪರಂಪರೆಗಳಲ್ಲಿರಬೇಕು, ಬಹುತ್ವವನ್ನು ಸಂಭ್ರಮಿಸಬೇಕು ಎನ್ನುವುದಾಗಿತ್ತು. ಏಕರೂಪಿ ಸಂಸ್ಕೃತಿಯ ಹೇರಿಕೆ, ವ್ಯವಸ್ಥೆಯನ್ನು ಕೇಂದ್ರೀಕೃತಗೊಳಿಸಲು ಹವಣಿಸುವ ಪ್ರವೃತ್ತಿ ಮತ್ತು ಜನರ ನಂಬಿಕೆಯನ್ನು ಸಾಧನವಾಗಿ ಬಳಸುವುದನ್ನು ಪ್ರತಿರೋಧಿಸುವ ರಾಜಕೀಯದ ಬೀಜಗಳು ಲೋಹಿಯಾರಲ್ಲಿ ಅಂತರ್ಗತವಾಗಿದ್ದವು. ಆ ಲೋಹಿಯಾ ಮರುಹುಟ್ಟುಪಡೆಯಬೇಕಾಗಿದೆ.

(ಲೇಖಕ ಅಮೃತ ಲಾಲ್ 'ದ ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯಲಿ ರಾಜಕೀಯ-ಸಾಂಸ್ಕೃತಿಕ ಲೇಖನಗಳನ್ನು ಬರೆಯುವ ಹಿರಿಯ ಪತ್ರಕರ್ತರಾಗಿದ್ದಾರೆ)


(ಕೃಪೆ: *ದ ಇಂಡಿಯನ್ ಎಕ್ಸ್‌ಪ್ರೆಸ್*)

ಹಿರಿಯ ಸಮಾಜವಾದಿ ಮತ್ತು ಖ್ಯಾತ ಪತ್ರಕರ್ತರೂ, ನಮ್ಮ ಪತ್ರಿಕೆಯ ಹಿತೈಷಿಯೂ ಆಗಿದ್ದ ರಾಜಶೇಖರ ಕೋಟಿಯವರ ನಿಧನಕ್ಕೆ ಪತ್ರಿಕೆ ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತದೆ.-ಸಂ



ಅಗಲಿದ ಕರ್ನಾಟಕದ ಎರಡು ಸಮಾಜವಾದಿ ಚೇತನಗಳು

೧. ವೈ.ಎಸ್. ಸುಬ್ರಮಣ್ಯ



ಸಮಾಜವಾದಿ ಸಿ.ಜಿ.ಕೆ ರೆಡ್ಡಿ ಮತ್ತು ಸೋಗಾಲ ನಾಗಭೂಷಣ ಮುಂತಾದವರ ನಾಯಕತ್ವದಲ್ಲಿ ಅಂದಿನ ಮೈಸೂರು ರಾಜ್ಯವು ಸಮಾಜವಾದಿ ಚಟುವಟಿಕೆಗಳ ಮಹಾಪೂರವನ್ನೇ ಕಂಡಿತೆನ್ನಬೇಕು. ಜೆ.ಪಿ ಮತ್ತು ಲೋಹಿಯಾ ಅವರುಗಳನ್ನು ಅಂದಿನ ಯುವ ನಾಯಕರುಗಳ ಪಾಲಿನ ಧ್ರುವ ತಾರೆಗಳಾಗಿದ್ದರು. ಇಂತಹ ಕಾಲಘಟ್ಟದಲ್ಲಿ ಮೂಡಿಬಂದ ಯುವ ನಾಯಕರಲ್ಲೊಬ್ಬರು ಇತ್ತೀಚೆಗೆ ತಮ್ಮ 93ರ ಇಳಿವಯಸ್ಸಿನಲ್ಲಿ ಕಣ್ಮರೆಯಾದ ವೈ.ಎಸ್. ಸುಬ್ರಹ್ಮಣ್ಯ.

ಐವತ್ತರ ದಶಕದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರ ಸಾರಥ್ಯದಲ್ಲಿ ಧಾರವಾಡದಲ್ಲಿ ಪ್ರಾರಂಭವಾದ 'ಜಾಗೃತಿ' ಎಂಬ ಸಮಾಜವಾದಿ ಪತ್ರಿಕೆ'ಯ ಹಂಚಿಕೆ ಮತ್ತು ಮಾರಾಟ ಸುಬ್ರಹ್ಮಣ್ಯ ಅವರ ಜವಾಬ್ದಾರಿಯಾಗಿತ್ತು. ದಿವಂಗತ ಖಾದ್ರಿ ಶಾಮಣ್ಣನವರು ಈ ಸಂಪಾದಕತ್ವದ ಈ ಪತ್ರಿಕೆಯು ಅಚ್ಚಾಗಿ ಬೆಂಗಳೂರನ್ನು ತಲುಪಿದಕೂಡಲೆ ಅದನ್ನು ಜನಸಂದಣಿ ಇದ್ದಡೆ ಕೊಂಡೊಯ್ದು ತಲೆಬರಹಗಳನ್ನು ಗಟ್ಟಿಯಾಗಿ ಕೂಗಿ ಪ್ರಚಾರ ಮಾಡಿ ಜನರನ್ನು ಆಕರ್ಷಿಸಿ ಅಷ್ಟೂ ಪತ್ರಿಕೆಗಳನ್ನು ಮಾರಿಬಿಡುತ್ತಿದ್ದರು. ಪತ್ರಿಕೆಯಿಂದ ಬಂದ ಹಣವೇ ಅವರ ಅಂದಿನ ರಾತ್ರಿಯ ಊಟವಾದ ಕಡ್ಲೆಕಾಯಿಯನ್ನು ಕೊಳ್ಳಲು ಬಳಕೆಯಾಗುತ್ತಿತ್ತು.

ಸಂಪ್ರದಾಯಸ್ಥ ಕುಟುಂಬದ ಹಿನ್ನಲೆಯಿಂದ ಬಂದ ಸುಬ್ರಹ್ಮಣ್ಯ ಅವರು ಬಾಟಾ ಕಂಪನಿಯಲ್ಲಿ ಉದ್ಯೋಗಕ್ಕೆ ಸೇರಿದಾಗ ಅದು ಒಂದು ದೊಡ್ಡ ಸಂಚಲನವನ್ನೇ ಮೂಡಿಸಿತ್ತು. ಅವರು ಬೆಂಗಳೂರಿನಲ್ಲಿದ್ದ ಕಾಲಕ್ಕೆ ರಾಜ್ಯದ ಪ್ರಮುಖ ಸಮಾಜವಾದಿ ನಾಯಕರುಗಳಾದ ಯೂಸುಫ್ ಮೆಹರೌಲಿ, ಜೆ.ಹೆಚ್. ಪಟೇಲ್, ಸಿ.ಜಿ.ಕೆ ರೆಡ್ಡಿ, ಎಸ್. ವೆಂಕಟರಾಮ್, ಗೋಪಾಲಗೌಡರಂತಹವರೆಲ್ಲರೂ ಅವರ ಸಂಪರ್ಕದಲ್ಲಿದ್ದರು. ಸದಾ ಹಣಕಾಸಿನ ತೊಂದರೆಯಲ್ಲಿರುತ್ತಿದ್ದ ಈ ನಾಯಕರಲ್ಲಿ ಬಹಳಷ್ಟು ಜನರಿಗೆ ಸುಬ್ರಹ್ಮಣ್ಯ ಅವರ ಸಹಾಯ ಸದಾಕಾಲವೂ ಒದಗಿಬರುತ್ತಿತ್ತು.

೧೯೭೫ರ ತುರ್ತುಪರಿಸ್ಥಿತಿಯ ವೇಳೆಗೆ ಅತ್ಯಂತ ಕ್ರಿಯಾಶೀಲರಾಗಿದ್ದ ಸುಬ್ರಹ್ಮಣ್ಯ ಆ ಕಾಲದ ಭೂಗತ ಪತ್ರಿಕೆಗಳ ಹಂಚಿಕೆ, ಇಂಗ್ಲೀಷ್ ಲೇಖನಗಳ ಅನುವಾದ ಮುಂತಾದ ಕೆಲಸಗಳಲ್ಲಿ ತೊಡಗಿಕೊಂಡಿದ್ದರು. ಬಾಟಾ ಅಂಗಡಿಯ ಹಿಂಭಾಗದ ಆವರಣದಲ್ಲಿ ತುರ್ತು ಪರಿಸ್ಥಿತಿ ವಿರೋಧಿ ಚಟುವಟಿಕೆಗಳ ಆಯೋಜಿತವಾಗುತ್ತಿದ್ದುದು ಬಹಳ ಜನಕ್ಕೆ ಗೊತ್ತಾಗದ ಸಂಗತಿಯಾಗಿತ್ತು. ಅಲ್ಲಿ ನೆರೆಯುತ್ತಿದ್ದವರಲ್ಲಿ ಸತ್ಯವ್ರತ, ಖಾದ್ರಿ ಶಾಮಣ್ಣ, ವೆಂಕಟಸ್ವಾಮಿ, ಬಾಪೂ ಹೆದ್ದೂರಶೆಟ್ಟಿ, ಟಿ.ಎನ್. ಸೀತಾರಾಂ, ಬಿ.ವೈ. ಲಲಿತಾಂಬ, ಶಂಕರಪ್ಪ ಮುಂತಾದವರು ಇರುತ್ತಿದ್ದರು. ತುರ್ತು ಪರಿಸ್ಥಿತಿ ಮುಗಿದಾಗ ಜೆ.ಪಿ ಮತ್ತಿತರ ಸಮಾಜವಾದಿ ನಾಯಕರ ಬಗೆಗಿನ ಅತ್ಯಂತ ಕಡಿಮೆ ಬೆಲೆಯ ಪುಸ್ತಕಗಳನ್ನು ಅವರು ಹೊರತಂದರು. ಜೆ.ಪಿ.ಯವರ ಸಂಪೂರ್ಣ ಕ್ರಾಂತಿ ಪುಸ್ತಕಕ್ಕೆ ಅವರು ಇರಿಸಿದ್ದ ಬೆಲೆ ಕೇವಲ 1 ರೂ. ಜೆ.ಪಿಯವರ ನವನಿರ್ಮಾಣ ಪುಸ್ತಕವನ್ನು ಅವರು 2 ರೂ.ಗೆ ಮಾರುತ್ತಿದ್ದರು.

ಸುಬ್ರಹ್ಮಣ್ಯ ಅವರು ಯಾವ ಪ್ರಶಸ್ತಿ ಪುರಸ್ಕಾರವನ್ನೂ ಒಪ್ಪಿಕೊಂಡವರಲ್ಲ. 90ರ ಹರೆಯದಲ್ಲೂ ಅತ್ಯಂತ ವಿನಯಶೀಲ ಸಮಾಜವಾದಿಯಾಗೇ ಉಳಿದಿದ್ದ ಸುಬ್ರಹ್ಮಣ್ಯ ಅವರ ನಿಧನ ಒಂದು ಯುಗದ ಅಂತ್ಯ, ಬಹುದೊಡ್ಡ ಮಾಹಿತಿಯ ಆಗರದ ನಷ್ಟ.

–ಖಾದ್ರಿ ಎಸ್.ಅಚ್ಯುತನ್

(ಆಧಾರ : *ಜನತಾ*)

(ಕನ್ನಡ ಸಾರರೂಪ : ಎಂ.ಆರ್)

೨. ಖಾದ್ರಿ ಎಸ್. ಅಚ್ಯುತನ್



ಕರ್ನಾಟಕದ ಸಮಾಜವಾದಿ ಸಮುದಾಯ ವೈ.ಎಸ್. ಸುಬ್ರಮಣ್ಯ ಅವರನ್ನು ಕಳೆದುಕೊಂಡ ದುಃಖದಲ್ಲಿರುವಾಗಲೇ, ಅವರಿಗೆ ಶ್ರದ್ಧಾಂಜಲಿ ಬರಹಗಳನ್ನು ಪ್ರಕಟಿಸಿ ಗೌರವ ಸಲ್ಲಿಸಿದ ಹಿರಿಯ ಸಮಾಜವಾದ ಚೇತನ ಖಾದ್ರಿ ಎಸ್. ಅಚ್ಯುತನ್ ಅವರನ್ನೂ ಅನಿರೀಕ್ಷಿತವಾಗಿ ಕಳೆದುಕೊಂಡು ದಿಗ್ಭ್ರಮೆಗೊಂಡಿದೆ. ಬೆಂಗಳೂರಿನ ಸಮಾಜವಾದಿ ಸಮುದಾಯದ ಸಕ್ರಿಯ ಕಾರ್ಯಕರ್ತರೂ, ಭಾರತೀಯ ಸಮಾಚಾರ ಸೇವೆಯ ಹಿರಿಯ ನಿವೃತ್ತ ಅಧಿಕಾರಿಯೂ ಆದ ಅಚ್ಯುತನ್ ಅಕ್ಟೋಬರ್ ೨೯ರಂದು ಶ್ವಾಸಕೋಶದ ಸೋಂಕಿನಿಂದ ಆಸ್ಪತ್ರೆಗೆ ದಾಖಲಾದವರು ಚಿಕಿತ್ಸೆ ಫಲಕಾರಿಯಾಗದೆ ನಮ್ಮನ್ನಗಲಿ ಹೋಗಿದ್ದಾರೆ.

ತಮ್ಮ ಅಣ್ಣ ಖ್ಯಾತ ಪತ್ರಕರ್ತ ಖಾದ್ರಿ ಶಾಮಣ್ಣನವರ ಹಾದಿಯಲ್ಲೇ ಕನ್ನಡ ದಿನಪತ್ರಿಕೆಯೊಂದರಲ್ಲಿ ವೃತ್ತಿ ಆರಂಭಿಸಿದ್ದ ಅವರು ನಂತರ ಭಾರತೀಯ ಸಮಾಚಾರ ಸೇವೆಯ ಅಧಿಕಾರಿಯಾಗಿ ಆಕಾಶವಾಣಿಯ ವಿವಿಧ ಕೇಂದ್ರಗಳ ಸುದ್ದಿ ವರದಿಗಾರ ಸೆನ್ಸಾರ್ ಮಂಡಳಿಯ ಪ್ರಾದೇಶಿಕ ಅಧಿಕಾರಿ ಮತ್ತು ಭಾರತ ಸರ್ಕಾರದ 'ಯೋಜನಾ' ಪತ್ರಿಕೆಯ ಸಂಪಾದಕತ್ವ ಸೇರಿದಂತೆ ಹಲವು ಜವಾಬ್ದಾರಿಯುತ ಹುದ್ದೆಗಳನ್ನು ನಿರ್ವಹಿಸಿ ಕೆಲವು ವರ್ಷಗಳ ಹಿಂದಷ್ಟೇ ಬೆಂಗಳೂರು ದೂರದರ್ಶನದ ವಾರ್ತಾ ನಿರ್ದೇಶಕರಾಗಿ ನಿವೃತ್ತಿ ಹೊಂದಿದ್ದರು. ನಿವೃತ್ತಿಯ ನಂತರ ಪತ್ರಿಕೋದ್ಯಮ ಶಿಕ್ಷಣ ಸಂಸ್ಥೆಯೊಂದರಲ್ಲಿ ವಿದ್ಯಾರ್ಥಿಗಳಿಗೆ ಮಾಧ್ಯಮ ಶಿಕ್ಷಣ ನೀಡುತ್ತಿದ್ದರು.

ಸರ್ಕಾರೀ ಸೇವೆಯುದ್ದಕ್ಕೂ ವೃತ್ತಿ ಜೀವನದಲ್ಲಿ ಕಿರಿಯರನ್ನು ಪ್ರೋತ್ಸಾಹಿಸುತ್ತಾ, ಜನಪ್ರಿಯ ಅಧಿಕಾರಿಯಾಗಿ, ಸರಳ ಜೀವಿಯಾಗಿ ಬಾಳಿದವರು ಅವರು. ಬೆಂಗಳೂರಿನಲ್ಲಿದ್ದಷ್ಟು ಕಾಲವೂ, ಶಿಥಿಲಾವಸ್ಥೆಯಲ್ಲೇ ಇದ್ದ ಸರ್ಕಾರಿ ಗೃಹದಲ್ಲೇ ವಾಸವಾಗಿದ್ದ ಅವರು, ನಿವೃತ್ತಿಯ ನಂತರ ಸ್ವಂತ ಮನೆ ಎಂಬುದನ್ನು ಮಾಡಿದ್ದು ನಗರದ ಹೃದಯಭಾಗದಿಂದ ಬಹುದೂರವಿರುವ ಪೀಣ್ಯ ಕೈಗಾರಿಕಾ ಪ್ರದೇಶದ ಸ್ವಂತ ಮನೆಗೆ. ಇಷ್ಟಪಟ್ಟಿದ್ದರೆ ಅವರು ತಮ್ಮ ಉನ್ನತ ವಲಯದ ಪ್ರಭಾವ ಬಳಸಿ ರಾಜಧಾನಿಯ ಪ್ರತಿಷ್ಠಿತ ಬಡಾವಣೆಯೊಂದರಲ್ಲೇ ಮನೆ ಸಂಪಾದಿಸಬಹುದಿತ್ತು. ಸದಾ ಬಸ್ ಮತ್ತು ಅನಿವಾರ್ಯವಾದಾಗ ಮಾತ್ರ ಆಟೋದಲ್ಲಿ ಓಡಾಡುತ್ತಿದ್ದ ಅವರ ಖಾದಿ ನಿಷ್ಠೆ ಕೊನೆಯವರೆಗೂ ಉಳಿದಿತ್ತು.

ತಮ್ಮ ಅಣ್ಣನಿಂದ ವಿದ್ಯಾರ್ಥಿ ದೆಸೆಯಲ್ಲಿಯೇ ಸಮಾಜವಾದಿ ದೀಕ್ಷೆ ಪಡೆದಿದ್ದ ಅಚ್ಯುತನ್ ಅವರು ಕಿರಿಯರಿಗೆ ಸಮಾಜವಾದಿ ಮತ್ತು ಸರ್ವೋದಯ ವಿಚಾರಗಳನ್ನು ಪಸರಿಸುವ ಕೆಲಸವನ್ನು ಮಾಡುತ್ತಿದ್ದರು. ನನ್ನನ್ನು ಮತ್ತು ನನ್ನ ಜೊತೆಗೇ ನನ್ನಂತಹ ಹಲವು ಯುವಜನರಿಗೆ 'ಹೊಸ ಮನುಷ್ಯ' ಪತ್ರಿಕೆಗೆ ಮೊದಲಿಗೆ ಸ್ವತಃ ತಾವೇ ಚಂದಾ ನೀಡಿ ಚಂದಾದಾರನ್ನು ಮಾಡಿದವರು ಅವರೇ. ಹಿರಿಯ ಸಮಾಜವಾದಿ ಚಿಂತಕ ಅಶೋಕ ಮೆಹ್ತಾ ಅವರ ಸಮಾಜವಾದಿ ವಿಚಾರಗಳ ಪುಸ್ತಕವೊಂದನ್ನು ಕನ್ನಡಕ್ಕೆ ಅನುವಾದಿಸಿ ಕನ್ನಡದಲ್ಲಿ ಸಮಾಜವಾದಿ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆ ಸಲ್ಲಿಸಿದ್ದಾರೆಂದೇ ಹೇಳಬಹುದು. ಇವರ ಇತರ ಕೃತಿಗಳೆಂದರೆ, ಕೆ.ಎಚ್. ರಾಮಯ್ಯ ಮತ್ತು ಬಿ. ಪುಟ್ಟಸ್ವಾಮಯ್ಯ ಅವರ ಜೀವನ ಚರಿತ್ರೆಗಳು, ಖಾದ್ರಿ ಶಾಮಣ್ಣನವರನ್ನು ಕುರಿತ ಕಿರುಹೊತ್ತಿಗೆ, ಭಾರತೀಯ ಬಾಹ್ಯಾಕಾಶ ಸಂಸ್ಥೆಗಾಗಿ 'ಬಾನಂಗಳದಿಂದ ಶ್ರೀಸಾಮಾನ್ಯನವರೆಗೆ' ಇವರ ಉಲ್ಲೇಖಾರ್ಹ ಕೃತಿಗಳು.

ಮೇಲುಕೋಟೆಯಲ್ಲಿ ಪು.ತಿ.ನ. ಟ್ರಸ್ಟ್ ಮತ್ತು ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್‌ಗಳ ಸ್ಥಾಪಕ ಸದಸ್ಯರಾಗಿ ತಮ್ಮ ಮಿತ್ರರೊಡಗೂಡಿ ಇವನ್ನು ನಡೆಸಿಕೊಂಡು ಹೋಗುವ ಉತ್ತಮ ಸಂಘಟಕರೂ ಆಗಿದ್ದ ಅಚ್ಯುತನ್, ಇತ್ತೀಚೆಗೆ ತಮ್ಮ ಪತ್ರಕರ್ತ ಮಿತ್ರರೊಡಗೂಡಿ ಯುವಪೀಳಿಗೆಗಾಗಿ ಮಾಧ್ಯಮ ತರಬೇತಿ ಮತ್ತು ಸಂಶೋಧನೆಗೆಂದೇ ಟ್ರಸ್ಟ್‌ವೊಂದನ್ನು ಸ್ಥಾಪಿಸಿದ್ದರು.

–ಎಂ.ಜಿ. ರಾಧಿಕಾ

'ಭಾರತ ಬಿಟ್ಟು ತೊಲಗಿ' ಚಳುವಳಿಯ ೭೫ನೇ ವರ್ಷದ ನೆನಪಿನಲ್ಲಿ...

ಗಾಂಧಿಯವರತ್ತ ನೋಟ-೧

'ಕ್ವಿಟ್ ಇಂಡಿಯಾ ಚಳುವಳಿ'ಯ ಮುನ್ನ :ಗಾಂಧಿ-ನೆಹರೂ ಸುತ್ತಮುತ್ತ

ಮೂಲ ಇಂಗ್ಲಿಷ್ : ಮಧು ಲಿಮಯೆ
ಕನ್ನಡಕ್ಕೆ : ಎಂ. ರಾಜು

ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಅದರ ನಾಯಕರ ಬಗೆಗೆ ಅವಹೇಳನಕಾರಿ ಕಥೆಗಳನ್ನು ಕಟ್ಟಿ ಹೊಸ ಪೀಳಿಗೆಯ ಅಮಾಯಕರ ಮನಸ್ಸಿನಲ್ಲಿ ಇತಿಹಾಸದ ವಕ್ರ ರೂಪವನ್ನು ಮೂಡಿಸುವ ವ್ಯವಸ್ಥಿತ ಪ್ರಯತ್ನವೊಂದು ನಡೆಯುತ್ತಿರುವ ಈ ಸಂದರ್ಭದಲ್ಲಿ ಇತಿಹಾಸ ಕ್ಷಣಗಳನ್ನು ಹತ್ತಿರದಿಂದ ಕಂಡವರ ಕಥನ ಕೇಳುವುದು ಸತ್ಯವನ್ನು ಸ್ಪರ್ಶಿಸಿದ ಒಂದು ರೋಮಾಂಚನದ ಅನುಭವ. ಅಂತಹ ಈ ಲೇಖನದಲ್ಲಿ ಸ್ವಾತಂತ್ರ್ಯ ಹೋರಾಟಗಾರರೂ, ಹಿರಿಯ ಸಮಾಜವಾದಿಯೂ ಆಗಿದ್ದ ಮಧು ಲಿಮಯೆ ಅವರು, ಸ್ವಾತಂತ್ರ್ಯ ಸಾಧನೆಗೆ ಮುಖ್ಯ ಬಾಗಿಲು ತೆರೆದ 'ಭಾರತ ಬಿಟ್ಟು ತೊಲಗಿ' ಚಳುವಳಿಯತ್ತ ಸಾಗಿದ ಕಾಂಗ್ರೆಸ್ ಆಂದೋಲನದ ಒಳಸುಳಿಗಳನ್ನು ಇಲ್ಲಿ ದಾಖಲಿಸಿದ್ದಾರೆ. ಬಾಲಗಂಗಾಧರ ತಿಲಕರಿಂದ ಆರಂಭವಾದಂತೆ ಕಾಂಗ್ರೆಸ್ ಆಂದೋಲನದ ಎಲ್ಲ ಮುಖ್ಯ ನಾಯಕರ ಚಾಲೂ ಚಹರೆಗಳ ಸೂಕ್ಷ್ಮ ಪರಿಚಯ ಮಾಡಿಕೊಡುವ ಈ ಲೇಖನ ಗಾಂಧಿಯವರ ಮುತ್ಸದ್ದಿತನದ ಬಗ್ಗೆ ಹೊಸ ಬೆಳಕು ಚೆಲ್ಲುತ್ತದೆ-ಸಂ.



ಎರಡನೇಯ ಮಹಾಯುದ್ಧದ ಪ್ರಾರಂಭದ ಹೊತ್ತಿಗೆ ಹದಿವಯಸ್ಸು ಅಥವಾ ಅದಕ್ಕಿಂತ ಒಂದೆರಡು ವರ್ಷ ಹೆಚ್ಚಿನ ಪ್ರಾಯದವರಾಗಿದ್ದ ನಾವು ಸ್ವಾತಂತ್ರ್ಯ ಹೋರಾಟಗಾರರ ಕೊನೆಯ ತಲೆಮಾರಿನವರು. ಈಗ ಒಮ್ಮೆ ಹಿಂದಕ್ಕೆ ತಿರುಗಿ ನೋಡಿದರೆ ಆಗಸ್ಟ್ ಒಂಬತ್ತರ ಹೋರಾಟವು ಸ್ವಾತಂತ್ರ್ಯ ಹೋರಾಟದ ನಾಲ್ಕನೆಯ ಮತ್ತು ನಿರ್ಣಾಯಕ ಹಂತದ ಹೋರಾಟವಾಗಿತ್ತು ಎಂಬಂತೆ ಕಾಣುತ್ತದೆ.

ನಮ್ಮ ಸ್ವಾತಂತ್ರ್ಯ ಹೋರಾಟದ ಹುಟ್ಟನ್ನು 1885ರಲ್ಲಿಯ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಯ ಜೊತೆ ಗುರುತಿಸುವುದು ಸೂಕ್ತವಾಗೇ ಇದೆ. ಹಲವು ವರ್ಷಗಳ ಕಾಲ ಕಾಂಗ್ರೆಸ್ ಎಂಬುದು, ಯಾವ ಪರಿಣಾಮವನ್ನೂ ಉಂಟು ಮಾಡದೆ ನಿರ್ಣಯಗಳನ್ನು ಕೈಗೊಳ್ಳುವ ಭಾರತೀಯ ವಿದ್ಯಾವಂತ ಮೇಲ್ವರ್ಗದ ಕ್ರಿಸ್‌ಮಸ್‌ಕೂಟ ಮಾತ್ರವಾಗಿತ್ತು. ನಮ್ಮ ಚಳುವಳಿಗೆ ಮೊದಲ ಬಾರಿಗೆ ಒಂದು ಜನಪ್ರಿಯ ಅಂಶವನ್ನು ಪರಿಚಯಿಸಿದವರು ತಿಲಕರು. ವ್ಯಾಲಂಟೈನ್ ಚಿರೋಲ್ ಎಂಬ ಖ್ಯಾತ ಬ್ರಿಟಿಷ್ ಪತ್ರಕರ್ತ ತಿಲಕರನ್ನು ಕುರಿತು "ತೀವ್ರವಾದಿ ಬಣದಲ್ಲಿರುವ ಎದ್ದು ಕಾಣುವ ನಾಯಕರು, ಅತೃಪ್ತರ ಗುಂಪಿನಲ್ಲಿ ಅತ್ಯಂತ ಅಪಾಯಕಾರಿಯಾದ ಮೊದಲಿಗರಾಗುವ ಸಾಧ್ಯತೆಯುಳ್ಳವರು" ಎಂದು ವರ್ಣಿಸುತ್ತಾನೆ. ಭಾರತದೊಳಗಿನ ಸ್ವಾತಂತ್ರ್ಯ ಹೋರಾಟದ ಆದ್ಯ ಪ್ರವರ್ತಕರು ಎಂದು ಯಾರನ್ನಾದರೂ ಕರೆಯಬಹುದಾದರೆ ಅದು ತಿಲಕರನ್ನು ಮಾತ್ರ ದಕ್ಷಿಣ ಪ್ರಷ್ಠಭೂಮಿಯಿಂದ ಪ್ರಾರಂಭಿಸಿ ಅವರ ಪ್ರಭಾವ ವ್ಯಾಪಕವಾಗಿ ಹೆಚ್ಚಿದೆ ಎಂದೂ ಆತ ಬರೆಯುತ್ತಾನೆ.

ಬ್ರಿಟಿಷರ ನಡುವಿನ ತಿಲಕ್‌ರ ವಿರೋಧಿಗಳೂ ಸಹ ಅವರ ವೃದ್ಧಿಸುತ್ತಿದ್ದ ಜನಪ್ರಿಯತೆಯನ್ನು ಒಪ್ಪಿದ್ದರು. ಕಾರ್ಮಿಕರ ವ್ಯಾಪಕವಾದ ಒಗ್ಗೂಡುವಿಕೆಗೆ ಕಾರಣವಾದ ಹತ್ತಿ ಕೈಗಾರಿಕೆಯ ಭಾರಿ ಬೆಳವಣಿಗೆಯೂ ಸಹ, ಅಲ್ಲಿಯವರೆಗೆ ಭಾರತೀಯ ರಾಜಕಾರಣದ ವ್ಯಾಪ್ತಿಯ ಆಚೆಯ ಉಳಿದಿದ್ದ ವರ್ಗದೊಡನೆ ಸಂಪರ್ಕ ಸಾಧಿಸಲು ತಿಲಕರಿಗೆ ಅವಕಾಶವನ್ನುಂಟುಮಾಡಿತು. ರಾಷ್ಟ್ರದ್ರೋಹದ ಆಪಾದನೆಯ ಮೇಲೆ ತಿಲಕ್‌ರನ್ನು ಎರಡು ಬಾರಿ ವಿಚಾರಣೆಗೆ ಒಳಪಡಿಸಿ ಶಿಕ್ಷೆ ನೀಡಲಾಗಿತ್ತು. ಎರಡನೆಯ ಬಾರಿಯಂತೂ ಅವರಿಗೆ ಆರು ವರ್ಷಗಳ ಜೈಲುವಾಸವನ್ನೇ ವಿಧಿಸಲಾಗಿತ್ತು. ಆಗ ಜನರ ನಡುವೆ ಸಾಕಷ್ಟು ಹಿಂಸಾತ್ಮಕವಾದ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ತಿಲಕರ ಕೆಲವು ಅನುಯಾಯಿಗಳಂತೂ ಅವರ ಒಂದೊಂದು ವರ್ಷದ ಜೈಲುವಾಸದ ಅವಧಿಗೆ ಪ್ರತಿಯಾಗಿ ಒಂದೊಂದು ದಿನದ ರಕ್ತಪಾತ ಉಂಟಾಗಲಿದೆ ಎಂದು ಘೋಷಿಸಿದರು. ವಾಸ್ತವದಲ್ಲಿ ತಿಲಕರಿಗೆ ಆರು ವರ್ಷಗಳ ಸಜೆ ವಿಧಿಸಲಾಯಿತು. ಅದರ ಪ್ರತಿಭಟನಾರ್ಥ ನಡೆದ ದೊಂಬಿಗಳು ಆರು ದಿನಗಳ ಕಾಲ ಮುಂದುವರಿದವು. ಕೆಲವು ಸಂದರ್ಭಗಳಲ್ಲಂತೂ ಈ ದೊಂಬಿಗಳು ಭಾರೀ ಭಯ ಹುಟ್ಟಿಸುವ ಲಕ್ಷಣಗಳನ್ನು ಪಡೆದುಕೊಂಡವು. ಕೇವಲ ಪ್ರಕ್ಷುಬ್ಧ ಮಿಲ್ ಕಾರ್ಮಿಕರ ನಡುವೆ ಮಾತ್ರವಲ್ಲದೆ ಬೊಂಬಾಯಿಯ ಕೆಳವರ್ಗದ ಜನರ ನಡುವೆ ಕೂಡ ತಿಲಕರು ಗಳಿಸಿಕೊಂಡಿರುವ ಪ್ರಭಾವವನ್ನು ಈ ದೊಂಬಿಗಳ ಗಹನತೆಯು ಸೂಚಿಸುತ್ತದೆ ಎಂದು ಚಿರೋಲ್ ಬರೆಯುತ್ತಾರೆ. ಇದು ಕೈಗಾರಿಕಾ ಕಾರ್ಮಿಕ ವರ್ಗದ ಪ್ರಥಮ ರಾಜಕೀಯ ಕಾರ್ಯಾಚರಣೆಯಾಗಿದ್ದು ಲೆನಿನ್ ಸಹ ಇದನ್ನು ಅಂಗೀಕರಿಸಿದ್ದಾರೆ.

೧೯೧೭-೧೮ ರಲ್ಲಿ ಭಾರತಕ್ಕೆ ಭೇಟಿ ನೀಡಿದ ಮಾಂಟೆಗೋ ತಿಲಕರನ್ನು ಆ ಕಾಲಕ್ಕೆ ಭಾರತದಲ್ಲಿನ ಬಹುದೊಡ್ಡ ನಾಯಕರು ಎಂದು ಕರೆದಿದ್ದಾನೆ. ಜವಾಬ್ದಾರಿ ಸರ್ಕಾರ ಮತ್ತು ಹೊಸ ಸುಧಾರಣೆಗಳ ಬಗೆಗಿನ ಮಾಂಟೆಗೋ ಘೋಷಣೆ ತಿಲಕರ ಮೇಲೆ ಪ್ರಭಾವವನ್ನುಂಟು ಮಾಡಿತ್ತು. ಅವರು ಬ್ರಿಟಿಷ್ ಚಕ್ರವರ್ತಿಗೆ ಧನ್ಯವಾದ ತಿಳಿಸಿ ಸಹಾನುಭೂತಿಯುಳ್ಳ ಸಹಕಾರವನ್ನು ನೀಡಲು ಮುಂದೆ ಬಂದರು. ರಾಷ್ಟ್ರಗಳ ಒಕ್ಕೂಟ (League of Nations) ಬಗ್ಗೆ ತಿಲಕರು ಉತ್ಸಾಹಿಗಳಾಗಿದ್ದರು. ಸದಸ್ಯ ರಾಷ್ಟ್ರಗಳು ತಮ್ಮ ಸಮಸ್ಯೆಗಳನ್ನು ಈ ಅಂತರಾಷ್ಟ್ರೀಯ ಸಂಸ್ಥೆಯ ಬಳಿಗೆ ಕೊಂಡೊಯ್ದು ನ್ಯಾಯ ದೊರಕಿಸಿಕೊಳ್ಳಬಹುದು. ಎಂದು ಅವರು ನಂಬಿದ್ದರು. ೧೯೧೯ರಲ್ಲಿ ಇಂಗ್ಲೆಂಡ್‌ನಲ್ಲಿ ತಂಗಿದ್ದ ಸಂದರ್ಭದಲ್ಲಿ ಅವರು ಅಲ್ಲಿನ ಕಾರ್ಮಿಕ ಚಳುವಳಿಯ ಜೊತೆಗೆ ಉತ್ತಮವಾದ ಸಂಬಂಧವನ್ನು ಸ್ಥಾಪಿಸಿಕೊಂಡರು. ಲೇಬರ್ ಪಕ್ಷಕ್ಕೆ ಅವರು ದೇಣಿಗೆಯನ್ನು ಸಹಾ ನೀಡಿದರು. ಗೋಖಲೆ ಮತ್ತು ಇತರ ಉದಾರವಾದಿಗಳು ಲಿಬರಲ್ ಪಕ್ಷದ ಮೇಲೆ ನಂಬಿಕೆಯಿರಿಸಿದ್ದರೆ ತಿಲಕರು ಮಾತ್ರ ವೃದ್ಧಿಸುತ್ತಿದ್ದ ಲೇಬರ್ ಪಕ್ಷದೊಡನೆ ಸಹಕಾರ ಸಾಧಿಸುವ ಸಾಧ್ಯತೆಯ ಬಗ್ಗೆ ಚಿಂತಿಸುತ್ತಿದ್ದರು. ಬ್ರಿಟಿಷ್ ಸಾಮ್ರಾಜ್ಯದ ಒಳಗೆ ೧೦-೧೫ ವರ್ಷಗಳ ಕಾಲಾವಧಿಯಲ್ಲಿ ಸ್ವಯಂ ಆಡಳಿತವನ್ನು ಸಾಧಿಸುವ ಸಾಧ್ಯತೆಯ ಬಗ್ಗೆ ತಿಲಕರು ಆಶಾವಾದಿಗಳಾಗಿದ್ದರು. ೧೯೧೯-೨೦ರ ಹೊತ್ತಿಗೆ ಬ್ರಿಟಿಷರ ವಿರುದ್ಧದ ಹೋರಾಟದ ಯಾವ ಕಾರ್ಯಕ್ರಮಗಳೂ ತಿಲಕರ ಬಳಿ ಇರಲಿಲ್ಲ. ಅವರ ಇಳಿವಯಸ್ಸು ಮತ್ತು ಅನುಭವಗಳು ಅವರನ್ನು ಸಾಕಷ್ಟು ಹಣ್ಣಾಗಿಸಿದ್ದವು ಎಂದು ಹೇಳಲಾಗುತ್ತದೆ.

೧೯೧೯ರ ಹೊತ್ತಿಗೆ ಗಾಂಧೀಜಿ ಹೊಸ ನಾಯಕರಾಗಿ ಹೊರಹೊಮ್ಮಿದ್ದರು. ಅವರ ಅಸಹಕಾರ ಮತ್ತು ಕಾಯ್ದೆ ಭಂಗ ಕಾರ್ಯಕ್ರಮಗಳು ಕೋಟ್ಯಾಂತರ ಜನರನ್ನು ಚಳುವಳಿಯ ಕಡೆಗೆ ಸೆಳೆದಿದ್ದವು. ತಮ್ಮ ರಚನಾತ್ಮಕ ಕಾರ್ಯಗಳ ಮೂಲಕ ಅವರು ಗ್ರಾಮೀಣ ಭಾರತವನ್ನು ಪ್ರವೇಶಿಸಿದ್ದರು. ರಾಜಾಜಿ, ವಲ್ಲಭಬಾಯಿ ಪಟೇಲ್, ಡಾ॥ ರಾಜೇಂದ್ರಪ್ರಸಾದ್ ಮತ್ತು ಆಚಾರ್ಯ ಕೃಪಲಾನಿಯವರಂತಹ ನಾಯಕರನ್ನೊಳಗೊಂಡ ಒಂದು ದುರ್ದಮ್ಯ ತಂಡವನ್ನು ಗಾಂಧೀಜಿ ಸೃಷ್ಟಿಸಿದ್ದರು. ಜವಾಹರ್‌ಲಾಲ್ ನೆಹರೂ ಅವರ ಹೃದಯವನ್ನು ಗಾಂಧೀಜಿ ಗೆದ್ದಿದ್ದರು. ಜವಾಹರಲಾಲ್‌ರ ಇಡೀ ಕುಟುಂಬವೇ ಗಾಂಧೀಜಿಯವರ ವ್ಯಕ್ತಿತ್ವಕ್ಕೆ ಮಾರು ಹೋಗಿತ್ತು. ಜವಾಹರಲಾಲರು ಗಾಂಧೀಜಿಯವರ ಆಕ್ರಮಣಕಾರಿ ಕಾರ್ಯಕ್ರಮಗಳ ಕಟ್ಟಾ ಅನುಯಾಯಿಯಾಗಿದ್ದರು. ಚೌರಿಚೌರಾ ಘಟನೆಯ ನಂತರ ಕಾಯ್ದೆ ಭಂಗ ಚಳುವಳಿಯನ್ನು ಸ್ಥಗಿತಗೊಳಿಸಿದ್ದು ಅವರಿಗೆ ವ್ಯಥೆಯನ್ನುಂಟು ಮಾಡಿತ್ತು. ಗಾಂಧೀಜಿಯವರ ಕೌನ್ಸಿಲ್ ಬಹಿಷ್ಕಾರ ಕಾರ್ಯಕ್ರಮಕ್ಕೆ ತಮ್ಮ ತಂದೆಯವರ ಸಮ್ಮತಿಯಿರದಿದ್ದರೂ ಜವಾಹರ್‌ಲಾಲರು ಒಬ್ಬ ಕಟ್ಟಾ ಯಥಾಸ್ಥಿತಿವಾದಿಯಾಗಿ ಉಳಿದಿದ್ದರು. ಆದರೆ ಅವರು ರಾಜಗೋಪಾಲಾಚಾರಿಯವರ ನಾಯಕತ್ವದ ಯಥಾಸ್ಥಿತಿವಾದಿ ಬಣದ ಭಾಗವಾಗಿರಲಿಲ್ಲ. ರಾಜಾಜಿಯವರ ದೃಷ್ಟಿಕೋನವು ಆಶ್ಚರ್ಯಕರ ರೀತಿಯಲ್ಲಿ ಬದಲಾವಣೆಯನ್ನು ಕಂಡಿತು. ಯಥಾಸ್ಥಿತಿವಾದಿ ಬಣದ ನಾಯಕತ್ವದಿಂದ (ಅವರನ್ನು ಡೆಪ್ಯೂಟಿ ಗಾಂಧಿ ಎಂದು ಕರೆಯಲಾಗುತ್ತಿತ್ತು) ಅವರು ಮೂವತ್ತರ ದಶಕದ ಹೊತ್ತಿಗೆ ಪ್ರಾಂತೀಯ ಸ್ವಾಯತ್ತತೆಯನ್ನು ಯೋಜಿಸುವ ವಿಚಾರದಲ್ಲಿ ಒಬ್ಬ ಪ್ರಕಟ ಮಾತಿನ ಬೆಂಬಲಿಗರಾಗಿ ಬದಲಾಗಿದ್ದರು. ಮತ್ತು ನಲವತ್ತರ ದಶಕದ ಹೊತ್ತಿಗೆ ಅವರು ಬ್ರಿಟಿಷ್ ಸರ್ಕಾರದ ಪಾಲುದಾರನಾಗುವುದಕ್ಕೆ ಬಯಸಿದ್ದರು.

ಇಪ್ಪತ್ತನೆಯ ದಶಕದ ಉತ್ತರಾರ್ಧ ಮತ್ತು ಮುವತ್ತರ ದಶಕದಲ್ಲಿ ಜವಾಹರ್‌ಲಾಲರ ತೀವ್ರವಾದ ಮತ್ತು ಆಕ್ರಮಣಶೀಲತೆಗಳು ಹೆಚ್ಚಿದವು. ಬಹುತೇಕ ನೆಹರೂ ಮತ್ತು ಸುಭಾಷ್ ಬಾಬು ಅವರುಗಳಿಂದ ದೊರೆತ ಪ್ರಚೋದನೆಯಿಂದಾಗಿ, ಯುವಕ ನೆಹರೂ ಅವರ ನಾಯಕತ್ವದಲ್ಲಿ ಲಾಹೋರ್ ಸಮ್ಮೇಳನದಲ್ಲಿ ಕಾಂಗ್ರೆಸ್ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯವನ್ನು ಸ್ವೀಕರಿಸಿತು. ಗಾಂಧೀಜಿಯಾದರೂ ಈ ಯುವ ಮಿತ್ರನ ಕಾಂಗ್ರೆಸ್ ಅಧ್ಯಕ್ಷತೆಯ ಅಧಿಕಾರಾವಧಿಯಲ್ಲಿ ಒಂದು ನಿರ್ಣಾಯಕ ಹೋರಾಟವನ್ನು ನಡೆಸುವುದಾಗಿ ಆಶ್ವಾಸನೆಯನ್ನಿತ್ತರು. ಅವರು ತಮ್ಮ ಮಾತಿಗೆ ಬದ್ದರೂ ಆಗಿದ್ದರು. ನಂತರ ಬಂದ ದಂಡಿ ಯಾತ್ರೆಯ ಸಂದರ್ಭದಲ್ಲಿ ಗಾಂಧೀಯವರಿಂದ ಸ್ಫೂರ್ತಿ ಪಡೆದ ಸಾಮಾನ್ಯ ಜನ ಸ್ವಯಂಪ್ರೇರಿತರಾಗಿ ಒಳಗಾದ ಕಷ್ಟ–ನಷ್ಟಗಳಿಂದ ಇಡೀ ದೇಶವೇ ನಡುಗಿತು. ಕಾಯ್ದೆ ಭಂಗ ಚಳುವಳಿಯ ಸ್ಥಗಿತಕ್ಕೆ ಮತ್ತು ಗಾಂಧಿ ಇರ್ವಿನ್ ಒಪ್ಪಂದಕ್ಕೆ ನೆಹರೂ ಅವರ ವಿರೋಧವಿತ್ತು. ಆದರೆ ಅಂತಿಮವಾಗಿ ಮನಸ್ಸಿಲ್ಲದ ಮನಸ್ಸಿಂದಲೇ ಅವರು ಸಮ್ಮತಿಸಿದರು.

ಸ್ವಾತಂತ್ರ್ಯದ ಬಯಕೆಯು ಆ ವರ್ಷಗಳಲ್ಲಿ ನೆಹರೂ ಅವರನ್ನು ಯಾವ ಪ್ರಮಾಣದಲ್ಲಿ ಆವರಿಸಿಕೊಂಡಿತ್ತೆಂದರೆ ಅವರ ಪಾಲಿಗೆ ಆಗ ಹಿಂದೂ ಮುಸ್ಲಿಂ ಸಮಸ್ಯೆಯಂಬುದು ತೀರಾ ಗೌಣವಾಗಿತ್ತು. ದಮನಿತ ವರ್ಗಗಳ ಉದ್ಧಾರವನ್ನು ಅವರು ಒಪ್ಪಿದ್ದರೂ ಗಾಂಧೀಜಿಯವರ ಉಪವಾಸಗಳು ಪ್ರಧಾನ ಸಮಸ್ಯೆಯನ್ನು ಮಸುಕುಗೊಳಿಸಿ ಬಿಡುತ್ತವೆ ಎಂಬುದೇ ಅವರ ಭಾವನೆಯಾಗಿತ್ತು. ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣೆ ಮತ್ತು ಉಪವಾಸಗಳಿಂದ ಅವರು ಗೊಂದಲಗೊಂಡಿದ್ದರು. ಆ ಕಾಲಕ್ಕೆ ಗಾಂಧೀಜಿಯವರು ಸಂಪೂರ್ಣವಾಗಿ ಮುಳುಗಿಹೋಗಿದ್ದ ಹರಿಜನ ಚಳುವಳಿಯು ತಮ್ಮ ಮನಸ್ಸನ್ನು ಆಕ್ರಮಿಸಿಕೊಂಡಿರಲಿಲ್ಲ ಎಂದು ನೆಹರೂ ತಮ್ಮ ಆತ್ಮ ಚರಿತ್ರೆಯಲ್ಲಿ ಬರೆದುಕೊಂಡಿದ್ದಾರೆ.

ಜವಾಹರ್‌ಲಾಲರು ೧೯೩೫ರ ಭಾರತ ಸರ್ಕಾರ ಕಾಯ್ದೆಗೆ ವಿರೋಧ ಹೊಂದಿದ್ದರು ಮತ್ತು ೧೯೩೬–೩೭ರ ಚುನಾವಣಾ ಪ್ರಚಾರವನ್ನು ಸಾಮೂಹಿಕ ಜನಜಾಗೃತಿಯ ಅಸ್ತ್ರವನ್ನಾಗಿ ಬಳಸಲು ಭಾರೀ ಪ್ರಯತ್ನವನ್ನೂ ನಡೆಸಿದರು. ಪ್ರಾಂತ್ಯಗಳಲ್ಲಿ ಅಧಿಕಾರ ವಹಿಸಿಕೊಳ್ಳುವ ವಿಚಾರದಲ್ಲಿ ಅವರು ಕಡು ವಿರೋಧಿಯಾಗಿದ್ದರು. ಆದರೆ ಪುನಃ ಅವರು ಕಾಂಗ್ರೆಸ್ ಪಕ್ಷದೊಳಗಿನ ಪ್ರಬಲ ಅಭಿಪ್ರಾಯಕ್ಕೆ ಮತ್ತು ಗಾಂಧೀಜಿಯವರ ಸಲಹೆಗೆ ಮಣೆಯಬೇಕಾಯಿತು. ಬಹುಶಃ ೧೯೩೭–೪೧ರ ಕಾಲಘಟ್ಟದಲ್ಲಿ ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಉಂಟಾದ ಬದಲಾವಣೆಗಳು ಮತ್ತು ಕಾಂಗ್ರೆಸ್‌ನ ಆಡಳಿತ ನೀತಿಯನ್ನು ಹೊರಗಿನಿಂದ ಪ್ರಭಾವಿಸುವ ಅವರ ಪ್ರಯತ್ನಗಳ ಸೋಲು ಅವರನ್ನು ಬಲವಾಗಿ ಅಲುಗಾಡಿಸಿತು. ನಾಜಿಗಳ ಕ್ರೌರ್ಯದ ಬಗೆಗೆ, ಫ್ಯಾಸಿಸಂನ ಬಗೆಗೆ ಮತ್ತು ಜಪಾನೀಯರ ಯುದ್ಧಕೋರತನದ ಬಗೆಗೆ ಅವರಿಗಿದ್ದ ಅಸಹನೆ ಮುಂತಾದವುಗಳು ಬ್ರಿಟೀಷರ ವಿರುದ್ಧದ ಅವರ ಆಕ್ರಮಣಶೀಲತೆಯನ್ನು ದುರ್ಬಲಗೊಳಿಸಿದವು. ನಿಧಾನವಾಗಿ ಅವರು ರಾಜಾಜಿಯವರ ನಿಲುವಿಗೆ ಹೆಚ್ಚೇನೂ ದೂರವಿರದ ಒಂದು ನಿಲುವಿಗೆ ಬರಬೇಕಾಯಿತು. ೧೯೪೨ರ ಹೊತ್ತಿಗೆ ಸ್ವಾತಂತ್ರ್ಯ ಸಂಗ್ರಾಮವನ್ನು ಮುಳುಗಿಸಿಬಿಡಬಹುದಾಗಿದ್ದ ದುರಂತವೊಂದನ್ನು ಇದು ಸೃಷ್ಟಿಸಿತು.

೧೯೪೨ರ ಆರಂಭದ ಕಾಲಕ್ಕೆ ಯಾವ ಪರಿಸ್ಥಿತಿಯಿತ್ತು? ಆಗ್ನೇಯ ಏಷ್ಯಾದ ಫ್ರೆಂಚ್ ಮತ್ತು ಡಚ್ ವಸಾಹತುಗಳನ್ನು ಜಪಾನೀಯರು ನಾಶಪಡಿಸಿದ್ದರು. ಹಿಂದೂ ಮಹಾಸಾಗರದಲ್ಲಿ ಬ್ರಿಟಿಷ್ ನೌಕಾದಳವನ್ನು ದುರ್ಬಲಗೊಳಿಸುವಂತಹ ಏಟನ್ನು ಜಪಾನೀಯರು ನೀಡಿದ್ದರು. ಸಿಂಗಪುರದಲಿ ಬ್ರಿಟಿಷ್ ಸೈನ್ಯ ಮತ್ತು ಭಾರತದ ತುಕಡಿಗಳು ಶರಣಾಗತಿ ಹೊಂದಿದ್ದವು. ಬರ್ಮಾವನ್ನು ಸಹ ವಶಪಡಿಸಿಕೊಂಡ ಜಪಾನೀಯರು ಈಶಾನ್ಯ ಗಡಿಯಲ್ಲಿ ಭಾರತದ ಬಾಗಿಲು ಬಡಿಯತೊಡಗಿದ್ದರು. ದುರದೃಷ್ಟಕರ ಕ್ರಿಪ್ಸ್ ಪ್ರಸ್ತಾವನೆಯ ಮೂಲಕ ಭಾರತೀಯರ ಬೆಂಬಲ ಗಳಿಸುವ ಬ್ರಿಟಿಷರ ಅರಮನಸ್ಸಿನ ಪ್ರಯತ್ನಗಳು ಸೋಲು ಕಂಡಿದ್ದವು. ಭಾರತದ ರಾಜಕೀಯ ನಾಯಕತ್ವವು ಹತಾಶೆ ಮತ್ತು ನಿರುತ್ಸಾಹದಿಂದ ಕುಗ್ಗಿ ಹೋಗಿತ್ತು. ಸುಭಾಷ್ ಬಾಬು ಅವರು ಜರ್ಮನಿಗೆ ತೆರಳಿ, ಜಪಾನ್, ಜರ್ಮನಿಗಳ ಸಹಾಯದೊಂದಿಗೆ ಭಾರತವನ್ನು ಬಿಡುಗಡೆಗೊಳಿಸುವ ಪ್ರಯತ್ನದಲ್ಲಿರುವ ಸಂಗತಿ ತಿಳಿದುಬಂದಿತ್ತು. ಸುಭಾಷ್ ಬಾಬು ಅವರ ಅದಮ್ಯ ಧೈರ್ಯ ಮತ್ತು ಉಜ್ವಲ ದೇಶಪ್ರೇಮವನ್ನು ಗಾಂಧೀಜಿಯವರು ಸಂಶಯಿಸಲಿಲ್ಲ. ಆದರೆ ಜರ್ಮನಿ ಮತ್ತು ಜಪಾನ್‌ನ ಸಹಾಯದಿಂದ ಗಳಿಸಿದ ಸ್ವಾತಂತ್ರ್ಯವು ಒಂದು ರಾಷ್ಟ್ರಕ್ಕೆ ಪ್ರತಿಯಾಗಿ ಮತ್ತೊಂದು ರಾಷ್ಟ್ರಕ್ಕೆ ಗುಲಾಮರಾಗಿರುವುದು ಮಾತ್ರ ಎಂದು ಗಾಂಧೀಜಿ ಪ್ರಾಮಾಣಿಕವಾಗಿ ಭಾವಿಸಿದ್ದರು.

ನಿಜವಾದ ಅಧಿಕಾರವು ಭಾರತೀಯರ ಕೈಗೆ ಹಸ್ತಾಂತರವಾದರೆ ಬ್ರಿಟಿಷರ ಜೊತೆ ಒಂದು ಗೌರವಾನ್ವಿತ ಹೊಂದಾಣಿಕೆಗೆ ಬರಲು ಮೌಲಾನಾ ಆಜಾದ್, ರಾಜಾಜಿ ಮತ್ತು ಜವಹರಲಾಲ್ ನೆಹರೂ ಅವರುಗಳ ಕಾತುರರಾಗಿದ್ದರು. ಆದರೆ ಚರ್ಚಿಲ್ ನೇತೃತ್ವದ ಬ್ರಿಟಿಷ್ ಸರ್ಕಾರಕ್ಕೆ, ಭಾರತಕ್ಕೆ ನಿಜವಾದ ಅಧಿಕಾರವನ್ನು ನೀಡುವ ಅಥವಾ ಒಂದು ಮಂತ್ರಿಮಂಡಲವನ್ನು ಒದಗಿಸುವ ಯಾವ ನಿಜವಾದ ಉದ್ದೇಶವೂ ಇರಲಿಲ್ಲ. ದೇಶದ ನಿಜವಾದ ಆಡಳಿತಗಾರರಾಗಿ ಉಳಿದುಕೊಳ್ಳುವುದಕ್ಕಾಗಿ ಮುಸ್ಲಿಂ ಲೀಗನ್ನು, ಸ್ಥಳೀಯ ರಾಜರನ್ನು ಮತ್ತು ಇತರರನ್ನು ಬಳಸಿಕೊಳ್ಳುವ ಪ್ರಯತ್ನವನ್ನೇ ಮುಂದುವರಿಸಿದರು. ಜಪಾನ್‌ನ ಯುದ್ಧಕೋರ ನೀತಿಯ ವಿರುದ್ಧ ಹೋರಾಡಬೇಕೆಂಬ ತಮ್ಮ ಆಂತಕದಲ್ಲಿದ್ದ ನೆಹರೂ ಮತ್ತು ರಾಜಾಜಿಯವರು ರಾಷ್ಟ್ರೀಯ ಸರ್ಕಾರದ ಆಶ್ರಯದಲ್ಲಿ ಜನಸಾಮಾನ್ಯರ ಪ್ರತಿರೋಧವನ್ನು ಸಂಘಟಿಸಬಯಸಿದರು. ಆದರೆ ಈ ವಿಚಾರದಲ್ಲಿ ಅವರಿಗೆ ನಿರಾಶೆ ಕಾದಿತ್ತು. ಬ್ರಿಟಿಷ್ ಸರ್ಕಾರ ಮಣಿಯುವ ಲಕ್ಷಣಗಳು ಕಾಣಲಿಲ್ಲ. ಒಂದು ರಾಜಿಯನ್ನು ಸಾಧಿಸುವುದರ ದೃಷ್ಟಿಯಿಂದ ಮುಸ್ಲಿಂ ಲೀಗ್‌ನ ಬೆಂಬಲಗಳಿಸಿಕೊಳ್ಳುವುದಕ್ಕಾಗಿ ವಿಭಜನೆಯನ್ನು ಒಪ್ಪಿಕೊಳ್ಳಬೇಕಾಗುವುದು ಎಂದು ರಾಜಾಜಿಯವರು ವಾದಿಸಿದರು. ಮೌಲಾನಾ ಮತ್ತು ಜವಾಹರಲಾಲರು ಇದಕ್ಕೆ ಸಹಕರಿಸಲು ಮಾನಸಿಕವಾಗಿ ಕಾತುರರಾಗಿದ್ದರೂ ಕೂಡ ಅದಕ್ಕಾಗಿ ತಮ್ಮ ಆತ್ಮ ಗೌರವವನ್ನು ಬಲಿಕೊಡಲು ಸಿದ್ಧರಿರಲಿಲ್ಲ. ಇದೇ ವೇಳೆಗೆ ಅಮೆರಿಕ್‌ನ ಸೈನ್ಯವು ಭಾರತದೊಳಕ್ಕೆ ಬರುವ ವಿಚಾರದಲ್ಲಿ ಗಾಂಧೀಜಿ ಗಾಬರಿಯಾಗಿದ್ದರು. ಇದರ ವಿರುದ್ಧ ಅವರು ತೀಕ್ಷ್ಣವಾದ ಲೇಖನಗಳನ್ನು ಬರೆದರು. ಭಾರತದ ಕೋಟ್ಯಾಂತರ ಜನರನ್ನೇ ನೇಮಿಸಿಕೊಂಡು ಬೇಕಾದಷ್ಟು ಸೈನಿಕರನ್ನು ತರಬೇತುಗೊಳಿಸುವುದು ಸಾಧ್ಯವಿಲ್ಲವೆ? ಪ್ರಪಂಚದ ಯಾವ ಶ್ರೇಷ್ಠ ಸೈನಿಕರಿಗಿಂತಲೂ ಭಾರತೀಯರು ಕಡಿಮೆಯಲ್ಲ. ಅಮೆರಿಕದ ನೆರವು ಎನ್ನುವುದರ ಅರ್ಥ ನಮಗೆ ಗೊತ್ತು. ಬ್ರಿಟಿಷರ ಜೊತೆ ಅಮೆರಿಕದ ಆಡಳಿತವೂ ಎಂಬಷ್ಟರ ಮಟ್ಟಿಗಲ್ಲದಿದ್ದರೂ, ಅಮೆರಿಕದ ಪ್ರಭಾವ ನಮ್ಮ ಮೇಲೆ ಆಗುವುದಂತೂ ಖಚಿತ. ಮಿತ್ರ ರಾಷ್ಟ್ರಗಳ ಸೇನೆಯ ಸಂಭವನೀಯ ಗೆಲುವಿಗಾಗಿ ನಾವು ತೆರಬೇಕಾದ ಭಾರೀ ಬೆಲೆ ಇದು.

ಸೈನಿಕ ಸಂಘರ್ಷದ ರಣರಂಗ ಭಾರತದ ನೆಲವೇ ಆಗಬಹುದಾಗ ಸಾಧ್ಯತೆಗಳನ್ನು ಕಂಡು ಗಾಂಧೀಜಿ ನಡುಗಿ ಹೋದರು. ದೇಶವು ನಿರ್ನಾಮವಾಗಿ ಬಿಡಬಹುದು ಎಂಬ ಆತಂಕಕ್ಕಿಂತ ಭಾರತವು ಒಂದು ಅಂತರ್ಯುದ್ಧಕ್ಕೆ ತುತ್ತಾಗಿ ಬಿಡಬಹುದು ಎಂಬ ಆತಂಕವು ಅವರನ್ನು ಹೆಚ್ಚಾಗಿ ಕಾಡುತ್ತಿತ್ತು. ಆದರೆ ಅಮೆರಿಕದ ಸೈನ್ಯದ ಪ್ರವೇಶಕ್ಕೆ ನೆಹರೂ ಅವರ ವಿರೋಧವಿರಲಿಲ್ಲ. ಜಪಾನ್‌ನ ವಿರುದ್ಧ ಸಶಸ್ತ್ರ ಹೋರಾಟ ಮತ್ತು ಗೆರಿಲ್ಲಾ ಯುದ್ಧದ ಬಗ್ಗೆ ಅವರು ಮುಕ್ತವಾಗಿಯೇ ಮಾತನಾಡುತ್ತಿದ್ದರು. ಜಪಾನ್ ಸೈನ್ಯದ ಮುಂಚೂಣಿಯಲ್ಲಿ ಸುಭಾಷ್ ಬಾಬು ಇದ್ದರೆ ಕೈಯಲ್ಲೊಂದು ಕತ್ತಿ ಹಿಡಿದು ಅವರ ವಿರುದ್ಧ ಹೋರಾಡಲು ತಾವು



ನೆಹರೂ ಸುಭಾಷ್ ರಾಜಾಜಿ ಆಜಾದ್

ಸಿದ್ಧ ಎಂದು ಅವರು ಹೇಳುತ್ತಿದ್ದರು. ಭಾರತದ ಇಬ್ಬರು ಅತ್ಯಂತ ಜನಪ್ರಿಯ ನಾಯಕರ ನಡುವಿನ ಸಂಘರ್ಷವು (ಈ ಇಬ್ಬರೂ ಗಾಂಧೀಜಿಯ ನಂತರದ ಸ್ಥಾನದಲ್ಲಿದ್ದವರು) ಗಾಂಧೀಜಿಯವರ ನಿದ್ದೆಗೆಡಿಸಿತ್ತು. ಜವಹರಲಾಲ್ ಮತ್ತು ರಾಜಾಜಿಯವರ ಜೊತೆಗಿನ ಭಿನ್ನಾಭಿಪ್ರಾಯವನ್ನು ಕುರಿತು ಗಾಂಧೀಜಿಯವರನ್ನು ಪ್ರಶ್ನಿಸಿದಾಗ "ಕ್ಷಮಿಸಿ ಅವರು (ಜವಾಹರಲಾಲರು) ಗೆರಿಲ್ಲಾ ಯುದ್ಧದ ಬಗ್ಗೆ ಒಂದು ಮೋಹ ಬೆಳೆಸಿಕೊಂಡು ಬಿಟ್ಟಿದ್ದಾರೆ. ಆದರೆ ಅದೊಂದು ಕ್ಷಣಿಕ ಉದ್ವೇಗ ಅದು ಕಾರ್ಯರೂಪಕ್ಕೆ ಬರದು" ಎಂದು ಉತ್ತರಿಸಿದ್ದರು. ನೀವು ತಪ್ಪು ಮಾಡುತ್ತಿದ್ದೀರಿ ಎಂದು ತಿಳಿಸಿ ಗಾಂಧೀಜಿ ನೆಹರೂ ಅವರಿಗೆ ೧೯೪೨ರ ಏಪ್ರಿಲ್ ೧೫ರಂದು ಪತ್ರ ಬರೆದರು. ಅಮೆರಿಕದ ಸೈನ್ಯ ಭಾರತದೊಳಕ್ಕೆ ಬರುವುದರಿಂದ ಅಥವಾ ನಾವು ಗೆರಿಲ್ಲಾ ಯುದ್ಧ ತಂತ್ರವನ್ನು ಅನುಸರಿಸುವುದರಿಂದ ಯಾವ ರೀತಿಯಲ್ಲೂ ಒಳ್ಳೆಯದಾಗದು ಎಂದು ಗಾಂಧೀಜಿ ಸ್ಪಷ್ಟಪಡಿಸಿದರು. ಭಾರತದ ವಿಭಜನೆಯ ಆಧಾರದ ಮೇಲೆ ಮುಸ್ಲಿಂ ಲೀಗ್‌ನ ಜೊತೆಗೆ ಐಕ್ಯತೆಯನ್ನು ಸಾಧಿಸುವ ವಿಚಾರದ ಬಗ್ಗೆ ವಲ್ಲಭಭಾಯಿ ಪಟೇಲ್ ಮತ್ತು ಇತರ ಕಾರ್ಯಕಾರಿ ಸಮಿತಿಯ ಸದಸ್ಯರ ಒತ್ತಾಸೆಯ ಮೇರೆಗೆ ರಾಜಾಜಿಯವರು ತಮ್ಮ ಪ್ರಚಾರದಲ್ಲಿ ಮುಂದುವರಿದಿದ್ದರು. ಇದನ್ನು ಒಪ್ಪದ ಗಾಂಧೀಜಿ ರಾಜಾಜಿಯವರು ಶಾಸನಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಬೇಕೆಂದು ಬಯಸಿದರು. ವಾಸ್ತವದಲ್ಲಿ ನೀವು ಕಾಂಗ್ರೆಸ್ ಜೊತೆಗಿನ ನಿಮ್ಮ ಸಂಬಂಧವನ್ನು ಕಡಿದುಕೊಂಡು ನಂತರ ನಿಮ್ಮ ಎಲ್ಲಾ ಉತ್ಸಾಹ ಮತ್ತು ಶಕ್ತಿಯನ್ನು ಬಳಸಿ ಈ ಪ್ರಚಾರ ಕೈಗೊಳ್ಳಬಹುದು ಎಂದು ತಿಳಿಸಿದರು.

ಕಾರ್ಯಕಾರಿ ಸಮಿತಿಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಲು ನೆಹರೂ ಮುಂದಾದರು. ಆಗ ಗಾಂಧೀಜಿ "ಈ ವಿಚಾರದ ಬಗ್ಗೆ ನಾನು ಬಹಳವಾಗಿ ಚಿಂತಿಸಿದೆ. ಈಗಲೂ ನೀವು ರಾಜೀನಾಮೆಯನ್ನು ಹಿಂತೆಗೆದುಕೊಂಡಲ್ಲಿ ಸೇವೆ ಮಾಡುವ ನಿಮ್ಮ ಶಕ್ತಿಯು ವೃದ್ಧಿಸುತ್ತದೆ ಎಂಬುದು ನನ್ನ ಭಾವನೆ" ಎಂಬ ನೆಹರೂ ಅವರ ಮನವೊಲಿಸುವ ಪ್ರಯತ್ನ ನಡೆಸಿದರು. ೧೯೪೨ರ ಜುಲೈ ೧೫ರ ಅದೇ ಪತ್ರದಲ್ಲಿ ಮೌಲಾನಾ ಅವರು ಮತ್ತು ತಾವು ದೂರ ಸರಿಯುತ್ತಿದ್ದೇವೆ ಎಂದೂ ಗಾಂಧೀಜಿ ನೆಹರೂ ಅವರಿಗೆ ತಿಳಿಸುತ್ತಾರೆ. "ನನಗೆ ಅವರನ್ನು ಅರ್ಥಮಾಡಿಕೊಳ್ಳಲಾಗುತ್ತಿಲ್ಲ. ಅವರಿಗೂ ನಾನು ಅರ್ಥವಾಗುತ್ತಿಲ್ಲ. ಇಲ್ಲಿ ಯಾರದ್ದೂ ತಪ್ಪಿಲ್ಲ, ವಾಸ್ತವವನ್ನು ನಾವು ಎದುರಿಸಲೇಬೇಕು, ಆದ್ದರಿಂದ ಮೌಲಾನಾ ಅವರು ಅಧ್ಯಕ್ಷ ಸ್ಥಾನವನ್ನು ತ್ಯಜಿಸಬೇಕು ಆದರೆ ಸಮಿತಿಯಲ್ಲಿ ಮುಂದುವರಿಯಬೇಕು. ಸಮಿತಿಯ ಮಧ್ಯಂತರ ಅಧ್ಯಕ್ಷರ ಆಯ್ಕೆಯಾಗಬೇಕು ಮತ್ತು ಎಲ್ಲವೂ ಐಕಮತ್ಯದಿಂದ ಮುಂದುವರಿಯಬೇಕು" ಎಂದು ಗಾಂಧೀಜಿ ಬರೆಯುತ್ತಾರೆ. ಜನತಾ ಚಳುವಳಿಯನ್ನು ಪ್ರಾರಂಭಿಸಬೇಕೆಂಬ ವಿಚಾರವನ್ನು ಗಾಂಧೀಜಿಯವರು ಆಗಲೇ ನಿರ್ಧರಿಸಿಯಾಗಿತ್ತು. ಹರಿಜನ ಪತ್ರಿಕೆಯಲ್ಲಿನ ತಮ್ಮ ಲೇಖನಗಳ ಮೂಲಕ, ಸಂದರ್ಶನಗಳ ಮೂಲಕ ಮತ್ತು ಹೇಳಿಕೆಗಳ ಮೂಲಕ ಅವರು ಜನತೆಯ ಉತ್ಸಾಹವನ್ನು ವಿಶೇಷವಾಗಿ ಯುವ ಜನರ ಉತ್ಸಾಹವನ್ನು ಉದ್ದೀಪಿಸುತ್ತಿದ್ದರು. ಆಗ ಕಾಂಗ್ರೆಸ್‌ನಲ್ಲಿ ಮೂಡಿದ ಭಿನ್ನಾಭಿಪ್ರಾಯದ ಬಗೆಗೆ ಅವರಿಗೆ ಬೇಸರವಿತ್ತು. ಜವಹರಲಾಲರಿಗೆ ಇದ್ದಂತಹ ಉತ್ಸಾಹ ಬೇರೆ ಯಾರಲ್ಲೂ ಕಾಣುತ್ತಿಲ್ಲ ಎಂಬುದನ್ನು ಅವರು ಒಪ್ಪಿಕೊಂಡಿದ್ದರು. ತಾವು ವಿಭಿನ್ನ ಹಾದಿಗಳನ್ನು ತುಳಿಯುವ ಹಂತವನ್ನು ತಲುಪಿರುವ ವಿಚಾರದಲ್ಲಿ ಅವರಿಗೆ ಬೇಸರವಿತ್ತು.

೧೯೨೭ರಲ್ಲೂ ಸಹ ಒಮ್ಮೆ ಇಂತಹದೇ ಪರಿಸ್ಥಿತಿ ಉದ್ಭವಿಸಿತ್ತು. ೧೯೨೭ರ ಕೊನೆಯ ಭಾಗದಲ್ಲಿ ನಡೆದ ಮದ್ರಾಸ್ ಸಮ್ಮೇಳನದ ನಂತರ ಜವಾಹರಲಾಲರು ಬಹಳ ವೇಗವಾಗಿ ಮುಂದುವರಿಯುತ್ತಿದ್ದಾರೆ ಎಂದು ಗಾಂಧೀಜಿಗೆ ಅನ್ನಿಸಿತ್ತು. ಆಗ ತಮ್ಮ ಈ ಯುವ ಮಿತ್ರನಿಂದ ಅವರಿಗೆ ಒಂದು ತೀಕ್ಷ್ಣವಾದ ಉತ್ತರ ದೊರೆತಿತ್ತು. ತಮ್ಮದೇ ದಾರಿಯಲ್ಲಿ ಮುಂದುವರಿಯುವ ಇಚ್ಛೆ ನೆಹರೂ ಅವರಿಗಿದ್ದಲ್ಲಿ ಅದೂ ಆಗಬಹುದು. ಅವರು ತಮ್ಮ ಪ್ರತಿರೋಧದ ಬಾವುಟವನ್ನು ಹಾರಿಸಲಿ ಎಂದು ಗಾಂಧೀಜಿ ತಿಳಿಸಿದ್ದರು. ಇದರಿಂದ ಆತಂಕಗೊಂಡ ಜವಾಹರಲಾಲರು ತಮ್ಮ ಹೆಜ್ಜೆಯನ್ನು ಹಿಂದಿಕ್ಕಿದರು. ಇದರ ಪರಿಣಾಮವಾಗಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಲಾಭವೇ ಆಯಿತು. ೧೯೪೨ರಲ್ಲೂ ಸಹ ಈ ಇಬ್ಬರು ನಾಯಕರ ನಡುವೆ ಸತತವಾದ ಚರ್ಚೆಗಳು ನಡೆದವು. ಬ್ರಿಟಿಷರು ಭಾರತವನ್ನು ಬಿಟ್ಟು ಹೋಗಬೇಕೆಂಬ ನಿಲುವು ಗಾಂಧೀಜಿಯವರದ್ದಾಗಿತ್ತು. ಎರಡನೆಯದಾಗಿ ರಾಷ್ಟ್ರೀಯ ಸರ್ಕಾರಕ್ಕೆ ಅವರು ಅಧಿಕಾರವನ್ನು ಹಸ್ತಾಂತರಿಸಲಾಗದಿದ್ದರೆ ದೇಶವನ್ನು ಅರಾಜಕತೆಗೋ ದೇವರ ಸುಪರ್ದಿಗೋ ಒಪ್ಪಿಸಿಹೊರಡಬೇಕಷ್ಟೆ. ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯನ್ನು ಮುಂದುವರಿಸುವುದು ಮತ್ತು ಅಮೆರಿಕದ ಸೇನಾಬಲವನ್ನು ಹೆಚ್ಚಿಸುವುದು ಜಪಾನ್‌ನ ಆಕ್ರಮಣಕ್ಕೆ ಎಡೆಮಾಡಿಕೊಟ್ಟಂತೆ ಎಂಬುದು ಅವರ ಅಲೋಚನೆಯಾಗಿತ್ತು. ಜಪಾನಿಯರು ಚೀನಾದಲ್ಲಿ ಕಾಲೂರಿಕೊಡು ಆಗ್ನೇಯ ಏಷ್ಯಾವನ್ನು ಕಬಳಿಸಿದ್ದಾರೆ. ಅವರ ದೃಷ್ಟಿಯ ಕೇಂದ್ರ ಅಮೆರಿಕವೇ ಆಗಿದ್ದು ಪಶ್ಚಿಮದ ಶಕ್ತಿಗಳು (ಭಾರತದ ನೆಲದಿಂದ) ಪಾರ್ಶ್ವಚಲನೆಯ ಬೆದರಿಕೆ ಉಂಟಾಗದಿದ್ದಲ್ಲಿ ಜಪಾನೀಯರು ಹೊಸ ಸಾಹಸಕ್ಕೆ ಮುಂದಾಗಲಾರರು ಎಂಬುದು ಅವರ ಊಹೆಯಾಗಿತ್ತು. ಅಕಸ್ಮಾತ್ ಜಪಾನೀಯರು ಅಂತಹ ಸಾಹಸಕ್ಕೆ ಮುಂದಾದರೂ ಭಾರತದ ಜನರು ಸ್ವತಂತ್ರ ಭಾರತದ ಕಲ್ಪನೆಯಿಂದ ಪ್ರೇರಿತರಾಗಿ ಜಪಾನೀಯರ ಆಕ್ರಮಣವನ್ನು ವಿರೋಧಿಸುತಾರೆ ಎಂಬುದು ಅವರ ನಂಬಿಕೆಯಾಗಿತ್ತು. ಆಫ ಗಾಂಧಿ ಎಷ್ಟು ದೃಢಮನಸ್ಕರಾಗಿದ್ದರೆಂದರೆ, ಅವರು ಅಮರಣಾಂತ ಉಪವಾಸ ವ್ರತ ಕೈಗೊಂಡು ಆತ್ಮಾಹುತಿಯ ಪ್ರಸ್ತಾಪವನ್ನು ಮಾಡಿದರು ಮತ್ತು ನಂತರದಲ್ಲಿ ತಮ್ಮ ಅನುಯಾಯಿಗಳೂ ಇದನ್ನು ಅನುಸರಿಸುವರು ಎಂದು ನಂಬಿದ್ದರು.

ಜವಾಹರಲಾಲರ ಭಾವನೆಗಳು ಅವರನ್ನು ಮತ್ತೊಂದು ದಿಕ್ಕಿನಲ್ಲಿ ಜಗ್ಗಿದರೂ, ಗಾಂಧೀಜಿಯವರ ಕರಾರುವಕ್ಕಾದ ತರ್ಕ, ಅವರ ಅಂತರ್ಯದಲ್ಲಿದ್ದ ಸ್ವಾಭಿಮಾನ ಮತ್ತು ಶಿಸ್ತುಗಳು ನೆಹರೂ ಅವರ ಮನವೊಲಿಸಿದವು. ಇದಕ್ಕೆ ೧೯೪೨ರ ಜೂನ್ ೩೦ರ ನ್ಯಾಷನಲ್ ಹೆರಾಲ್ಡ್ ಪತ್ರಿಕೆಯಲ್ಲಿ ಅವರು ಬರೆದ ಲೇಖನಕ್ಕಿಂತ ಉತ್ತಮವಾದ ನಿದರ್ಶನ ಮತ್ತೊಂದಿಲ್ಲ. ಗಾಂಧೀಜಿಯವರಿಂದ ಬೇರೆಯಾಗುವ ಆಲೋಚನೆ ತಮಗಿಲ್ಲ, ತಾವು ರಾಜಾಜಿಯವರ ಪ್ರಚಾರಕಾರ್ಯದಲ್ಲಿ ಒಂದಾಗುವುದಿಲ್ಲ ಎಂಬುದನ್ನು ನೆಹರೂ ಈ ಲೇಖನದಲ್ಲಿ ಸ್ಪಷ್ಟಪಡಿಸಿದರು. ಬ್ರಿಟಿಷ್ ಸರ್ಕಾರವು ಒಂದು ದುಷ್ಟಶಕ್ತಿ ಎಂಬುದಕ್ಕಾಗಿ ಮಾತ್ರವಲ್ಲದೆ, ಪ್ರಪಂಚದಲ್ಲಿ ಅಭಿವೃದ್ಧಿಶೀಲ ಶಕ್ತಿಗಳು ಯಶಸ್ಸುಗಳಿಸುವ ಹಾದಿಯಲ್ಲಿ ಅದು ಒಂದು ದೊಡ್ಡ ತಡೆಯಾಗಿದೆ ಎಂಬ ಕಾರಣಕ್ಕಾಗಿಯೂ ಕೂಡ ಅದು ತೊಲಗಬೇಕು ಎಂದು ಅವರು ಘೋಷಿಸಿದರು. "ಆದ್ದರಿಂದಲೇ 'ಭಾರತ ಬಿಟ್ಟು ತೊಲಗಿ' ಎಂಬ ಕೂಗು ನಮ್ಮ ಜಯಕ್ಕೆ ಅತ್ಯಗತ್ಯವೂ, ತುರ್ತಾದುದೂ ಮತ್ತು ಅನಿವಾರ್ಯವೂ ಆದ ಕೂಗಾಗಿದೆ" ಎಂದವರು ಬರೆದರು.

ಗಾಂಧೀಜಿಯವರ ಆಲೋಚನೆಗಳಿಂದ ಇನ್ನೂ ಹೆಚ್ಚು ಚಿಂತೆಗೊಳಗಾಗಿದ್ದ ಹಿರಿಯ ಸಮಾಜವಾದಿ ಮುಖಂಡ ಸಂಪೂರ್ಣಾನಂದರಿಗೆ ನೆಹರೂ ಅವರು ಬರೆದ ಪತ್ರವು ಬಹಳ ಸ್ಪಷ್ಟವಾಗಿದೆ. ತಾವು ಬಹಳ ವ್ಯಾಕುಲಗೊಂಡಿದ್ದಾಗಿಯೂ ದಿಗ್ಭ್ರಮೆಗೆ ಒಳಗಾಗಿದ್ದಾಗಿಯೂ ಜವಾಹರಲಾಲರು ಒಪ್ಪಿಕೊಳ್ಳುತ್ತಾರೆ. "ಆದರೂ ಇದರಿಂದ ಹೊರಬರದೆ ಬೇರೆ ದಾರಿಯಿಲ್ಲ ಎಂಬ ನಿರ್ಧಾರಕ್ಕೆ ನಾನು ಬಂದೆ" ಎಂದೂ ಅವರು ಬರೆಯುತ್ತಾರೆ. ತಾಟಸ್ಥ್ಯವು ಬಹಳ ಅಪಾಯಕಾರಿ ಎಂಬುದು ಈಗ ನನಗೆ ಮನವರಿಕೆಯಾಗಿದೆ. ನಮ್ಮ ಸೈನಿಕರು ಬಹುಮಟ್ಟಿಗೆ ಜಪಾನೀಯರಿಗೆ ಶರಣಾಗುತ್ತಾರೆ. ನಮ್ಮ ಜನರು ಅವರ ವಶವಾಗುತ್ತಾರೆ. ಇದನ್ನು ಬದಲಾಯಿಸಲು ಒಂದೇ ಒಂದು ಅವಕಾಶವಿದೆ. ಅದೆಂದರೆ ಈ ಕೂಡಲೇ ಕಾರ್ಯಪ್ರವೃತ್ತರಾಗುವುದು. ಇದರಲ್ಲಿ ಅಪಾಯವಿದ್ದೇ ಇದೆ. ನಾನು ಅರಾಜಕತೆಯನ್ನು, ಗೊಂದಲವನ್ನು ದ್ವೇಷಿಸುತ್ತೇನೆ ಆದರೆ ಒಂದು ಬಲವಾದ ಎಚ್ಚರಿಕೆ ನಮ್ಮ ದೇಶಕ್ಕೆ ಬೇಕಾಗಿದೆ ಎಂದು ಒಳಗಿನಿಂದ ಅನಿಸುತ್ತಿದೆ. ಇಲ್ಲದಿದ್ದಲ್ಲಿ ನಾವು ಇನ್ನೂ ಹೆಚ್ಚು ಮತೀಯ ಮತ್ತು ಇತರ ಸಮಸ್ಯೆಗಳಲ್ಲಿ ಸಿಲುಕಿಕೊಳ್ಳುತ್ತೇವೆ. ಜನರಿಗೆ ಭ್ರಮನಿರಸನವುಂಟಾಗುತ್ತದೆ ಮತ್ತು ನಾವು ಸುಮ್ಮನೆ ಅನಾಹುತವೊಂದರ ಕಡೆಗೆ ಚಲಿಸುತ್ತೇವೆ" ಎಂದವರು ಬರೆದರು.

ಈ ಬಾರಿ ಜವಾಹರಲಾಲರು ತಮ್ಮ ಗುರು ಮತ್ತು ನಾಯಕರಾದವರೊಂದಿಗೆ ರಾಜಿಮಾಡಿಕೊಂಡರು. ಇದರಿಂದ ಮತ್ತೊಮ್ಮೆ ದೇಶಕ್ಕೆ ಲಾಭವಾಯಿತು. ವಾಸ್ತವ ಪರಿಸ್ಥಿತಿ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಹಠಮಾರಿತನಗಳು ಗಾಂಧೀಜಿಯವರ ಹೋರಾಟದ ಯೋಜನೆಗಳನ್ನು

ಒಪ್ಪಿಕೊಳ್ಳುವುದು ಜವಾಹರಲಾಲರಿಗೆ ಅನಿವಾರ್ಯವಾಗುವಂತಹ ಒತ್ತಡವನ್ನುಂಟು ಮಾಡಿದವು. ನಾಗರಿಕ ಪ್ರತಿಭಟನೆಗೆ ಬೇಕಾದ ಸೂಚನೆಗಳ ಕರಡನ್ನು ಗಾಂಧೀಜಿ ಸಿದ್ಧಪಡಿಸಿದರು. ಈ ದಾಖಲೆಯು ೧೯೪೨ರ ಆಗಸ್ಟ್ ೪ ಎಂಬ ದಿನಾಂಕವನ್ನು ಹೊಂದಿತ್ತು. ಹರತಾಳ, ಸರಕಾರಿ ಸೇವೆಯನ್ನು ತ್ಯಜಿಸುವುದು. ಸತ್ಯಾಗ್ರಹ ಮತ್ತು ಕರ ನಿರಾಕರಣೆಗಳಂತಹ ಕ್ರಮಗಳನ್ನು ಇದು ಒಳಗೊಂಡಿತ್ತು. ರಾಷ್ಟ್ರೀಯ ನಾಯಕರು ಬಂಧನಕ್ಕೊಳಗಾದ ಸಂದರ್ಭಗಳಲ್ಲಿ ಪ್ರತಿಯೊಬ್ಬ ಭಾರತೀಯನೂ ಕೂಡ ತನ್ನ ಅಂತರಾತ್ಮನ ಸೂಚನೆಯನ್ನು ಪಾಲಿಸಬೇಕು ಮತ್ತು ಆತ ಅಥವಾ ಆಕೆಗೆ ಸಾಧ್ಯವಿರುವ ಪ್ರತಿರೋಧವನ್ನು ಒಡ್ಡಬೇಕು. ಗಾಂಧೀಜಿ ಒಂದೇ ಒಂದು ಷರತ್ತನ್ನು ಮಾತ್ರ ವಿಧಿಸಿದ್ದರು. ಯಾರೂ ಹಿಂಸೆಗೆ ಇಳಿಯಬಾರದು ಎಂಬುದೇ ಆ ಷರತ್ತು. ಈ ಪ್ರವಾಣದ ಬೆಳವಣಿಗೆಯೊಂದು ಸಂಪೂರ್ಣವಾಗಿ ಶಾಂತಿಯುತವಾಗಿರಲಾರದೆಂಬುದು ಗಾಂಧೀಜಿಯವರಿಗೆ ತಿಳಿದಿತ್ತು. ಆದ್ದರಿಂದ ಗಲಭೆಗಳೇನಾದರೂ ಉಂಟಾದಲ್ಲಿ ಅದು ತಮ್ಮ ಕಾರ್ಯಕ್ರಮವನ್ನು ಮುಂದುವರಿಸಲು ಅಡ್ಡಿಯಾಗದು ಎಂಬುದನ್ನು ಗಾಂಧೀಜಿ ಸ್ಪಷ್ಟಪಡಿಸಿದರು.


ಈ ರೀತಿಯಲ್ಲಿ ಆಗಸ್ಟ್ ಎರಡನೆಯ ವಾರದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಬೊಂಬಾಯಿಯ ಗೌಲಿಯಾ ಕೆರೆಯಂಗಳದಲ್ಲಿ ಸಭೆ ಸೇರಿತು. ನಾನೂ ಸಹ ಆ ಸಭೆಯಲ್ಲಿ ಪಾಲ್ಗೊಂಡೆ. ಆಗ ನನ್ನ ವಯಸ್ಸು ಕೇವಲ ಇಪ್ಪತ್ತು. ೧೯೩೯ರ ಕೊನೆಯಲ್ಲಿ ಖಾಂದೇಶ್‌ನಲ್ಲಿ ನನ್ನ ರಾಜಕೀಯ ಮತ್ತು ಸಮೂಹ ಕಾರ್ಯಗಳನ್ನು ಪ್ರಾರಂಭಿಸಿದ್ದೆ. ೧೯೪೦ರಲ್ಲಿ ನನ್ನ ಯುದ್ಧ ವಿರೋಧಿ ಭಾಷಣದ ಕಾರಣಕ್ಕಾಗಿ ನನಗೆ ಒಂದು ವರ್ಷದ ಕಠಿಣ ಸಜೆಯನ್ನು ವಿಧಿಸಲಾಗಿತ್ತು. ಬಿಡುಗಡೆಯ ನಂತರ ನಾನು ಖಾಂದೇಶ್‌ನ ಎರಡು ಜಿಲ್ಲೆಗಳಲ್ಲಿ ನನ್ನ ಚಟುವಟಿಕೆಯನ್ನು ಪ್ರಾರಂಭಿಸಿದೆ. ಜಪಾನ್ ಎರಡನೆ ಮಹಾಯುದ್ಧಕ್ಕೆ ಪ್ರವೇಶಿಸಿದ ನಂತರ ಅದರಲ್ಲೂ ಸಿಂಗಪುರದ ಪತನದ ನಂತರ, ಒಂದು ಸಾಮೂಹಿಕ ಹೋರಾಟದ ಮೂಲಕ ಬ್ರಿಟನ್ ಯುದ್ಧದಿಂದ ಹಿಂದೆ ಸರಿಯುವಂತೆ ಮಾಡದ ಹೊರತು ದೇಶವು ಜಪಾನೀಯರ ವಶವಾಗುವುದನ್ನು ತಡೆಯುವುದು ಸಾಧ್ಯವೇ ಇಲ್ಲ ಎಂಬುದು ಯುವ ಸಮಾಜವಾದಿಗಳಾದ ನಮ್ಮ ನಂಬಿಕೆಯಾಗಿತ್ತು. ೧೯೪೨ರ ಫೆಬ್ರವರಿಯಲ್ಲಿ ಸಾಣೆ ಗುರೂಜಿಯವರ ಒತ್ತಾಯದ ಮೇರೆಗೆ, ವಿನೋಬಾ ಭಾವೆಯವರ ಖಾಂದೇಶ್ ಪ್ರವಾಸದಲ್ಲಿ ನಾನು ಅವರ ಜೊತೆಗೂಡಿದೆ. ನಾನು ಅವರಿಗೆ ಒಂದೇ ಒಂದು ಪ್ರಶ್ನೆಯನ್ನು ಕೇಳಿದ್ದು ನನಗೆ ಚೆನ್ನಾಗಿ ನೆನಪಿದೆ.

ಒಂದು ಬೃಹತ್ ಪ್ರಮಾಣದ ಜನತಾ ಚಳುವಳಿಯಿಲ್ಲದೆ ನಾವು ತಕ್ಷಣದ ಭವಿಷ್ಯದಲ್ಲಿ ಸ್ವರಾಜ್ಯವನ್ನು ಪಡೆಯಬಲ್ಲೆವೆ? ಎಂಬುದು ಆ ಪ್ರಶ್ನೆ. ನನ್ನ ಪ್ರಶ್ನೆಗೆ ಮಹಾತ್ಮಾ ಗಾಂಧೀಜಿಯವರ ಆ ಆಧ್ಯಾತ್ಮಿಕ ವಾರಸುದಾರರು ನನಗೆ ಈ ರೀತಿ ಉತ್ತರಿಸಿದರು : "ನಾವು ರಚನಾತ್ಮಕ ಕಾರ್ಯಕ್ರಮಗಳ ಮೇಲೆ ಮತ್ತು ಗ್ರಾಮೀಣ ಸ್ವಯಂಪೂರ್ಣತೆಯ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸಬೇಕು. ಆಗ ಬ್ರಿಟಿಷ್ ಆಳ್ವಿಕೆಯು ತನ್ನಿಂದ ತಾನೇ ಕಣ್ಮರೆಯಾಗುವುದು. ಯಾವುದೇ ಹೋರಾಟದ ಅಗತ್ಯವಿಲ್ಲ." ಈ ಉತ್ತರದಿಂದ ನನ್ನ ಹೃದಯವೇ ಒಡೆದ ಅನುಭವ ನನಗಾಯ್ತು. ಇದು ವಿನೋಬಾ ಅವರ ದೃಷ್ಟಿಕೋನವಾದರೆ ಗಾಂಧೀಜಿಯವರೂ ಸಹಾ ಇದೇ ದಿಕ್ಕಿನಲ್ಲಿ ಯೋಚಿಸುತ್ತಿರಬಹುದು ಎಂದು ನನಗನ್ನಿಸಿತು. ಕ್ರಿಪ್ಸ್ ವಿನಿಯೋಗದ ಸೋಲು ಮತ್ತು ಅಮೆರಿಕದ ಸೈನ್ಯದ ಬರುವಿಕೆಯ ಸೂಚನೆಯ ನಂತರ ಗಾಂಧೀಜಿಯವರು ತಮ್ಮ ಹೋರಾಟವನ್ನು ತೊಡಗಿದಾಗ ನನ್ನ ಸಂತೋಷಕ್ಕೆ ಪಾರವೇ ಇರಲಿಲ್ಲ. ಕೂಡಲೇ ನಾವು ನಮ್ಮ ತಯಾರಿಯನ್ನು ಪ್ರಾರಂಭಿಸಿದೆವು. ಪಶ್ಚಿಮ ಖಾಂದೇಶ್ ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆಯು ಶಿವಪುರದಲ್ಲಿ ಭಾರೀ ಉತ್ಸಾಹದ ವಾತಾವರಣದಲ್ಲಿ ನಡೆಯಿತು. ಅತ್ಯಂತ ಸೌಮ್ಯವಾದ ಗಾಂಧಿವಾದಿಯಾಗಿದ್ದ "ತೀವ್ರ ಸಮಾಜವಾದಿ ಸಂಪ್ರದಾಯದ" ಬಾಲು ಬಾಯ್ ಮೆಹ್ತಾ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷು ಅಧ್ಯಕ್ಷರಾಗಿದ್ದರು. ಇಂತಹ ಸೌಮ್ಯವಾದಿಯೂ ಸಹ ಅತ್ಯುತ್ಸಾಹದಿಂದಿದ್ದರು. ಸಭೆಯ ನಂತರ ನಾವು ಬೊಂಬಾಯಿಗೆ ಹೊರಟೆವು. ಸ್ಥಳೀಯ ತೊರೆಯಲ್ಲಿ ಪ್ರವಾಹ ಬಂದಿದ್ದು ನೀರು ಇಳಿದ ಮೇಲಷ್ಟೇ ನಾವು ಹೊರಡುವುದು ಸಾಧ್ಯವಿತ್ತು. ಯುವಜನರ ಬಗೆಗೆ ತಮ್ಮ ಅಪಾರವಾದ ಪ್ರೀತಿಯ ವಿಚಾರಕ್ಕೆ ಖ್ಯಾತರಾಗಿದ್ದ ಅಂದಿನ ಬೊಂಬಾಯಿಯ ಮೇಯರ್ ಆಗಿದ್ದ ಸಮಾಜವಾದಿ ಯೂಸುಫ್ ಮೆಹರೌಲಿಯವರು ನಮಗೆ ನೀಡಿದ ಸಹಾಯದಿಂದ ಎ.ಐ.ಸಿ.ಸಿ ಯ ಚಪ್ಪರದೊಳಕ್ಕೆ ನಮಗೆ ಪ್ರವೇಶ ದೊರೆಯಿತು. ಗಾಂಧೀಜಿಯವರು ತಮ್ಮ ಸ್ಫೂರ್ತಿದಾಯಕ ಭಾಷಣವನ್ನು ಹಿಂದಿಯಲ್ಲಿ ನಂತರ ಇಂಗ್ಲೀಷಿನಲ್ಲಿ ಮಾಡುವ ಸಮಯಕ್ಕೆ ನಾನು ಮತ್ತು ನಮ್ಮ ಗೆಳೆಯರು ವೇದಿಕೆಯ ಸಮೀಪಕ್ಕೆ ಬಂದಿದ್ದೆವು. ಭಾರತೀಯ ಇತಿಹಾದಲ್ಲಿನ ಆ ಭವ್ಯ ಕ್ಷಣಕ್ಕೆ ನಾನೊಬ್ಬ ಸಾಕ್ಷಿಯಾಗಿದ್ದೆ. ಅಲ್ಲಿಯವರೆಗೆ ನಾನು ಗಾಂಧೀಜಿಯವರ ಕೆಲವು ನಿಲುವುಗಳನ್ನು ಟೀಕಿಸುತಿದ್ದೆ. ಆದರೆ ಅಂದು ರಾತ್ರಿ ಗಾಂಧೀಜಿಯವರು ನೀಡಿದ ಹೇಳಿಕೆಯಿಂದ ನನ್ನ ಹಾಗೇ ಇತರ ಕೋಟ್ಯಾಂತರ ಯುವಜನರ ಮನಸೂರೆಗೊಂಡಿದ್ದರು.

ಗಾಂಧೀಜಿಯವರು ಮತ್ತು ಇತರೆ ರಾಷ್ಟ್ರನಾಯಕರು ಸಂಪ್ರದಾಯಿಕವಾಗಿ ಹೋರಾಟವನ್ನು ಪ್ರಾರಂಭಿಸುವುದಕ್ಕೆ ಅವಕಾಶವನ್ನು ನಿರಾಕರಿಸಲಾಯಿತು. ತಾವು ವೈಸರಾಯ್ ಅವರನ್ನು ಭೇಟಿಯಾಗಿ ಒಂದು ಗೌರವಯುತ ಸಂಧಾನಕ್ಕೆ ಪ್ರಯತ್ನಿಸುವುದಾಗಿ ಗಾಂಧೀಜಿ ತಿಳಿಸಿದರು. ೧೯೪೨ರ ಆಗಸ್ಟ್ ೯ ರಂದು ಬೆಳಗಿನ ಜಾವ ಎಲ್ಲ ನಾಯಕರನ್ನೂ ಬ್ರಿಟಿಷ್ ಸರ್ಕಾರ ಬಂಧಿಸಿತು. ಇವರೆಲ್ಲರೂ ಮುಂದಿನ ಮೂರು ವರ್ಷಗಳ ಕಾಲ ವಾಸ್ತವವಾಗಿ ಕಾರಾಗೃಹದಲ್ಲಿರಬೇಕಾಯಿತು.


ಎ.ಐ.ಸಿ.ಸಿ.ಗಾಗಿ ಬೊಂಬಾಯಿಯಲ್ಲಿ ನೆರೆದಿದ್ದ ಸಮಾಜವಾದಿಗಳು ನಿಷ್ಕ್ರೀಯರಾಗಿ ಬಂಧನಕ್ಕೊಳಗಾಗಬಾರದೆಂದು ನಿರ್ಧರಿಸಿದರು. ಒಂದು ಭೂಗತ ಚಳುವಳಿಯನ್ನು ಕಟ್ಟಬೇಕೆಂದು ಇವರೆಲ್ಲರೂ ನಿರ್ಧಾರ ಮಾಡಿದರು. ಯೂಸೂಫ್ ಮಹರಲಿ ಮತ್ತು ಅಶೋಕ ಮೆಹ್ತಾ ಅವರುಗಳು ಸಹ ಬಂಧಿಸಲ್ಪಟ್ಟರು. ಜೆ.ಪಿ.ಯವರು ಸಹ ಆಗ ಕಾರಾಗೃಹದಲ್ಲಿದ್ದರು. ಲೋಹಿಯಾ ಅಚ್ಯುತ ಪಟವರ್ಧನ್, ಪುರುಷೋತ್ತಮ, ತ್ರಿಕುಮದಾಸ್, ಎಸ್.ಎಂ. ಜೋಷಿ (ಎನ್.ಜಿ. ಗೊರೆಯವರು ನಿಜಾಮನ ಕಾರಾಗೃಹದಲ್ಲಿದ್ದರು) ಶಿರೂಲ್ ಲಿಮಯೆ ಮತ್ತು ಉಳಿದ ನಾವೆಲ್ಲರೂ ಭೂಗತರಾದೆವು. ಅರುಣಾ ಅಸಿಫ್ ಆಲಿಯವರೂ ನಮ್ಮ ಜೊತೆಗೂಡಿದರು. ಆಚಾರ್ಯ ಕೃಪಲಾನಿಯವರು ಬಹುಶಃ ಬಂಧನಕ್ಕೊಳಗಾಗುವುದಕ್ಕೆ ಮೊದಲು ನೀಡಿದ್ದ ಸೂಚನೆಯ ಪ್ರಕಾರ ಕೆಲವು ಗಾಂಧಿವಾದಿ ಕಾಂಗ್ರೆಸ್ ನಾಯಕರು, ಇತರೆ ಕಾರ್ಯಕಾರಿ ಸಮಿತಿಯ ಸದಸ್ಯರ ಜೊತೆಯಲ್ಲಿ ಒಂದು ಭೂಗತ ಎ.ಐ.ಸಿ.ಸಿ ಯನ್ನು ಸ್ಥಾಪಿಸ ಹೊರಟರು. ಸುಚೇತಾ ಕೃಪಲಾನಿ, ಸಾಧಿಕ್ ಆಲಿ ಮತ್ತು ಗಿರಿಧಾರಿ ಕೃಪಲಾನಿಯವರು ಇವರಲ್ಲಿ ಕೆಲವರಾಗಿದ್ದರು. ಎ.ಐ.ಸಿ.ಸಿ ಯಲ್ಲಿ ಈ ಮೊದಲೇ ಕೆಲಸ ಮಾಡಿದ್ದ ಲೋಹಿಯಾರವರು ಈ ಗಾಂಧಿವಾದಿ ಎ.ಐ.ಸಿ.ಸಿ ಬಣ ಮತ್ತು ಸಮಾಜವಾದಿಗಳ ನಡುವಿನ ಸಾಮಾನ್ಯ ಸಂಪರ್ಕ ಕೂಡಿಯಾಗಿ ಕಾರ್ಯನಿರ್ವಹಿಸಿದರು. ಈ ಗುಂಪುಗಳು ಐಕ್ಯತೆಯಿಂದ ಈ ಗುಂಪುಗಳು ಒಟ್ಟಾಗಿ ಕೆಲಸ ಮಾಡಲು ನಿರ್ಧರಿಸಿದ್ದು ಆಶ್ಚರ್ಯದ ಸಂಗತಿಯೇನೂ ಆಗಲಿಲ್ಲ. ಇವರು ದೇಶದಾದ್ಯಂತ ಪ್ರತಿರೋಧದ ಚಳುವಳಿಗೆ ಅಮೂಲ್ಯವಾದ ಮಾರ್ಗದರ್ಶನ ನೀಡಿದರು. ಹಜಾರಿಭಾಗ್ ಜೈಲಿನಿಂದ ಬಹಳ ಸಾಹಸದಿಂದ ತಪ್ಪಿಸಿಕೊಂಡ ನಂತರ ಜೆಪಿ ತಮ್ಮ ಸಹೋದ್ಯೋಗಿಗಳೊಂದಿಗೆ ಸೇರಿ ಇವರೊಡನೆ ಒಂದಾದರು. ಏನೇ ಆದರೂ ಕೊನೇಪಕ್ಷ ಪ್ರಾರಂಭದ ಹಂತದಲ್ಲಾದರೂ ಈ ಆಗಸ್ಟ್ ದಂಗೆಯಲ್ಲಿ ಸಹಜಸ್ಫೂರ್ತತೆಯ ಪ್ರಬಲವಾದ ಅಂಶವಂತೂ ಇತ್ತು. ಎ.ಐ.ಸಿ.ಸಿ ಸಂಘಟನೆ ಆನಂತರದಲ್ಲಿ ಪ್ರವೇಶ ಮಾಡಿತು. ಈ ಚಳುವಳಿ ಶುದ್ಧ ಅಹಿಂಸೆಯ ಮಿತಿಯೊಳಗೆ ಉಳಿಯಲಿಲ್ಲ. ಆದರೂ ಭೂಗತ ಎ.ಐ.ಸಿ.ಸಿಯು ಭಯೋತ್ಪಾದಕ ಚಟುವಟಿಕೆಗಳನ್ನು ಪ್ರೋತ್ಸಾಹಿಸದೆ, ಯಾರನ್ನೂ ಕೊಲ್ಲದಿರುವ ಗಾಯಗೊಳಿಸದಿರುವ ಸೂತ್ರಕ್ಕೆ ಬದ್ಧರಾಗಿರಬೇಕೆಂದು ಜನರಲ್ಲಿ ಮನವಿ ಮಾಡುತ್ತಿತ್ತು.

ನಮ್ಮ ಜನರ ಶೌರ್ಯದ ಕೃತ್ಯಗಳನ್ನು ನಾನಿಲ್ಲಿ ಹೇಳಲು ಬಯಸುವುದಿಲ್ಲ. ನಮ್ಮ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಶೌರ್ಯಕ್ಕೆ ಸಂಬಂಧಿಸಿದ ಒಂದು ಭವ್ಯವಾದ ಅಧ್ಯಾಯವೇ ಇದೆ. ಗಾಂಧೀಜಿಯವರು ಕ್ವಿಟ್ ಇಂಡಿಯಾ ಕರೆಯನ್ನು ನೀಡದೆ ಹೋಗಿದ್ದರೆ ನಮಗೆ ಸ್ವಾತಂತ್ರ್ಯ ದೊರೆಯುವುದು ವಿಳಂಬವಾಗುತ್ತಿತ್ತು ಎಂಬುದರಲ್ಲಿ ಅನುಮಾನವಿಲ್ಲ. ೧೯೪೨ರ ಪ್ರಥಮಾರ್ಧದಲ್ಲಿ ಜವಾಹರಲಾಲರ ಚಟುವಟಿಕೆಗಳ ಬಗ್ಗೆ ನನಗೆ ಅಸಮಧಾನವಿದೆ. ಅವರೊಂದು ವಿನಾಶದ ಹಾದಿ ಹಿಡಿದಿದ್ದಾರೆಂದು ನಾವು ಭಾವಿಸಿದ್ದೆವು. ಆದರೆ ಸಕಾಲದಲ್ಲಿ ಅವರು ತಮ್ಮನ್ನು ತಾವೇ ನಿಯಂತ್ರಿಸಿಕೊಂಡು ಬೊಂಬಾಯಿ ಎ.ಐ.ಸಿ.ಸಿ. ಯಲ್ಲಿ ಕ್ವಿಟ್ ಇಂಡಿಯಾ ನಿರ್ಣಯವನ್ನು ಮಂಡಿಸಿದರು. ಇತರ ನಾಯಕರ ಜೊತೆ ಅವರು ಬಂಧನಕ್ಕೂ ಒಳಗಾದರು. ಸ್ವಾತಂತ್ರ್ಯ ಹೋರಾಟದ ನಿರ್ಣಾಯಕ ಹಂತದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಐಕ್ಯತೆಯನ್ನು ಕಾಪಾಡಿಕೊಂಡಿದ್ದಕ್ಕಾಗಿ ನಾನು ನೆಹರು ಅವರನ್ನು ಶ್ಲಾಘಿಸುತ್ತೇನೆ.



(ಲೇಖಕ ಮಧು ಲಿಮಯೆ ಅವರು ಯುವ ಸ್ವಾತಂತ್ರ್ಯ ಹೋರಾಟಗಾರರೂ, ಹಿರಿಯ ಸಮಾಜವಾದಿ ಚಿಂತಕ ಮತ್ತು ಹೋರಾಟಗಾರರೂ ಮತ್ತು ನಿಪುಣ ಸಂಸದೀಯ ಪಟು ಮತ್ತು ಲೇಖಕರಾಗಿ ಹೆಸರಾದವರು)

ಗಾಂಧಿಯವರತ್ತ ನೋಟ-೨



ಗಾಂಧಿ ದ್ವಂದ್ವಗಳು ; ಒಂದು ವಿವೇಚನೆ

ಡಾ. ಎನ್.ಎಸ್. ಗುಂಡೂರ್

ಜಗತ್ತಿನ ಸಮಕಾಲೀನ ಚಿಂತಕರ ಪ್ರಕಾರ ಮಹಾತ್ಮ ಗಾಂಧಿ ಬುದ್ದ ಮತ್ತು ಏಸು ಅವರಂತಹ ಮಹಾ ಪುರುಷರ ಸಾಲಿಗೆ ಸೇರುವಂತಹರು. ಅದರೆ ಗಾಂಧಿ ನಮಗೆ ಬುದ್ಧ-ಕ್ರಿಸ್ತರಂತೆ ಇತಿಹಾಸ ದೂರದಲ್ಲಿರುವ ಪುರಾಣ ಪುರುಷರ ಆಕಾರವನ್ನಿನ್ನೂ ಪಡೆದಿಲ್ಲ. ಅವರನ್ನೂ ನಮಗೆ ಸಮಕಾಲೀನರೇ. ರಕ್ತ-ಮಾಂಸಗಳ ಮನುಷ್ಯರಾಗಿ ನಮ್ಮ ಮಧ್ಯೆ ಬದುಕಿದವರಂತೆಯೇ ಆಗಿ ನಮ್ಮ ವಿಚಾರ-ವಿಮರ್ಶೆಗಳ ತೆಕ್ಕೆಗೆ ಒದಗುತ್ತಲೇ ಬಂದಿದ್ದಾರೆ. ಮಧ್ಯಕಾಲೀನ ಮತ್ತು ಆಧುನಿಕ ಎಂಬ ಕಾಲ ವಿಂಗಡಣೆಗಳ ನಡುವಣ ಸಂಧಿಕಾಲದ ಸವಾಲು-ಸಂದಿಗ್ಧಗಳಿಗೆ ತಮ್ಮ ಬದುಕಿನ ಅರ್ಥ ಹುಡುಕುವ ಪ್ರಕ್ರಿಯೆಯ ಭಾಗವಾಗಿ ಉತ್ತರ ಹುಡುಕುವ ಮಹಾ ಸಾಹಸ ಮಾಡಿದ ಗಾಂಧಿ ಚಿತ್ರ ಇನ್ನೂ ಹಸಿ ಹಸಿಯಾಗಿದ್ದು ಪ್ರತಿಕೂಲವೂ ಸೇರಿದಂತೆ ಹಲವು ತೆರೆನ ವ್ಯಾಖ್ಯಾನಗಳಿಗೆ ಒಳಗಾಗುತ್ತಿರುವುದು ಸಹಜವೇ ಆಗಿದೆ.

ಆದರೆ ಪ್ರಯೋಗಶೀಲ ಬದುಕಿನ ಮುಖಾಂತರ ಆಧುನಿಕ ಸಂದರ್ಭದಲ್ಲಿ ಸತ್ಯಾನ್ವೇಷಣೆಗಾಗಿ ಒಂದು ಹೊಸ ದೃಷ್ಟಿಕೋನವನ್ನೇ, ಹೊಸ ನುಡಿಗಟ್ಟನ್ನೇ ರೂಪಿಸಿ ಬಳಸುವ ಮೂಲಕ ಹೊಸ ಕಾಲದ ಪ್ರಶ್ನೆಗಳಿಗೆ ಉತ್ತರ ನೀಡಿದ ಗಾಂಧಿಯನ್ನು ಅರ್ಥ ಮಾಡಿಕೊಳ್ಳುವಷ್ಟು ಬೌದ್ಧಿಕ ಪರಿಶ್ರಮ ಮತ್ತು ವ್ಯವಧಾನಕ್ಕೆ ಇಂದು ನಮ್ಮ ಬದುಕಿನಲ್ಲಿ ಅವಕಾಶವಿದೆಯೇ? ಈ ಪ್ರಶ್ನೆಯ ಹಿನ್ನೆಲೆಯಲ್ಲಿ, ಭಾರತದ ವಿಭಜನೆಯ ಸಂದರ್ಭವನ್ನು ಮುಖ್ಯ ಭೂಮಿಕೆಯನ್ನಾಗಿಟ್ಟುಕೊಂಡು ಗಾಂಧಿಯವರನ್ನು ಅರ್ಥೈಸುವ ಒಂದು ಪುಟ್ಟ ಪ್ರಯತ್ನವಾಗಿದೆ ಈ ಲೇಖನ.-ಸಂ.

ಕೆಲವರ ವ್ಯಕ್ತಿತ್ವವೇ ಹಾಗೆ. ಅವರು ಇಲ್ಲಿಯೂ ಸಲ್ಲುವುದಿಲ್ಲ, ಅಲ್ಲಿಯೂ ಸಲ್ಲುವುದಿಲ್ಲ. ಇದು ಉದಾರವಾದಿಗಳಿಗೆ (ಲಿಬರಲ್ಸ್) ಅನಿವಾರ್ಯವಾಗಿ ಒದಗಿಬರುವ ಸ್ಥಿತಿ ಏನೋ! ಗುರಿಗಳ ವಿರೋಧ, ಸಂಘರ್ಷಗಳ ಗೊಂದಲ, ಮೇಲ್ಮೈ ವೈರುಧ್ಯತೆಗಳನ್ನು ಅವರ ವೃತ್ತಿಜೀವನದಲ್ಲಿ ಕಾಣುತ್ತೇವೆ. ಎಲ್ಲರನ್ನೂ ಒಳಗೊಳ್ಳುವ, ಅಪ್ರಜ್ಞಾಪೂರ್ವಕವಾಗಿ ಪರಿಪೂರ್ಣತೆಯನ್ನು ಹಂಬಲಿಸುವ ಈ ಮನೋಧರ್ಮ, ದ್ವಂದ್ವಗಳ ಶೋಧದಲ್ಲಿ ತೊಡಗಿರುತ್ತದೆ. ಆಗ ಅದನ್ನು ನಾವು ಬಹುಬೇಗನೆ ಅಪಾರ್ಥ ಮಾಡಿಕೊಳ್ಳುವ ಸಂಭವ ಹೆಚ್ಚು. ನಮ್ಮ ಸಮಕಾಲೀನ ಇತಿಹಾಸವನ್ನು ಅವಲೋಕಿಸಿದಾಗ ಇಂತಹ ಉದಾರವಾದದ ಈ ಬಿಕ್ಕಟ್ಟಿನ ನಾಯಕನಾಗಿ ಮೋಹನದಾಸ ಕರಮ್‌ಚಂದ್ ಗಾಂಧಿಕಾಣುತ್ತಾರೆ.

ಗಾಂಧಿಯವರ ನಿರ್ಧಾರ, ನಿಲುವುಗಳು ದ್ವಂದ್ವಗಳಾಗಿ ಕಾಣುವುದರಲ್ಲಿ ಯಾವ ಸಂಶಯವೇ ಇಲ್ಲ. 'ವೈಯಕ್ತಿಕ ಇಂಗ್ಲೀಶ್ ವ್ಯಕ್ತಿಯ ಜೊತೆಗೆ ನನ್ನ ಯಾವ ವಿರೋಧವಿಲ್ಲ, ನನ್ನ ವಿರೋಧ'ಇರುವುದ ಇಂಗ್ಲೀಶ್ ಸಾಮ್ರಾಜ್ಯಶಾಹಿಯ ಜೊತೆ' ಎನ್ನುವ ಅವರ ಮಾತಾಗಲಿ; ಇದೇ ಸಾಮ್ರಾಜ್ಯಶಾಹಿಯನ್ನು ವಿರೋಧಿಸುವ ಗಾಂಧಿ, ಬೊಯರ್ ಯುದ್ಧದಲ್ಲಿ ಇಂಗ್ಲೀಶ್‌ರನ್ನು ಬೆಂಬಲಿಸಿದ್ದು; ರಾಮನ ಜೊತೆ ರಹೀಮನನ್ನು ಸೇರಿಸಿದ್ದು; ಭಗವದ್‌ಗೀತೆ, ಕುರಾನ್ ಪಠಿಸಿ, ಏಸು ಕ್ರಿಸ್ತನ ಮೌಲ್ಯಗಳನ್ನು ಸಾರಿದ್ದು, ಯಂತ್ರ ನಾಗರಿಕತೆ ಟೀಕಿಸಿ, ರೇಲ್ವೆ ಪ್ರಯಾಣ ಮಾಡುವುದು ಇತ್ಯಾದಿ ನಮಗೆ ಒಂದು ದೃಷ್ಟಿಕೋನದಿಂದ ದ್ವಂದ್ವಗಳಾಗಿ ಕಂಡಿರುವುದು ಸಹಜವೆ.

ಇನ್ನೊಂದು ಚಿಕ್ಕ ಉದಾಹರಣೆ ಕೊಡುವುದಾದರೆ; ಗಾಂದಿ, ದಕ್ಷಿಣ ಆಫ್ರಿಕಾದಲ್ಲಿ ವಕೀಲ ವೃತ್ತಿ ಮಾಡುತ್ತಿದ್ದಾಗ, ಕೋರ್ಟಿನಲ್ಲಿ ಬಂದು ವಾದ ಮಾಡುವುದಾದರ 'ಅವರು ಧರಿಸುತ್ತಿದ್ದ ಗುಜರಾತಿ ರುಮಾಲನ್ನುತೆಗೆದು ಬರಬೇಕೆಂದು ನ್ಯಾಯಾಧೀಶರು ಕೇಳಿಕೊಂಡಾಗ, ಗಾಂಧಿ ಅದನ್ನು ಒಪ್ಪುವುದಿಲ್ಲ. ರುಮಾಲು ಅವರ ಸ್ಥಳೀಯ ಸಂಸ್ಕೃತಿಯ ಅಸ್ಮಿತೆಯಾಗಿತ್ತು. ಅವರ ಅಂತರಂಗ ಆಗ ಅದನ್ನು ಒಪ್ಪಲು ಬಿಡುವುದಿಲ್ಲ. ಆದರೆ ಕೆಲವು ದಿವಸಗಳ ನಂತರ ವಿಚಾರ ಮಾಡಿ ತಮ್ಮ ನಿಲುವನ್ನು ಬದಲಾಯಿಸುತ್ತಾರೆ; 'ಈ ರುಮಾಲನ್ನುತೆಗೆದುಕೋರ್ಟಿನಲ್ಲಿ ಹೋಗಿ ನಾನು ವಾದ ಮಾಡುವುದರಿಂದ ಭಾರತೀಯ ಕಕ್ಷಿದಾರರಿಗೆ ಅನುಕೂಲವಾಗುತ್ತದೆಂದರೆ, ಯಾಕೆ ರುಮಾಲನ್ನು ತೆಗೆಯಬಾರದು' ಎಂದು ಅವರು ಕೋರ್ಟಿನ'ಆದೇಶವನ್ನು ಒಪ್ಪಿಕೊಳ್ಳುತ್ತಾರೆ. ತಮ್ಮ ಬದ್ಧತೆಯನ್ನು ಬದಿಗಿರಿಸಿ, ನಿಲುವುಗಳನ್ನು ಆಗಾಗ ಬದಲಿಸುವಂತಹ ಉದಾಹರಣೆಗಳನ್ನು ಅವರಲ್ಲಿ ಸಾಕಷ್ಟು ಕಾಣುತ್ತವೆ.

ಮೇಲ್ನೋಟಕ್ಕೆ ವಿರೋಧಾಭಾಸಗಳಂತೆ ಕಾಣುವ ಇಂತಹ ಘಟನೆಗಳ ಆಳದಲ್ಲಿ ಸತ್ಯವನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವ ಹುಡುಕಾಟವಿರುತ್ತದೆ ಏನೋ. ನಮ್ಮ ಅನುಭವಗಳು, ಕಾಳಜಿಗಳು ನಮ್ಮ ದೃಷ್ಟಿಕೋನಗಳನ್ನು ಬದಲಿಸಬೇಕು. ನಮ್ಮ ನಿಲುವುಗಳು ಆತ್ಯಂತಿಕವಾಗಿರಬೇಕಿಲ್ಲ! ಒಂದೇ ಸಿದ್ಧಾಂತ, ಜೀವನಕ್ರಮಕ್ಕೆ ಸದಾ ಅಂಟಿಕೊಳ್ಳುವುದು ಜೀವನದ ಚೈತನ್ಯ, ಚಲನಶಕ್ತಿ ಮೊಟಕುಗೊಳಿಸುವುದಷ್ಟೇ ಅಲ್ಲ, ಅಪ್ರಾಮಾಣಿಕವೂ ಹೌದು. ಸಮಾಜ, ಮನುಷ್ಯ ಜೀವನದ ಬದಲಾವಣೆಗಳು ಗಾಂಧಿಯಂತವರಿಗೆ ತಮ್ಮ ಆಂತರಿಕ ಬದಲಾವಣೆಗಳೂ ಆಗಿದ್ದವು. ಅಂತರಂಗವು ಬಹಿರಂಗವನ್ನು ರೂಪಿಸಬೇಕೆಂದವರಿಗೆ ಜೀವನದ ಅನುಭವಗಳ ಜೊತೆ ಪ್ರಯೋಗ ಮಾಡುವುದು ಅವರ ಅನನ್ಯತೆ. ಅದಕ್ಕಾಗಿಯೇ ಗಾಂಧಿಯವರು ತಮ್ಮ ಆತ್ಮಕತೆಯನ್ನು ಜೀವನದ ಪ್ರಯೋಗವೆಂದೇ ಕರೆದಿದ್ದಾರೆ.ಈ ಪ್ರಯೋಗಶೀಲತೆಯನ್ನು ನಾವು ಸಾಮಾನ್ಯವಾಗಿ ಅನುಕೂಲ ಸಿಂಧು ರಾಜಕಾರಣವೆಂದು ಕರೆಯುವ ನಿರ್ಧಾರಕ್ಕೆ ಬಂದು ಬಿಡಬಹುದು. ಆದರೆ ಅದು ಅಷ್ಟು ಸರಳವಲ್ಲ. ಬಹುಶಃ ಅವರು ಮಾಡುತ್ತಿರುವ ರಾಜಕಾರಣವನ್ನು ಅಭಿವ್ಯಕ್ತಿಸಲು ಅವರಿಗೆ ಒಮ್ಮೊಮ್ಮೆ ನುಡಿಗಟ್ಟಿನ ಕೊರತೆಯೂ ಇರಬಹುದು. ಅಥವಾ ಘಟನೆಗಳನ್ನು ನಾವು ಬಿಡಿ ಬಿಡಿಯಾಗಿ ಅರ್ಥ ಮಾಡಿಕೊಂಡು ಒಟ್ಟಾರೆಯಾಗಿ ಅರ್ಥ ಮಾಡಿಕೊಳ್ಳದಿದ್ದರೆ ತಪ್ಪು ತಿಳುವಳಿಕೆಗಳು ಉಂಟಾಗಬಹುದು.

ತಮ್ಮ ಸಮಕಾಲೀನ ನಾಯಕ-ಚಿಂತಕರುಗಳಿಗೆ ಹೋಲಿಸಿದರೆ, ಗಾಂಧಿಯವರಲ್ಲಿ ಹೆಚ್ಚು ಈ ರೀತಿಯ ವೈರುಧ್ಯ, ವಿರೋಧಾಭಾಸಗಳನ್ನು ಕಾಣಬಹುದೇನೋ!ಆದ್ದರಿಂದ ನಾವು ಅವರನ್ನು ಹೆಚ್ಚು ತಪ್ಪಾಗಿ ಅರ್ಥಮಾಡಿಕೊಂಡಿದ್ದೇವೆ ಎನಿಸುತ್ತದೆ. ಉಳಿದ ಆಧುನಿಕ ಭಾರತದ ನಿರ್ಮಾತೃಗಳು ಒಂದು ನಿರ್ದಿಷ್ಟದೃಷ್ಟಿಕೋನದಿಂದ ಒಂದಲ್ಲಾ ಒಂದು ಸೈದ್ಧಾಂತಿಕ ಪಂಗಡಗಳಲ್ಲಿ ಸಲ್ಲುವವರು. ಅಂದರೆ ಗಾಂಧಿಯವರನ್ನು ಸೈದ್ಧಾಂತಿಕ ವಾಗಿ ಮನ್ನಿಸುವವರು ಇಲ್ಲವೆಂದು ಹೇಳುತ್ತಿಲ್ಲ. ಆದರೆ ಆಧುನಿಕ ಭಾರತದ 'ಎಲ್ಲ ಸೈದ್ಧಾಂತಿಕ ಪರಿವಾರಗಳಿಂದ, ವಿಭಿನ್ನ ಜನಸಮುದಾಯಗಳಿಂದ ತಪ್ಪು ತಿಳುವಳಿಕೆಗೆ ಹೆಚ್ಚು ಒಳಪಟ್ಟವರು ಗಾಂಧಿ. ಉಳಿದ ನಾಯಕರುಗಳಂತೆ ಗಾಂಧಿಗೆ ಸ್ಪಷ್ಟವಾದ ಮತ್ತು ಪೂರ್ವನಿರ್ಧಾರಿತ ಸೈದ್ಧಾಂತಿಕತೆಯಾಗಲಿ, ಸಾಮಾಜಿಕ ಮತ್ತು ರಾಜಕೀಯ ಯೋಜನೆಗಳಾಗಿರಲಿ ಸಿದ್ಧರೂಪದಲ್ಲಿ (ರೆಡಿಮೆಡ್) ದೊರಕಿರಲಿಲ್ಲ. ಏಕೆಂದರೆ ಅವರ 'ಆಯ್ಕೆಯ ಹರವು, ನೈತಿಕತೆಯ ವ್ಯಾಪ್ತಿ ಬೇರೆಯೆದೇ ಆಗಿತ್ತು. ಅವರು ಜೀವನದುದ್ದಕ್ಕೂತಮ್ಮ ಸೈದ್ಧಾಂತಿಕತೆಯನ್ನು, ನೀತಿಯನ್ನು, ರಾಜಕೀಯ ಯೋಚನೆಗಳನ್ನು ಸದಾ ಪ್ರಯೋಗಗಳೊಂದಿಗೆ ರೂಪಿಸಿಕೊಳ್ಳುತ್ತ, ಪರಿವರ್ತನೆಗೊಳಿಸುತ್ತಾ ಹೊಸ ಆಯಾಮುಗಳನ್ನು ಶೋಧಿಸಿದ್ದರು. ಹುಡುಕಾಟದ ಈ ಅಂಶ ಅವರನ್ನು ತಪ್ಪಾಗಿ ಅರ್ಥೈಸುವ ಹಾಗೆ ಮಾಡಿತ್ತೇನೊ!

ಅಖಂಡ ಭಾರತ ವಿಭಜನೆಯಾಗಿ, ಭಾರತ ಮತ್ತು ಪಾಕಿಸ್ತಾನಗಳಾದ ಸಮಯದಲ್ಲಿ ಗಾಂಧಿ ಅಲ್ಲಿಯೂ ಸಲ್ಲದ ಇಲ್ಲಿಯೂ ಸಲ್ಲದ ಫಕೀರನಾಗಿದ್ದ. ಎಲ್ಲ ರಾಜಕೀಯ ಲೆಕ್ಕಾಚಾರಗಳು ಕಣ್ಮುಂದೆ ಘಟಿಸಿದ್ದರೂ, ಭಾರತದ ವಿಭಜನೆಗೆ 'ಗಾಂಧಿಯವರೇ ಕಾರಣವೆಂದು ಪೆಂಡರಲ್ ಮೂನ್‌ನಂತ ಎಷ್ಟೋ ಇತಿಹಾಸಕಾರರು ಅಪಾರ್ಥಮಾಡಿಕೊಳ್ಳುವ ಪರಿಸ್ಥಿತಿ ಬಂದಿತು. ಗಾಂಧಿ ಮನಸ್ಸು ಮಾಡಿದ್ದರೆ ವಿಭಜನೆಯನ್ನು ಬತಡೆಯಬಹುದಾಗಿತ್ತೆಂದು ಕೆಲವರು ವಾದಿಸಿದರೆ, ಕೆಲವರು ಅವರನ್ನು ಜಿನ್ನಾ ಪ್ರತಿಪಾದಿಸಿದ 'ದ್ವಿ-ರಾಷ್ಟ್ರ' ಸಿದ್ಧಾಂತದ ವಿರೋಧಿ, ಆದ್ದರಿಂದ ಮುಸ್ಲಿಮರ ವಿರೋಧಿಯೆಂದು ಗ್ರಹಿಸಿದರು. ದೇಶ ವಿಭಜನೆಯಾಗುವಾಗ ಗಾಂಧಿಯವರು ಸತ್ಯಾಗ್ರಹ ಮಾಡಲಿಲ್ಲ ಎಂಬ ಇತ್ಯಾದಿ ಆರೋಪಗಳೂ ಇವೆ.

ರಾಷ್ಟ್ರದ ವಿಭಜನೆಯ ವಿಷಯದಲ್ಲಿ ಗಾಂಧಿಯವರನ್ನು ದೂರುವುದು ಅಷ್ಟು ಸಮಂಜಸವಲ್ಲ. ಹಾಗೆ ನೋಡಿದರೆ, ದೇಶ ವಿಭಜನೆಗೆ ಜಿನ್ನಾ ಅವರನ್ನು ದೂಷಿಸುವುದೂ ಅಷ್ಟು ಸಮಂಜಸವಲ್ಲ. ದೇಶ ಇಬ್ಭಾಗವಾಗಿದ್ದು ಒಂದು ಐತಿಹಾಸಿಕ ಪ್ರಕ್ರಿಯೆ. ಈ ಇಬ್ಬರು ನಾಯಕರು ಸ್ವಾತಂತ್ರ್ಯ ಸಂಗ್ರಾಮದ 'ವೇದಿಕೆಯ ಮೇಲೆ ಬರುವ ಮೊದಲೇ, ಅಂದರೆ ೧೯ನೇ ಶತಮಾನದಲ್ಲಿಯೇ ಹಿಂದು–ಮುಸ್ಲಿಮ್ ಎನ್ನುವ ಧಾರ್ಮಿಕ ಅಸ್ಮಿತೆಗಳು ಸಮಸ್ಯಾತ್ಮಕಗಳಾಗಿ, ಯುರೋಪಿನ ವಸಾಹತುಶಾಹಿ, ರಾಷ್ಟ್ರೀಯತೆಯ ಪರಿಕಲ್ಪನೆ ಮತ್ತು ನಾಯಕರುಗಳ ಅಧಿಕಾರದ ಆಸೆಗಳನ್ನೊಳಗೊಂಡಂತೆ ಹಲವಾರು ಸಾಮಾಜಿಕ, ರಾಜಕೀಯ, ಆರ್ಥಿಕ ಅಂಶಗಳು ಜೊತೆಗೂಡಿ ವಿಭಜನೆಯ ಬೀಜಗಳನ್ನು ಬಿತ್ತಿದ್ದವು. ಹಿಂದೂ ಮತ್ತು ಮುಸ್ಲಿಮ್ ಅಸ್ಮಿತೆಗಳು ಕೋಮುವಾದಗಳಾಗಿ ರೂಪಾಂತರಗೊಂಡಿದ್ದು ಈ ಶತಮಾನದಲ್ಲಿಯೇ. ಅದು ಮುಂದೆ ಪಡೆದ ರೂಪುರೇಶೆಗಳ ಕತೆ ನಮಗೆ ಗೊತ್ತೇ ಇದೆ.

ಗಾಂಧಿ ಸಾರ್ವಜನಿಕ ಬದುಕಿಗೆ ಪ್ರವೇಶಿಸಿದಾಗ ಆಗಲೇ ಕೋಮುವಾದ ಗಟ್ಟಿಯಾಗಿ ಹಿಂದೂ ಮತ್ತು ಮುಸ್ಲಿಮ್ ಜೀವನ ಕ್ರಮಗಳನ್ನು ತದ್ವಿರುದ್ಧವಾಗಿ ನೋಡುವ ಮನೋವೃತ್ತಿಯಾಗಿ ಬೆಳೆದಿತ್ತು. ಆಗ ಗಾಂಧಿಯವರ ಮುಂದೆ ಇದ್ದ ಮುಖ್ಯ ಸವಾಲುಗಳಲ್ಲಿ 'ಸ್ವರಾಜ್ಯ'ವನ್ನು ಪಡೆಯುವುದರ ಜೊತೆಗೆ ಈ ಸಮಸ್ಯೆಯನ್ನು ಬಗೆಹರಿಸುವುದು ಒಂದಾಗಿತ್ತು. ಅವರ 'ರಾಮರಾಜ್ಯ'ದ ಸಿದ್ಧಾಂತದಲ್ಲಿ ಭಾರತದ ಬಹು ಧರ್ಮೀಯ ಜನರಿಗೆ ಗೌರವವಾದ ಬದುಕನ್ನು ಕಲ್ಪಿಸುವುದಾಗಿತ್ತು. 'ಇಂದಿನ ರಾಜಕಾರಣ ಭಾರತವನ್ನು ಹಿಂದೂ ಮತ್ತು ಮುಸ್ಲಿಮರೆಂದು ಇಬ್ಭಾಗ ಮಾಡಿದೆ. ಇಂತಹ ಪ್ರಪಾತದಿಂದ ಜನರನ್ನು ರಕ್ಷಿಸಿ, ತಾವೆಲ್ಲರೂ ಇತರ ಮನುಷ್ಯರೊಂದಿಗೆ ಬದುಕನ್ನು ಹಂಚಿಕೊಂಡು ಸಹಬಾಳ್ವೆ ನಡೆಸಬೇಕೆಂಬ ಮನೋಭಾವನೆಯ ಸ್ಥಿತಿಯನ್ನು ನಿರ್ಮಾಣ ಮಾಡಬೇಕಾಗಿದೆ' ಎಂದು ಸಾರುತ್ತಾ, ಗಾಂಧಿ ಹಿಂದೂ–ಮುಸ್ಲಿಮರ 'ಮಿಸಾಯ್' ಆಗಿದ್ದರು. ಹಾಗೆ ನೋಡಿದರೆ ಮುಸ್ಲಿಮ್ ಸಮುದಾಯದ ಕಾಳಜಿ ಮಾಡಿದ ಅತಿ ವಿರಳ ಅಥವಾ ಏಕೈಕ ಮುಸ್ಲೀಮೇತರ ನಾಯಕನೆಂದರೆ ಗಾಂಧಿ.

ಅಸ್ಪೃಶ್ಯತೆಯ, ಸಾಮ್ರಾಜ್ಯಶಾಹಿ ವಿರುದ್ಧ ಹೋರಾಡುವುದರ ಜೊತೆಗೆ, ಹಿಂದೂ–ಮುಸ್ಲಿಮರ ನಡುವೆ ಸಹಬಾಳ್ವೆಯ ಬದುಕನ್ನು ಸಾರ್ಥಕಗೊಳಿಸುವುದು ಗಾಂಧಿಯ ಹಂಬಲವಾಗಿತ್ತು. ಅಂತೆಯೇ ಅವರು 'ಖಿಲಾಫತ್ ಚಳುವಳಿ'ಯಲ್ಲಿ ಭಾಗವಹಿಸಿದರು. ಒಟೊಮನ್‌ದ ಖಾಲೀಫ್‌ನನ್ನು ಬ್ರಿಟೀಶ್ ಸರಕಾರ ರದ್ದುಗೊಳಿಸಿದ್ದು, ಜಗತ್ತಿನಾದ್ಯಾಂತ ಎಲ್ಲ ಮುಸ್ಲಿಮರ ಧಾರ್ಮಿಕ ಭಾವನೆಯನ್ನು ನೋಯಿಸಿತ್ತು. ಆಗ ಭಾರತೀಯ ಮುಸ್ಲಿಮ್ ನಾಯಕರು ಬ್ರಿಟೀಶ್ ಸಾಮ್ರಾಜ್ಯದ ಮೇಲೆ ಒತ್ತಡ ತರಲು 'ಖಿಲಾಫತ್ ಚಳುವಳಿ'ಯಲ್ಲಿ ಭಾಗವಹಿಸುವಾಗ ಗಾಂಧಿ ಅದರಲ್ಲಿ ಧುಮುಕಿದ್ದು ಕೇವಲ ಬ್ರಿಟೀಶ್‌ರ ರಾಜಕೀಯ ನೈತಿಕತೆಯನ್ನು ಪ್ರಶ್ನಿಸಿ ಅಲ್ಲ. ಅದು ಭಾರತೀಯ ಮುಸ್ಲಿಮರ ಜೊತೆ ಹಿಂದೂಗಳು ಇದ್ದಾರೆಂದು ತೋರಿಸಿ, ಅಂತಹ ಸೌಹಾರ್ದವನ್ನು ಬೆಳೆಸುವ ಒಳ್ಳೆಯ ರಾಜಕಾರಣದ ಭಾಗವಾಗಿತ್ತು. ಆದರೆ ಕೆಲವರು ಅದನ್ನು ತಪ್ಪಾಗಿ ಅರ್ಥೈಸಿದರು.


ಗಾಂಧಿ 'ದ್ವಿ-ರಾಷ್ಟ್ರ' ಸಿದ್ಧಾಂತವನ್ನು (ಟು ನೇಶನ್ ಥಿಯರಿ) ಎಂದಿಗೂ ಒಪ್ಪಿಕೊಂಡವರಲ್ಲ. 'ಒಂದು ವೇಳೆ ಕಾಂಗ್ರೆಸ್ ದೇಶ ವಿಭಜನೆಯನ್ನು ಒಪ್ಪಿಕೊಳ್ಳುವುದಾದರೆ, ಅದು ನನ್ನ ಸತ್ತ ದೇಹದ ಮೇಲೆಯೇ. ನಾನು ಜೀವಂತ ಇರುವವರಿಗೂ ಇದನ್ನು ಒಪ್ಪುವುದಿಲ್ಲ, ಕಾಂಗ್ರೆಸ್‌ನ್ನೂ ಒಪ್ಪಲು ಬಿಡುವುದಿಲ್ಲ' ಎಂದು ಹೇಳುತ್ತಲೇ ಬಂದರು. 'ಆಂತರಿಕ ಕಲಹಗಳಂತಹ 'ಸಿವಿಲ್ ವಾರ್' ನಡೆದರೂ ಅಡ್ಡಿ ಇಲ್ಲ, ದೇಶ ವಿಭಜನೆ ಸಲ್ಲದು' ಎಂದು ಗಾಂಧಿ ಪ್ರತಿಪಾದಿಸುತ್ತ ಬಂದರು.

ಆದರೆ ಪರಿಸ್ಥಿತಿ ಅವರ ಕೈ ಮೀರಿ ಹೋಗಿತ್ತೆಂದು ಅವರಿಗೇ ಗೊತ್ತಿರಲಿಲ್ಲ. ಅದು ಬ್ರಿಟೀಶರು ಭಾರತದಿಂದ ತಮ್ಮ ಕಾಲನ್ನು ಕೀಳುವ ಸಮಯ. ಅವರಿಗೆ ಇಲ್ಲಿಯ ಸಮಸ್ಯೆಗಳಲ್ಲಿ ಯಾವ ಆಸಕ್ತಿಯು ಇರಲಿಲ್ಲ. ಜಿನ್ನಾ ಕರೆಕೊಟ್ಟ 'ಡೈರೆಕ್ಟ್ ಆ್ಯಕ್ಷನ್ ಡೇ' ('ನೇರ ಕಾರ್ಯಾಚರಣೆಯ ದಿನ') ವಿವಿಧೆಡೆ ರಕ್ತದೋಕಳಿಯನ್ನು ಹರಿಸಿತ್ತು.. ಕಾಂಗ್ರೆಸ್ ಗಾಂಧಿಯ ಮಾತು ಕೇಳುವ ಸ್ಥಿತಿಯಲ್ಲಿರಲಿಲ್ಲ. ಇತಿಹಾಸಕಾರ ಬಿ ಆರ್ ನಂದಾ ಹೇಳುವಂತೆ 'ಗಾಂಧಿ ಜೊತೆ ಇದ್ದ ನೆಹರೂ, ಪಟೇಲ್ ಕೂಡಾ ಇವರನ್ನು ಕಡೆಗಣಿಸಿದ್ದರು.ಗಾಂಧಿಯವರಿಗಿದ್ದ ಬದ್ಧತೆಯನ್ನು ಅವರ 'ಜೊತೆಗಾರರು ಕೊನೆಯ ದಿನಗಳಲ್ಲಿ ಅವರ ಜೊತೆ ಹಂಚಿಕೊಳ್ಳಲಿಲ್ಲವೆಂದು ಗಾಂಧಿಯವರಿಗೆ ತುಂಬಾ ನೋವಾಗಿತ್ತಂತೆ. ಒಂದರ್ಥದಲ್ಲಿ ಅವರನ್ನು ನೆಹರೂ, ಪಟೇಲರೂ ವಂಚಿಸಿದಂತೆಯೆ ಸರಿ'.

'ಜಿನ್ನಾನೇ ಈ ದೇಶದ ಪ್ರಧಾನಿಯಾಗಲಿ, ದೇಶ ಒಡೆಯುವುದು ಬೇಡ' ಅಂತ ಹೇಳಿದ ಗಾಂಧಿಯ ಮಾತು ಯಾರಿಗೂ ಅರ್ಥವಾಗಲಿಲ್ಲ. ಅಷ್ಟೇ ಅಲ್ಲ, ಅಧಿಕಾರ ಹಂಚಿಕೆಯ ಗದ್ದಲದಲ್ಲಿ ಕೇಳಿಸಲೇ ಇಲ್ಲ. ಮೌಲಾನಾ ಅಬುಲ್‌ಕಲಾಮ್ ಆಜಾದ್ ತಮ್ಮ ***ಇಂಡಿಯಾ ವಿನ್ಸ್ ಫ್ರೀಡಂ*** ಎಂಬ ಗ್ರಂಥದಲ್ಲಿ ಮೌಂಟ್ ಬ್ಯಾಟನ್ ಹೇಳಿದ್ದನ್ನು ದಾಖಲಿಸುತ್ತಾರೆ: 'ಕಾಂಗ್ರೆಸ್ ಗಾಂಧಿಯವರ ಸಲಹೆಯನ್ನು ಕೇಳಿದರೆ, ವಿಭಜನೆಯನ್ನು ಈಗಲೂ ತಪ್ಪಿಸಬಹುದು. ಸರದಾರ ಪಟೇಲ್ ಮತ್ತು ನೆಹರೂ ಅವರು ಗಾಂಧಿಯವರ ಮಾತನ್ನು ಕೇಳುತ್ತಿಲ್ಲ. ಬದಲಾಗಿ ಗಾಂಧಿಯವರೆ ತಮ್ಮ ನಿರ್ಧಾರವನ್ನು ಬದಲಿಸಲೆಂದು ಒತ್ತಾಯಿಸುತ್ತಿದ್ದಾರೆ'.ಹೀಗೆ ಈ ದೇಶ ವಿಭಜನೆಯ ನಾಟಕದಲ್ಲಿ ಗಾಂಧಿಯವರದು ಅಸಹಾಯಕ ಪಾತ್ರವಾಗಿತ್ತು. ರಿಚರ್ಡ್ ಅಟೆನ್‌ಬರೋ ಅವರು ತಮ್ಮ 'ಗಾಂಧಿ' ಚಲನಚಿತ್ರದಲ್ಲಿ ಈ ವೇಳೆಯ ಗಾಂಧಿಯ ಅಸಹಾಯಕತೆಯನ್ನು ಬಹಳ ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಚಿತ್ರದಲ್ಲಿ ಗಾಂಧಿ ಪಾತ್ರದ ಹಾವಭಾವವನ್ನು ನೋಡಿದರೆ 'ಅವರ ಆವಾಗಿನ ಅಸಹಾಯಕತೆ, ಕಾಂಗ್ರೆಸ್‌ನಿಂದ ಅವರು ಕಡೆಗಣಿಸಲ್ಪಟ್ಟಿದ್ದು ವೀಕ್ಷಕರಿಗೆ ಸ್ಪಷ್ಟವಾಗಿ ಮುಟ್ಟುವಂತೆ ಚಿತ್ರಿಸಿದ್ದಾರೆ.ಅಮೇರಿಕಾದ ಛಾಯಾಗ್ರಾಹಕಿಯಾದ ಮಾರ್ಗರೆಟ್ ಬರ್ಕ್‌ವೈಟ್‌ರು ತೆಗೆದ 'ಗಾಂಧಿಯವರ ಚಿತ್ರಗಳಲ್ಲಿಯೂ ಇದನ್ನು ಸೂಕ್ಷ್ಮವಾಗಿ ಸೆರೆಹಿಡಿಯಲಾಗಿದೆ.

ಆದರೆ ವಿಭಜನೆಯ ಈ ಮಹಾಕಥಾನಕದಲ್ಲಿ ಗಾಂಧಿಯವರನ್ನು ತಪ್ಪಾಗಿ ಅರ್ಥೈಸಿದ್ದು ಐತಿಹಾಸಿಕ ಲೋಪ. ಮುಸ್ಲಿಮರ ಕಣ್ಣಿಗೆ ಗಾಂಧಿ ಹಿಂದೂ ರಾಷ್ಟ್ರೀಯತೆಯ ಪಿತಾಮಹನಾಗಿ ಕಂಡರು. ಕೆಲವರಿಗೆ ಗಾಂಧಿ ವಿಶ್ವಾಸಘಾತಕರಾಗಿ, ಹಿಂದೂಗಳಿಗೆ ಮೋಸ ಮಾಡಿದ ಬನಿಯಾ ಆಗಿ ಕಂಡರು.ಇಲ್ಲಿ ಸಮಸ್ಯೆ ಇರುವುದು ಗಾಂಧಿಯ ನಡೆ, ನುಡಿಯನ್ನು ಅರ್ಥಮಾಡಿಕೊಳ್ಳುವಲ್ಲಿ ಸೋತ ಭಾರತದಲ್ಲಿ ಗಾಂಧಿಯ ನುಡಿಗಟ್ಟು ಅಪಾರ್ಥವಾಯಿತು; ಹಿಂದೂ ಪುರಾಣ, ಪುಣ್ಯಕತೆಗಳಿಂದ ಗಾಂಧಿ ತಮ್ಮ ಸಂವಹನದಲ್ಲಿ ಬಳಸಿದ ಸಂಕೇತಗಳು, ಉಲ್ಲೇಖಗಳು ಅವರನ್ನಕಟ್ಟಾ ಹಿಂದೂವಾದಿಯನ್ನಾಗಿಸಿದವು. ಅದೇ ಕಾಲಕ್ಕೆ ಕುರಾನ್‌ಗ್ರಂಥದ ಬಗ್ಗೆ ಅವರುತೋರಿಸುತ್ತಿದ್ದ ಗೌರವ, ಆದರ; ಮುಸ್ಲಿಮರ ಬಗೆಗಿರುವ ಅವರ ಕಾಳಜಿ; ರಾಮನ ಜೊತೆ ರಹೀಮನನ್ನು ಆರಾಧಿಸಿದ್ದು, ಕೆಲವು ಹಿಂದೂಗಳ ಕೆಂಗಣ್ಣಿಗೆ ಅವರು ಗುರಿಯಾಗುವಂತೆ ಮಾಡಿತು. ಕೊನೆಗೆ ಗಾಂಧಿ ಇಲ್ಲಿಯೂ ಸಲ್ಲದ, ಅಲ್ಲಿಯೂ ಸಲ್ಲದವರಾದರು. ಆದರೆ ಇಡೀ ದೇಶ ಸ್ವಾತಂತ್ರ್ಯ ಪಡೆದ ಸಂಭ್ರಮ ಆಚರಿಸುತ್ತಿದ್ದರೆ, ಗಾಂಧಿ ನೋಕಾಹಲಿಯಲ್ಲಿ ಕೋಮುವಾದದ ಹಿಂಸೆಯಲ್ಲಿ ನರಳುತ್ತಿದ್ದವರ ಸೇವೆಯಲ್ಲಿ ತೊಡಗಿದ್ದರು.

ಕಾಲಘಟ್ಟವೊಂದರಲ್ಲಿ ಗಾಂಧಿಯವರ ಭಾಷೆಯು, ಪಥ್ಯಗಳು, ಕಾಳಜಿಗಳು ನಮಗೆ ಅರ್ಥವಾಗುವುದು ಕಷ್ಟವಾಗಿತೇನೊ! ಗಾಂಧಿಯ 'ರಾಮರಾಜ್ಯ' ಎಲ್ಲರನ್ನೂ ಒಳಗೊಳ್ಳುವ ನೈತಿಕ ಆದರ್ಶರಾಜ್ಯವಾಗಿತ್ತು, ಒಂದು ನಿರ್ದಿಷ್ಟ ಭೂಪ್ರದೇಶವಾಗಿರಲಿಲ್ಲ. ಅವರ ತಾತ್ವಿಕ ನುಡಿಗಟ್ಟನ್ನು 'ಅಕ್ಷರಶಃ' ಅರ್ಥ ಮಾಡಿಕೊಳ್ಳುವವರಿಗೆ ದ್ವಂದ್ವವಾಗಿ ಕಂಡಿತು. ಅರ್ಥಮಾಡಿಕೊಳ್ಳುವುದಕ್ಕೆ ಬುದ್ಧಿ ಎಷ್ಟು ಬೇಕಾಗುತ್ತದೆಯೋ ಒಳ್ಳೆಯತನವೂ ಅಷ್ಟೇ ಬೇಕಾಗುತ್ತದೇನೊ.



(ತುಮಕೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಲೇಖಕ ಎನ್. ಎಸ್. ಗುಂಡೂರ್ ಪಶ್ಚಿಮದ ಚಿಂತಕರನ್ನು ಕನ್ನಡ ಓದುಗರಿಗೆ ಪರಿಚಯಿಸುವ ಮುಖ್ಯ ಕೆಲಸದಲ್ಲಿ ತೊಡಗಿರುವ ನಮ್ಮ ಯುವ ವಿದ್ವಾಂಸರಲ್ಲಿ ಒಬ್ಬರು.)

ಗಾಂಧಿಯವರತ್ತ ನೋಟ-೩

ಗಾಂಧಿಯನ್ನು ರೂಪಿಸಿದ ಮೂವರು ಪಶ್ಚಿಮದ ಚಿಂತಕರು

ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿ


ಗಾಂಧಿ ಜಗತ್ತಿನಾದ್ಯಂತ ಚಿಂತಕರಾಗಿ ಹೆಸರಾಗಿರುವುದು, ಅವರು ಪಶ್ಚಿಮದ ಆಧುನಿಕ ನಾಗರೀಕತೆಯ ನಿಷ್ಠುರ ವಿಮರ್ಶಕರಾಗಿ, ಅದಕ್ಕೊಂದು ಪೌರ್ವಾತ್ಯ ಪರಂಪರೆಯ ಮೌಲ್ಯಗಳನ್ನು ಆಧರಿಸಿದ ಪರ್ಯಾಯ ಸಭ್ಯತೆಯ ಮಾದರಿಯನ್ನು ರೂಪಿಸಿಕೊಟ್ಟವರೆಂದು. ಅವರ ಸ್ವದೇಶಿ ಪರಿಕಲ್ಪನೆ ಅಪ್ಪಟ ಭಾರತೀಯ ಪರಂಪರೆಯ ಅತ್ಯುತ್ತಮ ಮೌಲ್ಯಗಳನ್ನು ಆಧರಿಸಿದ್ದು. ಆದರೆ, ವಿಪರ್ಯಾಸವೆಂದರೆ ಅವರ ವ್ಯಕ್ತಿತ್ವದ ಬೌದ್ಧಿಕ ಅಡಿಪಾಯ ರೂಪುಗೊಂಡಿದ್ದು ಮೂವರು ಪಾಶ್ಚಾತ್ಯ ಚಿಂತಕರ ಆಲೋಚನೆಗಳಿಂದ. ಅವರೆಂದರೆ ಬ್ರಿಟಿಷ್ ಚಿಂತಕ ಜಾನ್ ರಸ್ಕಿನ್, ಅಮೆರಿಕಾದ ಹೆನ್ರಿ ಡೇವಿಡ್ ಥೋರೋ ಮತ್ತು ರಷಿಯಾದ ಲಿಯೋ ಟಾಲ್‌ಸ್ಟಾಯ್. ಆಧುನಿಕ ಜೀವನ ಮೌಲ್ಯಗಳೆದುರು ತಮ್ಮ ವಿಶಿಷ್ಟ ಕೃತಿಗಳ ಮೂಲಕ ಬದುಕಿನ ಅರ್ಥ ಕಳೆದುಹೋಗುವ ದುರಂತದ ಅರಿವು ಮೂಡಿಸಿದ ಈ ಚಿಂತಕರು ಗಾಂಧಿ ತಾತ್ವಿಕತೆಯ ಮೂಲ ಹಂದರವನ್ನು ರೂಪಿಸಿದವರು ಎಂದು ಹೇಳಬೇಕು. ಈ ಹಂದರದ ಮೇಲೆಯೇ ಗಾಂಧಿ ತನ್ನದೇ ಅರ್ಥದಲ್ಲಿ ಕ್ರಾಂತಿಕಾರಿ ಎನ್ನಬಹುದಾದ ರಾಜಕಾರಣವನ್ನು ರೂಪಿಸಿಕೊಂಡದ್ದು ಮತ್ತು ಆ ಕಾರಣದಿಂದಾಗಿಯೇ ಅವರ ರಾಜಕಾರಣ ಧಾರ್ಮಿಕ ಕೂಡ ಎನ್ನಿಸಿಕೊಂಡದ್ದು.

ಗಾಂಧಿ ಬದುಕಿನ ಈ ಮುಖ್ಯ ಘಟ್ಟವನ್ನು ಪ್ರೊ. ಓ.ಎಲ್. ನಾಗಭೂಷಣ ಸ್ವಾಮಿಯವರು ಇಲ್ಲಿ ವಿಸ್ತಾರವಾಗಿ ಪರಿಚಯ ಮಾಡಿದ್ದಾರಲ್ಲದೆ, ಗಾಂಧಿವರ ಸ್ವ–ರಾಜ್ಯ ಕಲ್ಪನೆಯ ಕೇಂದ್ರದಲ್ಲಿರುವ 'ಸ್ವ' ಎನ್ನುವುದು ಹೇಗೆ 'ಪರ'ದೊಡನೆಯ ಸಂವಾದದ ಮೂಲಕ ಹೇಗೆ ಪರಿಪುಷ್ಟಗೊಂಡಿತೆಂಬುದನ್ನೂ ಇತ್ತೀಚಿನ ಗಾಂಧಿ ವ್ಯಾಖ್ಯಾನಕಾರರ ಅಧ್ಯಯನಗಳ ಹಿನ್ನೆಲೆಯಲ್ಲಿ ಒಂದು ವಿಶ್ಲೇಷಣೆಯ ಪ್ರಯತ್ನವನ್ನೂ ಇಲ್ಲಿ ಮಾಡಿದ್ದಾರೆ–ಸಂಪಾದಕ.

ನಾನು ೧೯೭೦ರ ದಶಕದಲ್ಲಿ ಇಂಗ್ಲಿಶ್ ಎಂಎ ಓದುವಾಗ ಮಹಾತ್ಮ ಗಾಂಧಿಯವರ ಆತ್ಮಚರಿತ್ರೆ, ರಸ್ಕಿನ್‌ನ ಅನ್‌ಟು ದಿಸ್ ಲಾಸ್ಟ್ ಮತ್ತು ಥೋರೋನ ವಾಲ್ಡನ್ ಇವು ಮೂರೂ ನಮಗೆ ಪಠ್ಯಗಳಾಗಿ ನಿಗದಿಯಾಗಿದ್ದವು. ಅವನ್ನು ಅಧ್ಯಾಪಕರು ಪಾಠ ಮಾಡಿದ ನೆನಪು ಇಲ್ಲ. ನಮ್ಮ ತರಗತಿಯ ವಿದ್ಯಾರ್ಥಿಗಳೂ ಅವನ್ನು ಅಷ್ಟು ಗಂಭೀರವಾಗಿ ಓದಲಿಲ್ಲ. ಹೇಗಿದ್ದರೂ ಪರೀಕ್ಷೆಯಲ್ಲಿ ಯಾವುದಾದರೂ ಐದು ಪ್ರಶ್ನೆಗೆ ಉತ್ತರ ಬರೆಯುವ ಅವಕಾಶವಿತ್ತು ಮತ್ತು ಎಲ್ಲ ಪಠ್ಯಗಳ ಮೇಲೆ ಪ್ರಶ್ನೆ ಇರುತ್ತಿದ್ದವು. ಗಾಂಧಿಯವರ ಬರವಣಿಗೆ ಗಮನವಿಟ್ಟು ಓದುವ ಅಗತ್ಯವಿದೆ ಅನ್ನುವ ಮನೋಧರ್ಮ ನಾನು ಓದಿದ ಶಾಲೆ ಕಾಲೇಜುಗಳಲ್ಲಿ ಇರಲಿಲ್ಲ. ಗಾಂಧಿಯವರನ್ನು ಕುರಿತ 'ಕಥೆ'ಗಳನ್ನು ಕೇಳಿ ರೂಪಿಸಿಕೊಂಡ ಪೂಜ್ಯ ಭಾವನೆ ಮಾತ್ರ ಇತ್ತು. ಇವತ್ತು ಪರಿಸ್ಥಿತಿ ತೀರ ಭಿನ್ನವಾಗಿದೆ ಎಂದೇನೂ ಅನ್ನಿಸುವುದಿಲ್ಲ. ಎಪ್ಪತ್ತರ ದಶಕದಲ್ಲಿ ಹೆಚ್ಚು ಪ್ರಚಲಿತವಾಗಿದ್ದ ಎಡಪಂಥೀಯ ಚಿಂತನೆಗಳೂ ನಮ್ಮನ್ನು ಸೆಳೆದು ಗಾಂಧಿಯ ವಿಚಾರಗಳು ಪ್ರಭಾವ ಬೀರದ ಹಾಗೆ ತಡೆದವು ಅನ್ನಿಸುತ್ತದೆ. ಗಾಂಧಿ ಮತ್ತು ಅಂಬೇಡ್ಕರ್ ಅವರ ಬರಹಗಳು ಇಂಗ್ಲಿಶ್ ಪಠ್ಯಗಳಲ್ಲಿ ಕಡ್ಡಾಯವಾಗಿ ಇರುತಿದ್ದವು; ನಾನು ಕೆಲಸ ಮಾಡಿದ ಯಾವ ಕಾಲೇಜಿನಲ್ಲೂ ನನ್ನ ಸಹೋದ್ಯೋಗಿ ಮಿತ್ರರು ಯಾರೂ ಈ ಪಾಠಗಳನ್ನು ತೀರ ಗಂಭೀರವಾಗಿ ಬೋಧಿಸುತ್ತಿದ್ದರು ಎಂದು ನನಗಂತೂ ಅನ್ನಿಸಲಿಲ್ಲ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಗಾಂಧಿಯ ಚಿಂತನೆ ಎಪ್ಪತ್ತರ ದಶಕದ ಹೊತ್ತಿಗೇ ತೀರ ತೀರ ಮಸುಕಾಗಿತ್ತು. ಸಾರ್ವಜನಿಕವಾಗಿ ಗಾಂಧಿಯನ್ನು ಕುರಿತು ಮಾತಾಡುವ ಅವಕಾಶ, ಅಗತ್ಯ ಕಂಡದ್ದೂ ಈ ಶತಮಾನದ ಆರಂಭ ವರ್ಷಗಳಿಂದೀಚೆಗೆ ಮಾತ್ರವೇ. ಈ ಕಮ್ಮಟದಲ್ಲಿ ಗಾಂಧಿಯವರ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿದ ಚಿಂತಕರನ್ನು ಕುರಿತು ಶೋಧದಲ್ಲಿ ತೊಡಗಿದಾಗ ಕಂಡುಕೊಂಡ ಸಂಗತಿಗಳನ್ನು ನಿಮ್ಮ ಜೊತೆಯಲ್ಲಿ ಹಂಚಿಕೊಳ್ಳುತಿದ್ದೇನೆ.

೧

ಗಾಂಧಿಯವರು ತಮ್ಮ ಮೇಲೆ ಪ್ರಭಾವ ಬೀರಿದ ಚಿಂತಕರ ಬಗ್ಗೆ ಸ್ವತಃ ಹೇಳಿಕೊಂಡಿದ್ದಾರೆ. 'ಮೂವರು ಅರ್ವಾಚೀನ ಮಹನೀಯರು ನನ್ನ ಜೀವನದ ಮೇಲೆ ಆಳವಾದ ಪ್ರಭಾವವನ್ನುಂಟುಮಾಡಿ ನನ್ನನ್ನು ಆಕರ್ಷಿಸಿದ್ದಾರೆ: ಜೀವನ ಸಂಸರ್ಗದಿಂದ ರಾಯಚಂದ ಭಾಯಿ; 'ದೇವರ ಸಾಮ್ರಾಜ್ಯ ನಿಮ್ಮ ಹೃದಯದಲ್ಲಿದೆ' ಎಂಬ ಪುಸ್ತಕದಿಂದ ಟಾಲ್‌ಸ್ಟಾಯ್'; 'ಸರ್ವೋದಯ' ಎಂಬ ಪುಸ್ತಕದಿಂದ ರಸ್ಕಿನ್ ಬಾಂಡ್,' [ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ, ಭಾಗ ೨, ಅಧ್ಯಾಯ ೧; ಕನ್ನಡ ಅನುವಾದ ಗೊರೂರು ರಾಮಸ್ವಾಮಿ ಅಯ್ಯಂಗಾರ್, ೨೦೧೫ನೆಯ ಇಸವಿಯ ಆವೃತ್ತಿ, ಪುಟ ೯೦]. ಹಾಗೆಯೇ ಹೆನ್ರಿ ಡೇವಿಡ್ ಥೋರೋನನ್ನು ಕುರಿತು ಹೀಗೆ ಹೇಳಿದ್ದಾರೆ: 'ಥೋರೋ ಮಹಾನ್ ಲೇಖಕ, ತತ್ವಜ್ಞಾನಿ, ಕವಿ, ಎಲ್ಲಕ್ಕಿಂತ ಮಿಗಿಲಾಗಿ ಲೌಕಿಕ ಜ್ಞಾನವಿರುವ ಮನುಷ್ಯ. ಅಂದರೆ ತಾನೇ ಸ್ವತಃ ಕಾರ್ಯಗತಗೊಳಿಸಲಾಗದ ಏನನ್ನೂ ಆತ ಬೋಧಿಸಲಿಲ್ಲ. ಅಮೆರಿಕವು ಸೃಷ್ಟಿಸಿದ


ರಸ್ಕಿನ್ ಥೋರೋ ಟಾಲ್‌ಸ್ಟಾಯ್

ಮಹಾನ್ ನೈತಿಕ ವ್ಯಕ್ತಿ ಆತ. ಗುಲಾಮಗಿರಿಯನ್ನು ನಿಷೇಧಿಸಬೇಕೆಂಬ ಚಳುವಳಿಯ ಸಮಯದಲ್ಲಿ ಆತ ಆನ್ ದಿ ಡ್ಯೂಟಿ ಆಫ್ ಸಿವಿಲ್ ಡಿಸ್‌ಒಬಿಡಿಯೆನ್ಸ್ ಎಂಬ ಪ್ರಸಿದ್ಧ ಪ್ರಬಂಧವನ್ನು ರಚಿಸಿದ. ತನ್ನ ತತ್ವಗಳ ಸಲುವಾಗಿ, ನರಳುತ್ತಿರುವ ಮಾನವ ಕುಲದ ಸಲುವಾಗಿ ಆತ ಜೈಲಿಗೆ ಹೋದ. ಅವನ ಪ್ರಬಂಧವು ಹೀಗೆ ವೇದನೆಯ ಮೂಲಕ ಪವಿತ್ರಗೊಂಡಿದೆ. ಎಲ್ಲಕ್ಕಿಂತ ಮಿಗಿಲಾಗಿ ಆತನ ಬರಹ ಸಾರ್ವಕಾಲಿಕವಾದದ್ದು. ಅದರಲ್ಲಿರುವ ತೀಕ್ಷ್ಣವಾದ ತರ್ಕಕ್ಕೆ ಪ್ರತ್ಯುತ್ತರವೇ ಇಲ್ಲ.' [ಇಂಡಿಯನ್ ಒಪಿನಿಯನ್, ೨೬, ಅಕ್ಟೋಬರ್ ೧೯೦೭ರ ಬರಹದ ಸ್ಥೂಲ ಅನುವಾದ.] ಗಾಂಧಿಯವರ ಸತ್ಯಾಗ್ರಹದ ಪರಿಕಲ್ಪನೆ ಥೋರೋನ ವಿಚಾರಗಳಿಂದ, ಸರ್ವೋದಯದ ಕಲ್ಪನೆ ರಸ್ಕಿನ್‌ನ ಬರಹದಿಂದ, ಅಹಿಂಸೆಯ, ಧಾರ್ಮಿಕತೆಯನ್ನು ಕುರಿತ ಚಿಂತನೆಗಳು ಟಾಲ್‌ಸ್ಟಾಯ್ ಬರಹದಿಂದ ರೂಪುಗೊಂಡವು ಎಂದು ಹಲವು ವಿದ್ವಾಂಸರು ಪ್ರತಿಪಾದಿಸಿದ್ದಾರೆ.

೨

ಗಾಂಧಿಯವರ ಮೇಲೆ ಉಂಟಾದ ಪ್ರಭಾವಗಳನ್ನು ಕುರಿತು ಚರ್ಚಿಸುವ ವಿದ್ವಾಂಸರು ಎರಡು ಬಗೆಯ ಭಿನ್ನ ನಿಲುವು ತಳೆಯುತ್ತಾರೆ. ಗಾಂಧಿಯವರು ಪಶ್ಚಿಮದ ಚಿಂತನೆಗಳಿಂದ ಪ್ರೇರಣೆ ಪಡೆದಿಲ್ಲ, ಭಾರತದ ಧರ್ಮ, ಪರಂಪರೆಗಳಿಂದ ರೂಪುಗೊಂಡಿದ್ದಾರೆ ಎನ್ನುವುದು ರಾಷ್ಟ್ರೀಯವಾದೀ ಚಿಂತಕರ ಅಭಿಮತ; ಅಹಿಂಸೆ, ಅಸಹಕಾರ ಚಳವಳಿ, ಸರ್ವೋದಯ ಇಂಥ ಪರಿಕಲ್ಪನೆಗಳು ಪಶ್ಚಿಮದ ಚಿಂತಕರಿಂದಲೇ ಗಾಂಧಿಯವರಲ್ಲಿ ಮೂಡಿದವು ಎಂಬುದು 'ಕೇಂಬ್ರಿಜ್ ಚರಿತ್ರೆಕಾರರು' ತಾಳುವ ನಿಲುವು. ಅನ್ಯದ ಒಡನಾಟದ ಮೂಲಕ, ಅವರು ಬದುಕಿದ್ದ ಕಾಲಮಾನದಲ್ಲಿ ಪ್ರಚಲಿತವಾಗಿದ್ದ ವಿಚಾರ ಪ್ರಣಾಳಿಗಳ ಮೂಲಕ, ಮತ್ತು ಅವರ ಬದುಕಿನ ಹಲವು 'ವಾಸ್ತವ'ಗಳಿಂದ ಗಾಂಧಿಯವರ ವ್ಯಕ್ತಿತ್ವ ರೂಪುಗೊಂಡಿತು ಅನ್ನುವ ಹೆಚ್ಚು ಸಮತೋಲನದ ನಿಲುವೂ ರೂಪುಗೊಂಡಿದೆ.

ಗಾಂಧಿಯವರ ಓದುಗ ವ್ಯಕ್ತಿತ್ವ ಮೊದಲಿಗೆ ನಮ್ಮ ಗಮನ ಸೆಳೆಯುತ್ತದೆ. ಕೇವಲ ಪರೀಕ್ಷೆಗಾಗಿ, ವಿದ್ವತ್ ಸಂಪಾದನೆಗಾಗಿ, ಸಮಯಹರಣಕ್ಕಾಗಿ ಓದಿದವರಲ್ಲ ಗಾಂಧಿ. 'ನನ್ನ ವಿದ್ಯಾಭ್ಯಾಸ ಕಾಲದಲ್ಲಿ ಪಠ್ಯ ಪುಸ್ತಕಗಳ ಹೊರತು ಮತ್ತೇನನ್ನೂ

ಓದಲಿಲ್ಲವೆಂದು ಹೇಳಬಹುದು. ನಾನು ಜೀವನದ ಕರ್ಮರಂಗವನ್ನು ಪ್ರವೇಶಿಸಿದ ಮೇಲೆ, ಏನನ್ನೂ ಓದಲು ನನಗೆ ಸಮಯವೇ ದೊರೆತಿರಲಿಲ್ಲ. ಆದುದರಿಂದ ನನಗೆ ಹೆಚ್ಚಾದ ಪುಸ್ತಕ ಜ್ಞಾನವಿದೆಯೆಂದು ಹೇಳಲಾರೆ. ಆದರೆ ಈ ಬಲಾತ್ಕಾರ ಸಂಯಮದಿಂದ ನನಗೆ ಹೆಚ್ಚು ನಷ್ಟವಾಗಿಲ್ಲವೆಂಬುದು ನನ್ನ ನಂಬಿಕೆ. ಅದರ ಬದಲು ನನ್ನ ಮಿತವಾದ ವ್ಯಾಸಂಗ ನಾನು ಓದಿದುದನ್ನು ಚೆನ್ನಾಗಿ ಅರಗಿಸಿಕೊಳ್ಳಲು ಸಾಧ್ಯಮಾಡಿದೆ,' ಎಂದು ಗಾಂಧಿ ಹೇಳುತ್ತಾರೆ. [ಆತ್ಮಕಥೆ, ಪುಟ ೩೧೨]. ಹಾಗಾಗಿ ಕವಿಯೋ ತತ್ವಜ್ಞಾನಿಯೋ ಯಾರ, ಯಾವ ಪ್ರಭಾವಗಳಿಗೆ ಒಳಗಾಗಿದ್ದಾರೆ ಎಂದು ಪರಿಶೀಲಿಸುವ ರೀತಿಯಲ್ಲಿ ಗಾಂಧಿಯವರ ಮೇಲಾದ ಪ್ರಭಾವಗಳನ್ನು ಗುರುತಿಸುವುದು ಉಪಯೋಗವಿಲ್ಲದ ಕೆಲಸವಾದೀತು. ಓದಿದ್ದನ್ನು ಬದುಕಿನಲ್ಲಿ ಅಳವಡಿಸಿಕೊಂಡು ನಿಜಮಾಡಿಕೊಂಡ ಅಪರೂಪದ ವ್ಯಕ್ತಿ; ತನ್ನ ವಿಚಾರ ಅನ್ಯ ಸಂಸ್ಕೃತಿಯ ಸಂಪರ್ಕ, ಅನ್ಯ ವಿಚಾರದೊಡನೆ ತನ್ನ ವಿಚಾರ-ಭಾವನೆಗಳನ್ನು ಮಸೆದು ನಿಜಗೊಳಿಸಿಕೊಂಡ ಅಪರೂಪದ ಉದಾಹರಣೆ ಗಾಂಧಿ. ನುಡಿ-ನಡೆಗಳ ಸಂಗಮವಾದ ವ್ಯಕ್ತಿತ್ವ ಗಾಂಧಿ ಎಂಬ ಗೌರವ ಮೂಡುತ್ತದೆ.

ಗಾಂಧಿಯವರು ತೀರ ಎಳವೆಯಲ್ಲೇ ತಾವು ನೋಡಿದ ಹರಿಶ್ಚಂದ್ರ ನಾಟಕ ಉಂಟು ಮಾಡಿದ ಪ್ರಭಾವವನ್ನು ವಿವರಿಸುತ್ತಾರೆ. 'ಎಲ್ಲರೂ ಏಕೆ ಹರಿಶ್ಚಂದ್ರನಂತೆ ಸತ್ಯಸಂಧರಾಗಿರಬಾರದು?...ಹರಿಶ್ಚಂದ್ರ ಸತ್ಯಕ್ಕಾಗಿ ಪಟ್ಟ ಕ್ಲೇಶವನ್ನೆಲ್ಲ, ಆಪತ್ತುಗಳನ್ನೆಲ್ಲ ನಾನೂ ಪಡಬೇಕು. ಇದೊಂದೇ ನನ್ನ ಮನಸ್ಸಿನಲ್ಲಿ ಸ್ಫೂರ್ತಿ ತುಂಬಿದ ಆದರ್ಶ. ಹರಿಶ್ಚಂದ್ರನ ಕಥೆಯನ್ನು ನಾನು ಅಕ್ಷರಶಃ ನಂಬಿದೆನು' [ಆತ್ಮಕಥೆ, ಪುಟ ೭]. ನುಡಿಯಲ್ಲಿ ರೂಪುಗೊಂಡ ಆದರ್ಶ ನಡೆಯಲ್ಲೂ ನಿಜವಾಗಬೇಕೆಂಬ ವ್ಯಕ್ತಿತ್ವ ಎಳವೆಯಿಂದಲೇ ಗಾಂಧಿಯಲ್ಲಿ ಇದ್ದಿರಬೇಕು. ಇದೇ ಕಾರಣದಿಂದ 'ಅನ್ಯ' ಸಂಸ್ಕೃತಿಯ ವ್ಯಕ್ತಿಗಳ ಮೂಲಕ ಬಂದ ವಿಚಾರಗಳ ಸತ್ಯತ್ವವೂ ಅವರನ್ನು ಪರಿಣಾಮಿಸಿರಬೇಕು. ಹಾಗೆ ನೋಡಿದರೆ ವಿಚಾರಗಳಿಗೆ ದೇಶ, ಕಾಲಗಳ ಮಿತಿ ಎಲ್ಲಿದೆ? ಒಂದೊಂದು ಚಾರಿತ್ರಿಕ ಕಾಲಘಟ್ಟದಲ್ಲೂ ಯಾವ ವಿಚಾರ ಯಾಕೆ ಹೇಗೆ ಪ್ರಾಮುಖ್ಯ ಗಳಿಸುತ್ತದೆ ಅನ್ನುವುದಕ್ಕೆ ವ್ಯಕ್ತಿಗಳು ವಾಹಕವಾಗಿ ಒದಗಿ ಬರುತ್ತಾರೆ ಅನ್ನಿಸುತ್ತದೆ. ಹಾಗಾಗಿ ಗಾಂಧಿಯವರು ತಮ್ಮ ಮೇಲೆ ಪ್ರಭಾವ ಬೀರಿದರು ಎಂದು ಹೇಳುವ ವ್ಯಕ್ತಿಗಳ, ಅವರ ಮೂಲಕ ವ್ಯಕ್ತವಾದ ವಿಚಾರಗಳ ಸ್ಥೂಲ ಪರಿಚಯವನ್ನು ಈಗ ಮಾಡಿಕೊಳ್ಳೋಣ.

೩

ಕಾಲಾನುಕ್ರಮವನ್ನು ಅನುಸರಿಸಿ ಹೇಳುವುದಾದರೆ ಹೆನ್ರಿ ಡೇವಿಡ್ ೧೮೧೭ ರಿಂದ ೧೮೬೨ರವರೆಗೆ ಜೀವಿಸಿದ್ದವನು; ಅವನ *ಸಿವಿಲ್ ಡಿಸ್ ಒಬಿಡಿಯೆನ್ಸ್* (ಸವಿನಯ ಕಾನೂನುಭಂಗ) ಪ್ರಬಂಧ ಪ್ರಕಟವಾದದ್ದು ೧೮೪೯ರಲ್ಲಿ. ಜಾನ್ ರಸ್ಕಿನ್ ೧೮೧೯ ರಿಂದ ೧೯೦೦ರವರೆಗೆ ಬದುಕಿದ್ದ ಚಿಂತಕ; ಅವನ *ಅನ್‌ಟು ದಿಸ್ ಲಾಸ್ಟ್* (ಅಂತ್ಯೋದಯ)ಪ್ರಕಟಗೊಂಡದ್ದು ೧೮೬೦ರಲ್ಲಿ. ಕೌಂಟ್ ಲಿಯೊ ನಿಕೊಲೆಯೆವಿಚ್ ಟಾಲ್‌ಸ್ಟಾಯ್ ೧೮೨೮ರಿಂದ ೧೯೧೦ರವರೆಗೆ ಬದುಕಿದ್ದ ಲೇಖಕ, ಚಿಂತಕ; ಅವನ ದಿ ಕಿಂಗ್‌ಡಮ್ ಆಫ್ ಗಾಡ್ ಈಸ್ ವಿತಿನ್ ಯೂ ಪ್ರಕಟವಾದದ್ದು ೧೮೬೩ರಲ್ಲಿ. ಗಾಂಧಿಯವರು ಟಾಲ್‌ಸ್ಟಾಯ್‌ನೊಡನೆ ನೇರವಾಗಿ ಪತ್ರವ್ಯವಹಾರ ನಡೆಸಿದ್ದರು. ಗಾಂಧಿಯವರೇ ಹೇಳಿರುವಂತೆ ಅವರು ರಸ್ಕಿನ್‌ನನ್ನು ಓದಿದ್ದು ೧೯೦೪ರಲ್ಲಿ, ದಕ್ಷಿಣ ಆಫ್ರಿಕದಲ್ಲಿ ರೈಲು ಪ್ರಯಾಣ ಮಾಡುತ್ತ ಒಂದು ಇಡೀ ರಾತ್ರಿ ಓದಿ ಮುಗಿಸಿದರು. ಟಾಲ್‌ಸ್ಟಾಯ್‌ನ ಜೊತೆಯಲ್ಲಿ ಪತ್ರವ್ಯವಹಾರ ನಡೆದದ್ದು ೧೯೦೯ರ ಅವಧಿಯಲ್ಲಿ. ಥೋರೋನ ಪ್ರಸ್ತಾಪವನ್ನು ಅವರು ೧೯೧೬ರ *ಇಂಡಿಯನ್ ಒಪಿನಿಯನ್*‌ನಲ್ಲಿ ಮಾಡಿದ್ದಾರೆ.

ಈ ಮೂವರೂ ಚಿಂತಕರಿಗೆ ಗಾಂಧಿಯವರು ತೆರೆದುಕೊಂಡದ್ದು ದಕ್ಷಿಣ ಆಫ್ರಿಕದಲ್ಲಿದ್ದ ಅವಧಿಯಲ್ಲಿ, ಭಾರತದಿಂದ ದೂರವಾಗಿ 'ಅನ್ಯ' ಪ್ರದೇಶದಲ್ಲಿದ್ದ ಅವಧಿಯಲ್ಲಿ.

೪

ಗಾಂಧಿಯವರು ರಸ್ಕಿನ್‌ನ *ಅನ್‌ಟು ದಿಸ್ ಲಾಸ್ಟ್* ಪುಸ್ತಕವನ್ನು ಕುರಿತು ತಮ್ಮ ಆತ್ಮಕಥೆಯಲ್ಲಿ ಎ ಮ್ಯಾಜಿಕ್ ಸ್ಪೆಲ್ ಆಫ್ ಎ ಬುಕ್ [ಮಂತ್ರಮುಗ್ಧಗೊಳಿಸಿದ ಪುಸ್ತಕ] ಎಂಬ ಅಧ್ಯಾಯವನ್ನೇ ಬರೆದಿದ್ದಾರೆ. ನೆಟಾಲ್‌ಗೆ ರೈಲು ಪ್ರಯಾಣಮಾಡುವಾಗ ದಾರಿಯಲ್ಲಿ ಇದನ್ನು ಓದಿ ಎಂದು ಪೊಲಾಕ್ ಈ ಪುಸ್ತಕವನ್ನು ಕೊಟ್ಟರು; ಅದನ್ನು ಓದಿ 'ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ನನ್ನ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಧರಿಸಿದೆ,' [ಆತ್ಮಕಥೆ, ಪುಟ ೩೧೦] ಎಂದಿದ್ದಾರೆ ಗಾಂಧಿ. ಆ ಪುಸ್ತಕವನ್ನು ಅವರು ಸರ್ವೋದಯ ಎಂಬ ಹೆಸರಿನಿಂದ ಗುಜರಾತೀ ಭಾಷೆಗೆ ಸಾರಾಂಶರೂಪದಲ್ಲಿ ಅನುವಾದಿಸಿದರು. ಗಾಂಧಿಯವರ ಈ ಸಾರಾಂಶಗ್ರಹಣ ಕೃತಿ ಮುಂದೆ ವಾಲ್ಜೀ ಗೋವಿಂದಜೀ ದೇಸಾಯಿ ಅವರಿಂದ ಇಂಗ್ಲಿಶ್‌ನಲ್ಲಿ, ೨೦೦೭ರಲ್ಲಿ ಪ್ರಕಟವಾಗಿದೆ.

ರಸ್ಕಿನ್ ಪ್ರಸಿದ್ಧ ಕಲಾವಿಮರ್ಶಕ. ಕಲೆಯನ್ನು ಅವನು ಗ್ರಹಿಸಿ ವಿವರಿಸುತಿದ್ದ ರೀತಿ, ಅವನ ಶೈಲಿ, ವಾಗ್ಮಿತೆಗಳು ಜನಪ್ರಿಯವಾಗಿದ್ದವು. ಅವನು ತನ್ನ ನಲವತ್ತೊಂದನೆಯ ವಯಸ್ಸಿನಲ್ಲಿ ಪ್ರಕಟಿಸಿದ ಅನ್‌ಟು ದಿಸ್ ಲಾಸ್ಟ್‌ನಲ್ಲಿ ಕೈಗಾರಿಕಾ ಬಂಡವಾಳಶಾಹಿಯ ಐಡಿಯಾಲಜಿಯನ್ನು ಪರಿಶೀಲಿಸಿ ಟೀಕಿಸಿ, ಅದು ಅನುಪಯುತ್ತ, ಅಪಾಯಕಾರಿ, ಅನೈತಿಕ, ಅವೈಜ್ಞಾನಿಕ ಎಂದು ಹೇಳಿದ. ಅದೇ ಕಾರಣಕ್ಕೆ ದೊಡ್ಡ ಮಟ್ಟದಲ್ಲಿ ಟೀಕೆಗೆ ಒಳಗಾದ. ಅರ್ಥಶಾಸ್ತ್ರದ ಮೂಲಾಂಶಗಳನ್ನು ಪರಿಶೀಲಿಸುವುದು ಕಲಾವಿಮರ್ಶಕನ ಕೆಲಸದ ವಿಸ್ತರಣೆ ಎಂದೇ ರಸ್ಕಿನ್ ನಂಬಿದ್ದ. ಮಹಾನ್ ಕಲೆ ಯಾವತ್ತೂ ನೈತಿಕವಾದದ್ದು, ದೇಶದ ಕಲೆ ಆ ದೇಶದ ನೈತಿಕ ಸ್ಥಿತಿಯ ಪ್ರತಿಬಿಂಬ ಎಂದು ತಿಳಿದಿದ್ದ. ಇಂಗ್ಲೆಂಡು ಕೈಗಾರಿಕೆಗಳ ದೇಶವಾಗುತ್ತಿದೆ; ಇಲ್ಲಿನ ಕಲೆಯನ್ನಲ್ಲ, ವಾಸ್ತುವನ್ನಲ್ಲ, ಸ್ಲಂ ತುಂಬಿದ ನಗರ, ಕಲುಷಿತ ಆಕಾಶ, ವಿಷ ತುಂಬಿಕೊಂಡ ನದಿ ಹೊಳೆ, ಕೆರೆಗಳನ್ನು ನೋಡಿದರೆ ಇಲ್ಲಿ ಯಾವ ನೈತಿಕತೆ ಇದೆ ಅನ್ನಬಹುದು? ಕೈಗಾರಿಕಾ ವ್ಯವಸ್ಥೆ ಸಂಪತ್ತನ್ನು ಸೃಷ್ಟಿಮಾಡುವ ಬದಲಾಗಿ ಬಡತನವನ್ನು ಹೆಚ್ಚಿಸುತಿದೆ; ಬಂಡವಾಳಶಾಹಿಯು ಮನುಷ್ಯನಿಗೂ ನಿಸರ್ಗಕ್ಕೂ ಇರುವ ಐಂದ್ರಿಯಕ ಸಂಬಂಧವನ್ನು ಕಡಿದು ಹಾಕಿದೆ; ಬ್ರಿಟನ್ ಪೌಂಡುಗಳ ಲೆಕ್ಕದಲ್ಲಿ, ಉತ್ಪಾದನೆಯಲ್ಲಿ, ಮೆಶಿನರಿಯಲ್ಲಿ, ಆಯುಧಗಳಲ್ಲಿ, ಕೆಲವರ ಸಿರಿವಂತಿಕೆಯಲ್ಲಿ ಶ್ರೀಮಂತವಾಗಿದೆ; ಇಂಥ ಫಲಿತಾಂಶ ನೀಡುವ ಸಿದ್ಧಾಂತವನ್ನು ಸಂಪತ್ತಿನ ವಿಜ್ಞಾನ ಅನ್ನಬಹುದೇ? ಅನ್ನುವ ಪ್ರಶ್ನೆ ರಸ್ಕಿನ್‌ದು.

ಮಾಂಚೆಸ್ಟರ್ ಸ್ಕೂಲ್ ಆಫ್ ಎಕನಾಮಿಕ್ಸ್ ಎಂದು ಕರೆಯಲಾಗುವ ಪಂಥದ ಸಿದ್ಧಾಂತಗಳ ಟೀಕಾಕಾರ ರಸ್ಕಿನ್. ನಮ್ಮ ಕಾಲದಲ್ಲಿ ಪ್ರಚಲಿತವಾಗಿರುವ ನವ ಉದಾರವಾದದದ ಪೂರ್ವಜ ಸಿದ್ಧಾಂತ ಅದು. ಮ್ಯಾಂಚೆಸ್ಟ್ ಸ್ಕೂಲ್ ಇಡೀ ಲೋಕದ ಕೇಂದ್ರ ಬ್ರಿಟನ್ ಎಂದು ಭಾವಿಸಿ, ಸಾಮ್ರಾಜ್ಯಶಾಹಿಯನ್ನು ಬೆಂಬಲಿಸಿದ್ದರೆ ನವ ಉದಾರವಾದವು ಜಗತ್ತಿನ ಕೇಂದ್ರ ಅಮೆರಿಕ ಎಂದು ಭಾವಿಸಿ ಗ್ಲೋಬೀಕರಣವನ್ನು ಹೇಳುತ್ತದ. ಈ ಹೊತ್ತಿನ ಜಾಗತಿಕ ಅರ್ಥವ್ಯವಸ್ಥೆಯನ್ನು ರಸ್ಕಿನ್ ಬೆಳಕಿನಲ್ಲಿ, ಅವನ ಮೂಲಕ ಗಾಂಧಿ ಪಡೆದ ಬೆಳಕಿನಲ್ಲಿ ನೋಡುವುದು ಅಗತ್ಯವೆನ್ನಿಸುತ್ತದೆ.

ಶ್ರೀಮಂತ ವೈನ್ ವ್ಯಾಪಾರಿಯ ಒಬ್ಬನೇ ಮಗ ರಸ್ಕಿನ್. ಆ ವ್ಯಾಪಾರಿ ಇಂದಿನ ಪರಿಭಾಷೆಯಲ್ಲಿ ಪ್ಯೂರಿಟನ್ ಅಥವಾ ಮೂಲಭೂತವಾದಿ. ಹತ್ತೊಂಬತ್ತನೆಯ ಶತಮಾನದ ಬ್ರಿಟಿಶ್ ಪ್ಯೂರಿಟನ್ನರು ಬಲುಮಟ್ಟಿಗೆ ಸಂನ್ಯಾಸಿಗಳ ಹಾಗೆ ಬದುಕುತಿದ್ದರು. ಸ್ವಯಂಶಿಸ್ತು, ಪ್ರವೃತ್ತಿಗಳ ನಿಯಂತ್ರಣಕ್ಕೆ ಪ್ರಾಧಾನ್ಯ ನೀಡಿದ್ದರು. ವ್ಯಾಪಾರಿ-ಉದ್ದಿಮೆದಾರರಾಗಿ ಶ್ರೀಮಂತಿಕೆ ಗಳಿಸಿದರು. ದೇಹ ಸುಖ ಸೈತಾನೀಯವಾದದ್ದು, ಲೌಕಿಕ ಶ್ರೀಮಂತಿಕೆ ದೈವೀ ಕರುಣೆಯ ಫಲವಾದದ್ದು ಅನ್ನುವ ನಂಬಿಕೆ ಅವರದ್ದು. ಪ್ಯೂರಿಟನ್ನರ ಈ ವಿರೋಧಾಭಾಸವನ್ನು ಡಿಕಿಕನ್ಸ್ ಮತ್ತು ಥ್ಯಾಕರೆಯಂಥ ಕಾದಂಬರಿಕಾರರು ವಿಡಂಬಿಸಿದ್ದಾರೆ. ರಸ್ಕಿನ್ ಅಪ್ಪ ಕಲಾ ಸಂಗ್ರಾಹಕ; ವಾರ ಪೂರ್ತಿ ತಾನು ಸಂಗ್ರಹಿಸಿದ ಚಿತ್ರಗಳನ್ನು ದಕ್ಷಿಣ ಲಂಡನ್ನಿನ ಮನೆಯಲ್ಲಿ ಪ್ರದರ್ಶನಕ್ಕಿಡುತಿದ್ದ, ಭಾನುವಾರ ಗೋಡೆಗೆ ತಿರುಗಿಸುತಿದ್ದ. ರಸ್ಕಿನ್ ಒಬ್ಬ ಬಿಷಪ್ ಆಗಬೇಕು ಅನ್ನುವುದು ಅವನ ತಾಯಿಯ ಆಸೆ. ಕಲೆಯ ಒಲವು ಮತ್ತು ನಿಷ್ಠುರವಾದ ಧಾರ್ಮಿಕತೆ ರಸ್ಕಿನ್‌ನ ವ್ಯಕ್ತಿತ್ವವನ್ನು ರೂಪಿಸಿದವು.. ರೂಸೋನ ತಂದೆಯನ್ನು ಶ್ರೀಮಂತನನ್ನಾಗಿಸಿದ, ಯುವಕ ರಸ್ಕಿನ್‌ಗೆ ಆರ್ಥಿಕ ಸ್ವಾತಂತ್ರ್ಯ ನೀಡಿದ್ದ, ನಂಬಿಕೆಗಳನ್ನೇ ಅನ್ ಟು ದಿಸ್ ಲಾಸ್ಟ್ ಪ್ರಶ್ನಿಸುತ್ತದೆ, ಟೀಕಿಸುತ್ತದೆ. ಮಧ್ಯವಯಸ್ಕನಾಗುವ ಹೊತ್ತಿಗೆ ರಸ್ಕಿನ್ ಬಡವರ ಸಮರ್ಥಕ, ಶ್ರೀಮಂತರ ನಿಂದಕನಾಗಿದ್ದ. ಕ್ರಿಸ್ತನ ಬೋಧನೆ ಮತ್ತು ದುಡ್ಡಿನ ಬೋಧನೆಗಳ ಮುಖಾಮುಖಿಯಾಗಿಸಿದ. ಹೀಗೆ ತಾನು ಕ್ರಿಶ್ಚಿಯನ್ ಧರ್ಮದ ತಿಳಿವಳಿಕೆಗೂ ತನ್ನ ವರ್ಗಕ್ಕೆ ಇರುವ ನೈತಿಕ ಸಾಮರ್ಥ್ಯಕ್ಕೂ ನ್ಯಾಯ ಒದಗಿಸುತಿದ್ದೇನೆ ಅಂದುಕೊಂಡ.

ಮ್ಯಾಂಚೆಸ್ಟರ್ ಪಂಥ ಅನ್ನುವುದು ಉದಾರವಾದೀ ಅರ್ಥಶಾಸ್ತ್ರದ ಇನ್ನೊಂದು ಹೆಸರು. ೧) ಬಡವರು ಯಾವಾಗಲೂ ಇದ್ದೇ ಇರುತ್ತಾರೆ, ಹೀಗಿರುವುದಕ್ಕೆ ಪೂರೈಕೆ ಮತ್ತು ಬೇಡಿಕೆಯ ನಿಯಮ [ಸಪ್ಲೈ ಅಂಡ್ ಡಿಮಾಂಡ್] ನಿಯಮಗಳೇ ಕಾರಣ; ನ್ಯೂಟನ್‌ನ ಚಲನೆಯ ಸಿದ್ಧಾಂತ ಎಷ್ಟು ಖಚಿತವೋ ಈ ಸಿದ್ಧಾಂತವೂ ಅಷ್ಟೇ ಖಚಿತ. ೨) ಉತ್ಪಾದನೆಯ ಪ್ರಮಾಣ ಹೆಚ್ಚಿದಷ್ಟೂ ಕೂಲಿಯ ಪ್ರಮಾಣ ಕಡಮೆಯಾಗುತ್ತದೆ. ೩) ಮಾಲ್ಥೂಸ್ ಸಿದ್ಧಾಂತ ಹೇಳುವಂತೆ-ಆಹಾರದ ಉತ್ಪಾದನೆ ಗಣಿತೀಯವಾಗಿ ಹೆಚ್ಚಿದರೆ, ಜನಸಂಖ್ಯೆ ಜ್ಯಾಮಿತೀಯವಾಗಿ ಹೆಚ್ಚುತ್ತದೆ. ಅಂದರೆ ಆಹಾರ ಉತ್ಪಾದನೆಗಿಂತ ಜನ ಸಂಖ್ಯೆ ಯಾವತ್ತೂ ಹೆಚ್ಚಿರುತ್ತದೆ. ಅಂದರೆ ಮನುಷ್ಯರು ಮತ್ತು ಮನುಷ್ಯ ಸಂತಾನ ಇವು ಸಮೃದ್ಧಿಯ ಅನಗತ್ಯ

ಗಾಂಧಿ ದ್ವಂದ್ವಗಳು ; ಒಂದು ವಿವೇಚನೆರಸ್ಕಿನ್‌ನಿಂದ ಮೂರು ಸಂಗತಿ ಕಲಿತೆ ಎನ್ನುತ್ತಾರೆ ಗಾಂಧಿ:

'ಅನ್‌ಟು ದಿಸ್ ಲಾಸ್ಟ್ ಗ್ರಂಥದ ಸಿದ್ಧಾಂತಗಳನ್ನು ನಾನು ಹೀಗೆ ಗ್ರಹಿಸಿದೆ:

೧. ವ್ಯಕ್ತಿಯ ಒಳಿತು ಎಲ್ಲರ ಒಳಿತನ್ನು ಆಧರಿಸಿದ್ದು.
೨. ವಕೀಲನ ಉದ್ಯೋಗಕ್ಕೆ ಇರುವ ಬೆಲೆ ಕ್ಷೌರಿಕನ ಉದ್ಯೋಗಕ್ಕೆ ಇರುವ ಬೆಲೆ ಎರಡೂ ಸಮ, ಇಬ್ಬರೂ ತಮ್ಮ ದುಡಿಮೆಯಿಂದ ಹೊಟ್ಟೆ ಹೊರೆಯುತ್ತಾರೆ.
೩. ಬೇಸಾಯಗಾರನ, ಕುಶಲ ಕರ್ಮಿಯ ಬುದಕು ಬದುಕಲು ಯೋಗ್ಯ.

ಉತ್ಪನ್ನಗಳು. ೪) ಆರ್ಥಿಕ ಕುಸಿತದ ಸಂದರ್ಭದಲ್ಲಿ ಬಡಜನರ ಕಷ್ಟವನ್ನು ಕಡಮೆ ಮಾಡುವ ಮಾನವೀಯ ಪ್ರಯತ್ನಗಳೆಲ್ಲ, ಎಷ್ಟೇ ಸದುದ್ದೇಶ ಪೂರಿತವಾಗಿದ್ದರೂ, ಅಂತಿಮವಾಗಿ ವಿನಾಶಕಾರಿಯಾದದ್ದು. ಅನಿರ್ಬಂಧಿತ ಮಾರುಕಟ್ಟೆಯ ವ್ಯವಹಾರ ಮಾತ್ರವೇ ಸಂಪನ್ಮೂಲಗಳ ಸಮರ್ಪಕ ವಿತರಣೆಗೆ, ಮನುಷ್ಯ ಪುನರುತ್ಪಾದನೆಯನ್ನು ನಿಯಂತ್ರಿಸುವ ಅಗತ್ಯ ಹಸಿವನ್ನೂ ಸೃಷ್ಟಿಸುತ್ತದೆ. ೫) ದುಬಾರಿ ಮಾರ್ಕೆಟ್ಟಿನಲ್ಲಿ ಮಾರುವುದು ಸೋವಿ ಮಾರ್ಕೆಟ್ಟಿನಲ್ಲಿ ಖರೀದಿಸುವುದು ದುರಾಸೆಯಲ್ಲ, ಏಕೈಕ ವೈಚಾರಿಕ ವರ್ತನೆ. ಇದರಿಂದ ಎಲ್ಲರಿಗೂ ಒಳಿತಾಗುತ್ತದೆ ಯಾಕೆಂದರೆ ಎಲ್ಲರೂ ಸ್ವಹಿತಾಸಕ್ತಿಯಿಂದಲೇ ಬದುಕುವವರು. ಇವು ಉದಾರವಾದೀ ಅರ್ಥಶಾಸ್ತ್ರದ ಮುಖ್ಯ ನಂಬಿಕೆಗಳು.

ಈ ಎಲ್ಲ ವಿಚಾರಗಳಲ್ಲಿ ವೈಜ್ಞಾನಿಕವೆನ್ನಲಾಗುವ ಸತ್ಯ ಮತ್ತು ನೈತಿಕ ದೃಷ್ಟಿಕೋನಗಳು ಪ್ರತ್ಯೇಕಗೊಂಡಿರುವುದು ಕಾಣುತ್ತದೆ. ಬಂಡವಾಳಶಾಹೀ ಜಗತ್ತು ನೈತಿಕತೆಯನ್ನು ಮೀರಿದ ಸ್ಪರ್ಧಾತ್ಮಕತೆಯ ಜಗತ್ತು, ಎಲ್ಲರೂ ಎಲ್ಲರ ವಿರುದ್ಧವೂ ಹೋರಾಡುವ ಜಗತ್ತು. ಆರ್ಥಿಕ ಸಂಕಷ್ಟದ ಸಮಯದಲ್ಲಿ ಕಿಂಚಿತ್ತೂ ರಕ್ಷಣೆ ಇರದ ದುಡಿಮೆಗಾರರು, ನಿರಂತರವಾದ ಹರತಾಳ, ವರ್ಗ ಸಂಘರ್ಷ ಇವೆಲ್ಲ ಕಣ್ಣಿಗೆ ರಾಚುತಿದ್ದವು, ಎಲ್ಲರ ವಿರುದ್ಧ ಎಲ್ಲರ ಹೋರಾಟವಲ್ಲ, ಶ್ರೀಮಂತರು ಬಡವರ ವಿರುದ್ಧ ನಡೆಸುವ ಯುದ್ಧ ಇದು ಅನ್ನುವ ಸ್ಥಿತಿ ರಸ್ಕಿನ್ ಕಾಲದ ಸಮಾಜದಲ್ಲಿತ್ತು. ಸಾಮಾಜಿಕ ಅರಾಜತೆಯನ್ನು ಸೃಷ್ಟಿಸುವುದು ಕ್ಯಾಪಿಟಲಿಸಂನ ಮನೋಧರ್ಮ. ಆರ್ಥಿಕ ತತ್ವಗಳು ಸಾಮಾಜಿಕ ಅರಾಜಕತೆಗೆ, ಕ್ರಾಂತಿಗೆ ದಾರಿಮಾಡುವುದಿದ್ದರೆ ಏನು ಮಾಡಬೇಕು?

ಉದಾರವಾದೀ ಎಕನಾಮಿಕ್ಸ್ ಅನ್ನುವುದು ರಸ್ಕಿನ್‌ನ ಪ್ರಕಾರ ವ್ಯಕ್ತಿಗಳು ಹೇಗೆ ಶ್ರೀಮಂತರಾಗುವುದು ಅನ್ನುವುದನ್ನು ಕಲಿಸುವ ಕಪಟ ವಿಜ್ಞಾನ; ಇದು ಸುಳ್ಳು ಮತ್ತು ಅಧಾರ್ಮಿಕ; ಸಾರ್ವಜನಿಕ ನೀತಿ ಮತ್ತು ಧರ್ಮಗಳನ್ನು ಪ್ರತ್ಯೇಕಗೊಳಿಸಿದ್ದೇ ಈ ಸ್ಥಿತಿಗೆ ಕಾರಣ; ಸೆಕ್ಯುಲರ್ ಮತ್ತು ವೈಜ್ಞಾನಿಕ ಹಾಗೂ ಪವಿತ್ರ ಮತ್ತು ಅಲೌಕಿಕ ಎಂಬ ಎರಡು ವ್ಯವಸ್ಥೆಗಳ ಪ್ರತ್ಯೇಕತೆಯೇ ಈಗಿನ ರಾಷ್ಟ್ರಧರ್ಮವಾಗಿದೆ, ಆತ್ಮ ಮತ್ತು ದೇಹದ ಅಗತ್ಯಗಳು ಅವಗಣನೆಗೆ ಒಳಪಟ್ಟಿವೆ ಎಂದು ರಸ್ಕಿನ್ ಹೇಳಿದ.

ಜಾನ್ ರಸ್ಕಿನ್ ತನ್ನ ಯೌವನದಲ್ಲೇ ಆಧುನಿಕ ಚಿತ್ರಕಾರರ ಬಗ್ಗೆ ಪುಸ್ತಕ ಬರೆದು ಜೆ.ಎಂ. ಟರ್ನರ್‌ನಂಥ ವಾಸ್ತವವಾದಿಯಲ್ಲದ ಚಿತ್ರಕಾರನ ಸಮರ್ಥನೆ ಮಾಡಿದ್ದ. ಟರ್ನರ್‌ನ ಚಿತ್ರಗಳನ್ನು ರಸ್ಕಿನ್‌ನ ತಂದೆ ಸಂಗ್ರಹಿಸಿದ್ದ. ರಸ್ಕಿನ್‌ಗೂ ಅವನ ಪರಿಚಯವಿತ್ತು. ರಸ್ಕಿನ್ ೧೮೬೦ರ ವೇಳೆಗೆ ಕಲಾವಿಮರ್ಶಕನಾಗಿ, ವಾಸ್ತುಶಿಲ್ಪದ ವ್ಯಾಖ್ಯಾನಕಾರನಾಗಿ ಪ್ರಸಿದ್ಧನಾಗಿದ್ದ. ಆದರೆ ೧೮೬೦ರಲ್ಲಿ ಕಾರ್ನ್‌ಹಿಲ್ ಮ್ಯಾಗಝೀನ್‌ನಲ್ಲಿ ಅವನು ಬರೆದ ನಾಲ್ಕು ಪ್ರಬಂಧಗಳು ರಾಜಕೀಯ ಅರ್ಥಶಾಸ್ತ್ರವನ್ನು ಕುರಿತವು. ಇವೇ ಆನಂತರದಲ್ಲಿ ಅನ್‌ಟು ದಿಸ್ ಲಾಸ್ಟ್ ಎಂದು ಪುಸ್ತಕವಾಗಿ ೧೮೬೨ರಲ್ಲಿ ಪ್ರಕಟಗೊಂಡವು.

ರಸ್ಕಿನ್ ಬದುಕಿದ್ದ ಕಾಲದ ವಿಕ್ಟೋರಿಯನ್ ಇಂಗ್ಲೆಂಡು ಕೈಗಾರಿಕಾ ಕ್ರಾಂತಿಯ ಕಾರಣದಿಂದಾಗಿ, ಅನಿಯಂತ್ರಿತ ಬಂಡವಾಳಶಾಹೀ ಧೋರಣೆಯಿಂದಾಗಿ 'ನರಕ ಸದೃಶ'ವಾಗಿತ್ತು. ಬಹುಸಂಖ್ಯಾತ ಜನರು ಬಡತನದಲ್ಲಿ ಬದುಕುತ್ತ ಅನಾರೋಗ್ಯದಲ್ಲಿ ನರಳುತ್ತ ಕೈಗಾರಿಕೆಗಳಲ್ಲಿ ದುಡಿಯುತಿದ್ದರು; ಅವರ ದುಡಿಮೆಯ ಪರಿಸರವು ತೀರ ಹದಗೆಟ್ಟಿತ್ತು. ಇಂಗ್ಲೆಂಡಿನ ನಗರಗಳಲ್ಲಿ ಕೊಳೆಗೇರಿಗಳು ಹುಟ್ಟಿಕೊಂಡಿದ್ದವು. ಫ್ಯಾಕ್ಟರಿಗಳ ಹೊಗೆ ಆಕಾಶವನ್ನು ಕಪ್ಪು ಮಾಡಿತ್ತು, ಕೈಗಾರಿಕೆಗಳ ಹೊಲಸು ನದಿಗಳನ್ನು ಚರಂಡಿಗಳನ್ನಾಗಿಸಿತ್ತು. ಕೇವಲ ಬಂಡವಾಳಶಾಹೀ ಶ್ರೀಮಂತರು ಮತ್ತು ವ್ಯಾಪಾರಿಗಳು ಮಾತ್ರ ಅಭಿವೃದ್ಧಿ ಹೊಂದುತ್ತ ಹಳೆಯ ಜಮೀನ್ದಾರೀ ಸಾಹುಕಾರರೊಡನೆ ಸೇರಿ ವಿಕ್ಟೋರಿಯನ್ ಸಂಪನ್ನರ ವರ್ಗ ಸೃಷ್ಟಿಯಾಗಿತ್ತು.

ಅವನು ಕಲಾವಿಮರ್ಶಕನಾಗಿ ಇಡೀ ನೈಸರ್ಗಿಕ ಜಗತ್ತನ್ನು ದೇವರ ಕೃತಿ ಎಂದು ಕಾಣುತಿದ್ದಂತೆಯೇ ತನ್ನ ಎಳವೆಯಲ್ಲಿ ದೊರೆತ ಧಾರ್ಮಿಕ ತಿಳಿವಳಿಕೆಯ ಕಾರಣದಿಂದ ಮನುಷ್ಯ ವರ್ತನೆಯಲ್ಲಿ ಸರಿ ತಪ್ಪುಗಳ ಪ್ರಶ್ನೆ ಅವನಿಗೆ ಮುಖ್ಯವಾದದ್ದಾಗಿ ಕಾಣುತಿದ್ದ. ತನ್ನ ದೇಶದ ಕೊಳಕು ವಿಕಾರಗಳು ಮನುಷ್ಯರ ಬದುಕಿನ ಅಂದವನ್ನು ಕೆಡಿಸಿವೆ ಎಂದುಕಂಡುಕೊಂಡ. ಕಲಾವಿಮರ್ಶಕ ಸಮಾಜವಿಮರ್ಶಕನಾಗಿ ಬೆಳೆದ.

ಕಾರ್ನ್‌ಹಿಲ್ ಮ್ಯಾಗಝೀನ್‌ನ ಪ್ರಬಂಧಗಳಲ್ಲಿ ಅವನು ತೀರ ಕಟುವಾದ ಮಾತುಗಳಲ್ಲಿ, ದೃಶ್ಯಾತ್ಮಕವಾದ ಭಾಷೆಯಲ್ಲಿ ವ್ಯಾಪಾರೀ ವರ್ಗವನ್ನೂ ಕೈಗಾರಿಕೆಗಳ ಮಾಲೀಕ ವರ್ಗವನ್ನೂ ಟೀಕಿಸಿದ; ಅವರು ತಮ್ಮ ವ್ಯವಹಾರವನ್ನು ನಡೆಸುವ ರೀತಿಗೆ ಸಮರ್ಥನೆ ಒದಗಿಸುವ ಕ್ಲಾಸಿಕಲ್ ಅರ್ಥಶಾಸ್ತ್ರವನ್ನು, ಅದರ ಪ್ರತಿಪಾದಕರಾದ ಆಡಮ್ ಸ್ಮಿತ್, ಜಾನ್ ಸ್ಟುಅರ್ಟ್ ಮಿಲ್, ಡೇವಿಡ್ ರಿಕಾರ್ಡೊ ಮೊದಲಾದವರ ಪ್ರತಿಪಾದನೆಗಳನ್ನು ಖಂಡಿಸಿದ. ತನ್ನ ಕಾಲದ ಆರ್ಥಿಕ ಮತ್ತು ರಾಜಕೀಯ ಚಿಂತನೆ ಎಷ್ಟು ಅನರ್ಥಕಾರಿ ಎಂದು ತಿಳಿಯುವುದಕ್ಕೆ ಯಾವ ವಿಶೇಷ ತಜ್ಞತೆಯೂ ಬೇಕಾಗಿಲ್ಲ ಎಂದು ಹೇಳಿದ. ಮಂಡಿಸುತ್ತಿರುವ ಆರ್ಥಿಕ ಚಿಂತನೆಗಳು ಕೂಡ ಆಳದಲ್ಲಿ ಧಾರ್ಮಿಕ ನಿಲುವಿನ ಪ್ರತಿಪಾದನೆಗಳೇ ಆಗಿವೆ, ಕ್ರಿಶ್ಚಿಯನ್ನರಾದವರು ಸದ್ಯದಲ್ಲಿ ಚಾಲ್ತಿಯಲ್ಲಿರುವ ಆರ್ಥಿಕ ಚಿಂತನೆಗಳನ್ನು ಒಪ್ಪಬಾರದು ಎಂದ.

ನ್ಯಾಯಯುತವಾಗಿ ವ್ಯವಹಾರ ನಡೆಯಲು ಸಾಧ್ಯವಿರುವ ಉತ್ತಮ ಸಮಾಜದ ಚಿತ್ರಣವನ್ನು ನೀಡಿದ. ಕೆಲಸಗಾರರನ್ನು ಗೌರವದಿಂದ ಕಾಣುವ, ಜನರೆಲ್ಲರೂ ಸಂತೋಷವಾಗಿ ತೃಪ್ತಿಯಂದ ಬದುಕಲು ಸಾಧ್ಯವಾಗುವ, ಯುದ್ಧವನ್ನು ಕೆಡುಕೆಂದು ಕಾಣುವ, ಶುದ್ಧ ಗಾಳಿ, ನೀರು, ನೆಲಗಳು ಎಲ್ಲ ಮನುಷ್ಯರಿಗೂ ಅಗತ್ಯವೆಂದು ತಿಳಿದು ಕೈಗಾರಿಕಾ ಆಕ್ರಮಣದಿಂದ ಪರಿಸರವನ್ನು ರಕ್ಷಿಸಿಕೊಳ್ಳಬಲ್ಲ ಸಮಾಜ ಅವನ ಆದರ್ಶವಾಗಿತ್ತು.

ರಸ್ಕಿನ್ ಬದುಕಿನುದ್ದಕ್ಕೂ ಸಮಾಜಸುಧಾರಕನಾಗಿಯೇ ಉಳಿದ. ಅವನ ಅನ್‌ಟು ದಿಸ್ ಲಾಸ್ಟ್ ಆನಂತರ ಕಾಲದ ಆರ್ಥಿಕ ಚಿಂತಕರನ್ನು ಪ್ರಭಾವಗೊಳಿಸಿತು, ಗಾಂಧಿ, ಮಾರ್ಟಿನ್ ಲೂಥರ್ ಕಿಂಗ್‌ರಂಥ ಅನೇಕರನ್ನು ಪ್ರಭಾವಿಸಿತು.

ವಿಕ್ಟೋರಿಯನ್ ಯುಗದ ಅರ್ಥಶಾಸ್ತ್ರ ಆಡಮ್ ಸ್ಮಿತ್‌ನ ಚಿಂತನೆಗಳಿಂದ ರೂಪುಗೊಂಡಿತ್ತು. ಬಂಡವಾಳಶಾಹಿಯ ಬೆಳವಣಿಗೆಯ ಮೇಲೆ ತೀರ ಕಡಮೆ ನಿಯಂತ್ರಣವಿರಬೇಕು, ಕೈಗಾರಿಕೆಗಳನ್ನು ಬೆಳೆಸಿ ಉತ್ಪಾದನೆಯನ್ನು ಹೆಚ್ಚಿಸಬೇಕು ಅನ್ನುವುದು ಸ್ಥೂಲವಾಗಿ ಅವನ ಮುಖ್ಯ ಪ್ರತಿಪಾದನೆ. ಮನುಷ್ಯರೆಲ್ಲರೂ ಶುದ್ಧಾಂಗವಾಗಿ ವೈಚಾರಿಕರು, ಆರ್ಥಿಕವಾಗಿ ಲಾಭವನ್ನು ಪಡೆಯಬೇಕೆಂಬ ಆಸೆಯೇ ಎಲ್ಲ ಮನುಷ್ಯರನ್ನೂ ಪ್ರಚೋದಿಸುತ್ತದೆ, ನೈತಿಕತೆ ಮತ್ತು ಸಹಾನುಭೂತಿಗಳಂಥವು ಮುಖ್ಯವಲ್ಲ, 'ವಿಚಾರಪೂರ್ಣವಾದ ಆರ್ಥಿಕ ವರ್ತನೆ' ಮತ್ತು ಲಾಭಗಳಿಕೆ ಮುಖ್ಯ ಎಂದು ಆಡಮ್ ಸ್ಮಿತ್‌ನಂತೆಯೇ ಆ ಕಾಲದ ಉಳಿದ ಚಿಂತಕರೂ ಹೇಳುತಿದ್ದರು. ಇಂದಿನ ಜಗತ್ತಿನಲ್ಲೂ ಈ ನಿಲುವು ಸಂಪೂರ್ಣವಾಗಿ ಮರೆಯಾಗಿಲ್ಲ ಅನ್ನುವುದನ್ನು ಗಮನಿಸಿ.

ಸಂಪತ್ತು, ಉತ್ಪಾದನೆ, ಬಂಡವಾಳ, ಶ್ರಮ, ಕೂಲಿ, ಮೌಲ್ಯ ಇಂಥ ಪ್ರಮುಖ ಆರ್ಥಿಕ ಪರಿಭಾಷೆಗಳನ್ನು ರಸ್ಕಿನ್ ಪುನರ್ ವ್ಯಾಖ್ಯಾನ ಮಾಡಿದ. ಮಾನವೀಯ ದೃಷ್ಟಿ, ಕ್ರಿಶ್ಚಿಯನ್ ಧೋರಣೆಗಳು ಅವನ ಪ್ರತಿಪಾದನೆಗಳನ್ನು ರೂಪಿಸಿದ್ದವು. ಸ್ವಹಿತಾಸಕ್ತಿಗಿಂತ ಮಿಗಿಲಾಗಿ ಇಡೀ ದೇಶದ ಜನರ ಬದುಕನ್ನು ಉತ್ತಮಗೊಳಿಸುವುದು ಮುಖ್ಯ, 'ಬದುಕನ್ನು ಮೀರಿದ ಸಂಪತ್ತು' ಯಾವುದೂ ಇಲ್ಲ, ಸಂತೋಷಚಿತ್ತರಾದ, ಉದಾತ್ತ ಸ್ವಭಾವದ ಜನ ಯಾವ ದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೋ ಅದೇ ನಿಜವಾಗಿ ಶ್ರೀಮಂತ ದೇಶ ಎಂದು ಹೇಳಿದ. ರಸ್ಕಿನ್ ವಾದದಲ್ಲಿ ದೋಷಗಳಿರಬಹುದು. ಆದರೆ ಉತ್ಪಾದನೆ ಆಧಾರಿತ ಅರ್ಥಶಾಸ್ತ್ರ ೨೦೧೪ರಲ್ಲಿ ಅಮೆರಿಕದಂಥ ಮುಂದುವರೆದ ದೇಶದಲ್ಲೂ ಅತಿ ಹೆಚ್ಚಿನ ಸಂಪತ್ತಿನ ಅಸಮಾನತೆಗೆ ಕಾರಣವಾಗಿದೆ ಎಂಬ ವರದಿಗಳನ್ನು ಗಮನಿಸಬೇಕು. ರಸ್ಕಿನ್‌ನ ವಾದದಲ್ಲಿ ತೊಡಕಿದ್ದರೂ ಅವನು ಯಾವ ಆರ್ಥಿಕ ಚಿಂತನೆಯನ್ನು ಟೀಕಿಸಿದನೋ ಅದು ಹಾಗೆ ಸಂಪೂರ್ಣ ದೋಷರಹಿತ, ಮಾನವ ಸ್ನೇಹಿ ಅಲ್ಲ ಎನ್ನುವುದೂ ನಿಜವೇ ಆಗಿದೆ. ಒಡೆಯ-ಆಳು, ದುಡಿಮೆಗಾರ-ಮಾಲಿಕ ಇಂಥ ಸಂಬಂಧಗಳನ್ನು ಕಲ್ಪಿಸಿಕೊಳ್ಳುವಾಗ ರಸ್ಕಿನ್ ಮಧ್ಯಯುಗದ ಊಳಿಗಮಾನ್ಯ ಸಮಾಜದ ಸರಳೀಕೃತ ಚಿತ್ರಣವನ್ನು ನೆಚ್ಚಿಕೊಂಡಿದ್ದಾನೆ; ಮೇಲ್ವರ್ಗದ ಮತ್ತು ಕೆಳವರ್ಗದ ಜನ ಪರಸ್ಪರರ ಉತ್ತಮ ಬದುಕಿಗೆ ನೆರವಾಗುವ

ಸಾಧ್ಯತೆ ಇದೆ ಎಂದು ಕಲ್ಪಿಸಿಕೊಂಡಿದ್ದಾನೆ ಎನ್ನುವ ಟೀಕಾಕಾರರೂ ಇದ್ದಾರೆ.

ವ್ಯವಹಾರ ನಿರತ ಉನ್ನತವರ್ಗದವರು ಕೆಳವರ್ಗಗಳ ಸ್ಥಿತಿಯನ್ನು ಉತ್ತಮಪಡಿಸಲು ಮುಂದಾಗಬೇಕಾದದ್ದು ಅವರ ನೈತಿಕ ಕರ್ತವ್ಯ ಎಂದು ರಸ್ಕಿನ್ ಭಾವಿಸುತ್ತಾನೆ. ವೈಯಕ್ತಿಕ, ಖಾಸಗೀ ದಾನ ಧರ್ಮಗಳಿಗಿಂತ ಮಿಗಿಲಾಗಿ ಸಾಮಾಜಿಕ ನ್ಯಾಯವನ್ನು ಆಧರಿಸಿದ ಆರ್ಥಿಕ ವ್ಯವಸ್ಥೆ ಅಗತ್ಯವೆನ್ನುತ್ತಾನೆ. ಸಮಾಜದ ಸುಧಾರಣೆಯಲ್ಲಿ ಸರ್ಕಾರದ ಪಾತ್ರ ದೊಡ್ಡದೇನೂ ಅಲ್ಲ; ಆದರೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವುದು ಸರ್ಕಾರದ ಜವಾಬ್ದಾರಿ, ವೃದ್ಧರಾದ ಕೆಲಸಗಾರರ ಹಿತ ಕಾಪಾಡುವುದೂ ಸರ್ಕಾರದ ಹೊಣೆ ಎನ್ನುತ್ತಾನೆ. ದೈವ ಸೃಷ್ಟಿಯಾಗಿರುವ ನಿಸರ್ಗವನ್ನು ಅನಿಯಂತ್ರಿತ ಕೈಗಾರಿಕೀಕರಣದಿಂದ ಹಾಳುಮಾಡಬಾರದೆಂದು ಹೇಳುತ್ತಾನೆ. ಬಿಸಿಲು, ಬೆಳಕು, ಗಾಳಿ, ನೀರು ಕಲುಷಿತವಾದರೆ ಅದರಿಂದ ಎಲ್ಲ ಮನುಷ್ಯರ ಸುಖಕ್ಕೂ ಹಾನಿ ಎನ್ನುತ್ತಾನೆ.

ರಸ್ಕಿನ್ ಬೈಬಲ್ಲಿನ 'ಈ ಕೊನೆಯವರ ಕಥೆ'ಯನ್ನು ಉಲ್ಲೇಖಿಸುತ್ತಾನೆ. ಕೊನೆಗಳಿಗೆಯಲ್ಲಿ ಕೆಲಸಕ್ಕೆ ಬರುವ ಕೂಲಿಕಾರನಿಗೂ ಉಳಿದವರಿಗೆ ಕೊಟ್ಟಷ್ಟೇ ವೇತನ ನೀಡುವ ಒಡೆಯನ ಸಾಮತಿಯಲ್ಲಿ ಏಸು ಕ್ರಿಸ್ತನು ಕೊನೆಗಾಲದಲ್ಲಿ ಪರಿವರ್ತನೆಗೊಂಡವರಿಗೂ ತನ್ನ ರಾಜ್ಯ ಮುಕ್ತವಾಗಿದೆ ಎನ್ನುತ್ತಾನೆ. ಬೈಬಲ್ಲಿನ ಕಥೆಗೆ ಲೌಕಿಕ ಅರ್ಥ, ಅರ್ಥಶಾಸ್ತ್ರಕ್ಕೆ ಅರ್ಥಶಾಸ್ತ್ರಕ್ಕೆ ನೈತಿಕ/ಆಧ್ಯಾತ್ಮಿಕ ಅರ್ಥಗಳನ್ನು ಜೋಡಿಸಿದ ರಸ್ಕಿನ್ ಕಮ್ಯುನಿಸ್ಟನಲ್ಲದಿದ್ದರೂ ಸಮಾಜವಾದಿಯಾಗುತ್ತಾನೆ. ಕೈಗಾರಿಕೆಯ ಜಗತ್ತಿನ ಘರ್ಷಣೆ ಕೊನೆಗಾಣಿಸುವುದಕ್ಕೆ ವ್ಯಕ್ತಿಯ ಮಟ್ಟದಲ್ಲಿ ನೈತಿಕ ಪರಿವರ್ತನೆ ನಡೆಯಬೇಕು, ಅದು ವರ್ಗಕ್ಕೆ ವಿಸ್ತರಿಸಬೇಕು, ಅವರು ಈ ಕೊನೆಯವರಿಗೂ ಸಂಪತ್ತು ದೊರೆಯುವ ಹಾಗೆ ಮಾಡಬೇಕು ಎನ್ನುವುದು ರಸ್ಕಿನ್ ಪ್ರತಿಪಾನೆ.

೫

ರಸ್ಕಿನ್‌ನಿಂದ ಮೂರು ಸಂಗತಿ ಕಲಿತೆ ಎನ್ನುತ್ತಾರೆ ಗಾಂಧಿ:

'ಅನ್‌ಟು ದಿಸ್ ಲಾಸ್ಟ್ ಗ್ರಂಥದ ಸಿದ್ಧಾ ಂತಗಳನ್ನು ನಾನು ಹೀಗೆ ಗ್ರಹಿಸಿದೆ:

೧. ವ್ಯಕ್ತಿಯ ಒಳಿತು ಎಲ್ಲರ ಒಳಿತನ್ನು ಆಧರಿಸಿದ್ದು.
೨. ವಕೀಲನ ಉದ್ಯೋಗಕ್ಕೆ ಇರುವ ಬೆಲೆ ಕ್ಷೌರಿಕನ ಉದ್ಯೋಗಕ್ಕೆ ಇರುವ ಬೆಲೆ ಎರಡೂ ಸಮ, ಇಬ್ಬರೂ ತಮ್ಮ ದುಡಿಮೆಯಿಂದ ಹೊಟ್ಟೆ ಹೊರೆಯುತ್ತಾರೆ.
೩. ಬೇಸಾಯಗಾರನ, ಕುಶಲ ಕರ್ಮಿಯ ಬದುಕು ಬದುಕಲು ಯೋಗ್ಯ.

ಇವುಗಳಲ್ಲಿ ಮೊದಲನೆಯದು ನನಗೆ ಗೊತ್ತಿತ್ತು, ಎರಡನೆಯದನ್ನು ಅಸ್ಪಷ್ಟವಾಗಿ ಅರಿತಿದ್ದೆ. ಮೂರನೆಯದು ನನಗೆ ಹೊಳೆದೇ ಇರಲಿಲ್ಲ. ಎರಡನೆಯದೂ ಮೊದಲನೆಯದರಲ್ಲಿ ಅಡಕವಾಗಿರುವುದನ್ನು 'ಅನ್‌ಟು ದಿಸ್ ಲಾಸ್ಟ್' ನನಗೆ ಸ್ಪಷ್ಟವಾಗಿ ಸೂರ್ಯೋದಯದಂತೆ ತೋರಿಸಿತು. ಪ್ರಾತಃಕಾಲ ಎದ್ದು ಈ ತತ್ವಗಳನ್ನೆಲ್ಲ ಆಚರಣೆಗೆ ತರಲು ಸಿದ್ಧನಾದೆನು.' [ಆತ್ಮಕಥೆ, ಪುಟ ೩೧೨-೧೩]

ಗಾಂಧಿಯವರು ರಸ್ಕಿನ್‌ನ ಕೃತಿಯನ್ನು ಗುಜರಾತೀ ಭಾಷೆಗೆ ಅನುವಾದಿಸಿದರು. ಇದು ಅಕ್ಷರಶಃ ಅನುವಾದವಲ್ಲ. ಬಲು ಮಟ್ಟಿಗೆ ಇಂಗ್ಲಿಶ್ ಕೃತಿಯ ನೇರ ಉಲ್ಲೇಖಗಳನ್ನು ಗುಜರಾತೀ ಭಾಷೆಯಲ್ಲಿ ನೀಡಿದರೆ, ಕೆಲವೆಡೆಗಳಲ್ಲಿ ಸಾರಾಂಶವನ್ನು, ಮತ್ತೆ ಹಲವು ಎಡೆಗಳಲ್ಲಿ ವ್ಯಾಖ್ಯಾನ ಸಹಿತ ನಿರೂಪಣೆಯನ್ನು ಮಾಡಿದ್ದಾರೆ; ಗಾಂಧಿಯವರು ಹೇಳುವ ಎರಡನೆಯ ಅಂಶ ಇಂಗ್ಲಿಶ್ ಪುಸ್ತಕದ ಅಡಿಟಿಪ್ಪಣಿಯೊಂದರಲ್ಲಿ ಅಡಗಿದೆ, ಮೂರನೆಯ ಅಂಶ ಗಾಂಧಿಯವರ ಗ್ರಹಿಕೆಯೇ ಹೊರತು ರಸ್ಕಿನ್‌ನಲ್ಲಿ ನೇರವಾಗಿ ದೊರೆಯದು, ಎಲ್ಲಿಯೂ ರೈತನ, ಕಜುಶಲಕರ್ಮಿಯ ಜೀವನ ಶೈಲಿ ಎಲ್ಲರಿಗೂ ಸೂಕ್ತ ಎಂದು ರಸ್ಕಿನ್ ಎಲ್ಲಿಯೂ ಹೇಳಿಲ್ಲ ಎಂದು ಗಂಗೂಲಿಯವರು ಅಭಿಪ್ರಾಯ ಪಡುತ್ತಾರೆ.

ರಸ್ಕಿನ್ ಪುಸ್ತಕ ಪಶ್ಚಿಮ ಶಿಕ್ಷಣ ಪಡೆದವರಿಗೆ ಮಾತ್ರವಲ್ಲ ಇಂಗ್ಲಿಶರಿಗೂ ಉಪಯುಕ್ತ ಅನ್ನುವುದು ಗಾಂಧಿ ನಿಲುವು. ಎಂದರೆ ಮುಕ್ತಮಾರುಕಟ್ಟೆಯು ಸರ್ವೋದಯವನ್ನು ತರಲಾರದು ಎಂದು ರಸ್ಕಿನ್, ಗಾಂಧಿ ಇಬ್ಬರೂ ನಂಬುತ್ತಾರೆ. ಗಾಂಧಿಯವರ ಮಟ್ಟಿಗೆ ರಾಜಕೀಯ ಸ್ವರಾಜ್ ಅನ್ನುವುದು ತನ್ನಷ್ಟ ಕ್ಕೇ ಬಲು ದೊಡ್ಡ ಸಂಗತಿಯಲ್ಲ. ಸ್ವರಾಜ್ ಅಂದರೆ ಆತ್ಮನಿಯಂತ್ರಣ. ಆತ್ಮನಿಯಂತ್ರಣವಿರುವ, ನೈತಿಕ ನಿಯಮ ಪಾಲಿಸುವ, ಇತರರನ್ನು ಮೋಸಮಾಡದ, ಸತ್ಯವನ್ನು ಕೈಬಿಡದ, ತನ್ನ ತಂದೆತಾಯಿ, ಮಕ್ಕಳು, ಸೇವಕರು, ನೆರೆಹೊರೆಯರವರ ಬಗ್ಗೆ ಕರ್ತವ್ಯಗಳನ್ನು ನೆರವೇರಿಸುವ ಮನುಷ್ಯ ಎಲ್ಲೇ ಇದ್ದರೂ ಸ್ವರಾಜ್ಯವನ್ನು ಅನುಭವಿಸುತ್ತಾನೆ. ಸ್ವರಾಜ್ಯವೆಂದರೆ ಅಂಥ ಜನ ಹೆಚ್ಚಾಗಿರುವ ದೇಶ ಎನ್ನುವುದು ಗಾಂಧಿಯವರ ನಿಲುವು.

ಇಂಗ್ಲಿಶರನ್ನು ಕೊಲ್ಲುವುದರಿಂದಲ್ಲ, ಫ್ಯಾಕ್ಟರಿಗಳನ್ನು ಕಟ್ಟುವುದರಿಂದ ಬರುವುದಲ್ಲ ಸ್ವರಾಜ್ಯ; ಸಂಪತ್ತಿನ ಸಂಗ್ರಹದಿಂದ ಸ್ವರಾಜ್ಯ ಬರದು. ಅದನ್ನು ರಸ್ಕಿನ್ ತಿಳಿಸಿದ್ದಾನೆ. ಪಶ್ಚಿಮ ನಾಗರಿಕತೆ ನೂರೈವತ್ತು ವರ್ಷದ್ದು ಅಷ್ಟೆ. ಆದರೆ ಅದು ಯೂರೋಪನ್ನು ದುರಂತಕ್ಕೆ ದೂಡಿದೆ. ಯೂರೋಪಿನ ವಿಧಿ ಭಾರತಕ್ಕೆ ಬಾರದಿರಲಿ. ಫ್ಯಾಕ್ಟರಿಗಳ ಮಾಸ್ ಪ್ರೊಡಕ್ಷನ್ ಕಾರಣದಿಂದ ಯೂರೋಪಿನ ಜನ ತಮ್ಮ ಹೊಸ ರಾಜ್ಯಗಳನ್ನು ಮಾಂಸದ ತುಂಡು ಕಂಡ ಕಾಗೆಯ ಹಾಗೆ ಕಾಣುತ್ತಾರೆ. ಹಿಂಸೆಯಿಂದಾಗಲೀ ಕೈಗಾರಿಕೀಕರಣದಿಂದಾಗಲೀ ನಿಜ ಸ್ವರಾಜ್ಯ ದೊರೆಯದು. ಸತ್ಯವೆಂಬ ಸ್ಪರ್ಶಮಣಿಯ ಮೂಲಕ ಒಂದೊಮ್ಮೆ ಬಂಗಾರದ ನಾಡಾಗಿದ್ದ ಭಾರತದಲ್ಲಿರುವ ಈಗಿನ ಭ್ರಷ್ಟಜನ ಬದಲಾಗಿ ಮತ್ತೆ ಆ ಯುಗ ಮರಳೀತು. ಪ್ರತಿಯೊಬ್ಬ ಭಾರತೀಯನೂ ಸತ್ಯಕ್ಕೆ ಬದ್ಧನಾದರೆ ಸ್ವರಾಜ್ಯ ತಾನೇ ತಾನಾಗಿ ಬಂದೀತು ಎಂದು ಗಾಂಧಿಯವರು ತಮ್ಮ ಗುಜರಾತೀ ಅನುವಾದದ ಸಮಾರೋಪದಲ್ಲಿ ತಿಳಿಸುತ್ತಾರೆ.

ವರ್ಗ ಸಂಘರ್ಷವನ್ನು ಮೀರುವ ಆಧ್ಯಾತ್ಮಿಕ, ಅಹಿಂಸಾತ್ಮಕ ಕ್ರಾಂತಿಯನ್ನು ರಸ್ಕಿನ್ ಮತ್ತು ಗಾಂಧಿ ಇಬ್ಬರೂ ಪ್ರತಿಪಾದಿಸಿದರು. ರಸ್ಕಿನ್-ಕೈಗಾರಿಕಾಪೂರ್ವ ಯುಗದ ಕನಸು ಮತ್ತು ಭವಿಷ್ಯದ ಜಗತ್ತಿನ ನಡುವೆ ಸಂಚರಿಸುವವನಾದರೆ ಗಾಂಧಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮೆಶಿನ್, ರೈಲು ರಸ್ತೆ, ಲಾಯರು, ಡಾಕ್ಟರು, ಹಾಸ್ಪಿಟಲುಗಳನ್ನು ನಿಷೇಧಿಸಬೇಕು ಎನ್ನುತ್ತಾರೆ. ಗ್ರಾಮಬದುಕಿಗೆ ಮರಳುವುದು ಗಾಂಧಿಯ ವಾದದ ಸಾರಾಂಶ. ಲಕ್ಷಗಟ್ಟಲೆ ಬಡವರು ಇರುವ ದೇಶವಾಗಿರಬೇಕು ಭಾರತ ಅನ್ನುವುದು ಗಾಂಧಿಯ ಮಾತು. ಬದಕಿನ ಎಲ್ಲ ಚೆಲುವು ಎಲ್ಲರಿಗೂ ಸಿಗಬೇಕೆನ್ನುವ ರಸ್ಕಿನ್ ಧೋರಣೆ ಗಾಂಧಿಯಲ್ಲಿ ಕಾಣುವುದಿಲ್ಲ, ಸಾಂಸ್ಥಿಕವಾದ ರಾಜನಿಕವಾದ ಸಂಸ್ಥೆಗಳ ಬದಲಾಗಿ ನೈತಿಕ ಸಾಮಾನ್ಯ ಜ್ಞಾನ ಗೈಡಿಂಗ್ ಪ್ರಿನ್ಸಿಪಲ್ ಆಗಿರಬೇಕು ಅನ್ನುವುದು ಗಾಂಧಿಯವರ ಪ್ರತಿಪಾದನೆ ಎಂದು ಹಲವು ವಿದ್ವಾಂಸರು ಗುರುತಿಸಿದ್ದಾರೆ.

ಗಾಂಧಿ ಕೊನೆಯ ಮನುಷ್ಯನ ಜೊತೆ ಗುರುತಿಸಿಕೊಂಡದ್ದು ಗಮನಾರ್ಹ, ಅದು ರಸ್ಕಿನ್‌ಗೆ ಆಗಲಿಲ್ಲ. ಅಸ್ಪೃಶ್ಯ, ಹಸಿದ ಹಳ್ಳಿಗ, ಹಿಂಸೆಯ ತುತ್ತಾದ ಮನುಷ್ಯನ ಹಾಗೆ ತಾನೂ ಎಂದರು ಗಾಂಧಿ. ಕೊನೆಯ ಮನುಷ್ಯನೊಡನೆ ಗಾಂಧಿ ತಮ್ಮನ್ನು ಗುರುತಿಸಿಕೊಂಡರಲ್ಲ ಅದು ರಸ್ಕಿನ್‌ನ ಕೇವಲ ವಿಚಾರಕ್ಕಿಂತ ಗಹನ. ರಸ್ಕಿನ್ ಯಾವುದನ್ನ ತನ್ನ ಓದುಗರಲ್ಲಿ ಪ್ರಚೋದಿಸಬೇಕೆಂದಿದ್ದನೋ ಅದು ಗಾಂಧಿಯಲ್ಲಿ ನಿಜವಾಯಿತು. ಅನಿಯಂತ್ರಿತ ಲೋಭವು ಮರಣ ಪ್ರವೃತ್ತಿಗೆ, ಅರಾಜಕತೆಯ ಪ್ರವೃತ್ತಿಗೆ ದಾರಿಂಮಾಡುತ್ತವೆ, ಮನುಷ್ಯನನ್ನು ವಸ್ತುವೆಂಬಂತೆ ನೋಡುತ್ತವೆ, ಸಾಮಾಜಿಕವಾಗಿ ಏಕಾಂಗಿತನ ಮತ್ತು ಬಂಜೆತನವನ್ನು ಹುಟ್ಟಿಸುತ್ತವೆ ಎಂಬುದು ರಸ್ಕಿನ್ ಮತ್ತು ಗಾಂಧಿ ಇಬ್ಬರೂ ಒಪ್ಪುತ್ತಾರೆ.

ಕಾರ್ಲ್ ಪೋಲಾನ್ಯಿ ೧೯೪೦ರಲ್ಲಿ ಹೇಳಿದ ಮಾತು ಇತು: ಭಾರತದ ಜನ ಹತ್ತೊಂಬತ್ತನೆಯ ಶತಮಾನದ ಎರಡನೆಯ ಅರ್ಧಭಾಗದಲ್ಲಿ ಹಸಿವಿನಿಂದ ಸಾಯಲಿಲ್ಲ, ಲಂಕಾಶೈರ್‌ನ ಶೋಷಣೆಯಿಂದ ಸಾಯಲಿಲ್ಲ, ನಾಶವಾದದ್ದು ಯಾಕೆಂದರೆ ಭಾರತದ ಗ್ರಾಮ ಸಮಾಜದ ವಿನಾಶ ನಡೆದದ್ದರಿಂದ. ಮೊದಲ ಸ್ವಾತಂತ್ರ್ಯ ಯುದ್ಧದ ನಂತರದ ಎರಡು ಮೂರು ದೊಡ್ಡ ಬರಗಾಲಗಳು ಭಾರತವನ್ನ ನಾಶಮಾಡಿದವು. ಅ ಬರಗಾಲಗಳು ಪ್ರಕೃತಿವಿಕೋಪದಿಂದಲ್ಲ, ಶೋಷಣೆಯಿಂದಲ್ಲ, ಹೊಸ ಮಾರುಕಟ್ಟೆ ವ್ಯವಸ್ಥೆ ಹಳೆಯ ಹಳ್ಳಿಯನ್ನು ನಾಶಮಾಡಿತು. ಮಾರುಕಟ್ಟೆಯ ಆಳ್ವಿಕೆಯಲ್ಲಿ ಜನ ಹಸಿವಿನಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇರಲಿಲ್ಲ, ಅದು ಮಾರುಕಟ್ಟೆಯ ಆಟದ ನಿಯಮ ಅನ್ನುತ್ತಾನೆ ಪೊಲ್ಯಾನಿ.

ಜಗತ್ತಿನಾದ್ಯಂತ ನಡೆದ ಆರ್ಥಿಕ ಪ್ರಗತಿ ಹೊಸ ಸಂಪತ್ತನ್ನು ಸೃಷ್ಟಿಮಾಡಿದೆ. ಆನಂತರದಲ್ಲಿ ಹಳೆಯ ಆರ್ಥಿಕ ತತ್ವಗಳು ಹೊಸ ಉಡುಪಿನಲ್ಲಿ ಕಂಡಿದೆ. ನವ ಉದಾರವಾದವು ಸಂಪತ್ತನ್ನು ತರುತ್ತೇನೆ ಅನ್ನುತ್ತದೆ, ಬಹುಸಂಖ್ಯಾತರಿಗೆ ಮಾತ್ರವಲ್ಲ, ಸಮಾಧಾನದಿಂದಿದ್ದರೆ ಇಡೀ ಜಗತ್ತಿಗೇ ಅದರಿಂದ ಲಾಭ ಅನ್ನುತ್ತದೆ. ಶ್ರಮ ಮತ್ತು ಭೂಮಿಯ ಸರಕೀಕರಣ (ಕಮಾಡಿಫಿಕೇಶನ್) ಇದೆಯಲ್ಲ ಅದು ನವ ಉದಾರವಾದದ ಚಾಲಕ ಶಕ್ತಿ. ಈಗಿನ ಅಂತಾರಾಷ್ಟ್ರೀಯ ಆರ್ಥಿಕತೆಯಲ್ಲಿ ದುಡಿಮೆಗಾರ ಬಳಸಿ ಬೀಸಿ ಎಸೆಯುವ ಊಟದೆಲೆಯಂತೆ ಆಗಿದ್ದಾನೆ. ದುಡಿಮೆಗಾರ ವರ್ಗ ಈಗ ಗಡಿಗಳನ್ನು ದೇಶಗಳನ್ನು ದಾಟಿ ಅಲೆಯುವ ಅಲೆಮಾರಿಗಳಾಗಿದ್ದಾರೆ. ಗ್ಯಾಂಗುಗಳು, ಕ್ರಿಮಿನಲ್ ಕಾರ್ಟಲ್‌ಗಳು, ಮಾದಕವಸ್ತು ಸಾಗಣಿಕೆ, ಮಿನಿ ಮಿಲಿಟರಿಗಳು, ಮರಿ ಬಾಸ್‌ಗಳು, ಎನ್.ಜಿ.ಒಗಳು, ಸೆಕ್ಯುಲರ್

'ಅಮೆರಿಕನ್ ಗೆಳೆಯರಿಗೆ' ಎಂಬ ಬರಹದಲ್ಲಿ ಗಾಂಧಿಯವರು 'ಥೋರೋನಲ್ಲಿ ನೀವು ನನಗೊಬ್ಬ ಗುರುವನ್ನು ನೀಡಿದ್ದೀರಿ, ನಾನು ದಕ್ಷಿಣ ಆಫ್ರಿಕದಲ್ಲಿ ಮಾಡುತಿದ್ದ ಕೆಲಸಕ್ಕೆ ಆತ ತನ್ನ 'ಡ್ಯೂಟಿ ಆಫ್ ಸಿವಿಲ್ ಡಿಸ್‌ಒಬಿಡಿಯನ್ಸ್' ಲೇಖನದಲ್ಲಿ ವೈಜ್ಞಾನಿಕ ಸಮರ್ಥನೆಯನ್ನು ನೀಡಿದ್ದಾನೆ' ಎಂದಿದ್ದಾರೆ. 'ಆ ಪ್ರಬಂಧದಲ್ಲಿ ತಮ್ಮ ರಾಜಕೀಯ ತತ್ವದ ಸಾರವೇ ಇದೆ, ಭಾರತವು ಬ್ರಿಟಿಶರ ವಿರುದ್ಧ ನಡೆಸುತ್ತಿರುವ ಸೆಣಸಾಟವನ್ನು ಮಾತ್ರವಲ್ಲ, ನಾಗರಿಕರು ಮತ್ತು ಸರ್ಕಾರದ ಸಂಬಂಧ ಹೇಗಿರಬೇಕು ಅನ್ನುವ ನನ್ನ ದೃಷ್ಟಿಯನ್ನೂ ರೂಪಿಸಿದೆ,' ಎನ್ನುತ್ತಾರೆ.

ಕಲ್ಟ್‌ಗಳು, ಧಾರ್ಮಿಕ ಪಂಥಗಳು ಈಗ ಉಬ್ಬರಿಸುತ್ತವೆ. ಇವು ಪರ್ಯಾಯ ಸಾಮಾಜಿಕ ರೂಪಗಳು; ರಾಜ್ಯಾಧಿಕಾರ ಮತ್ತು ರಾಜಕೀಯ ಪಕ್ಷಗಳು ಖಾಲಿಮಾಡಿರುವ ತೆರಪುಗಳನ್ನು ತುಂಬಲು ಸಿದ್ಧವಾಗಿವೆ. ಸಾಮಾಜಿಕ ಬಂಧನ ಮತ್ತು ಸಾಮೂಹಿಕ ಪ್ರಯತ್ನಗಳ ಕೇಂದ್ರವಾಗಿರುವ ಸಾಂಸ್ಥಿಕ ರೂಪಗಳನ್ನು ನಿರಂತರವಾಗಿ ನಾಶಮಾಡಲಾಗುತ್ತಿದೆ. ಮ್ಯಾಂಚೆಸ್ಟರ್ ಸ್ಕೂಲಿಗೆ ರಸ್ಕಿನ್ ಹಾಕಿದಂಥ ಸವಾಲನ್ನು ಹಾಕುವ ಕಾಲ ಮತ್ತೆ ಬಂದಿದೆ ಅನ್ನಿಸುತ್ತದೆ. ಅದಕ್ಕಿಂತ ಮಿಗಿಲಾಗಿ ವ್ಯಕ್ತಿಯ ಒಳಿತು ಇಡೀ ಸಮುದಾಯದ ಒಳಿತನಲ್ಲಿದೆ ಅನ್ನುವುದು ಅತಿ ಬಡವನ ಭವಿಷ್ಯದಲ್ಲೇ ಅತಿ ಶ್ರೀಮಂತನ ಭವಿಷ್ಯ ಅನ್ನುವುದನ್ನು ಗ್ರಹಿಸಿ ಎಂಬುದು ಗಾಂಧಿ ನಮಗೊಡ್ಡುವ ಇನ್ನೂ ದೊಡ್ಡ ಸವಾಲು.

೬

'ಅಮೆರಿಕನ್ ಗೆಳೆಯರಿಗೆ' ಎಂಬ ಬರಹದಲ್ಲಿ ಗಾಂಧಿಯವರು 'ಥೋರೋನಲ್ಲಿ ನೀವು ನನಗೊಬ್ಬ ಗುರುವನ್ನು ನೀಡಿದ್ದೀರಿ, ನಾನು ದಕ್ಷಿಣ ಆಫ್ರಿಕದಲ್ಲಿ ಮಾಡುತಿದ್ದ ಕೆಲಸಕ್ಕೆ ಆತ ತನ್ನ 'ಡ್ಯೂಟಿ ಆಫ್ ಸಿವಿಲ್ ಡಿಸ್‌ಒಬಿಡಿಯನ್ಸ್' ಲೇಖನದಲ್ಲಿ ವೈಜ್ಞಾನಿಕ ಸಮರ್ಥನೆಯನ್ನು ನೀಡಿದ್ದಾನೆ' ಎಂದಿದ್ದಾರೆ. 'ಆ ಪ್ರಬಂಧದಲ್ಲಿ ತಮ್ಮ ರಾಜಕೀಯ ತತ್ವದ ಸಾರವೇ ಇದೆ, ಭಾರತವು ಬ್ರಿಟಿಶರ ವಿರುದ್ಧ ನಡೆಸುತ್ತಿರುವ ಸೆಣಸಾಟವನ್ನು ಮಾತ್ರವಲ್ಲ, ನಾಗರಿಕರು ಮತ್ತು ಸರ್ಕಾರದ ಸಂಬಂಧ ಹೇಗಿರಬೇಕು ಅನ್ನುವ ನನ್ನ ದೃಷ್ಟಿಯನ್ನೂ ರೂಪಿಸಿದೆ,' ಎನ್ನುತ್ತಾರೆ.

ಹೆನ್ರಿ ಡೇವಿಡ್ ಥೋರೋ ಅಮೆರಿಕದ ಪ್ರಬಂಧಕಾರ, ಕವಿ, ತತ್ವಜ್ಞಾನಿ, ಗುಲಾಮಗಿರಿಯ ವಿರೋಧಿ, ನಿಸರ್ಗ ಪ್ರೇಮಿ, ಪ್ರಗತಿ ಎಂಬ ಕಲ್ಪನೆಯ ವಿಮರ್ಶಕ, ಚರಿತ್ರೆಕಾರ ಮತ್ತು ಅನುಭಾವಿ. ಆತನ ವಾಲ್ಡೆನ್ (೧೮೫೪) ಪುಸ್ತಕ ಬಹಳ ಪ್ರಸಿದ್ಧವಾಗಿದೆ; ವಾಲ್ಡನ್ ಸರೋವರದ ಪಕ್ಕದ ಕಾಡಿನಲ್ಲಿ ಪುಟ್ಟದೊಂದು ಕುಟೀರವನ್ನು ಕಟ್ಟಿಕೊಂಡು ಎರಡು ವರ್ಷ, ಎರಡು ತಿಂಗಳು, ಎರಡು ದಿನ ಬದುಕಿದ; ನಿಸರ್ಗ ಸಹಜವಾಗಿ ಸರಳ ಬದುಕನ್ನು ನಡೆಸುವುದನ್ನು ಕುರಿತು ಆತ ನಡೆಸಿದ ಪ್ರಯೋಗದ ವಿವರಗಳು ಆ ಕೃತಿಯಲ್ಲಿವೆ. ವಾಲ್ಡೆನ್ ಕನ್ನಡಕ್ಕೂ ಅನುವಾದಗೊಂಡಿದೆ. ಆ ಪುಸ್ತಕ ಗಾಂಧಿಯವರನ್ನೂ ಪ್ರಭಾವಿಸಿತ್ತು. ಜೊತೆಗೆ ಅವನ ಇನ್ನೊಂದು ಪ್ರಬಂಧ ನಾಗರಿಕ ಸಮಾಜಕ್ಕೆ ಪ್ರತಿರೋಧ (ರೆಸಿಸ್ಟೆನ್ಸ್ ಟು ಸಿವಿಲ್ ಗೌರ್ನಮೆಂಟ್) ಅಥವಾ ಸತ್ಯಾಗ್ರಹ (ಸಿವಿಲ್ ಡಿಸ್‌ಒಬಿಡಿಯೆನ್ಸ್) ಗಾಂಧಿಯವರ ಚಿಂತನೆಯನ್ನು ರೂಪಿಸಿದ ಇನ್ನೊಂದು ಬರಹ.

ಮ್ಯಸಚುಸೆಟ್ಸ್‌ನ ಕಾನ್‌ಕಾರ್ಡ್‌ನಲಿದ್ದ ಪೆನ್ಸಿಲ್ ತಯಾರಕ ಜಾನ್ ಥೋರೋ ಮತ್ತು ಸಿಂಥಿಯ ಡನ್‌ಬಾರ್ ಇವರ ಮಗ ಡೇವಿಡ್ ಥೋರೋ. ಥೋರೋನ ತಾಯಿಯ ತಂದೆ ೧೭೬೬ರಲ್ಲಿ ನಡೆದ ವಿದ್ಯಾರ್ಥಿ ಚಳವಳಿಯ ನಾಯಕನಾಗಿದ್ದ. ಹಾರ್ವರ್ಡ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ಥೋರೋ ಅಲಂಕಾರಶಾಸ್ತ್ರ, ಪ್ರಾಚೀನ ಸಾಹಿತ್ಯ, ತತ್ವಶಾಸ್ತ್ರ, ಗಣಿತ ಮತ್ತು ವಿಜ್ಞಾನಗಳನ್ನು ಓದಿದ. ಎಮರ್ಸನ್ ಮತ್ತು ಇತರ ಅತೀಂದ್ರಿಯವಾದಿಗಳ ಪ್ರಭಾವಕ್ಕೆ ಒಳಗಾಗಿದ್ದ ಥೋರೋ ಭಾರತದ ಆಧ್ಯಾತ್ಮ ವಿದ್ಯೆಯ ಅಭಿಮಾನಿಯೂ ಆಗಿದ್ದ.

ಜುಲೈ ೧೮೪೬ರಲ್ಲಿ ಆತ ಚುನಾವಣಾ ತೆರಿಗೆಯ ಹಣವನ್ನು ಕೊಡಲು ನಿರಾಕರಿಸಿದ. ಸರ್ಕಾರವು ನಡೆಸುತಿದ್ದ ಮೆಕ್ಸಿಕನ್ ಅಮೆರಿಕನ್ ಯುದ್ಧ ಹಾಗೂ ಸರ್ಕಾರದ ಬೆಂಬಲದಿಂದ ನಡೆಯುತಿದ್ದ ಗುಲಾಮಗಿರಿಗಳನ್ನು ವಿರೋಧಿಸುತ್ತೇನೆ, ಹಾಗಾಗಿ ಸರ್ಕಾರಕ್ಕೆ ತೆರಿಗೆ ಕೊಡುವುದಿಲ್ಲವೆಂದು ಹೇಳಿ ಆ ಕಾರಣಕ್ಕೆ ಜೈಲಿಗೂ ಹೋದ. ತನ್ನ ಅನುಭವ, ಚಿಂತನೆಗಳನ್ನು ಆಧಾರವಾಗಿಟ್ಟುಕೊಂಡು ೧೮೪೬ರಲ್ಲಿ ಆತ 'ಸರ್ಕಾರಕ್ಕೆ ಸಂಬಂಧಿಸಿದಂತೆ ವ್ಯಕ್ತಿಗೆ ಇರುವ ಹಕ್ಕು ಮತ್ತು ಕರ್ತವ್ಯಗಳು' ಎಂಬ ಸರಣಿ ಉಪನ್ಯಾಸ ನೀಡಿದ. ಮುಂದೆ ಇದೇ ಉಪನ್ಯಾಸಸರಣಿಯು ರೆಸಿಸ್ಟೆನ್ಸ್ ಟು ಸಿವಿಲ್ ಗೌರ್ನಮೆಂಟ್ ಅಥವಾ ಸಿವಿಲ್ ಡಿಸ್‌ಒಬಿಡಿಯೆನ್ಸ್ ಎಂದು ಪ್ರಸಿದ್ಧವಾಯಿತು. ಗಾಂಧಿಯವರು ಥೋರನ ಕಲ್ಪನೆಯನ್ನು ಸತ್ಯಾಗ್ರಹವೆಂದು ಕರೆದು ತಮ್ಮ ರೀತಿಯಲ್ಲಿ ತಮ್ಮ ಪರಿಸರದಲ್ಲಿ ಜಾರಿಗೆ ತಂದರು.

ಸರ್ಕಾರಗಳು ಸಹಾಯ ಮಾಡುವುದಕ್ಕಿಂತ ತೊಂದರೆ ಕೊಡುವುದೇ ಹೆಚ್ಚು; ಸರ್ಕಾರಗಳನ್ನು ಸಮರ್ಥಿಸಲಾಗದು; ಪ್ರಜಾಪ್ರಭುತ್ವವು ಸರ್ಕಾರವನ್ನು ಉತ್ತಮಗೊಳಿಸಲಾರದು; ಸಂಖ್ಯಾಬಲ ಇದ್ದ ಮಾತ್ರಕ್ಕೆ ವಿವೇಕ ಮತ್ತು ನ್ಯಾಯ ಇರುತ್ತವೆಂದು ಹೇಳಲಾಗದು; ವ್ಯಕ್ತಿಯೊಬ್ಬನ ಅಂತಃಸಾಕ್ಷಿಯ ತೀರ್ಮಾನ ರಾಜಕೀಯ ಸಂಸ್ಥೆ ಅಥವ ಬಹುಸಂಖ್ಯಾತರ ಅಭಿಪ್ರಾಯಗಳಿಗಿಂತ ಕೀಳಾದುದು ಎಂದು ಹೇಳಲು ಸಾಧ್ಯವಿಲ್ಲ; ಸರ್ಕಾರವು ಬಹಳ ಮುಖ್ಯವಾದ ಕಾರ್ಯಗಳನ್ನು ನೆರವೇರಿಸುತ್ತದೆ, ಸ್ವಲ್ಪ ಮಾತ್ರ ಭ್ರಷ್ಟವಾಗಿದೆ ಎಂದು ಹೇಳಲಾಗದು; ಭ್ರಷ್ಟತೆ ಮತ್ತು ಅನ್ಯಾಯದ ಪ್ರಮುಖ ನೆಲೆಯೇ ಸರ್ಕಾರ; ಹಾಗಾಗಿ ಪ್ರಾಮಾಣಿಕರು ಸರ್ಕಾರದ ವಿರುದ್ಧ ದಂಗೆಯೇಳಬೇಕು ಎನ್ನುತ್ತಾನೆ ಥೋರೋ. ಕ್ರಾಂತಿಯ ಕಾರಣದಿಂದ ಜನ ಕಷ್ಟಪಡುತ್ತಾರೆ, ಆರ್ಥಿಕ ಹಾನಿಯಾಗುತ್ತದೆ ಎನ್ನುವ ವಾದದಲ್ಲಿ ಹುರುಳಿಲ್ಲ; ಸರ್ಕಾರವು ಅನ್ಯಾಯವನ್ನೇ ಮಾಡುತ್ತ ಗುಲಾಮಗಿರಿಯನ್ನು ಪೋಷಿಸುತ್ತಿರುವಾಗ ಜನಕ್ಕೆ ಒಂದಿಷ್ಟು ಕಷ್ಟವಾದರೂ, ಆರ್ಥಿಕ ನಷ್ಟವಾದರೂ ವಿರೋಧ ತೋರಬೇಕಾದದ್ದು ನೈತಿ ಕರ್ತವ್ಯ ಎನ್ನುತ್ತಾನೆ. ಮತದಾನದಲ್ಲಿ ಭಾಗವಹಿಸಿ ನ್ಯಾಯಕ್ಕೆ ಮತನೀಡುತ್ತೇವೆ ಅನ್ನುವುದು ಅರ್ಥವಿಲ್ಲದ ಮಾತು; ಅದು ನ್ಯಾಯಕ್ಕಾಗಿ ಬಯಕೆ ಇರುವುದನ್ನು ತೋರುತ್ತದೆಯೇ ಹೊರತು ನಾವು ನಿಜವಾಗಿ 'ನ್ಯಾಯವಂತರು' ಎಂಬುದನ್ನಲ್ಲ; ಅನ್ಯಾಯವನ್ನು ಮಾಡದಿರುವುದು, ಅನ್ಯಾಯವನ್ನು ಸಮರ್ಥನೆ ಮಾಡದಿರುವುದು ಮತದಾನಕ್ಕಿಂತ ಮುಖ್ಯ ಎಂದು ಥೋರೋ ಪ್ರತಿಪಾದಿಸಿದ. ಯಾವುದೇ ಕಾನೂನು ನ್ಯಾಯವಾದದ್ದು ಅಲ್ಲದಿದ್ದರೆ ಆ ಕಾನೂನನ್ನು ಮುರಿಯಲು ಹಿಂಜರಿಯಬೇಕಾಗಿಲ್ಲ. ಅಮೆರಿಕದ ಸಂಯುಕ್ತ ಸಂಸ್ಥಾನದ ಸಂವಿಧಾನವೇ ಗುಲಾಮಗಿರಿಯನ್ನು ಸಮರ್ಥಿಸಿದರೆ ಅದನ್ನೂ ವಿರೋಧಿಸಬೇಕು, ಸರ್ಕಾರಕ್ಕೆ ಬೆಂಬಲವಿಲ್ಲ ಎಂದು ಸಾರುವುದಕ್ಕಾಗಿ ತೆರಿಗೆ ನೀಡಲು ನಿರಾಕರಿಸಬೇಕು ಎಂದು ಕರೆನೀಡಿದ. ಗುಲಾಮಗಿರಿಯನ್ನು ಸಮರ್ಥಿಸುವ ಸರ್ಕಾರ ಇರುವಲ್ಲಿ ಸೆರೆಮನೆಯೊಂದೇ ನ್ಯಾಯವಂತರ ನಿಜ ನಿವಾಸವಾಗಿರುತ್ತದೆ ಎಂದು ಘೋಷಿಸಿದ. ಕರ ನಿರಾಕರಣೆಯು ಶಾಂತಿಯುತ ಕ್ರಾಂತಿಯ ದಾರಿ ಎಂದು ಹೇಳಿದ. ಎಲ್ಲ ಸರ್ಕಾರಗಳೂ ಮನುಷ್ಯ ಸೃಷ್ಟಿಯೇ ಹೊರತು ದೈವ ಸೃಷ್ಟಿಯಲ್ಲ. ರಾಜಪ್ರಭುತ್ವದಿಂದ ಸೀಮಿತ ಪ್ರಭುತ್ವ, ಅಲ್ಲಿಂದ ಪ್ರಜಾಪ್ರಭುತ್ವದವರೆಗೆ ಸಾಗಿ ಬಂದಿದ್ದೇವೆ. ವ್ಯಕ್ತಿಯ ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಗೌರವಿಸುವ ಸರ್ಕಾರವನ್ನು ರೂಪಿಸುವ ಸಲುವಾಗಿ ಈಗಿರುವ ಸರ್ಕಾರವನ್ನು ವಿರೋಧಿಸಲೇಬೇಕಾಗಿದೆ ಎಂದು ಥೋರೋ ಹೇಳಿದ್ದ.

ಗಾಂಧಿಯವರು ಟ್ರಾನ್ಸ್‌ವಾಲ್‌ನಲ್ಲಿ ಏಸಿಯಾಟಿಕ್ ರಿಜಿಸ್ಟ್ರೇಷನ್ ಆಕ್ಟ್ ಅನ್ನು ವಿರೋಧಿಸುವಲ್ಲಿ ಥೋರೋನ ವಿಚಾರಗಳ ಪ್ರಭಾವ ಕಾಣುತ್ತದೆ; ಎಂಟು ವರ್ಷ ಮೀರಿದ ಎಲ್ಲ ಏಸಿಯನ್ನರೂ ತಮ್ಮ ಹೆಸರನ್ನು, ಬೆರಳಚ್ಚನ್ನು ನೋಂದಾಯಿಸಿ ಪ್ರಮಾಣ ಪತ್ರ ಪಡೆಯಬೇಕು, ತಪ್ಪಿದರೆ ದಂಡ ಮತ್ತು ಜೈಲುವಾಸ ಎಂಬ ಕಾನೂನನ್ನು ವಿರೋಧಿಸುವಲ್ಲಿ ನಾಗರಿಕ ಅಸಹಕಾರ ಚಳುವಳಿಯನ್ನು ಗಾಂಧಿ ರೂಪಿಸಿದ್ದರು. 'ಈ ಕಾಯಿದೆಯನ್ನು ವಿರೋಧಿಸುವುದು ದೈವಿಕ ಕರ್ತವ್ಯ' ಎಂದೂ ಅವರು ಭಾಷಣವೊಂದರಲ್ಲಿ ಹೇಳಿದರು. [ಇಂಡಿಯನ್ ಒಪಿನಿಯನ್, ಸೆಪ್ಟೆಂಬರ್ ೧೯೦೭) .ಅದೇ ಅವಧಿಯ ಇಂಡಿಯನ್ ಒಪಿನಿಯನ್ ಪತ್ರಿಕೆಯ ಸಂಚಿಕೆಗಳಲ್ಲಿ ರಸ್ಕಿನ್, ಥೋರೋ, ಟಾಲ್‌ಸ್ಟಾಯ್‌ರ ಪ್ರಸ್ತಾಪಗಳು ಕೂಡ ತಪ್ಪದೆ ಇರುತ್ತಿದ್ದವು. ಟ್ರಾನ್‌ವಾಲ್‌ನಲ್ಲಿ ಗಾಂಧಿ ನಡೆಸಿದ ಸತ್ಯಾಗ್ರಹವೇ ಕೇವಲ ವಕೀಲರಾಗಿದ್ದ ಅವರನ್ನು ರಾಜಕೀಯ ಮುಖಂಡರನ್ನಾಗಿ ರೂಪಿಸಿತು. ಇದಕ್ಕೆ ದೊರೆತ ಪ್ರಚೋದನೆಗಳಲ್ಲಿ ಥೋರೋನದ್ದು ಮುಖ್ಯವಾದದ್ದು ಎಂದು ಗಾಂಧಿ ಹೇಳಿದ್ದಾರೆ.

೭

ಟಾಲ್‌ಸ್ಟಾಯ್ ೨೦ನೆಯ ಶತಮಾನದ ಅನೇಕ ರಾಜಕೀಯ ಚಳವಳಿಗಳ ಮೇಲೆ ಪ್ರಭಾವ ಬೀರಿರುವ ವ್ಯಕ್ತಿ. ಬೋಲ್‌ಶೆವಿಕ್ ಕ್ರಾಂತಿಯನ್ನು ಕುರಿತು ಮಾತಾಡುತ್ತ ಟಾಲ್‌ಸ್ಟಾಯ್ ರಶಿಯದ ದುಡಿವ ಜನರ ಚಳವಳಿಯನ್ನಾಗಲೀ, ಸಮಾಜವಾದದಲ್ಲಿ ದುಡಿವ ವರ್ಗದ ಪಾತ್ರವನ್ನಾಗಲೀ, ರಶಿಯನ್ ಕ್ರಾಂತಿಯನ್ನಾಗಲೀ ಅರ್ಥಮಾಡಿಕೊಳ್ಳಲಾರ ಎಂದು ಲೆನಿನ್ ಹೇಳಿದ್ದುಂಟು. ಆದರೆ ಟಾಲ್ಸ್ ವಿಚಾರ ಭಾರತದ ರಾಜಕೀಯವನ್ನು ಪರಿಣಾಮಿಸಿದ್ದು ಕುತೂಹಲಕರ. ಗಾಂಧಿ ಟಾಲ್‌ಸ್ಟಾಯ್ ಇಬ್ಬರಿಗೂ ಧರ್ಮ ಘೋಕಸ್ಸಿನ ಸಂಗತಿಯಾಗಿತ್ತು. ಆತ ಕ್ರಿಶ್ಚಿಯನ್ ಅನ್ನುವುದು ಗಾಂಧಿಗೆ ಮುಖ್ಯವಾಗಲಿಲ್ಲ. ಪ್ರಾರ್ಥನೆಯು 'ಹಿಂದೂವನ್ನು ಉತ್ತಮ

ಟಾಲ್‌ಸ್ಟಾಯ್ ರಶಿಯದ ದುಡಿವ ಜನರ ಚಳವಳಿಯನ್ನಾಗಲೀ, ಸಮಾಜವಾದದಲ್ಲಿ ದುಡಿವ ವರ್ಗದ ಪಾತ್ರವನ್ನಾಗಲೀ, ರಶಿಯನ್ ಕ್ರಾಂತಿಯನ್ನಾಗಲೀ ಅರ್ಥಮಾಡಿಕೊಳ್ಳಲಾರ ಎಂದು ಲೆನಿನ್ ಹೇಳಿದ್ದುಂಟು. ಆದರೆ ಟಾಲ್ಸ್ ವಿಚಾರ ಭಾರತದ ರಾಜಕೀಯವನ್ನು ಪರಿಣಾಮಿಸಿದ್ದು ಕುತೂಹಲಕರ. ಗಾಂಧಿ ಟಾಲ್‌ಸ್ಟಾಯ್ ಇಬ್ಬರಿಗೂ ಧರ್ಮ ಫೋಕಸ್ಸಿನ ಸಂಗತಿಯಾಗಿತ್ತು. ಆತ ಕ್ರಿಶ್ಚಿಯನ್ ಅನ್ನುವುದು ಗಾಂಧಿಗೆ ಮುಖ್ಯವಾಗಲಿಲ್ಲ. ಪ್ರಾರ್ಥನೆಯು 'ಹಿಂದೂವನ್ನು ಉತ್ತಮ ಹಿಂದೂ, ಮುಸ್ಲಿಮನನ್ನು ಉತ್ತಮ ಮುಸ್ಲಿಮ್, ಕ್ರಿಶ್ಚಿಯನ್‌ನನ್ನು ಉತ್ತಮ ಕ್ರಿಶ್ಚಿಯನ್ ಆಗಿ ಮಾಡಬೇಕು...ಮಿಕ್ಕ ಧರ್ಮಗಳನ್ನೂ ನನ್ನ ಧರ್ಮದಂತೆಯೇ ಪ್ರೀತಿಸಿ ನನ್ನ ಹಿಂದೂತ್ವನ್ನು ವಿಸ್ತರಿಸಿಕೊಂಡಿದ್ದೇನೆ,' ಎಂದು ಅವರು ಹೇಳಿದ ಮಾತನ್ನು ಗಮನಿಸಿ.

ಹಿಂದೂ, ಮುಸ್ಲಿಮನನ್ನು ಉತ್ತಮ ಮುಸ್ಲಿಮ್, ಕ್ರಿಶ್ಚಿಯನ್‌ನನ್ನು ಉತ್ತಮ ಕ್ರಿಶ್ಚಿಯನ್ ಆಗಿ ಮಾಡಬೇಕು...ಮಿಕ್ಕ ಧರ್ಮಗಳನ್ನೂ ನನ್ನ ಧರ್ಮದಂತೆಯೇ ಪ್ರೀತಿಸಿ ನನ್ನ ಹಿಂದೂತ್ವನ್ನು ವಿಸ್ತರಿಸಿಕೊಂಡಿದ್ದೇನೆ,' ಎಂದು ಅವರು ಹೇಳಿದ ಮಾತನ್ನು ಗಮನಿಸಿ.

ಟಾಲ್‌ಟಾಯ್ ಬರೆದ 'ದೇವರ ರಾಜ್ಯವು ನಿಮ್ಮೊಳಗಿದೆ', ದಿ ಕಿಂಗ್‌ಡಮ್ ಆಫ್ ಗಾಡ್ ಈಸ್ ವಿತ್‌ಇನ್ ಯು, ಪುಸ್ತಕವು ೧೮೯೪ರಲ್ಲಿ, ಜರ್ಮನಿಯಲ್ಲಿ ಪ್ರಕಟವಾಯಿತು. ಹೊಸ ಸಮಾಜ ವ್ಯವಸ್ಥೆಗೆ ಕ್ರಿಸ್ತನ ಬೋಧನೆಗಳ ಅಕ್ಷರಶಃ ವ್ಯಾಖ್ಯಾನವೇ ಆಧಾರವಾಗಿರಬೇಕು ಅನ್ನುವುದು ಟಾಲ್‌ಸ್ಟಾಯ್‌ನ ನಿಲುವು. ಅಹಿಂಸೆ, ಅಹಿಂಸಾತ್ಮಕ ಪ್ರತಿರೋಧ ಮತ್ತು ಕ್ರಿಶ್ಚಿಯನ್ ಅರಾಜಕತಾವಾದಗಳನ್ನು ಕುರಿತ ಪ್ರಮುಖ ಪಠ್ಯವಾಗಿದೆ ಈ ಕೃತಿ. ಲ್ಯೂಕ್ ೧೭.೨೧ರ ನುಡಿಯೇ ಈ ಕೃತಿಯ ಶೀರ್ಷಿಕೆಯಾಗಿದೆ. ಒಂದು ಕೆನ್ನೆಗೆ ಪೆಟ್ಟು ಕೊಟ್ಟರೆ ಇನ್ನೊಂದು ಕೆನ್ನೆ ಒಡ್ಡು ಎಂದು ಹೇಳಿದ ಕ್ರಿಸ್ತ ಸ್ವರಕ್ಷಣೆಗಾಗಿಯೂ ಹಿಂಸೆಯನ್ನು ಒಲ್ಲದವನು, ಸೇಡನ್ನು ಧಿಕ್ಕರಿಸುವವನು; ಆದರೆ ರೋಮನ್ ಮತ್ತು ಮಧ್ಯಕಾಲೀನ ವಿದ್ವಾಂಸರು ಈ ಅರ್ಥವಂತಿಕೆಯನ್ನು ಕುಗ್ಗಿಸಿದ್ದಾರೆ ಅನ್ನುತ್ತಾನೆ ಟಾಲ್‌ಸ್ಟಾಯ್. ಯುದ್ಧದಲ್ಲಿ ತೊಡಗುವ ಸರ್ಕಾರಗಳು ಕ್ರಿಶ್ಚಿಯನ್ ತತ್ವಗಳನ್ನು ಧಿಕ್ಕರಿಸುತ್ತವೆ, ರಶಿಯನ್ ಆರ್ಥಡಾಕ್ಸ್ ಚರ್ಚ್ ಕೂಡ ದೇಶ ನಡೆಸುತಿದ್ದ ಯುದ್ಧಕ್ಕೆ ಬೆಂಬಲ ನೀಡಿದೆ, ಅದೂ ನಿರಾಕರಣೆಗೆ ಅರ್ಹ. ಕ್ರಿಸ್ತನ ಸೆರ್ಮನ್ ಆನ್ ದಿ ಮೌಂಟ್‌ಗೆ ಟಾಲ್‌ಸ್ಟಾಯ್ ಪ್ರಾಮುಖ್ಯ ನೀಡುತ್ತಾ ರಾಷ್ಟ್ರೀಯವಾದದ ಸಂಕಟಗಳಿಗೆ ಅಹಿಂಸೆಯೇ ಮದ್ದು ಎಂದು ಟಾಲ್‌ಸ್ಟಾಯ್ ಪ್ರತಿಪಾದಿಸುತ್ತಾನೆ. ಆಧುನಿಕ ಚರ್ಚ್ ಪಾಖಂಡಿ, ಚರ್ಚು ಹೇಳುವ ಕ್ರಿಶ್ಚಿಯಾನಿಟಿ ಕ್ರಿಶ್ಚಿಯಾನಿಟಿ ಅಲ್ಲ ಎಂದು ಹೇಳಿದ ಟಾಲ್‌ಸ್ಟಾಯ್ ಬಹಿಷ್ಕಾರಕ್ಕೂ ಗುರಿಯಾಗಿದ್ದ.

ಟಾಲ್‌ಸ್ಟಾಯ್‌ನ ಎ ಲೆಟರ್ ಟು ಎ ಹಿಂದೂ ಲೇಖನವನ್ನು ಗುಜರಾತೀ ಭಾಷೆಗೆ ಅನುವಾದಿಸಲು ಬಯಸಿ ಗಾಂಧಿ ಪತ್ರ ಬರೆದದ್ದು. ಅವರ ನಡುವೆ ಪತ್ರ ವ್ಯವಹಾರ. ಟಾಲ್‌ಸ್ಟಾಯ್ ಪ್ರಕಾರ ಭಾರತೀಯರು ಅಹಿಂಸಾತ್ಮಕ ವಿರೋಧದಿಂದ ಮಾತ್ರ ಬ್ರಿಟಿಶ್ ಸಾಮ್ರಾಜ್ಯಶಾಹಿಯ ಕಾಲೊನಿಯಾಗಿರುವ ಸ್ಥಿತಿಯಿಂದ ಬಿಡುಗಡೆ ಪಡೆಯಬಹುದು. ಈ ಐಡಿಯವನ್ನು ಗಾಂಧಿ ೧೦೧೮ರಿಂದ ೪೭ರವರೆಗೆ ಚಳವಳಿಯನ್ನು ರೂಪಿಸಲು ಪ್ರೇರಣೆನೀಡಿತ್ತು. ಟಾಲ್‌ಸ್ಟಾಯ್ ಪುಸ್ತಕ 'ನನ್ನನ್ನು ಮಂತ್ರಮುಗ್ಧನನ್ನಾಗಿ ಮಾಡಿತು. ಅದು ನನ್ನ ಮನಸ್ಸಿನಲ್ಲಿ ಶಾಶ್ವತವಾದ ಪರಿಣಾಮವನ್ನು ಮಾಡಿತು. ಆ ಪುಸ್ತಕದ ಸ್ವತಂತ್ರ ವಿಚಾರಶೈಲಿ, ಪ್ರೌಢ ನೀತಿ, ಸತ್ಯ ಪ್ರತಿಪಾದನೆ ಇವುಗಳ ಎದುರಿನಲ್ಲಿ,'...[ಆಗ ನಾನು ಓದುತಿದ್ದ ಇತರ ಪುಸ್ತಕಗಳು] 'ಶುಷ್ಕವಾಗಿ ತೋರಿದವು,' ಎಂದು ಗಾಂಧಿ ಹೇಳಿದ್ದಾರೆ. [ಆತ್ಮಕಥೆ, ಪುಟ ೧೪೫] 'ನಾನು ಟಾಲ್‌ಸ್ಟಾಯ್ ಅವರ ಪುಸ್ತಕಗಳ ಆಳವಾದ ವ್ಯಾಸಂಗವನ್ನೂ ಸಹ ಮಾಡಿದೆ. ಅವರ 'ಏಸುವಿನ ಬೋಧನೆಯ ಸಾರಾಂಶ,' 'ಮಾಡತಕ್ಕದ್ದೇನು' ಮತ್ತು ಇತರ ಗ್ರಂಥಗಳು ನನ್ನ ಮೇಲೆ ಆಳವಾದ ಪ್ರಭಾವವನ್ನುಂಟುಮಾಡಿದವು. ವಿಶ್ವಪ್ರೇಮದ ಅಮಿತ ಶಕ್ತಿಯ ಸಾಧ್ಯತೆ ನನಗೆ ಹೆಚ್ಚು ಹೆಚ್ಚಾಗಿ ಗೊತ್ತಾಗತೊಡಗಿತು,' ಎಂದಿದ್ದಾರೆ. [ಆತ್ಮಕಥೆ, ಪುಟ ೧೬೮]

ಗಾಂಧಿಯವರು ದಕ್ಷಿಣ ಆಫ್ರಿಕದ ಟ್ರಾನ್ಸ್‌ವಾಲ್‌ನಲ್ಲಿ ೧೯೧೦ರಲ್ಲಿ ಸ್ಥಾಪಿಸಿದ ಆಶ್ರಮವನ್ನು ಟಾಲ್‌ಸ್ಟಾಯ್ ಫಾರಮ್ ಎಂದೇ ಕರೆದರು. ಅದು ಆ ಕಾಲದ ಸತ್ಯಾಗ್ರಹ ಚಳವಳಿಯ ಕೇಂದ್ರವೇ ಆಗಿತ್ತು. ಸುಮಾರು ೨೫೦೦ ಜನ ಭಾರತೀಯ ಮೂಲದವರು ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆಗೆ ಸೇರಿದ್ದರು. ವರ್ಣಭೇದ ನೀತಿಯ ವಿರುದ್ಧ ಸತ್ಯಾಗ್ರಹ ನಡೆಯುತಿದ್ದಷ್ಟೂ ಕಾಲ ಸತ್ಯಾಗ್ರಹಿಗಳಿಗೆ ಆಶ್ರಯತಾಣವಾಗಿ ಟಾಲ್‌ಸ್ಟಾಯ್ ಫಾರಮ್ ರೂಪುಗೊಂಡಿತ್ತು. ಈ ಜಾಗಕ್ಕೆ ಟಾಲ್‌ಸ್ಟಾಯ್ ಹೆಸರಿಡಬೇಕು ಎನ್ನುವ ಸಲಹೆ ಗಾಂಧಿಯವರ ಮಿತ್ರ ಕಲ್ಲೆನ್‌ಬಾಕ್‌ನಿಂದ ಬಂದಿತ್ತು. ಸಹಕಾರ ತತ್ವವನ್ನು ಆಧರಿಸಿದ ಈ ಕಾಮನ್‌ವೆಲ್ತ್‌ನಲ್ಲಿ ವಿವಿಧ ದೇಶ, ಭಾಷೆಗಳಿಗೆ ಸೇರಿದ ಸುಮಾರು ಎಪ್ಪತ್ತು ಎಂಬತ್ತು ಜನರಿದ್ದರು; ಸರಳವಾದ ಸಾಮೂಹಿಕ ಬದುಕನ್ನು ಶಿಸ್ತುಬದ್ಧವಾಗಿ ನಡೆಸಬೇಕೆಂಬ ಆದರ್ಶ ನಾಲ್ಕು ವರ್ಷಗಳ ಕಾಲ ಅಲ್ಲಿ ನಿಜಗೊಂಡಿತ್ತು. ಗಾಂಧಿಯೂ ಒಪ್ಪಿದ್ದ ಟಾಲ್‌ಸ್ಟಾಯ್ ಆದರ್ಶಗಳನ್ನು ನಿಜಗೊಳಿಸುವ ಪ್ರಯೋಗವಾಗಿತ್ತು ಅದು. ಗಾಂಧಿಯವರು ೧೯೧೪–೧೫ರಲ್ಲಿ ಭಾರತಕ್ಕೆ ಮರಳುವ ವೇಳೆಗೆ ಟಾಲ್‌ಸ್ಟಾಯ್ ಫಾರಮ್ ಪ್ರಯೋಗ ಅಂತ್ಯಗೊಂಡಿತು.

೮

ಗಾಂಧಿಯವರ ವ್ಯಕ್ತಿತ್ವ ರೂಪುಗೊಂಡ ಬಗೆಯನ್ನು ರಾಮಚಂದ್ರ ಗುಹಾ (ಗಾಂಧಿ ಬಿಫೋರ್ ಇಂಡಿಯಾ ೨೦೧೩), ಯಾಸ್ಮಿನ್ ಖಾನ್ (ದಿ ರಾಜ್ ಅಟ್ ವಾರ್, ೨೦೧೫ ಮತ್ತು ಇತರ ಪುಸ್ತಕಗಳು) ಜೊನಾಥನ್ ಹಿಸ್ಲಾಪ್ (ದಿ ಟ್ರಾನ್ಸ್‌ನ್ಯಾಶನಲ್ ಎಮರ್ಜೆನ್ಸ್ ಆಫ್ ಅ ಪಬ್ಲಿಕ್ ಫಿಗರ್, ಲೇಖನ) ಮೊದಲಾದವರು ಚರ್ಚಿಸಿದ್ದಾರೆ. ಗಾಂಧಿಯವರ ಚಿಂತನೆಯ ಮೇಲೆ ಆಗಿರುವ ಪ್ರಭಾವಗಳನ್ನು ರಾಷ್ಟ್ರೀಯವಾದೀ ಚಿಂತಕರು ಮತ್ತು ಕೇಂಬ್ರಿಜ್ ಚಿಂತಕರಿಗಿಂತ ಭಿನ್ನವಾಗಿ ಗ್ರಹಿಸುವ ಪ್ರಯತ್ನಗಳು ನಡೆದಿವೆ. ಆ ಚಿಂತನೆಗಳನ್ನು ಸಂಕ್ಷಿಪ್ತವಾಗಿ ನೋಡಬಹುದು

ವಿಚಾರಗಳಿಗೆ ದೇಶ ಮತ್ತು ಕಾಲದ ಹಂಗು ಇರುವುದಿಲ್ಲ; ಚರಿತ್ರೆಯ ಒಂದೊಂದು ಕಾಲಘಟ್ಟದಲ್ಲಿ ನಿರ್ದಿಷ್ಟ ವಿಚಾರಗಳ ಮುಖಾಮುಖಿ ನಡೆಯುತ್ತದೆ. ಗಾಂಧಿಯವರನ್ನು ಪ್ರಭಾವಿಸಿದ ಚಿಂತನೆಗಳು ರೊಮಾಂಟಿಕ್ ಚಳವಳಿಯ ಮತ್ತು ಅತೀಂದ್ರಿಯವಾದೀ ಚಳವಳಿಯ ಪ್ರಭಾವಗಳ ಮೂಲಕ ರೂಪುಪಡೆದ ಚಿಂತನೆಗಳೇ ಆಗಿವೆ. ರೊಮಾಂಟಿಕ್ ಚಿಂತನೆಯು ಕೈಗಾರಿಕೀಕರಣವನ್ನೂ ಯಂತ್ರನಾಗರಿಕತೆಯನ್ನೂ ವಿರೋಧಿಸುವ ನಿಲುವನ್ನು ತಳೆದಿತ್ತು, ನಿಸರ್ಗದೊಡನೆ ಹೊಂದಿಬಾಳುವುದನ್ನೇ ಪ್ರತಿಪಾದಿಸುತಿತ್ತು; ರಸ್ಕಿನ್ ಆಲೋಚನೆಗಳು ರೊಮಾಂಟಿಕ್ ಚಳವಳಿಯ ಧೋರಣೆಗಳೇ ಆಗಿದ್ದವು; ಹಿಂದ್ ಸ್ವರಾಜ್ ಕೃತಿಯಲ್ಲಿ ಗಾಂಧಿಯವರು ಯಂತ್ರನಾಗರಿಕತೆಯನ್ನು ವಿರೋಧಿಸುವಾಗ ಅವರ ಚಿಂತನೆಯಲ್ಲೂ ರೊಮಾಂಟಿಕ್ ಎಳೆಗಳು ಕಾಣುತ್ತವೆ. ಅಮೆರಿಕದ ಟ್ರಾನ್ಸ್‌ಡೆಂಟಲಿಸಮ್ ಅಥವ ಅತೀಂದ್ರಿಯವಾದ, ಕೂಡ ರೊಮಾಂಟಿಕ್ ಮನೋಧರ್ಮದ ಟಿಸಿಲೇ ಆಗಿದೆ. ಎಮರ್ಸನ್, ಟಾಲ್‌ಸ್ಟಾಯ್, ಥೋರೋ ಇವರೆಲ್ಲ ರೊಮಾಂಟಿಕ್ ಮನೋಧರ್ಮದವರೇ ಆಗಿದ್ದಾರೆ.

ಹತ್ತೊಂಬತ್ತನೆಯ ಶತಮಾನದಲ್ಲಿ ಪ್ರಚಲಿತವಾಗಿದ್ದ ಚಿಂತನೆಗಳ ಎರಡು ಧೃವಗಳನ್ನು ಗಾಂಧಿ ಮತ್ತು ಕಾರ್ಲ್‌ಮಾರ್ಕ್ಸ್‌ರಲ್ಲಿ ಗುರುತಿಸುವ ವಿದ್ವಾಂಸರಿದ್ದಾರೆ. ಕಾರ್ಲ್ ಮಾರ್ಕ್ಸ್ ಕ್ರಮಬದ್ಧ ಚಿಂತನೆಗೆ ಒಲಿದವನು, ಆ ಕಾಲದ ಜರ್ಮನ್ ಫಿಲಾಸಫಿಯಿಂದ ತನ್ನ ವಿಚಾರಗಳನ್ನು ರೂಪಿಸಿಕೊಂಡವನು; ಶಂಕರಾಚಾರ್ಯ ಅಥವಾ ಇಮ್ಯಾನುಯಲ್ ಕಾಂಟ್‌ರ ಹಾಗೆ ತರ್ಕದ ಸಮರ್ಪಕತೆಯಲ್ಲಿ ನಂಬಿಕೆ ಇದ್ದವನು. ಗಾಂಧಿಯವರದ್ದು ಇನ್ನೊಂದು ಧೃವ. ಅವರು ಸಾಕ್ರಟೀಸ್ ಮತ್ತು ಬುದ್ಧ ಇವರ ಚಿಂತನೆಯ ಕ್ರಮಗಳನ್ನು ಅನುಸರಿಸುವವರು; ಕ್ರಾಂತಿ ಮತ್ತು ಹಿಂಸೆಯ ಮೂಲಕ ಜಯಸಾಧಿಸಿದರೂ ಅಡ್ಡಿಯಿಲ್ಲ ಎಂದು ಮಾರ್ಕ್ಸ್ ಹೇಳಿದರೆ ಸತ್ಯಾಗ್ರಹ, ಅಹಿಂಸೆ ಇವುಗಳನ್ನು ತಮ್ಮ ರಾಜಕೀಯದ ಪಥವಾಗಿಸಿಕೊಂಡದ್ದು ಗಾಂಧಿ ಎಂದು ವಿಶ್ವನಾಥ ಪ್ರಸಾದ್ ವರ್ಮ ಹೇಳುತ್ತಾರೆ (ದಿ ಪೊಲೆಟಿಕಲ್ ಫಿಲಾಸಫಿ ಆಫ್ ಮಹಾತ್ಮ ಗಾಂಧಿ ಅಂಡ್ ಸರ್ವೋದಯ, ೧೯೫೯). ಮನವೇಂದ್ರನಾಥ ರಾಯ್ ಅವರ ಎಡ ಪಂಥೀಯ ದೃಷ್ಟಿಗೆ ಗಾಂಧಿಯವರ ಸಾಮಾಜಿಕತೆಯು ಸಾಂಸ್ಕೃತಿಕ ಹಿಂದುಳಿದುವಿಕೆಯನ್ನು ಆಧರಿಸಿದ್ದಾಗಿ, ಮೂಢನಂಬಿಕೆಯನ್ನು ನೆಚ್ಚಿಕೊಂಡದ್ದಾಗಿ, ಸ್ಥಗಿತವಾದ ಸಮಾಜವನ್ನು ರೂಪಿಸುವುದಾಗಿ (ಇಂಡಿಯಾಸ್ ಮೆಸೇಜ್, ೧೯೫೯) ಕಾಣುತ್ತದೆ.

ಗಾಂಧಿಯವರ ಬದುಕನ್ನು ಆ ಕಾಲಘಟ್ಟದ ರಾಜಕೀಯ ಇತಿಹಾಸದೊಡನೆ ಹೋಲಿಸಿ ನೋಡುತ್ತ ಯಾಸ್ಮಿನ್ ಖಾನ್ ಮುಖ್ಯವಾದ ಒಳನೋಟವನ್ನು ನೀಡಿದ್ದಾರೆ. ಬ್ರಿಟಿಶ್ ಸಾಮ್ರಾಜ್ಯದ ಅಂಚಿನಲ್ಲಿದ್ದ ಪುಟ್ಟ ರಾಜ್ಯದ ಊರಿನಲ್ಲಿ ಬಾಲ್ಯ, ಹದಿ ಹರೆಯವನ್ನು ಕಳೆದ ಗಾಂಧಿ ಅನ್ಯ ಸಂಸ್ಕೃತಿ, ಅನ್ಯ ವಿಚಾರಗಳ ಒಡನಾಟವನ್ನು ಅರಗಿಸಿಕೊಂಡು ವಿಶಿಷ್ಟ ವ್ಯಕ್ತಿತ್ವವನ್ನು ರೂಪಿಸಿಕೊಂಡು ಇಡೀ ಜಗತ್ತಿನ ರಾಜಕೀಯ ಚರಿತ್ರೆಯ ಪ್ರಮುಖ ವ್ಯಕ್ತಿಯಾಗಿ ಬೆಳೆರು. ರಾಜತ್ವದ ಒತ್ತಡ ಮತ್ತು ನಿಷ್ಠೆಯ ಮನೋಧರ್ಮಗಳ ಹೆಣಿಗೆಯ ಗಾಂಧಿಯವರ ವ್ಯಕಿತ್ವದಲ್ಲಿತ್ತು. ಇಂಗ್ಲೆಂಡು ಮತ್ತು ದಕ್ಷಿಣ ಆಫ್ರಿಕದಂಥ ಪರ–ದೇಶೀ ನೆಲದಲ್ಲಿ ಭಾರತದ ಚಿಂತನೆಗಳನ್ನು ಹೊಸತಾಗಿ ಕಂಡರು; ಅಲ್ಲಿಂದ ಮರಳಿದ ಭಾರತದ ಸ್ವಾತಂತ್ರ್ಯದ ಚಳವಳಿಯನ್ನು ರೂಪಿಸಿದರು. ಅವರ ವ್ಯಕ್ತಿತ್ವದ ಈ ಬೆಳವಣಿಗೆಂಗೆ ಕಾರಣವಾದ ಪ್ರಭಾವಗಳನ್ನು

ತೀರ ವಿಶಾಲವಾದ ಹಿನ್ನೆಲೆಯಲ್ಲೇ ನೋಡಬೇಕು ಎನ್ನುತ್ತಾರೆ ಯಾಸ್ಮಿನ್ ಖಾನ್.

ವಿಕ್ಟೋರಿಯನ್ ಯುಗದಿಂದ ಇಪ್ಪತ್ತನೆಯ ಶತಮಾನಕ್ಕೆ ಹೊರಳುವ ಅವಧಿಯಲ್ಲಿ ಸಾಮ್ರಾಜ್ಯಶಾಹಿಯಿಂದ ರಾಷ್ಟ್ರಪ್ರಭುತ್ವಗಳತ್ತ ಒಲವು ಮೂಡಿತ್ತು. ಇದು ಆ ಕಾಲದ ಚಿಂತನೆಯ ಮುಖ್ಯ ಲಕ್ಷಣ. ಗಾಂಧಿಯವರ ಯೌವನದ ಕಾಲದಲ್ಲಿ ಯೂರೋಪಿಯನ್ ಸಾಮ್ರಾಜ್ಯಶಾಹಿಯು ವೇಗವನ್ನು ಪಡೆಯುತ್ತಿತ್ತು. ಆಧುನಿಕತೆ ಆಕ್ರಮಣಶೀಲವಾಗಿತ್ತು. ಅನಿಯಂತ್ರಿತವಾಗಿದ್ದ ಮಾರುಕಟ್ಟೆಯತ್ತ ಒಲವು ಬೆಳೆಯುತ್ತಿತ್ತು, ಇಡೀ ಜಗತ್ತಿನ ಕೇಂದ್ರವಾಗಿ ಯೂರೋಪು ರೂಪುಗೊಳುತ್ತಿತ್ತು. ವಸ್ತುಗಳನ್ನು ಜನರನ್ನು ಹೊಸ ವೇಗದಿಂದ ಲೋಕದಾತ್ಯಂತ ಸಾಗಿಸುವ ವ್ಯವಸ್ಥೆ ಏರ್ಪಟ್ಟಿತ್ತು. ಇದರಿಂದ ಲಾಭ ವೃದ್ಧಿಸುತ್ತಿತ್ತು. ಭೂಮಿಯ ಮೇಲೆ ಹಾಕುವ ಬಂಡವಾಳವನ್ನು ವ್ಯವಹಾರದಲ್ಲಿ ತೊಡಗಿಸುವುದು, ಬ್ಯಾಂಕಿನಲ್ಲಿ ಬಡ್ಡಿಗೆ ಇಡುವುದು ಇಂಥ ವ್ಯವಸ್ಥೆ ಸಾವಕಾಶವಾಗಿ ರೂಪುಗೊಳ್ಳುತ್ತು. ಬೇಟೆಗಾರರು, ಆಹಾರ ಸಂಗ್ರಾಹಕರು, ಅಲೆಮಾರಿಗಳು ನಿಧಾನವಾಗಿ ಅಂಚಿಗೆ ಸರಿಯುತ್ತ ನಾಶವಾಗುತಿದ್ದರು. ಅಧಿಕಾರಶಾಹಿ ಬೆಳೆಯುತಿತ್ತು, ರಾಷ್ಟ್ರಪ್ರಭುತ್ವಗಳ ಆಕಾಂಕ್ಷೆಗಳ ಕಾರಣದಿಂದ ಹಳೆಯ ಸಾಮಾಜ್ರಪ್ರಭುತ್ವ ರೂಪಗಳು ಕುಸಿಯುತಿದ್ದವು. ಸ್ಥಳೀಯವಾದ ಧಾರ್ಮಿಕ ಅಧಿಕಾರ ದುರ್ಬಲವಾಗುತ್ತ 'ನೈತಿಕ ಆರ್ಥಿಕತೆ' ಬಲ ಕಳೆದುಕೊಳ್ಳುತಿತ್ತು. ಅದೇ ಹೊತ್ತಿನಲ್ಲಿ ಸಾಮ್ರಾಜ್ಯಶಾಹಿಗೆ ಪ್ರತಿರೋಧ ಹುಟ್ಟುತಿತ್ತು, ರಾಷ್ಟ್ರೀಯ ಭಾವನೆ ಸುಸ್ಪಷ್ಟವಾಗಲು ಹವಣಿಸುತಿತ್ತು. ಆಧುನಿಕಪೂರ್ವ ಕಾಲದ ಸಮಾಜದ ಮೇಲೆ ಒಂದೇ ಸಮನೆ ನಡೆಯುತಿದ್ದ ಆಕ್ರಮಣದ ಬಗ್ಗೆ ಜಗತ್ತಿನಾದ್ಯಂತ ಚಿಂತಕರು ವ್ಯಾಕುಲಗೊಂಡಿದ್ದರು. ರಸ್ಕಿನ್, ಟಾಲ್ಸ್ಟಾಯ್ ಇವರೆಲ್ಲ ತೋರ್ಪಡಿಸಿದ ಆಧುನಿಕತೆಯ ವಿರೋಧ ಗಾಂಧಿಯವರನ್ನೂ ಪ್ರಭಾವಿಸಿತು. ಆಧುನಿಕತೆಯ ಆಕ್ರಮಣಶೀಲತೆ ಮತ್ತು ಅನೈತಿಕ ಅಂಶಗಳನ್ನು ಕುರಿತು ಗಾಂಧಿಯವರ ವಿರೋಧ ವ್ಯಕ್ತವಾದದ್ದು 'ಹಿಂದ್‌ಸ್ವರಾಜ್' ದಲ್ಲಿ. ಈ ಸಂಗತಿಯ ಬಗ್ಗೆ ಗಾಂಧಿ, ರಸ್ಕಿನ್, ಟಾಲ್ಸ್ಟಾಯ್‌ರ ನಿಲುವಿನಲ್ಲಿ ಸಮಾನ ಅಂಶಗಳಿವೆ.

ಗಾಂಧಿಯುವರು ಸಾಮ್ರಾಜ್ಯಶಾಹಿಯು ಗುಣಗಳನ್ನೂ ಅಂತರ್‌ವಿರೋಧಗಳನ್ನೂ ಕಂಡರು; ಸಾಮ್ರಾಜ್ಯಶಾಹಿ ವ್ಯವಸ್ಥೆಯ ದೌರ್ಬಲ್ಯಗಳಿಗೆ ಎದುರಾಗಿ ಭಾರತೀಯ ಆಧ್ಯಾತ್ಮವನ್ನು, ಗ್ರಾಮೀಣ ಬದುಕಿನ ಸ್ಥಿರತೆಯನ್ನು ಎತ್ತಿ ಹಿಡಿಯುವ ರಾಜಕೀಯ ತತ್ವವನ್ನು ರೂಪಿಸಿದರು. ಈ ವಿಷಯದಲ್ಲಿ ಗಾಂಧಿಯ ಬದುಕು ನೆಹರೂ ಬದುಕಿಗಿಂತ ಭಿನ್ನ. ಗಾಂಧಿಯವರಂತಲ್ಲದೆ ನೆಹರೂ ಅವರು ವಸಾಹತುಶಾಹೀ ಕಾರ್ಪೊರೇಟ್ ಪಟ್ಟಣ ಅಲಹಾಬಾದ್‌ನಲ್ಲಿ ಹುಟ್ಟಿ, ಕಾನೂನು ಸುಧಾರಣೆ, ಧಾರ್ಮಿಕ ಸಂಘರ್ಷ, ನೆಲದ ಒಡೆತನ, ಸ್ಥಳೀಯ ಸರ್ಕಾರವ ಇಂಥ ವಿಷಯಗಳ ಬಗ್ಗೆ ನಡೆಯುತಿದ್ದ ಚರ್ಚೆಯನ್ನು ಕೇಳಿಸಿಕೊಳ್ಳುತ್ತ ಬೆಳೆದವರು. ಗಾಂಧಿಯ ಜಗತ್ತು ಭಿನ್ನ, ಅದು ಪರಿಮಿತ ಅವಕಾಶಗಳ ಸ್ಥಳವಂದಿಗ ಬದುಕು. ಗಾಂಧಿ ಅದನ್ನು ಮೀರಿ ಅಂತಾಷ್ಟ್ರೀಯ ಪರಂಪರೆಯೊಡನೆ ಬೌದ್ಧಿಕ ಸಂಪರ್ಕ ಬೆಳೆಸಿಕೊಂಡರು. ಸ್ಥಳವಂದಿಗ ಮತ್ತು ಅಂತಾರಾಷ್ಟ್ರೀಯ ಎರಡೂ ಪರಂಪರೆಗಳ ಮಿಶ್ರಣದ ಕಾರಣದಿಂದ ಗಾಂಧಿ ಭಾರತೀಯ ರಾಷ್ಟ್ರೀಯ ಚಳವಳಿಯಲ್ಲಿ ವಿಶಿಷ್ಟ ಸ್ಥಾನ ಪಡೆಯಲು ಸಾಧ್ಯವಾಯಿತು. ಸ್ಥಳವಂದಿಗನಿಗೆ ಇರುವ ವಿವರಗಳ ತಿಳಿವು, ಅಂತಾರಾಷ್ಟ್ರೀಯ ವೀಕ್ಷಕನಿಗೆ ಇರುವ ವಿಶ್ವಾತ್ಮಕ ಒಳನೋಟ ಈ ಎರಡರ ಮಿಶ್ರಣ ಗಾಂಧಿಯವರಲ್ಲಿದೆ; ಅಂತಾರಾಷ್ಟ್ರೀಯ ಪ್ರಭಾವಗಳನ್ನು ಅರಗಿಸಿಕೊಂಡು ಸ್ಥಳೀಯ ನುಡಿಗಟ್ಟನ್ನು ಇಪ್ಪತ್ತನೆಯ ಶತಮಾನದ ಭಾಷೆಗೆ ಒಗ್ಗಿಸಿದ್ದು ಗಾಂಧಿಯವರ ಹಿರಿಮೆ.

'ಅನ್ಯ'ದೊಡನೆ ಗಾಂಧಿಯವರ ಒಡನಾಟವನ್ನು ಚರ್ಚಿಸುತ್ತ ಹಿಸ್ಲಾಪ್ ಕೆಲವು ಕುತೂಹಲಕರ ಸಂಗತಿಗಳನ್ನು ಗುರುತಿಸಿದ್ದಾರೆ. ಗಾಂಧಿಯ ಸಮಗ್ರ ಆಧ್ಯಾತ್ಮಿಕ, ತಾತ್ವಿಕ, ರಾಜಕೀಯ ಕಾರ್ಯಸೂಚಿ ಬೆಳೆದು ರೂಪುಗೊಂಡದ್ದು ದಕ್ಷಿಣ ಆಫ್ರಿಕದಲ್ಲಿ, ಅದನ್ನು ಅವರು ಜಾರಿಗೊಳಿಸಿದ್ದು ಭಾರತದಲ್ಲಿ. ಮುದ್ರಣ ಮಾಧ್ಯಮ, ಪತ್ರಿಕೆಗಳು ರಾಜಕೀಯವನ್ನು ಪ್ರಭಾವಿಸುವ ರೀತಿ ಇವೆಲ್ಲವನ್ನೂ ಗಾಂಧಿ ದಕ್ಷಿಣ ಆಫ್ರಿಕದಲ್ಲಿ ಅರಿತರು. ತಮ್ಮ ರಾಜಕೀಯ ಮತ್ತು ಬೌದ್ಧಿಕ ಯೋಜನೆಗಳು ಭಾರತ, ದಕ್ಷಿಣ ಆಫ್ರಿಕ ಮತ್ತು ಅಂತಾರಾಷ್ಟ್ರೀಯ ಗಮನ ಸೆಳೆಯುವ ಹಾಗೆ ಗಾಂಧಿಯವರು ಆಧುನಿಕ ಪತ್ರಿಕೋದ್ಯಮವನ್ನು ಬಳಸಿಕೊಂಡರು. ಹಾಗಾಗಿ ಅವರು ಭಾರತಕ್ಕೆ ಬರುವ ಮೊದಲೇ ಅಂತಾರಾಷ್ಟ್ರೀಯ ಪ್ರಕ್ರಿಯೆಯ ಭಾಗವಾಗಿ, ಗಡಿಗಳನ್ನು ಮೀರಿದ ಕ್ರಿಯಾಶೀಲನಾಗಿ, ಅಂತಾರಾಷ್ಟ್ರೀಯ ಖ್ಯಾತಿ ಪಡೆದಿದ್ದರು. ಭಾರತ ಮೂಲದ ಚಿಂತನೆಗಳೂ 'ಅನ್ಯ'ವೆಂದು ಸಾಮಾನ್ಯವಾಗಿ ಭಾವಿಸಲಾಗುವ ಪಾಶ್ಚಾತ್ಯ ಸಂಸ್ಕೃತಿಗಳ ಮೂಲಕವೇ ಗಾಂಧಿಯವರಿಗೆ ಒದಗಿ ಬಂದವು. ಆಧ್ಯಾತ್ಮಿಕ ಪ್ರಶ್ನೆಗಳನ್ನೂ ರಾಜಕೀಯ ವರ್ತನೆಯನ್ನೂ ಬೆಸೆಯುವ ಅವಕಾಶ ಗಾಂಧಿಯವರಿಗೆ ೧೮೯೦ರಲ್ಲಿ ಒದಗಿತು. ಜೊಹಾನ್ಸ್‌ಬರ್ಗ್‌ನ ತಿಯೊಸೊಫಿಸ್ಟರು, ಇಂಗ್ಲೆಂಡಿನ ಪೊಲಾಕ್ ಮತ್ತು ಜರ್ಮನಿಯ ಕಲ್ಲೆನ್‌ಬಾಕ್‌ರ ಒಡನಾಟದಿಂದ ಅವರು ಭಾರತೀಯ ಧಾರ್ಮಿಕ ಕೃತಿಗಳನ್ನು ಹೆಚ್ಚು ತೀವ್ರವಾಗಿ ಓದಲು ತೊಡಗಿದರು. ಗಮನಿಸಬೇಕಾದ ಇನ್ನೊಂದು ಪ್ರಭಾವ ಟಾಲ್ಸ್ಟಾಯ್‌ನದು. ಆತನ ಅರೆ ಅರಾಜಕತಾವಾದಿ, ಅರೆ ಕ್ರಿಶ್ಚಿಯನ್ ನೈತಿಕ ಬರವಣಿಗೆ, ಆತ ಮಂಡಿಸಿದ ಸರಳ ಬದುಕಿನ ಪ್ರತಿಪಾದನೆ, ಪ್ರಭುತ್ವದ ವಿರೋಧ ಇವೂ ಗಾಂಧಿಯನ್ನು ಪರಿಣಾಮಿಸಿದವು. ಬಹಳ ಮಟ್ಟಿಗೆ ಹಿಂದೂ ರೂಪದ ಆದರೆ ಕ್ರಿಶ್ಚಿಯನ್, ಇಸ್ಲಾಮಿಕ್, ಯಹೂದಿ ಮತ್ತು ಜೈನ ಪ್ರಭಾವಗಳಿಗೆ ಒಳಪಟ್ಟ ಸೆಕ್ಯುಲರ್ ಮತ್ತು ಥಿಯಾಸೊಫಿಸ್ಟ್‌ಗ ಅಂಶಗಳನ್ನು ಒಳಗೊಂಡ ಧಾರ್ಮಿಕ ಚಿಂತನೆಯನ್ನು ಗಾಂಧಿ ರೂಪಿಸಿಕೊಂಡರು. ಗಾಂಧಿಯವರ ಆತ್ಮಶೋಧನೆಗೆ ಪ್ರಧಾನವಾದ ಪ್ರಭಾವ ಅನ್ಯ ಸಂಸ್ಕೃತಿಯಿಂದಲೇ ದೊರೆಯಿತು ಎಂದು ಹಿಸ್ಲಾಪ್ ಹೇಳುತ್ತಾರೆ.

ಬ್ರಹ್ಮಚರ್ಯ, ಸಾಮೂಹಿಕ ಬದುಕು, ತಾತ್ವಿಕ ಚಿಂತನೆ ಇವನ್ನೆಲ್ಲ ನೋಡಿದರೆ ಗಾಂಧಿ ಲೋಕ ವಿದೂರ ಅನ್ನುವ ಭಾವ ಬರಬಹುದು. ಆದರೆ ಇಂಥ ಸಂನ್ಯಾಸ ವ್ಯಕ್ತಿತ್ವದ ಮೂಲಕ ಗಾಂಧಿಯವರ ವ್ಯಕ್ತಿತ್ವಕ್ಕೆ ವಿಶಿಷ್ಟ ಹೊಳಪು ಬಂದದ್ದು ನಿಜ. ಆ ಕಾರಣದಿಂದಲೇ ವಿಶಿಷ್ಟ ರಾಜಕೀಯ ಅಧಿಕಾರವೂ ಅವರಿಗೆ ಪ್ರಾಪ್ತವಾಯಿತು. ಎರಡು ರೂಪಕಗಳನ್ನು ಬಳಸಿಕೊಂಡು ಇದನ್ನು ಹೀಗೆ ಸಂಗ್ರಹವಾಗಿ ಹೇಳಬಹುದು. ಆಧುನಿಕತೆಯನ್ನು ವಿರೋಧಿಸುವ ಗಾಂಧಿಯವರ ಫಾರಮ್‌ನಲ್ಲಿ ಆಧುನಿಕ ದಿನಪತ್ರಿಕೆ ಇತ್ತು, ಆ ಮೂಲಕ ಅಂತಾರಾಷ್ಟ್ರೀಯ ಸಂಪರ್ಕವೂ ಪ್ರಾಪ್ತವಾಯಿತು. ತನ್ನ ದೇಹವನ್ನು ದುರ್ಬಲ ಹಿಂದೂ ದೇಹವಾಗಿ ತೋರಿಸಿಕೊಳ್ಳುವ ಮೂಲಕವೇ ಗಾಂಧಿ ಈ ಕೊನೆಯ ಮನುಷ್ಯ'ನ ಪ್ರತಿನಿಧಿಯಾಗಿ ತನ್ನ ರಾಜಕೀಯ ನಿಲುವನ್ನು ಪ್ರತಿಪಾದಿಸಿದರು. ಉಳಿದ ಎಲ್ಲ ವಸಾಹತುಶಾಹೀ ವಿರೋಧೀ ರಾಜಕೀಯ ನಾಯಕರು ಗಂಡಸುತನ, ಆಧುನಿಕತೆ, ಸೈನಿಕವೇಷಗಳಲ್ಲಿ ಕಾಣಿಸಿಕೊಂಡರೆ ಗಾಂಧಿ ಹಾಗಿಲ್ಲ ಎನ್ನುವುದೇ ಚರ್ಚಿಲ್‌ನ ಕಸಿವಿಸಿಗೆ ಕಾರಣವಾಗಿತ್ತು. ಗಾಂಧಿಯನ್ನು ಅರೆಬೆತ್ತಲೆ ಫಕೀರ ಎಂದು ಕರೆದಾಗ ಚರ್ಚಿಲ್ ತೀರ ಹತಾಶನೇ ಆಗಿದ್ದಿರಬೇಕು.

ಗಾಂಧಿಯವರ ಚಿಂತನೆಗಳ ಸಾರರೂಪದಂತಿರುವ 'ಹಿಂದ್ ಸ್ವರಾಜ್' ಕುರಿತು ಮಾತನಾಡುತ್ತ ತ್ರಿದೀಪ್ ಸುಹೃದ್ ಅವರು 'ಅದು ಮನುಷ್ಯ ಚರಿತ್ರೆಯ ವಿಶಿಷ್ಟ ಕ್ಷಣದಲ್ಲಿ ರೂಪುಗೊಂಡದ್ದು. ಆಧುನಿಕ ವಿಶ್ವದ ಆಚಿನ ಪ್ರಾಂತವನ್ನು ಇನ್ನೂ ಕಲ್ಪಿಸಿಕೊಳ್ಳಲು ಸಾಧ್ಯವಿದ್ದ ಕ್ಷಣ ಅದು. ಎರಡು ಬಗೆಯ ಬದುಕು, ಎರಡು ಬಗೆಯ ಚಿಂತನೆಗಳು ಏಕಕಾಲದಲ್ಲಿ ಲಭ್ಯವಿದ್ದ ಕಾಲ ಅದು' ಎನ್ನುತ್ತಾರೆ. ಗಾಂಧಿಯವರು ತಮ್ಮ ಕಾಲದ ಚಿಂತನೆಯ ಪ್ರಭಾವಗಳಿಗೆ ಮನಸ್ಸು ತೆರೆದುಕೊಂಡು, ಅರಗಿಸಿಕೊಂಡು ಇಡೀ ಕಾಲಮಾನದ ಪ್ರತಿನಿಧಿಯಾಗಿ ಕಾಣುತ್ತಾರೆ.

ಗ್ರಂಥಋಣ.

ಮೋ.ಕ. ಗಾಂಧಿ, **ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ,** ಕನ್ನಡ ಅನುವಾದ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ನವಜೀವನ ಪ್ರಕಾಶನ ಮಂದಿರ, ಮೂವತ್ತನೆಯ ಮುದ್ರಣ, ೨೦೧೫

Danny Wall, Tolstoy, Ruskin, Thoreu, and Gandhi: A Global Exchange of Nonviolence, https:// www.slideshare.net/

Gandhi, Ruskin's Unto this Last, a Paraphrase, translated by **Valji Govindji Desai, Navajivan Publishing House, 2007.**

Guha, Ramachandra, *Gandhi Before India,* Penguin Books 2013

Judith M. Brown and Anthony Parel, *The Cambridge Companion to Gandhi*, Cambridge University Press, 2011



(ಲೇಖಕ ಓ.ಎಲ್, ನಾಗಭೂಷಣ ಸ್ವಾಮಿ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದು,, ಕನ್ನಡ ಮತ್ತು ಇಂಗಿಷ್ ಸಾಹಿತ್ಯಗಳೆರಡರಲ್ಲೂ ಪರಿಣಿತಿ ಹೊಂದಿದ ವಿದ್ವಾಂಸರೆನಿಸಿದ್ದು, ಈ ಕ್ಷೇತ್ರಗಳ್ಲಿಹಲವು ಪುಸ್ತಕಗಳ ಕೃತಿಕಾರರಾಗಿ ಮತ್ತು ನಿಪುಣ ಅನುವಾದಕರಾಗಿ ಹೆಸರುವಾಸಿಯಾದವರಾಗಿದ್ದಾರೆ)

೩ನೇ ಪುಟದಿಂದ)

ನಂತರ ನಡೆದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಹಲವು ಶಿಬಿರಾರ್ಥಿಗಳು ತಾವು ಈ ಶಿಬಿರದಿಂದ ಪ್ರೇರಿತರಾಗಿ ತಾವು ತಮ್ಮ ಗ್ರಾಮಗಳಲ್ಲಿ ಗ್ರಾಮ ಸ್ವರಾಜ್ಯದ ಸಂದೇಶವನ್ನು ಹರಡಲು ಉತ್ಸುಕರಾಗಿರುವುದಾಗಿ ಹೇಳಿದರು. ಸಮಾರೋಪದ ನುಡಿಗಳನ್ನಾಡಿದ ರಾಷ್ಟ್ರೀಯ ಸೇವಾ ಯೋಜನೆಯ ಸಮನ್ವಯಾಧಿಕಾರಿ ಡಾ. ಬಿ. ಚಂದ್ರಶೇಖರ್ ಅವರು 'ಗ್ರಾಮ ಸ್ವರಾಜ್ಯ' ಕಟ್ಟುವುದಕ್ಕೆ ನೆರವಾಗುವುದು ಈ ಯೋಜನೆಯ ಉದ್ದೇಶಗಳಲ್ಲಿ ಒಂದಾಗಿದೆದ್ದು, ಅದನ್ನು ಅಧ್ಯಾಪಕರು ಮತ್ತು ವಿದ್ಯಾರ್ಥಿಗಳೂ ಒಟ್ಟಿಗೆ ಸೇರಿ ಯಶಸ್ವಿಗೊಳಿಸಬೇಕಾಗಿದೆ ಎಂದರು. ಸಿದ್ಧಾರ್ಥ ನಗರದ ಪ್ರ.ದ. ಕಾಲೇಜಿನ ಪ್ರಾಂಶುಪಾಲ ಪ್ರೊ. ಎಚ್.ಇ. ದಿವಾಕರ ಅವರು ಅಧ್ಯಕ್ಷತೆ ವಹಿಸಿದ್ದರು.

ಸಿದ್ಧಾರ್ಥ ನಗರ ಪ್ರ.ದ. ಕಾಲೇಜಿನ ಇಂಗ್ಲಿಷ್ ಅಧ್ಯಾಪಕರೂ ರಾ.ಸೇ.ಯೋ.ಯ ಅಧಿಕಾರಿಯೂ ಆದ ಕೆ.ಎಂ. ಪ್ರಸನ್ನಕುಮಾರ್ ಶಿಬಿರದ ಸಂಚಾಲಕರಾಗಿದ್ದರು. ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಟ್ರಸ್ಟೀಗಳಾದ ಎಂ. ರಾಜು ಹಾಗೂ ಸವಿತಾ ನಾಗಭೂಷಣ ಅವರು ವಿವಿಧ ಗೋಷ್ಠಿಗಳನ್ನು ನಿರ್ವಹಿಸಿದರು. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನೊಳಗೊಂಡು ಸುಮಾರು ೧೩೦ ಜನ ಶಿಬಿರಾರ್ಥಿಗಳು ಮೂರೂ ಗೋಷ್ಠಿಗಳ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಶಿಬಿರದ ಸಾರ್ಥಕತೆಗೆ ಕಾರಣರಾದರು. ಎಲ್ಲ ಶಿಬಿರಾರ್ಥಿಗಳಿಗೆ ಜೆ.ಸಿ. ಕುಮಾರಪ್ಪ ಅವರ 'ಶಾಶ್ವತ ಅರ್ಥಶಾಸ್ತ್ರ' ಕೃತಿಯನ್ನು ವಿತರಿಸಲಾಯಿತು.

(ವರದಿ : **ಮಂಜುಳಾ ರಾಜು**)

ಕುಪ್ಪಳ್ಳಿಯಲ್ಲಿ 'ಗಾಂಧಿಯೊಂದಿಗೆ ಸಂವಾದ': ಅಧ್ಯಯನ ಶಿಬಿರ



ಮಹಾತ್ಮ ಗಾಂಧಿಯವರ ವ್ಯಕ್ತಿತ್ವ ಮತ್ತು ವಿಚಾರಗಳು ಭಾರತರದ ಬದುಕಿನಲ್ಲಿ ಹೇಗೆ ಅವಿಭಾಜ್ಯವಾಗಿ ಬೆರೆತು ಹೋಗಿವೆ ಎಂದರೆ ಅವುಗಳ ಪ್ರಭಾವದಿಂದ ಯಾರೊಬ್ಬರೂ ತಪ್ಪಿಸಿಕೊಂಡು ಬದುಕಲು ಸಾಧ್ಯವಿಲ್ಲ ಎಂದು ಹಿರಿಯ ಸಮಾಜವಾದಿ ಹಾಗೂ ರೈತ ಮುಖಂಡ ಕಡಿದಾಳು ಶಾಮಣ್ಣ ಹೇಳಿದರು. ಅವರು ಇದೇ ೧೪ರಂದು(ಶನಿವಾರ) ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ಕುಪ್ಪಳ್ಳಿಯ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಸಹಯೋಗ ಮತ್ತು ಬೆಂಗಳೂರಿನ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಸಹಕಾರದಲ್ಲಿ ಇದೇ ೧೪ ಹಾಗೂ ೧೫ರಂದು ಆಯೋಜಿಸಿದ್ದ 'ಗಾಂಧಿಯೊಂದಿಗೆ ಸಂವಾದ' ಎಂಬ ಎರಡು ದಿನಗಳ ಅಧ್ಯಯನ ಶಿಬಿರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಈ ಸಂದರ್ಭದಲ್ಲಿ ಡಿ. ಎಸ್. ನಾಗಭೂಷಣ ಅವರ 'ಇಂದಿಗೆ ಬೇಕಾದ ಗಾಂಧಿ' ಪುಸ್ತಕವನ್ನು ಬಿಡುಗಡೆ ಮಾಡುವ ಮೂಲಕ ಅಧ್ಯಯನ ಶಿಬಿರವನ್ನು ಉದ್ಘಾಟಿಸಿದ ಅವರು, ಗಾಂಧಿ ತಮ್ಮ ಬಾಲ್ಯದಲ್ಲಿ ಸಿಗರೇಟು ಸೇದಿ ಅದನ್ನು ತಂದೆಗೆ ತಪ್ಪೊಪ್ಪಿಗೆಯ ಪತ್ರ ರೂಪದಲ್ಲಿ ಬರೆದು ಪಶ್ಚಾತ್ತಾಪ ವ್ಯಕ್ತಪಡಿಸಿದ ಘಟನೆಯಿಂದ ತಾವೂ ಪ್ರೇರಿತರಾಗಿ ತಾವೂ ಸಿಗರೇಟು ಸೇದಿ ತಪ್ಪೊಪ್ಪಿಗೆಯಾಗಿ ತಮ್ಮ ತಂದೆಗೆ ಪತ್ರ ಬರೆದು ಅವರಿಂದ ಸರಿಯಾಗಿ ಏಟು ತಿಂದ ಪ್ರಕರಣವನ್ನು ನೆನಪಿಸಿಕೊಂಡು, ನಾವು ಮಾಡಬೇಕಾದದ್ದು ಗಾಂಧಿಯ ಅನುಸರಣೆಯನ್ನೇ ಹೊರತು ಅನುಕರಣೆಯನ್ನಲ್ಲ ಎಂದು ತಮ್ಮದೇ ಲಘು ಹಾಸ್ಯ ಶೈಲಿಯಲ್ಲಿ ಸೂಚಿಸಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ತೀರ್ಥಹಳ್ಳಿಯ ಶಾಸಕರಾದ ಕಿಮ್ಮನೆ ರತ್ನಾಕರ ಅವರು, ಗಾಂಧಿ ಜಗತ್ತಿನ ಅದ್ಭುತಗಳಲ್ಲೊಂದಾಗಿದ್ದು, ಅವರ ಚಿಂತನೆಗಳು ಇಂದು ಸಣ್ಣ ಪುಟ್ಟ ರೂಪಗಳಲ್ಲಿ ಜಗತ್ತನ್ನು ಆಳುತ್ತಿರುವುದರಿಂದಾಗಿಯೇ ಹಲವು ಬಿಕ್ಕಟ್ಟುಗಳನ್ನು ಎದುರಿಸುತ್ತಿರುವ ಇಂದಿನ ಜಗತ್ತಿನಲ್ಲಿ ಒಂದು ಕನಿಷ್ಠ ಮಟ್ಟದ ಶಾಂತಿ-ನೆಮ್ಮದಿ-ಸೌಹಾರ್ದತೆಗಳು ಸಾಧ್ಯವಾಗಿವೆ ಎಂದರು.

ಇದಕ್ಕೆ ಮುನ್ನ ಲೋಹಿಯಾ ಜನ್ಮ ಶತಾಬ್ಧಿ ಪ್ರತಿಷ್ಠಾನದ ಅಧ್ಯಕ್ಷರೂ ಮತ್ತು ಈ ಅಧ್ಯಯನ ಶಿಬಿರದ ನಿರ್ದೇಶಕರೂ ಆದ ಡಿ.ಎಸ್. ನಾಗಭೂಷಣ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿ, ಇಂದು ಜಗತ್ತು ಎದುರಿಸುತ್ತಿರುವ ಎಲ್ಲ ರೀತಿಯ ಸಮಸ್ಯೆಗಳ ಪರಿಣಾಮ ಹಿಂಸೆಯೇ ಆಗಿದ್ದು, ಇದಕ್ಕೆ ಇಂದು ಕಾಣುತ್ತಿರುವ ಏಕೈಕ ಪರಿಹಾರವೆಂದರೆ ಅಹಿಂಸೆಯ ಮೀಮಾಂಸೆ ಮಂಡಿಸಿದ ಗಾಂಧಿ ಚಿಂತನೆಯೇ ಆಗಿದೆ ಎಂದರು. ಹಾಗಾಗಿ ಇಂತಹ ಗಾಂಧಿಯ ಚಿಂತನೆ ರೂಪುಗೊಳ್ಳಲು ಕಾರಣರಾದ ಸಮಕಾಲೀನ ಚಿಂತಕರೊಂದಿಗೆ ಅವರು ನಡೆಸಿದ ಸಂವಾದಗಳ ಮೇಲೆ ಬೆಳಕು ಚೆಲ್ಲುವ ಉದ್ದೇಶ ಈ ಆಧ್ಯಯನ ಶಿಬಿರದ್ದು ಎಂದರು.

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷರಾದ ಜಿ.ಬಿ. ಶಿವರಾಜು ಅವರು ಬಿಡುಗಡೆಯಾದ 'ಇಂದಿಗೆ ಬೇಕಾದ ಗಾಂಧಿ' ಪುಸ್ತಕದ ಪರಿಚಯ ಮಾಡಿಕೊಟ್ಟರು. ಪುಸ್ತಕದ ಪ್ರಕಾಶಕರೂ ಮತ್ತು ಬೆಂಗಳೂರಿನ 'ರಾಗಿ ಕಣ'ದ ಸಂಚಾಲಕರೂ ಆದ ಎಂ.ಸಿ. ನರೇಂದ್ರ ಅವರೂ ಸಮಾರಂಭದಲ್ಲಿ ಉಪಸ್ಥಿತರಿದ್ದರು.

೧೫ರ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಶಿಬಿರಾರ್ಥಿಗಳು ಸಾಮೂಹಿಕ ಚರ್ಚೆ ನಡೆಸಿ, ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಗಾಂಧಿ ಚಿಂತನೆಗಳನ್ನು ಪ್ರಸ್ತುತಗೊಳಿಸಲು ಒಂದು ರಾಜ್ಯ ಮಟ್ಟದ ವೇದಿಕೆ ಅಗತ್ಯವೆಂದು ಅಭಿಪ್ರಾಯಪಟ್ಟು 'ಕರ್ನಾಟಕ ಗಾಂಧಿ ಸ್ನೇಹ ಬಳಗ' ಎಂಬ ವೇದಿಕೆಯನ್ನು ರೂಪಿಸಿಕೊಳ್ಳಲು ನಿರ್ಧರಿಸಲಾಯಿತು. ಇದಕ್ಕಾಗಿ ಸಂಚಾಲನಾ ಸಮಿತಿಯನ್ನು ಪ್ರಕಟಿಸಲಾಯಿತು.

ಶಿಬಿರದಲ್ಲಿ ಪರಿಸರ ಸಂರಕ್ಷಣೆ ಕುರಿತ ಅಲ್ಗೋರ್ ಅವರ 'ಒಂದು ನಿಷ್ಠುರ ಸತ್ಯ' ಎಂಬ ಸಾಕ್ಷ್ಯಚಿತ್ರವನ್ನೂ, ಅಟೆನ್‌ಬರೋ ನಿರ್ದೇಶನದ ಕಥಾ ಚಿತ್ರ 'ಗಾಂಧಿ' ಯನ್ನು ಪ್ರದರ್ಶಿಸಲಾಯಿತು. ಚಿತ್ರಗಳ ಬಗ್ಗೆ ಶಿಬಿರಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಶಿಬಿರದ ವಿವಿಧ ಗೋಷ್ಠಿಗಳನ್ನು ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಟ್ರಸ್ಟೀಗಳಾದ ಎನ್. ಎಂ. ಕುಲಕರ್ಣಿ, ಎಂ. ರಾಜು ಮತ್ತು ಸವಿತಾ ನಾಗಭೂಷಣ ಅವರು ನಿರ್ವಹಿಸಿದರು. ಶಿಬಿರದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಬಂದ ಎಪ್ಪತ್ತು ಜನ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಎಲ್ಲರಿಗೂ ಗಾಂಧೀಜಿಯ ಆತ್ಮ ಚರಿತ್ರೆ, 'ನನ್ನ ಸತ್ಯಾನ್ವೇಷಣೆ' 'ಹಿಂದ್ ಸ್ವರಾಜ್' ಹಾಗೂ ಜೆ.ಸಿ. ಕುಮಾರಪ್ಪನವರ 'ಶಾಶ್ವತ ಅರ್ಥಶಾಸ್ತ್ರ' ಕೃತಿಗಳನ್ನು ವಿತರಿಸಲಾಯಿತು.

(ವರದಿ : **ಎನ್.ಎಂ. ಕುಲಕರ್ಣಿ**)

೧ನೇ ಪುಟದಿಂದ)

ಈಗ 'ಪದ್ಮಾವತಿ' ಚಿತ್ರದ ವಿವಾದವನ್ನು ಕೋಮು ವಿವಾದವನ್ನಾಗಿ ಪರಿವರ್ತಿಸುವ ಮೂಲಕ ಅತ್ಯಂತ ಕೆಳಮಟ್ಟ ಮುಟ್ಟಿದೆ ಎಂದು ಹೇಳಬೇಕು. ಮೂಗು ಕತ್ತರಿಸುವ, ಬೆರಳು, ತೋಳುಗಳನ್ನು ತುಂಡರಿಸುವ, ಶಿರಚ್ಛೇದನದ ಕರೆ ನೀಡುತ್ತಿರುವ ಈ ಪುಂಡರನ್ನು ಆ ಪಕ್ಷದಲ್ಲಿ ಯಾರೂ ನಿಯಂತ್ರಿಸುವವರೇ ಇಲ್ಲವಾಗಿದ್ದಾರೆ. ಇದಕ್ಕೆ ಬಹುಶಃ ಕಾರಣ, ಕುಸಿಯುತ್ತಿರುವ ಮೋದಿ ಸರ್ಕಾರದ ವಿಶ್ವಾಸಾರ್ಹತೆ ಪಕ್ಷಕ್ಕೆ ಗಾಬರಿ ತಂದಿದ್ದು. ಆ ಗಾಬರಿಯನ್ನು ಇಂತಹ ಜನೋನ್ಮಾದ ರಾಜಕಾರಣದ ಮೂಲಕ ಅದು ಪರಿಹರಿಸಿಕೊಳ್ಳುವ ಸನ್ನಾಹದಲ್ಲಿದ್ದಂತಿದೆ. ಆದರೆ ಜನ ಇದಕ್ಕಾಗಿ ಇವರನ್ನು ಅಧಿಕಾರಕ್ಕೆ ತರಲಿಲ್ಲ. ಅವರು ಬಯಸುವುದು ಶಾಂತಿ ಮತ್ತು ದಕ್ಷತೆಯ ಸರ್ಕಾರವನ್ನು. ಅದರಲ್ಲಿ ಮೋದಿ ಸರ್ಕಾರ ವಿಫಲವಾಗುತ್ತಿರುವಂತೆ ತೋರುತ್ತಿದೆ.

ನಿಜ, ಜನವಿನ್ನೂ ಮೋದಿಯವರಲ್ಲಿ ಪೂರ್ಣ ನಂಬಿಕೆ ಕಳೆದುಕೊಂಡಿಲ್ಲ. ಏಕೆಂದರೆ ಈ ಸರ್ಕಾರಕ್ಕೆ ಪರ್ಯಾಯ ಒದಗಿಸಬಹುದಾದ ಕಾಂಗ್ರೆಸ್ ತನ್ನ ಐತಿಹಾಸಿಕ ಸೋಲಿನಿಂದ ಯಾವ ಬುದ್ಧಿಯನ್ನೂ ಕಲಿತಂತಿಲ್ಲ. ಮೋದಿ ಜನಪ್ರಿಯತೆಯ ಅಲೆಯ ಇಳಿಗತಿಯನ್ನು ಅವರು ಬಳಸಲು ನೋಡುತ್ತಿರುವುದು ರಾಹುಲ್ ಗಾಂಧಿ ನಾಯಕತ್ವದ ವಿಶ್ವಾಸಾರ್ಹತೆಯನ್ನು ಪುನರುಜ್ಜೀವನಗೊಳಿಸಲು. ಹೀಗೆ ನಿರಂತರ ಕುಟುಂಬ ಗುಲಾಮಗಿರಿಯದ್ದೋ, ಬದಲಿಸಲಾಗದ ರಾಜಕೀಯ ಪಥದ್ದೋ ಬಲೆಗೆ ಸಿಕ್ಕಿಹಾಕಿಕೊಂಡಿರುವ ಈ ಪಕ್ಷ ಆ ಬಲೆಯಿಂದ ಈಚೆಗೆ ಬರುವ ತಂತ್ರ ಮತ್ತು ಸಂಕಲ್ಪವನ್ನು ತೋರದ ಹೊರತು ಮೋದಿ ಸರ್ಕಾರಕ್ಕೆ ಭಯವಿಲ್ಲ. ಆದುದರಿಂದ ಈಗ ಜನತೆ ಎದ್ದೇಳಬೇಕಿದೆ. ಈ ಮಧ್ಯಕಾಲೀನ ಕೊಲೆಗಡುಕ ರಾಜಕಾರಣವನ್ನು ಸಹಿಸುವುದಿಲ್ಲ ಎಂದು ಕೂಗಿ ಹೇಳಬೇಕಿದೆ.

-ಸಂಪಾದಕ

ಗಾಂಧಿಯವರುತ್ತ ನೋಟ-೪

ತಿಲಕ್ ಮತ್ತು ಗೋಖಲೆ ರಾಜಕಾರಣದ ಮಧ್ಯೆ ಕಂಡ ಗಾಂಧಿ

ಡಾ. ರಾಜಾರಾಂ ತೋಳ್ಪಾಡಿ

ಗಾಂಧಿ ದ.ಆಫ್ರಿಕಾದಲ್ಲಿನ ಭಾರತೀಯರ ಪರವಾದ ನವೀನ ಹೋರಾಟದಿಂದ ಪಕ್ವರಾಗಿ ಬ್ರಿಟಿಷ್ ಪ್ರಭುತ್ವವನ್ನು ಎದುರಿಸಲು ಭಾರತಕ್ಕೆ ಬಂದಾಗ ಹೋರಾಟದ ರಂಗದಲ್ಲಿ ಅವರಿಗೆ ಎದುರಾದದ್ದು ವಿಭಿನ್ನ ಗುರಿ ಮತ್ತು ಮಾರ್ಗಗಳ ಹೋರಾಟದ ಹಾದಿ ಹಿಡಿದಿದ್ದ ಎರಡು ಬಣಗಳ ರಾಜಕಾರಣ. ಸೌಮ್ಯವಾದಿ ಗೋಖಲೆ ಮತ್ತು ತೀವ್ರವಾದಿ ತಿಲಕರ ನೇತೃತ್ವಗಳ ಈ ಬಣ ರಾಜಕಾರಣವನ್ನು ತಮ್ಮ ದ. ಆಫ್ರಿಕಾದಲ್ಲಿನ ದೀರ್ಘ ಹೋರಾಟದ ಹಿಂದಿನ ಚಿಂತನೆ ಮತ್ತು ಅನುಭವಗಳ ಹಿನ್ನೆಲೆಯಲ್ಲಿ ಒಂದು ವಿಶಿಷ್ಟ ಅನುಸಂಧಾನದ ಮೂಲಕ ಜನತಾ ರಾಜಕಾರಣವಾಗಿ ಹದಗೊಳಿಸಿದ್ದೇ ಮುಂದೆ ವಿವಿಧ ಆಯಾಮಗಳನ್ನು ಗಳಿಸಿಕೊಂಡು ಗಾಂಧಿ ರಾಜಕಾರಣವೆಂದು ಹೆಸರಾದದ್ದು.

ಈ ವಿಶಿಷ್ಟ ವಿದ್ಯಮಾನವನ್ನು ಕುರಿತ ಲೇಖನವಿದು-ಸಂ.

ಪ್ರಸ್ತುತ ಲೇಖನ ಗಾಂಧೀಜಿಯವರ ಚಿಂತನೆ ಮತ್ತು ಕ್ರಿಯಾಚರಣೆಗಳಿಗೆ ಸಂಬಂಧಿಸಿದಂತೆ ಎರಡು ಪ್ರಮೇಯಗಳ ನೆಲೆಯಲ್ಲಿ ತನ್ನ ವಿಚಾರಗಳನ್ನು ಮುಂದಿಡಲು ಬಯಸುತ್ತದೆ. ಅದರಲ್ಲಿ ಮೊದಲನೆಯದು ೧೯ನೆಯ ಶತಮಾನದ ಕೊನೆಯ ಭಾಗದಿಂದ ಆರಂಭಿಸಿ ೨೦ನೆಯ ಶತಮಾನದ ಮಧ್ಯಭಾಗದ ತನಕ ಭಾರತದಲ್ಲಿ ವ್ಯಾಪಿಸಿಕೊಂಡಿದ್ದ ಸ್ವಾತಂತ್ರ್ಯ ಹೋರಾಟ ಎನ್ನುವ ಸಂಕೀರ್ಣವಾದ ಚಾರಿತ್ರಿಕ ವಿದ್ಯಮಾನಕ್ಕೆ ಸಂಬಂಧಿಸಿದ್ದು. ಅದು ಮೇಲುನೋಟಕ್ಕೆ ಕಾಣುವಂತೆ ಏಕರೂಪದ ವಿದ್ಯಮಾನವಾಗಿರಲಿಲ್ಲ. ಬದಲಾಗಿ ಅನೇಕ ಹಾಗೂ ವಿಭಿನ್ನ ಪ್ರಕೃತಿಯ ಸೈದ್ಧಾಂತಿಕ ರಾಜಕೀಯ ದೃಷ್ಟಿಕೋನಗಳ ಕರ್ಷಣೆ ಮತ್ತು ಘರ್ಷಣೆಯ ಪರಿದೃಶ್ಯವಾಗಿತ್ತು. ಈ ಪರಿದೃಶ್ಯದಲ್ಲಿ ಕಾಂಗ್ರೆಸ್ ನಾಯಕತ್ವದ ರಾಷ್ಟ್ರೀಯ ಹೋರಾಟದ ವಿದ್ಯಮಾನವನ್ನು ಒಂದು ಅಧ್ಯಾಯವನ್ನಾಗಿ ಪರಿಗಣಿಸುವುದಾದರೆ ಅಷ್ಟೇ ಮಹತ್ವದ ಇತರ ವಿದ್ಯಮಾನಗಳನ್ನೂ ನಾವು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ೧೯ ಹಾಗೂ ೨೦ನೆಯ ಶತಮಾನದ ಭಾರತದಲ್ಲಿ ರಾಷ್ಟ್ರೀಯ ಹೋರಾಟದ ಉಗಮ ಹಾಗೂ ವಿಕಾಸದ ಜೊತೆ ಜೊತೆಗೆ ರೈತರ ಹೋರಾಟ, ಕಾರ್ಮಿಕ ಚಳುವಳಿ, ದಲಿತರ ಸಂಘರ್ಷ, ಮಹಿಳೆಯರ ಸೆಣಸಾಟ ಹಾಗೂ ಆದಿವಾಸಿ ಜನ ಸಮುದಾಯಗಳ ಪ್ರತಿಭಟನೆಗಳಂತಹ ವಿದ್ಯಮಾನಗಳು ಚಾರಿತ್ರಿಕವಾಗಿ ಮಹತ್ವದ ಸ್ಥಾನಗಳನ್ನು ಪಡೆದುಕೊಳ್ಳುತ್ತವೆ. ಆದ್ದರಿಂದ ರಾಷ್ಟ್ರೀಯ ಹೋರಾಟದ ಕುರಿತಾದ ನಮ್ಮ ನಿರ್ವಚನ ಹಾಗೂ ನಿರೂಪಣೆಗಳು ೧೯ ಹಾಗೂ ೨೦ನೆಯ ಶತಮಾನದ ಭಾರತದ ಈ ವ್ಯಾಪಕ ಪರಿಪ್ರೇಕ್ಷದಲ್ಲಿ ನಡೆಯಬೇಕಾಗಿದೆ.

ಪ್ರಸ್ತುತ ಲೇಖನ ಮುಂದಿಡುವ ಎರಡನೆಯ ಪ್ರಮೇಯ ಗಾಂಧೀಜಿಯವರ ಬದುಕು ಹಾಗೂ ಚಿಂತನೆಗಳ ವಿನ್ಯಾಸಕ್ಕೆ ಸಂಬಂಧಿಸಿದ್ದು. ಸಾಧಾರಣವಾಗಿ, ನಾವಂದುಕೊಳ್ಳುವಂತೆ ಗಾಂಧಿ ತತ್ವ ಚಿಂತನೆಯ ಯಾವ ಅಂಶವೂ ಸಿದ್ಧ ರೂಪದಲ್ಲಿ ಅಸ್ತಿತ್ವಕ್ಕೆ ಬಂದವುಗಳಲ್ಲ. ಅವು ಗಾಂಧೀಜಿಯವರ ಬದುಕಿನ ವಿವಿಧ ಘಟ್ಟಗಳಲ್ಲಿ ಅನೇಕಾನೇಕ ಬಗೆಯ ಸಂದರ್ಭ ಸನ್ನಿವೇಶಗಳಲ್ಲಿ ಮೈ ತಳೆದಿರುವಂತಹುದು. ಗಾಂಧೀಜಿಯವರ ಬಾಲ್ಯ ಜೀವನದ ಕೆಲವು ವಿಶಿಷ್ಟ ಘಟನೆಗಳು, ಉನ್ನತ ವ್ಯಾಸಂಗದ ಸಂದರ್ಭದಲ್ಲಿ ಅವರು ಇಂಗ್ಲೆಂಡ್‌ನಲ್ಲಿ ಕಳೆದ ಮಹತ್ವದ ದಿನಗಳು, ದಕ್ಷಿಣ ಆಫ್ರಿಕಾದ ಅವರ ಗಾಢವಾದ ರಾಜಕೀಯ ಅನುಭವ ಹಾಗೂ ಪ್ರಯೋಗಗಳು, ಭಾರತದ ಸ್ವಾತಂತ್ರ ಹೋರಾಟದ ವಿವಿಧ ಘಟ್ಟಗಳಲ್ಲಿ ಅವರು ಎದುರಿಸಿದ ಸಮಸ್ಯೆಗಳು ಮತ್ತು ಸವಾಲುಗಳು ಹಾಗೂ ಈ ಎಲ್ಲಾ ಕಾಲಘಟ್ಟಗಳಲ್ಲಿ ಅವರನ್ನು ಪ್ರಭಾವಿಸಿದ ಚಿಂತನ ಕ್ರಮಗಳು ಗಾಂಧೀಜಿಯವರ ಚಿಂತನೆ ಮತ್ತು ಕ್ರಿಯಾಚರಣೆಗಳನ್ನು ನಿರ್ಣಾಯಕವಾಗಿ ಪ್ರಭಾವಿಸಿವೆ.

ಮೇಲಿನ ಈ ಎರಡು ಪ್ರಮೇಯಗಳ ಹಿನ್ನೆಲೆಯಲ್ಲಿ ಈ ಲೇಖನ ಭಾರತದ ಸ್ವಾತಂತ್ರ್ಯ ಹೋರಾಟದ ಪರಿಪ್ರೇಕ್ಷದಲ್ಲಿ ಗಾಂಧೀಜಿ ಎದುರಾದ ಚಿಂತಕರು ಮತ್ತು ಅವರ ಚಿಂತನ ಕ್ರಮಗಳು ಹೇಗೆ ಅವರನ್ನು ಪ್ರಭಾವಿಸಿದವು ಎನ್ನುವುದರ ಕುರಿತು ಕೆಲವು ಮಾತುಗಳನ್ನು ಮುಂದಿಡ ಬಯಸುತ್ತದೆ. ಸ್ಥಳಾವಕಾಶ ಮತ್ತು ಚೌಕಟ್ಟಿನ ದೃಷ್ಟಿಯಿಂದ ಗಾಂಧೀಜಿ ಮುಖಾಮುಖಿಯಾದ ಇಬ್ಬರು ಪ್ರಮುಖ ಚಿಂತಕರ ಕುರಿತು ಮಾತ್ರ ಇಲ್ಲಿ ಪ್ರಸ್ತಾಪಿಸಲಾಗುತ್ತದೆ. ಭಾರತದ ಸ್ವಾತಂತ್ರ್ಯ ಹೋರಾಟದ ಸನ್ನಿವೇಶದಲ್ಲಿ ಹಿರಿಯ ನಾಯಕರಾದ ಗೋಪಾಲಕೃಷ್ಣ ಗೋಖಲೆ



ಗೋಪಾಲಕೃಷ್ಣ ಗೋಖಲೆ ಬಾಲಗಂಗಾಧರ ತಿಲಕ್

ಮತ್ತು ಬಾಲಗಂಗಾಧರ್ ತಿಲಕ ಗಾಂಧೀಜಿಯವರನ್ನು ಹೇಗೆ ಪ್ರಭಾವಿಸಿದರು ಹಾಗೂ ಈ ಪ್ರಭಾವಗಳನ್ನು ಗಾಂಧೀಜಿ ತಮ್ಮ ರಾಜಕೀಯ ತತ್ವಜ್ಞಾನ ಹಾಗೂ ಕ್ರಿಯಾಚರಣೆಯಲ್ಲಿ ಹೇಗೆ ನಿರ್ವಹಿಸಿದರು ಎನ್ನುವ ಕುರಿತು ಒಂದು ಸ್ಥೂಲವಾದ ಚಿತ್ರಣವನ್ನು ಮಾತ್ರ ಇಲ್ಲಿ ಕೊಡಲು ಸಾಧ್ಯವಾಗಬಹುದು.

ರಾಷ್ಟ್ರೀಯ ಹೋರಾಟದ ಚಾರಿತ್ರಿಕ ಹಿನ್ನೆಲೆ ಮತ್ತು ಗಾಂಧಿ ನಡು ಪ್ರವೇಶದ

ತಮ್ಮ ದಕ್ಷಿಣ ಆಫ್ರಿಕಾದ ರಾಜಕೀಯ ಅನುಭವ ಮತ್ತು ಪ್ರಯೋಗಗಳ ಹಿನ್ನೆಲೆಯಲ್ಲಿ ಗಾಂಧೀಜಿ ಭಾರತವನ್ನು ಪ್ರವೇಶಿಸಿದ ವೇಳೆಗಾಗಲೇ ಸ್ವಾತಂತ್ರ್ಯ ಹೋರಾಟದ ವಿದ್ಯಮಾನ ಭಾರತದಲ್ಲಿ ರೂಪುಗೊಳ್ಳಲಾರಂಭಿಸಿತ್ತು ಎನ್ನುವ ಸಂಗತಿ ನಮಗೆಲ್ಲರಿಗೂ ತಿಳಿದಿದೆ. ೧೯ನೇಯ ಶತಮಾನದ ಮಧ್ಯಭಾಗದ ಭಾರತವನ್ನು ಅನೇಕ ವಸಾಹತುಶಾಹಿ ಹಿತಾಸಕ್ತ ಚರಿತ್ರಕಾರರು ಅಸ್ವಸ್ಥತೆಯ ಭಾರತ ಅಥವಾ ಭಾರತದ ಅಸ್ವಸ್ಥತೆ ಎಂದು ವಿಶದೀಕರಿಸಿದ ಸಂಗತಿಯೂ ನಮಗೆ ತಿಳಿದಿದೆ. ಈ ಹಿನ್ನೆಲೆಯಲ್ಲಿ ಒಂದು ಸಮಾಜ ಸೇವೆಯ ಸಂಸ್ಥೆಯಾಗಿ ರಾಷ್ಟ್ರೀಯ ಕಾಂಗ್ರೆಸ್ ಜನ್ಮ ತಳೆಯಿತು ಹಾಗೂ ಅದು ಒಂದು ಕಾಲಾವಧಿಯಲ್ಲಿ ಸ್ವಾತಂತ್ರ್ಯ ಹೋರಾಟದ ಪ್ರಧಾನ ವೇದಿಕೆಯಾಗಿ ರೂಪಾಂತರಗೊಂಡಿತು ಎನ್ನುವ ಸಂಗತಿಯೂ ಆಧುನಿಕ ಭಾರತದ ರಾಜಕೀಯ ಚರಿತ್ರೆಯ ಪ್ರಾಥಮಿಕ ಪಾಠದ ಭಾಗವಾಗಿದೆ. ಲಾರ್ಡ್ ಮೆಕಾಲೆಯವರ ಉದ್ದೇಶಕ್ಕೆ ವಿರುದ್ಧವಾಗಿ ಇಂಗ್ಲೀಷ್ ವಿದ್ಯಾಭ್ಯಾಸ ಪಡೆದ ಭಾರತದ ಮಧ್ಯಮ ವರ್ಗ ಹೇಗೆ ರಾಷ್ಟ್ರೀಯ ಹೋರಾಟದ ನಾಯಕತ್ವವನ್ನು ವಹಿಸಿಕೊಂಡಿತು ಎನ್ನುವ ಇತಿಹಾಸದ ಒಗಟನ್ನು ಭಾರತದ ಚರಿತ್ರೆಯನ್ನು ಅಧ್ಯಯನ ನಡೆಸುವ ಚರಿತ್ರಕಾರರು ತಮ್ಮ ತಮ್ಮ ಸೈದ್ಧಾಂತಿಕ ಹಿನ್ನೆಲೆಗೆ ಅನುಗುಣವಾಗಿ ವಿವರಿಸಿದ್ದಾರೆ.

ಗಾಂಧಿ ಭಾರತದ ರಾಷ್ಟ್ರೀಯ ಹೋರಾಟದ ಭೂಮಿಕೆಯನ್ನು ಪ್ರವೇಶಿಸುವ ವೇಳೆಗೆ ಈ ರಾಷ್ಟ್ರೀಯ ಹೋರಾಟ ಭಿನ್ನ ದೃಷ್ಟಿಗಳ ಎರಡು ಬಣಗಳಾಗಿ ಒಡೆದು ಹೋಗಿತ್ತು. ಕಾಂಗ್ರೆಸ್ ರಾಷ್ಟ್ರೀಯ ಹೋರಾಟದಲ್ಲಿ ಸಂಯಮಶೀಲ, ಸಾಂವಿಧಾನಿಕ ಮಾರ್ಗವನ್ನು ಪ್ರತಿಪಾದಿಸಿದ ಗೋಪಾಲಕೃಷ್ಣ

ಗೋಖಲೆ ಮತ್ತು ಅವರ ಸಂಗಡಿಗರ ಗುಂಪು ಒಂದು ಕಡೆಯಾದರೆ ರಾಷ್ಟ್ರೀಯ ಸ್ವಾತಂತ್ರ್ಯದ ಸಾಧನೆಗಾಗಿ ಆಕ್ರಮಣಶೀಲ, ನೇರ ಆದರೆ ಅಹಿಂಸಾತ್ಮಕ ಮಾರ್ಗವನ್ನು ಪ್ರತಿಪಾದಿಸಿದ ಬಾಲ ಗಂಗಾಧರ ತಿಲಕ್ ಮತ್ತು ಅವರ ಸಂಗಡಿಗರ ಗುಂಪು ಇನ್ನೊಂದು ಕಡೆ. ಕಾಂಗ್ರೆಸ್ಸ್ ರಾಷ್ಟ್ರೀಯ ಹೋರಾಟದಲ್ಲಿ ಸಂಯಮವಾದಿಗಳು ಎಂದು ಕರೆಯಲ್ಪಟ್ಟ ಹಿರಿಯರ ಗುಂಪು ಸಾಮಾಜಿಕ ಹಾಗೂ ರಾಜಕೀಯ ಸುಧಾರಣೆಗಳ ಮೂಲಕ ನಿಧಾನವಾಗಿ, ಹಂತ ಹಂತವಾಗಿ ಹಾಗೂ ಒಂದು ದೀರ್ಘ ಕಾಲಾವಧಿಯಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯದ ಕನಸು ಕಂಡರೆ ನೇರ ಕ್ರಿಯಾಚರಣೆಯ ಮೂಲಕ ತತ್‌ಕ್ಷಣದಲ್ಲಿ ಸ್ವಾತಂತ್ರ್ಯ ಸಾಧನೆಯ ಮಾರ್ಗವನ್ನು ಕಾಂಗ್ರೆಸ್ಸಿನ ಯುವಕರ ದಂಡು ಪ್ರತಿಪಾದಿಸಿತು. ಹೀಗೆ, ಸ್ವಾತಂತ್ರ್ಯ ಹೋರಾಟದಲ್ಲಿ ಸಂಯಮವಾದ ಅಥವಾ ಸಾಂವಿಧಾನಿಕ ಮಾರ್ಗ ಮತ್ತು ನೇರ ಕ್ರಿಯಾಚರಣೆಯ ಅಥವಾ ಸವಿನಯ ಪ್ರತಿಭಟನೆಯ ನಡುವಿನ ಒಡಕು ಕಾಂಗ್ರೆಸ್ಸ್‌ನ ಹಿರಿಯ ತಲೆಮಾರಿನ ಮತ್ತು ಕಿರಿಯ ತಲೆಮಾರಿನ ನಾಯಕರ ನಡುವಿನ ದೃಷ್ಟಿಕೋನಗಳ ಭಿನ್ನತೆಯೂ ಆಗಿತ್ತು.


ಗಾಂಧೀಜಿ ಕಾಂಗ್ರೆಸ್‌ನಲ್ಲಿ ಮೂಡಿ ಬಂದ ಈ ಒಡಕನ್ನು ಪರಿಹರಿಸಿಕೊಂಡು ಹೇಗೆ ಒಂದು ಸಮಗ್ರವಾದ ಮತ್ತು ಸಶಕ್ತವಾದ ಸ್ವಾತಂತ್ರ್ಯ ಹೋರಾಟದ ದಾರಿಯನ್ನು ಕಂಡುಕೊಂಡರು ಎನ್ನುವುದನ್ನು ತಿಳಿದುಕೊಳ್ಳುವ ಜೊತೆಜೊತೆಗೆ ಅವರು ತಮ್ಮ ಕಾಲದ ಇಬ್ಬರು ಮಹಾನ್ ನಾಯಕರ ಚಿಂತನೆಗಳ ನಡುವೆ ಅನುಸಂಧಾನವನ್ನು ಹೇಗೆ ಸಾಧಿಸಿಕೊಂಡರು ಎನ್ನುವುದನ್ನು ತಿಳಿದುಕೊಳ್ಳುವುದು ಈ ಲೇಖನದ ಆದ್ಯತೆಯಾಗಿದೆ. ಭಾರತದಲ್ಲಿ ಎಲ್ಲರನ್ನು ಒಳಗೊಳ್ಳುವ ಎಲ್ಲ ದೃಷ್ಟಿಕೋನಗಳನ್ನು ಪ್ರತಿನಿಧಿಸಬಲ್ಲ ಸ್ವಾತಂತ್ರ್ಯ ಹೋರಾಟದ ರಾಜಕಾರಣದ ಕನಸು ಗಾಂಧೀಜಿಯವರು ದಕ್ಷಿಣ ಆಫ್ರಿಕಾದ ರಾಜಕೀಯ ಅನುಭವದ ಹಿನ್ನೆಲೆಯಲ್ಲೆ ರೂಪುಗೊಂಡಿತ್ತು. ಆ ಕಾಲಾವಧಿಯಲ್ಲಿ ಅವರು ಬರೆದ *ಹಿಂದ್ ಸ್ವರಾಜ್* ಎನ್ನುವ ಕಿರುಗ್ರಂಥ ಈ ಆಶಯವನ್ನು ಒಳಗೊಂಡಿತ್ತು. ಅವರು *ಹಿಂದ್ ಸ್ವರಾಜ್* ಬರೆಯುವ ವೇಳೆಗಾಗಲೇ ತಮ್ಮನ್ನು ಭಾರತದ ಸ್ವಾತಂತ್ರ್ಯ ಹೋರಾಟದ ಸನ್ನಿವೇಶದ ಒಳಗೆ ಕಲ್ಪಿಸಿಕೊಂಡಿದ್ದರು. ಆದ್ದರಿಂದಲೇ, ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭದ ಕುರಿತು ಓದುಗ ಕೇಳುವ ಪ್ರಶ್ನೆಗೆ ಅವರು ವಿನಮ್ರತೆಯ ಹಾಗೂ ಒಳಗೊಳ್ಳುವ ಉತ್ತರವನ್ನು ಕೊಡುತ್ತಾರೆ. ಸ್ವಾತಂತ್ರ್ಯ ಹೋರಾಟವನ್ನು ಒಂದು ಏಣಿ ಎಂದು ವರ್ಣಿಸುವ ಗಾಂಧಿ ಭಾರತದಲ್ಲಿ ತನಗಿಂತ ಮೊದಲು ಸ್ವಾತಂತ್ರ್ಯಕ್ಕಾಗಿ ತ್ಯಾಗ ಬಲಿದಾನಗಳನ್ನು ಮಾಡಿದ ಎಲ್ಲರು ಈ ಏಣಿಯ ವಿವಿಧ ಮೆಟ್ಟಲುಗಳು ಎನ್ನುತ್ತಾರೆ. ಅಂತಹ ಮೆಟ್ಟಲುಗಳಲ್ಲಿ ಅವರಿಗೆ ಗೋಖಲೆ ಒಬ್ಬರು. ಗೋಖಲೆಯವರ ಸರಳವಾದ ವ್ಯಕ್ತಿತ್ವ, ನಿಸ್ವಾರ್ಥ ಮನೋಭಾವ, ನಿರಾಡಂಬರದ ಜೀವನ ಹಾಗೂ ಸಂಯಮದ ರಾಜಕೀಯ ದೂರದೃಷ್ಟಿ ಗಾಂಧಿಗೆ ಅತ್ಯಂತ ಪ್ರಿಯವಾದ ಸಂಗತಿಗಳಾಗಿತ್ತು. ಸಂಯಮ ಮತ್ತು ಅಹಿಂಸೆಯ ಪ್ರತಿಮೂರ್ತಿಯಾದ ಗೋಖಲೆಯವರನ್ನು ಗಾಂಧೀಜಿ ಈ ಕಾರಣಕ್ಕಾಗಿಯೇ ತಮ್ಮ ರಾಜಕೀಯ ಗುರು ಎಂದು ಘೋಷಿಸಿದರು. ಹಾಗಿದ್ದೂ, ಗೋಖಲೆಯವರ ಸಾಂವಿಧಾನಿಕತೆಯಲ್ಲಿ ನಿಹಿತವಾದ ರಾಜಕಾರಣ ಮತ್ತು ಈ ರಾಜಕಾರಣ ಪ್ರತಿಫಲಿಸುವ ಪಾಶ್ಚಿಮಾತ್ಯ ಮೌಲ್ಯಗಳು ಗಾಂಧೀಜಿಯವರಿಗೆ ಸ್ವೀಕಾರಾರ್ಹವಾಗಿರಲಿಲ್ಲ. ಗೋಖಲೆಯವರ ಸಂಯಮವಾದಿ ಸಾಂವಿಧಾನಿಕ ಮಾರ್ಗವನ್ನು ವಿಜ್ಞಾಪನೆಯ ರಾಜಕಾರಣವೆಂದು ಟೀಕಿಸಿದ ಗಾಂಧಿ ಆ ಬಗೆಯ ರಾಜಕಾರಣಕ್ಕಿಂತ ಮೂಲಭೂತವಾಗಿ ಬೇರೆಯಾದ ಸತ್ಯಾಗ್ರಹದ ರಾಜಕಾರಣವನ್ನು ಸ್ವಾತಂತ್ರ್ಯ ಹೋರಾಟದ ಮುಂಚೂಣಿಗೆ ತಂದರು. ಆದರೂ ಗೋಖಲೆಯವರು ಅವರ ರಾಜಕೀಯ ಗುರುವಾಗಿಯೇ ಉಳಿದುಕೊಂಡರು. ಪ್ರಮುಖವಾಗಿ ಗೋಖಲೆಯವರಲ್ಲಿ ಗಾಂಧಿ ಗುರುತಿಸಿದ ಸೇವಾ ಮನೋಭಾವದ ಸಮಾಜ ಸುಧಾರಣೆಯ ದೃಷ್ಟಿ ಅವರನ್ನು ತಮ್ಮ ಗುರುವನ್ನಾಗಿ ಮಾನ್ಯ ಮಾಡಲು ಪ್ರಮುಖ ಕಾರಣವೆನ್ನಬಹುದು.

ಗೋಖಲೆಯವರು ಪ್ರತಿನಿಧಿಸಿದ ಸಂಯಮವಾದಿ ಸಾಂವಿಧಾನಿಕ ಮಾರ್ಗಕ್ಕೆ ವ್ಯತಿರಿಕ್ತವಾದ ಸವಿನಯ ಪ್ರತಿರೋಧದ ಅಥವಾ ನೇರಕ್ರಿಯಾಚರಣೆಯ ಮಾರ್ಗವನ್ನು ಪ್ರತಿನಿಧಿಸಿದ ಬಾಲಗಂಗಾಧರ್ ತಿಲಕ್‌ರವರು ಗಾಂಧೀಜಿಯವರಿಗೆ ಬಹುಮಾನ್ಯರೇ ಆಗಿದ್ದರು. ಗೋಖಲೆಯವರಂತೆ ತಿಲಕರು ಗಾಂಧೀಜಿಯವರನ್ನು ಅಷ್ಟೇನು ಆದರದಿಂದ ಕಂಡವರಲ್ಲ. ಹಾಗಿದ್ದೂ, ತಿಲಕರ ರಾಜಕಾರಣದ ಅನೇಕ ಅಂಶಗಳನ್ನು ಗಾಂಧೀಜಿ ತಮ್ಮ ರಾಜಕೀಯ ಚಿಂತನೆಯಲ್ಲಿ ಒಳಗೊಂಡಿದ್ದರು. ಹೊರನೋಟಕ್ಕೆ ಗಾಂಧೀಜಿಯವರ ಸತ್ಯಾಗ್ರಹದ ರಾಜಕಾರಣ ತಿಲಕರ ಸವಿನಯ ಪ್ರತಿಭಟನೆಯ ರಾಜಕಾರಣದ ಮುಂದುವರಿಕೆಯೇ ಆಗಿತ್ತು. ಆದರೂ ಇವೆರಡರ ನಡುವೆ ಆಳವಾದ ಅಷ್ಟಾಗಿ ದೃಷ್ಟಿಗೋಚರವಲ್ಲದ ಆದರೆ ಮೂಲಭೂತವಾದ ವ್ಯತ್ಯಾಸವಿತ್ತು. ತಿಲಕರಿಗೆ ಅಹಿಂಸೆ ರಾಜಕೀಯ ಕ್ರಿಯಾಚರಣೆಯ ಒಂದು ಅನುಕೂಲಕರ ಅಸ್ತ್ರವಾಗಿತ್ತೇ ಹೊರತು ಅದು ಅವರಿಗೆ ಒಂದು ತಾತ್ವಿಕ ಮೌಲ್ಯವಾಗಿರಲಿಲ್ಲ. ಆದರೆ ಗಾಂಧೀಜಿಯವರಿಗೆ ಅಹಿಂಸೆಯೇ ಸತ್ಯಾಗ್ರಹದ ಮೂಲದ್ರವ್ಯ ಅದನ್ನು ಹೊರತುಪಡಿಸಿ ಸತ್ಯಾಗ್ರಹವಿರಲು ಸಾಧ್ಯವಿಲ್ಲ. ಬ್ರಿಟಿಷ್ ಅಧಿಪತ್ಯದ ಬೃಹತ್ ಶಕ್ತಿಯ ಎದುರು ತಿಲಕರು ಸವಿನಯ ಪ್ರತಿಭಟನೆಯನ್ನು ಒಂದು ಅನಿವಾರ್ಯ ರಾಜಕೀಯ ಅಸ್ತ್ರವನ್ನಾಗಿ ಬಳಸಿದರೆ ಗಾಂಧೀಜಿ ಸತ್ಯಾಗ್ರಹವನ್ನು ಪಶುಶಕ್ತಿಯ ವಿರುದ್ಧ ಆತ್ಮಶಕ್ತಿಯ ಸಂಘರ್ಷವನ್ನಾಗಿ ಪ್ರಯೋಗಿಸಿದರು.

ಆಶ್ಚರ್ಯದ ವಿಷಯವೆಂದರೆ ತಿಲಕ್ ಹಾಗೂ ಗಾಂಧೀಜಿಯ ನಡುವೆ ರಾಜಕಾರಣದ ಮೂಲನಿರ್ವಚನದ ನೆಲೆಯಲ್ಲಿ ಒಂದು ಅತ್ಯಂತ ಸಮೀಪದ ಸಂಬಂಧವಿದೆ. ಅದು ರಾಜಕಾರಣದಲ್ಲಿ ಜನರ ಪಾಲ್ಗೊಳ್ಳುವಿಕೆಗೆ ಸಂಬಂಧಿಸಿದ್ದು. ಅಥವ ಪಾಲ್ಗೊಳ್ಳುವಿಕೆಯ ರಾಜಕಾರಣಕ್ಕೆ ಸಂಬಂಧಿಸಿದ್ದು. ತಿಲಕರು ಪತ್ರಕಾರಿಕೆಯ ಮೂಲಕ, ತಮ್ಮ ಜನಪ್ರತಿಭಟನೆಯ ರಾಜಕಾರಣದ ಮೂಲಕ ಹಾಗೂ ಜನನಿಬಿಡತೆಯನ್ನು ಪ್ರತಿನಿಧಿಸುವ ಉತ್ಸವಗಳ ಮೂಲಕ ಜನಕೇಂದ್ರಿತ ಸ್ವಾತಂತ್ರ್ಯ ಹೋರಾಟವನ್ನು ಪ್ರತಿನಿಧಿಸಿದರು. ಖ್ಯಾತ ಇತಿಹಾಸಕಾರ ಬಿಪನ್‌ಚಂದ್ರ ಗುರುತಿಸುವಂತೆ ರಾಷ್ಟ್ರೀಯ ಹೋರಾಟದಲ್ಲಿ ಜನರ ಭಾಗವಹಿಸುವಿಕೆಯ ಅಥವಾ ಜನತಂತ್ರದ ಮಾತುಗಳನ್ನಾಡಿದ ಮೊದಲ ನಾಯಕ ತಿಲಕ್. ಅವರಂತೆಯೇ, ಗಾಂಧೀಜಿ ಪತ್ರಕಾರಿಕೆ ಹಾಗೂ ಧಾರ್ಮಿಕತೆಗಳ ಮೂಲಕ ಜನ ಸಂಘಟನೆ ಹಾಗೂ ಜನತಂತ್ರದ ನೆಲೆಯ ಸ್ವಾತಂತ್ರ್ಯ ಹೋರಾಟವನ್ನು ಪರಿಕಲ್ಪಿಸಿದರು. ಮಹತ್ವದ ಸಂಗತಿಯೆಂದರೆ ತಿಲಕ್ ಮತ್ತು ಅವರ ಸಂಗಡಿಗರು ಪ್ರತಿನಿಧಿಸಿದ ತೀವ್ರಗಾಮಿ ಪ್ರತಿಭಟನೆಯ ರಾಜಕಾರಣ ಅವರವರ ಪ್ರದೇಶಗಳಿಗಷ್ಟೇ ಸೀಮಿತವಾಗಿತ್ತು. ಅಷ್ಟು ಮಾತ್ರವಲ್ಲದೇ, ಈ ಪ್ರದೇಶಗಳಲ್ಲಿಯೂ ಅವು ಬಹುಜನ ಸಮಾಜದ ಎಲ್ಲ ವಲಯಗಳಿಗೆ ವ್ಯಾಪಿಸಿರಲಿಲ್ಲ. ಗಾಂಧೀಜಿಯವರ ನಾಗರಿಕ ಅಸಹಕಾರ ಸತ್ಯಾಗ್ರಹದ ರಾಜಕಾರಣ ಮೊತ್ತ ಮೊದಲ ಬಾರಿಗೆ ದೇಶದಾದ್ಯಂತ ವ್ಯಾಪಿಸಿತು ಮತ್ತು ಎಲ್ಲ ಜನಸಮುದಾಯಗಳಿಗೆ ಪಸರಿಸಿತು. ಈ ಅರ್ಥದಲ್ಲಿ ಗಾಂಧೀಜಿ ರಾಷ್ಟ್ರೀಯ ಹೋರಾಟವನ್ನು ವಿಸ್ತರಿಸಿದರು ಮತ್ತು ಪ್ರಜಾತಾಂತ್ರಿಕಗೊಳಿಸಿದರು ಅಥವಾ ನಿಜವಾದ ಪ್ರಜಾತಾಂತ್ರಿಕ ಅರ್ಥದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟ ಗಾಂಧೀಜಿಯವರಿಂದಲೇ ಆರಂಭವಾಯಿತು.

ಸ್ವಾತಂತ್ರ್ಯ ಹೋರಾಟದ ವಿಸ್ತರಣೆ ಮತ್ತು ಪ್ರಜಾತಾಂತ್ರಿಕರಣ ಗಾಂಧೀಜಿಯವರಿಗೆ ಸಾಧ್ಯವಾದದ್ದು ಹೇಗೆ ಎನ್ನುವ ಪ್ರಶ್ನೆ ಸರಳವಾದದ್ದಲ್ಲ ಮತ್ತು ಅದಕ್ಕೆ ನೇರ ಉತ್ತರವೂ ಇಲ್ಲ. ಅನೇಕ ಪದರಗಳಿರುವ ವಿಭಿನ್ನ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಕಾಲಘಟ್ಟಗಳಲ್ಲಿ ಸಂಕೀರ್ಣವಾಗಿ ರೂಪುತಳೆದ ಭಾರತದ ಸ್ವಾತಂತ್ರ್ಯ ಹೋರಾಟದ ಅನೇಕ ಆಯಾಮಗಳನ್ನು ಮರುಪರಿಶೀಲಿಸುವ ಮೂಲಕ ಮಾತ್ರ ಒಂದು ಸಮಂಜಸವಾದ ವಿವರಣೆಯನ್ನು ಈ ನಿಟ್ಟಿನಲ್ಲಿ ಕೊಡಬಹುದು. ಗೋಖಲೆಯವರ ಸಂವಿಧಾನವಾದಿ ರಾಜಕಾರಣ ಸ್ವಾತಂತ್ರ್ಯ ಹೋರಾಟದಲ್ಲಿ ಬಹುಜನ ಭಾಗವಹಿಸುವಿಕೆಯನ್ನು ನಿರಾಕರಿಸುವ ಮೂಲಕ ರಾಷ್ಟ್ರೀಯ ರಾಜಕಾರಣವನ್ನು ತಜ್ಞ ಸಮಿತಿಯ ಕಕ್ಷೆಗಷ್ಟೇ ಸೀಮಿತಗೊಳಿಸಿತು. ಹಾಗಾಗೀ ಅವರ ನಾಯಕತ್ವದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಜನರಿಂದ ದೂರವಾದ ಸಂಘಟನೆಯಾಗಿ ಉಳಿಯಿತು. ಕಾಂಗ್ರೆಸ್‌ನಿಂದ ಬೇರ್ಪಟ್ಟ ತಿಲಕರ ನಾಯಕತ್ವದಲ್ಲಿ ರೂಪುಗೊಂಡ ತೀವ್ರವಾದಿ ಗುಂಪು ಜನಸಮುದಾಯಗಳನ್ನು ಒಳಗೊಂಡ ವ್ಯಾಪಕವಾದ ವಿದ್ಯಮಾನವಾಗುವಲ್ಲಿ ಅಷ್ಟೇನು ಯಶಸ್ವಿಯಾಗಲಿಲ್ಲ. ಜೊತೆಯಲ್ಲಿಯೇ, ಸಾಮಾಜಿಕ ಸುಧಾರಣೆ ಅಥವಾ ರಾಜಕೀಯ ಸ್ವಾತಂತ್ರ್ಯ ಎನ್ನುವ ದ್ವಂದ್ವ ಒಂದು ಬಾಲಗ್ರಹ ಪೀಡೆಯಾಗಿ ಸ್ವಾತಂತ್ರ್ಯ ಹೋರಾಟವನ್ನು ಅಶಕ್ತಗೊಳಿಸಿತು. ಈ ಹಿನ್ನೆಲೆಯಲ್ಲಿ, ಸ್ವಾತಂತ್ರ್ಯ ಹೋರಾಟದ ಉತ್ಕರ್ಷಕ್ಕೆ ಅಗತ್ಯವಿದ್ದ ಸತ್ಯಾಗ್ರಹವೆನ್ನುವ ರಾಮಬಾಣವನ್ನು ಗಾಂಧೀಜಿ ಭಾರತದ ಜನಸಮುದಾಯದ ಮುಂದೆ ಇರಿಸಿದರು. ಬಹುಶಃ, ಗಾಂಧೀಜಿಯವರ ಈ ನಡುಪ್ರವೇಶ ಸ್ವಾತಂತ್ರ್ಯದ ಕಲ್ಪನೆಯನ್ನು ಪ್ರಜ್ವಲಗೊಳಿಸುವಲ್ಲಿ ಹಾಗೂ ಸ್ವಾತಂತ್ರ್ಯ ಹೋರಾಟವನ್ನು ಪ್ರಖರಗೊಳಿಸುವಲ್ಲಿ ಮಹತ್ವದ ಭೂಮಿಕೆಯನ್ನು ನಿರ್ವಹಿಸಿತು.


ಮಂಗಳೂರು ವಿಶ್ವವಿದ್ಯಾನಿಲಯದ ರಾಜಕೀಯಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರು ಲೇಖಕ ರಾಜಾರಾಂ ತೋಳ್ಪಾಡಿ ಇತಿಹಾಸ ಮತ್ತು ಸಮಕಾಲೀನ ರಾಜಕೀಯ ವಿದ್ಯಮಾನಗಳ ವಿಶ್ಲೇಷಕರೂ ಹೌದು



ಗಾಂಧಿಯವರತ್ತ ನೋಟ-೫

ಗಾಂಧಿ ಅರ್ಥಶಸ್ತ್ರವೂ, ಕುಮಾರಪ್ಪನವರೂ...

ಡಾ. ರಾಜೇಂದ್ರ ಚೆನ್ನಿ



ಗಾಂಧಿ ಯುಗದ ಚರಿತ್ರೆಯ ಬರವಣಿಗೆಯ ರಾಜಕಾರಣದ ದೊಡ್ಡ ಬಲಿಪಶು ಎಂದರೆ ಜೆ.ಸಿ. ಕುಮಾರಪ್ಪ ಅವರು. ಗಾಂಧಿಯವರನ್ನು, ಅವರ ತತ್ವ ವಿಚಾರಗಳನ್ನು, ರಾಜಕಾರಣವನ್ನು ನೆನಪಿಸಿಕೊಂಡಾಗಲೆಲ್ಲ ನೆನೆದುಕೊಳ್ಳಲೇಬೇಕಾದ ಬಹುಮುಖ್ಯ ಹೆಸರೆಂದರೆ ಕುಮಾರಪ್ಪ. ಗಾಂಧಿ ಪಶ್ಚಿಮದ ಆಧುನಿಕ ನಾಗರೀಕತೆಯ ನಿಷ್ಠುರ ವಿಮರ್ಶೆ ಮಾಡಿ ಅದೊಂದು ರೋಗವೇ ಸರಿ ಎಂದು ತಿರಸ್ಕರಿಸಿ, ಈ ತಿರಸ್ಕಾರಕ್ಕೆ ಮುಖ್ಯ ಕಾರಣವಾಗಿದ್ದ ಅದರ ಅರ್ಥಶಾಸ್ತ್ರಕ್ಕೊಂದು ಪರ್ಯಾಯ ಒದಗಿಸಿದ್ದರ ಹಿಂದೆ ಇದ್ದುದು ಇವರ ಪ್ರತಿಭೆ ಮತ್ತು ಪರಿಶ್ರಮ. ಗಾಂಧಿ ಅರ್ಥಶಾಸ್ತ್ರವೆಂದು ಕರೆಯಲಾಗುವ ಇದರ ಜೀವನಾಡಿಯೇ ಆಗಿದ್ದ ಜೋಸೆಫ್ ಕಾರ್ನೆಲಿಯಸ್ ಕುಮಾರಪ್ಪ (೧೮೯೨–೧೯೬೦) ಇಂದಿನ ಪರಿಸರ ವಿಜ್ಞಾನವೆಂಬುದರ ಹೆಸರೇ ಇಲ್ಲದ ಕಾಲದಲ್ಲಿ ತಮ್ಮದೇ ಅರಿವಿನಲ್ಲಿ ಅರಳಿದ ಪರಿಸರ ವಿಜ್ಞಾನದ ಮೂಲ ತತ್ವಗಳನ್ನು ಆಧರಿಸಿ ಆಧುನಿಕ ಅರ್ಥಶಾಸ್ತ್ರ ಉಂಟು ಮಾಡಬಹುದಾದ ಅನಾಹುತಗಳನ್ನು ಆಗಲೇ ಮುನ್ನೋಡಿದ್ದರು. ಹಾಗಾಗಿ ಮನುಷ್ಯ ಮತ್ತು ನಿಸರ್ಗದ ನಡುವಣ ಸಾಮರಸ್ಯವಿರುವಂತಹ ಬದುಕಿನ ಮಾದರಿ ರೂಪಿಸುವಂತಹ 'ಶಾಶ್ವತ ಅರ್ಥಶಾಸ್ತರ'ವೊಂದನ್ನು ಅವರು ರೂಪಿಸಿ ಗಾಂಧಿಯವರ ದೇಸಿ ರಾಜಕಾರಣಕ್ಕೆ ಅರ್ಥಶಾಸ್ತ್ರೀಯ ಆಧಾರವೊಂದನ್ನು ಕಲ್ಪಿಸಿಕೊಟ್ಟಿದ್ದರು.

ಆದರೆ ಎಲ್ಲದಕ್ಕೂ ಪಶ್ಚಿಮವನ್ನು ಆದರ್ಶ ಮಾಡಿಕೊಂಡ ನಮ್ಮ ಅಭಿವೃದ್ಧಿಶೀಲ ರಾಜಕಾರಣಿಗಳು ಮತ್ತು ಅವರ ಪರಿವಾರದ ಇತಿಹಾಸಕಾರರು ಮತ್ತು ಚಿಂತಕರು ಗಾಂಧಿಯನ್ನು ತಮಗೆ ಬೇಕಾದಂತೆ 'ಸಂಕಲಿಸಿ'ಕೊಳ್ಳುವ ರಾಜಕಾರಣದ ಭಾಗವಾಗಿ ಕುಮಾರಪ್ಪ ಅವರನ್ನು ಗಾಂಧಿಯಿಂದ ಬೇರ್ಪಡಿಸಿ ಇತಿಹಾಸದ ಹುದಲಲ್ಲಿ ಹೂತುಹಾಕಿಬಿಟ್ಟಿದ್ದಾರೆ ಗಾಂಧಿ ಯುಗದ ನಿಜವಾದ ದುರಂತ ನಾಯಕರೆಂದರೆ ಜೆ.ಸಿ. ಕುಮಾರಪ್ಪ ಅವರೇ. ಇದನ್ನು ವಿವರಿಸುವ ಲೇಖನ ಇಲ್ಲಿದೆ–ಸಂ.

ಗಾಂಧೀವಾದಿ ಅರ್ಥಶಾಸ್ತ್ರಜ್ಞರಾದ ಜೆ.ಸಿ.ಕುಮಾರಪ್ಪನವರ ಬಗ್ಗೆ ಬಹಳ ಜನರಿಗೆ ಗೊತ್ತಿಲ್ಲದಿರುವುದು ಆಶ್ಚರ್ಯದ ವಿಷಯವೇನಲ್ಲ. ಏಕೆಂದರೆ ಗಾಂಧಿಯವರ ಅರ್ಥಶಾಸ್ತ್ರೀಯ ಚಿಂತನೆಯ ಬಗ್ಗೆ ಅವರು ಬದುಕಿದ್ದ ಕಾಲದಲ್ಲಿಯೇ ಅವರ ರಾಜಕೀಯ ಪಕ್ಷವಾದ ಕಾಂಗ್ರೆಸ್ ಅವಜ್ಞೆಯನ್ನು ತೋರಿಸಿತ್ತು. ಶಿಕ್ಷಿತ ಮೇಲ್ವರ್ಗದ ಪ್ರತಿನಿಧಿಗಳು ಬ್ರಿಟಿಷ್ ಸರಕಾರಕ್ಕೆ ಸವಿನಯವಾಗಿ ಅಹವಾಲುಗಳನ್ನು ಸಲ್ಲಿಸುವ ಸಂಘಟನೆಯಾದ ಕಾಂಗ್ರೆಸ್‌ಅನ್ನು ಗಾಂಧಿ ವಸಾಹತುಶಾಹಿಯ ವಿರುದ್ಧ ಅಹಿಂಸಾತ್ಮಕ ಪ್ರಬಲ ಜನಚಳವಳಿಯ ಸಂಘಟನೆಯಾಗಿ ಪರಿವರ್ತಿಸಿದರು. ಚರಿತ್ರೆಯಲ್ಲಿಯೇ ಕಂಡರಿಯದ ಸಫಲವಾದ ಹೋರಾಟದ ವೇದಿಕೆಯನ್ನಾಗಿಸಿದರು. ಆದರೆ ಅವರಿಗೆ ಈ ರಾಜಕೀಯ ಹೋರಾಟವು ಸಮಗ್ರವಾದ ಸಾವಯವ ಸಂಬಂಧವುಳ್ಳ ಚಿಂತನೆಯ ಭಾಗಮಾತ್ರವಾಗಿತ್ತು. ಅವರ ಮುಖ್ಯ ಉದ್ದೇಶವು ಪಶ್ಚಿಮದ ಬಂಡವಾಳಶಾಹಿ, ಆಧುನಿಕ ಯಂತ್ರ ನಾಗರಿಕತೆಯನ್ನು ಸಂಪೂರ್ಣವಾಗಿ ತಿರಸ್ಕರಿಸಿ, ವಿಕೇಂದ್ರಿತವಾದ ಕೃಷಿ ಹಾಗೂ ಕೈ ಕಸುಬುಗಳನ್ನು ಆಧರಿಸಿದ ಸ್ವಾವಲಂಬಿ ಹಳ್ಳಿಗಳುಳ್ಳ ಅತಿ ಕಡಿಮೆ ಹಸ್ತಕ್ಷೇಪ ಮಾಡುವ ಪ್ರಭುತ್ವವುಳ್ಳ ಸಾಮಾಜಿಕ–ರಾಜಕೀಯ ವ್ಯವಸ್ಥೆಯನ್ನು ಸ್ಥಾಪಿಸುವುದಾಗಿತ್ತು. ಹೀಗಾಗಿ ವಸಾಹತುಶಾಹಿ ವಿರುದ್ಧದ ಅವಿಶ್ರಾಂತ ಹೋರಾಟದ ನಡುವೆ ಅವರಿಗೆ ಖಾದಿ, ಗ್ರಾಮೀಣ ಕೈಗಾರಿಕೆ, ದೇಶೀ ಆಹಾರ ಹಾಗೂ ಆರೋಗ್ಯ ಪದ್ಧತಿಗಳು ಇಂಥ ಪ್ರಯೋಗಗಳೇ ಹೆಚ್ಚು ಅರ್ಥಪೂರ್ಣವಾಗಿ ಕಂಡಿದ್ದವು.

ಆದರೆ ಕಾಂಗ್ರೆಸ್ ಗಾಂಧಿಯವರನ್ನು ಬ್ರಿಟಿಷ್ ವಸಾಹತುಶಾಹಿ ವಿರೋಧಿ ಹೋರಾಟದ ಒಂದು ಪ್ರಬಲ ಲಾಂಛನವನ್ನಾಗಿ ಮಾತ್ರ ಬಳಸಿಕೊಂಡಿತು. ಜಮೀನ್ದಾರಿ ಹಾಗೂ ಬಂಡವಾಳಶಾಹಿ ವರ್ಗಗಳ ಪ್ರತಿನಿಧಿಗಳಿಂದ ಕೂಡಿದ ಕಾಂಗ್ರೆಸ್ ಗಾಂಧಿಯವರ radical ಆದ ಕಾರ್ಯಕ್ರಮಗಳನ್ನು ಒಪ್ಪಿರಲೇ ಇಲ್ಲ. ಅದು ಸ್ವಾತಂತ್ರ್ಯ ಹೋರಾಟವನ್ನು ಭಾರತೀಯ ಜಮೀನ್ದಾರಿ–ಬಂಡವಾಳಶಾಹಿಯ ವರ್ಗಕ್ಕೆ ಅಧಿಕಾರದ ಹಸ್ತಾಂತರವನ್ನು ಮಾಡಿಸುವ ರಾಜಕೀಯ ಪ್ರಯತ್ನವಾಗಿಯೇ ಕಂಡಿತು. ಹೀಗಾಗಿ ಗಾಂಧಿಯವರ ಅವಿರತ ಪ್ರಯೋಗಗಳನ್ನು ಅದು ಅವರ ವಿಕ್ಷಿಪ್ತ ಸ್ವಭಾವದ ದ್ಯೋತಕವಾಗಿ ನೋಡಿತು. ದಕ್ಷಿಣ ಆಫ್ರಿಕಾದಲ್ಲಿಯ ತಮ್ಮ ಹೋರಾಟಗಳ ಮಧ್ಯೆ 1909 ರಲ್ಲಿ ಗಾಂಧಿ, 'ಹಿಂದ್ ಸ್ವರಾಜ್' ಕೃತಿಯಲ್ಲಿ ಆಮೂಲಾಗ್ರವಾಗಿ ಭಿನ್ನವಾದ, ನಿಜವಾಗಿ ಕ್ರಾಂತಿಕಾರಿಯಾದ ಅರ್ಥವ್ಯವಸ್ಥೆಯ ನಕಾಶೆಯನ್ನು ಬಿಡಿಸಿದ್ದರು. ಅವರೇ ಹೇಳಿಕೊಂಡಂತೆ ಈ ಕೃತಿಯಲ್ಲಿ ವಿವರಿಸಿದ ಚಿಂತನೆಯನ್ನು ತಮ್ಮ ಇಡೀ ಕ್ರಿಯಾಶೀಲ, ಪ್ರಯೋಗಶೀಲ ಜೀವನದಲ್ಲಿ ಎಂದಿಗೂ ಬದಲಾಯಿಸಲಿಲ್ಲ. ಅಲ್ಲದೇ ಅದನ್ನು ಮೂರ್ತವಾಗಿ ಸಾಧಿಸಲು ನಿರಂತರ ಪ್ರಯತ್ನಗಳನ್ನು ಮಾಡಿದರು. ಅವರ ಅನುಯಾಯಿಗಳು ಕೂಡ ಗಾಂಧಿಯವರ ಅರ್ಥಶಾಸ್ತ್ರದ ಕ್ರಾಂತಿಕಾರಿ ಗುಣವನ್ನು ಅರ್ಥಮಾಡಿಕೊಳ್ಳಲಿಲ್ಲ. ರವೀಂದ್ರನಾಥ ಟಾಗೋರ್‌ರು ಅನುಮಾನಪಟ್ಟಂತೆ ಗಾಂಧಿಯವರ ಚರಕಾ, ತಕಲಿ, ನೂಲು ಇವುಗಳನ್ನು ಕೇವಲ ಆರಾಧನೆಯ ಸಂಕೇತಗಳನ್ನಾಗಿ ಅಥವಾ fetish ಗಳಾಗಿ ಈ ಅನುಯಾಯಿಗಳು ನೋಡಿದರು.

ಗಾಂಧಿ ಅರ್ಥಶಾಸ್ತ್ರದ ಹಿಂದಿರುವ ಲೋಕದೃಷ್ಟಿ ಹಾಗೂ ದರ್ಶನಗಳನ್ನು ಸಮಗ್ರವಾಗಿ ಗ್ರಹಿಸಿ ಅವುಗಳಿಗೆ ನೈಜವೂ, ಮೂರ್ತವೂ ಆದ ಆಕಾರವನ್ನು ಕೊಟ್ಟವರು ಜೆ.ಸಿ. ಕುಮಾರಪ್ಪ. ಆ ಕಾಲದ ಅತ್ಯಂತ ಶಿಕ್ಷಿತವಾದ, ಪಾಶ್ಚಿಮಾತ್ಯ ಶಿಕ್ಷಣ, ಸಂಶೋಧನೆಗಳಲ್ಲಿ ಹೆಸರು ಮಾಡಿದ ವಿಶಿಷ್ಟವಾದ ಕ್ರಿಶ್ಚಿಯನ್ ಕುಟುಂಬದಲ್ಲಿ ಜನಿಸಿದ ಕುಮಾರಪ್ಪ ತಮ್ಮ ಬದುಕಿನ ಒಂದು ಹಂತದವರೆಗೆ ವಸಾಹತುಶಾಹಿ ಆಧುನಿಕತೆ ಹಾಗೂ ಪಾಶ್ಚಾತ್ಯ ಚಿಂತನೆಯನ್ನು ಯಾವ ಎಗ್ಗೂ ಇಲ್ಲದೆ ಒಪ್ಪಿಕೊಂಡಿದ್ದರು. ಅವರು ತರಬೇತಿ ಪಡೆದಿದ್ದು ಕೂಡ ಒಬ್ಬ ಲೆಕ್ಕಪರಿಶೋಧಕನಾಗುವುದಕ್ಕಾಗಿ. ಆದರೆ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ, ಅಂಬೇಡ್ಕರ್ ಅವರ ಚಿಂತನೆಯನ್ನು ರೂಢಿಸಿದ ಶಿಕ್ಷಕರ ವಿದ್ಯಾರ್ಥಿಯಾಗಿ ಕುಮಾರಪ್ಪ ವಸಾಹತುಶಾಹಿಯ ಶೋಷಕ ಅರ್ಥವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳತೊಡಗಿದರು. ಪ್ರಾಯಶಃ ಆ ಹೊತ್ತಿಗಾಗಲೇ ಗಾಂಧಿಯವರನ್ನೂ ಪ್ರಭಾವಿಸಿದ ದಾದಾಭಾಯಿ ನವರೋಜಿ ಹಾಗೂ ಆರ್.ಸಿ ದತ್ತರವರ ಚಿಂತನೆಗಳ ಪರಿಚಯವೂ ಅವರಿಗೆ ಆಗಿತ್ತು.

ಈ ಚಿಂತನೆಯು ವಸಾಹತುಶಾಹಿ ಅರ್ಥವ್ಯವಸ್ಥೆ ಭಾರತದ ಅರ್ಥವ್ಯವಸ್ಥೆಯನ್ನು ನಾಶ ಮಾಡಿದ್ದನ್ನು ಸರಿಯಾಗಿ ವ್ಯಾಖ್ಯಾನಿಸಿತ್ತು. ಭಾರತದ ಸಂಪನ್ಮೂಲಗಳನ್ನು ದೋಚಿ ಅದನ್ನು ಶಾಶ್ವತವಾಗಿ ಬಡತನಕ್ಕೆ ತಳ್ಳಿದ್ದನ್ನು ಈ ಚಿಂತನೆ ವಿವರಿಸಿತ್ತು. ಹೀಗಾಗಿ ಈ ಚಿಂತನೆಯ ಪ್ರಭಾವದಲ್ಲಿ ಕೊಲಂಬಿಯದಲ್ಲಿದ್ದಾಗ 'Why is India Poor ?' ಎನ್ನುವ ಭಾಷಣ–ಲೇಖನವನ್ನು ಕುಮಾರಪ್ಪನವರು ಬರೆದಿದ್ದರು. ಭಾರತಕ್ಕೆ ಮರಳಿ ಬಂದ ಮೇಲೆ ತಮ್ಮ ಈ ಬಗೆಯ ಚಿಂತನೆಯನ್ನು ಅರ್ಥಮಾಡಿಕೊಳ್ಳಬಲ್ಲವರು ಗಾಂಧಿ ಮಾತ್ರ ಎಂದುಕೊಂಡು ತಮ್ಮ ಬರಹವೊಂದನ್ನು ಅವರಿಗೆ ಕಳಿಸಿದರು. ತಮ್ಮನ್ನು ಆಶ್ರಮಕ್ಕೆ ಬಂದು ಭೇಟಿಯಾಗುವಂತೆ ಗಾಂಧಿ ಅವರನ್ನು ಆಹ್ವಾನಿಸಿದರು. ಅಲ್ಲಿಂದಾಚೆಗೆ ನಡೆದದ್ದು ಒಂದು ಸುಂದರವಾದ ಪವಾಡ– ವೇಷಭೂಷಣದಲ್ಲಿ 'ಇಂಗ್ಲಿಷ್ ಜಂಟಲ್‌ಮನ್' ಆಗಿದ್ದ ಕುಮಾರಪ್ಪ ಮುಂಬಯಿಯ ಖಾದಿ ಅಂಗಡಿಯೊಂದಕ್ಕೆ ಹೋಗಿ ಅಪ್ಪಟ ಇಂಗ್ಲಿಷ್‌ನಲ್ಲಿ 'ನನಗೆ ಧೋತರ ಕೊಳ್ಳಬೇಕಿದೆ. ಅಳತೆ ತೆಗೆದುಕೊಳ್ಳಿ' ಎಂದು ಕೇಳಿದರು. ಧೋತರಗಳನ್ನು ಅಳತೆ ತೆಗೆದುಕೊಂಡು ತಯಾರಿಸುವುದಿಲ್ಲವೆಂದು ಅಂಗಡಿಯವನು ಅವರಿಗೆ ವಿವರಿಸಿಬೇಕಾಯಿತು! ನೆಲದ ಮೇಲೆ ಕೂತು ಊಟ

ಮಾಡಲೂ ಬರದಿದ್ದ ಕುಮಾರಪ್ಪ ಗಾಂಧಿ ಆಶ್ರಮಕ್ಕೆ ಹೋಗಿದ್ದು ಮಾತ್ರವಲ್ಲ ಪೊರೆ ಕಳಚಿದಂತೆ ತಮ್ಮ ಅಂದಿನವರೆಗಿನ ಜೀವನ ಶೈಲಿಯನ್ನೇ ತೊರೆದು ಅಪ್ಪಟ ಗಾಂಧೀವಾದಿಯಾದರು.

ಅನೇಕ ವಿದ್ವಾಂಸರು ಹೇಳುವಂತೆ ಸ್ವತಃ ಗಾಂಧಿ ಕುಮಾರಪ್ಪನವರ ಮೂಲಕ ತಮ್ಮ ಆರ್ಥಿಕ ಚಿಂತನೆಯನ್ನು ಖಚಿತಗೊಳಿಸಿಕೊಂಡರು. ಗಾಂಧಿ ಅರ್ಥಶಾಸ್ತ್ರವನ್ನು ಕುಮಾರಪ್ಪನವರು ಭಾರತದ ಪುನರ್‌ನಿರ್ಮಾಣದ ಸಾಧವನ್ನಾಗಿ ವಿಸ್ತರಿಸಿದರು. ಅಖಿಲ ಭಾರತೀಯ ಗ್ರಾಮೀಣ ಕೈಗಾರಿಕೆಗಳ ಸಂಘ(AIVIA)ದ ಮೂಲಕ ಮಗನ್‌ವಾಡಿಯನ್ನು ಅಪಾರ ಕ್ರಿಯಾಶೀಲತೆಯ ಪ್ರಯೋಗಶಾಲೆಯನ್ನಾಗಿಸಿದರು. ಇಲ್ಲಿ ಪರಿಷ್ಕೃತವಾದ ಎಣ್ಣೆಯ ಗಾಣವನ್ನು, ಇಂಧನ ಮಿತವ್ಯಯದ ಮಗನ್ ಒಲೆಗಳನ್ನು, ಮಗನ್ ದೀಪಗಳನ್ನು ರೂಪಿಸಲಾಯಿತು. ಸಾವಯವ ಕೃಷಿ ಪದ್ಧತಿಯ ಮೂಲ ಆಧಾರಗಳನ್ನು ರಚಿಸಲಾಯಿತು. ಪಶ್ಚಿಮದಲ್ಲಿ ರಾಸಾಯನಿಕ ಗೊಬ್ಬರಗಳು ಹಾಗೂ ಕೀಟನಾಶಕಗಳ ವಿರುದ್ಧ ಪ್ರತಿರೋಧವು ರೇಚಲ್ ಕಾರ್ಸನ್ ಅವರ ಬರಹದ ಮೂಲಕ 1950–60ರ ದಶಕಗಳಲ್ಲಿ ಆರಂಭವಾದರೆ ಮಗನ್‌ವಾಡಿಯಲ್ಲಿ ಕುಮಾರಪ್ಪನವರು ಆಗಲೇ ಭತ್ತವನ್ನು ಪಾಲಿಷ್ ಮಾಡುವುದರ ವಿರುದ್ಧ, ರಾಸಾಯನಿಕಗಳ ಬಳಕೆಯಿಂದ ಭೂಮಿಯನ್ನು ನಾಶ ಮಾಡುವುದರ ವಿರುದ್ಧ ಅತ್ಯಂತ ವೈಜ್ಞಾನಿಕವಾಗಿ ಚಿಂತಿಸಿ ಬರೆದರು. ಪರ್ಯಾಯಗಳನ್ನು ಕಂಡುಹಿಡಿದರು. ಸ್ವಾರ್ಥ ಹಾಗೂ ಶೋಷಣೆಯೇ ಪ್ರಧಾನವಾದ ಬೇಟೆ ಪ್ರವೃತ್ತಿಯ (Predatory) ಅರ್ಥವ್ಯವಸ್ಥೆಯ ಬದಲಾಗಿ ಪರಿಸರದ ಸಮತೋಲನವನ್ನು ಕಾಪಾಡುವ ಸಮಗ್ರ ಜೀವಿಗಳೊಂದಿಗೆ ಸಹಬಾಳ್ವೆ ನಡೆಸಲು ಅವಕಾಶ ಕಲ್ಪಿಸುವ ಶಾಶ್ವತ ಅರ್ಥವ್ಯವಸ್ಥೆಯನ್ನು (economy of permanence) ರೂಪಿಸಿದರು. ತಮ್ಮ ಚಿಂತನೆಯನ್ನು ಅತ್ಯಂತ ಸರಳವಾಗಿ ವಿವರಿಸಿ ಬರೆದರು. (ಈ ಕಾರಣದಿಂದಲೇ ಭಾರತದ ವಿದ್ವಾಂಸರು ಅವರನ್ನು ಗಂಭೀರವಾಗಿ ಪರಿಗಣಿಸಲಿಲ್ಲವೆಂದು ನನ್ನ ಅನುಮಾನ!)

ಅವರ ಚಿಂತನೆಯ ಧ್ಯೇಯ ವಾಕ್ಯವೆಂದರೆ ಪ್ರಕೃತಿಯು ಸಮಗ್ರತೆಯನ್ನು ಆಧರಿಸುವುದರಿಂದಾಗಿ ಮನುಷ್ಯರು ಹುಟ್ಟಿಸಿದ ವಿಭಾಗೀಕರಣಗಳನ್ನು ಅದು ಒಪ್ಪುವುದಿಲ್ಲ. ನಮಗೆ ಚಿಂತನೆ, ಕ್ರಿಯೆ, ನೈತಿಕತೆ, ಆರ್ಥಿಕತೆ ಇವೆಲ್ಲವೂ ಪರಸ್ಪರ ಸಂಬಂಧವಿಲ್ಲದ ವಿಭಜಿತ ಅಂಶಗಳಾಗಿವೆ. ಇದರಿಂದಾಗಿ ಒಂದು ಕಡೆ ನಾವು ನಮ್ಮನ್ನು ಪ್ರಕೃತಿ ಹಾಗೂ ಇತರ ಜೀವಿಗಳಿಂದ ಅನ್ಯರೆಂದುಕೊಂಡು ಜೀವಿಸಲು ಪ್ರಯತ್ನಿಸುತ್ತೇವೆ. ಇನ್ನೊಂದು ಕಡೆಗೆ ಅರ್ಥಶಾಸ್ತ್ರವೆಂದರೆ ನೈತಿಕ ಪ್ರಶ್ನೆಗಳು ಹಾಗೂ ಮಾನವೀಯ ಮೌಲ್ಯಗಳಿಗೆ ಸಂಬಂಧವಿಲ್ಲದ ಜ್ಞಾನವೆಂದು ತಿಳಿಯುತ್ತೇವೆ. ಈಗಲೂ ಕೂಡ ಅರ್ಥಶಾಸ್ತ್ರವೆಂದರೆ ಮೌಲ್ಯ ನಿರಪೇಕ್ಷಿತವಾದ 'ವಿಜ್ಞಾನ' ಎಂದು ವಾದಿಸಲಾಗುತ್ತದೆ. ಆದರೆ ಕುಮಾರಪ್ಪನವರು ಅರ್ಥವ್ಯವಸ್ಥೆಗಳನ್ನು ನೈತಿಕ ಮೌಲ್ಯಗಳ ಆಧಾರದ ಮೇಲೆ ವರ್ಗೀಕರಿಸುತ್ತಾರೆ. ಯಾವುದರ ಉತ್ಪಾದನೆಯಲ್ಲಿ ತನ್ನ ಯಾವ ಪಾತ್ರವೂ ಇಲ್ಲವೋ ಅದನ್ನು ಅನುಭೋಗಿಸಲು ಆಸ್ಪದವಿರುವ ಅರ್ಥವ್ಯವಸ್ಥೆಯನ್ನು ಅವರು Predatory (ಬೇಟೆಯಾಡುವ) ಅರ್ಥವ್ಯವಸ್ಥೆಯೆಂದು ಕರೆಯುತ್ತಾರೆ.

ನಂತರದ ದಿನಗಳಲ್ಲಿ ಅನೇಕ ವಿದ್ವಾಂಸರು ಕೂಡ ವಸಾಹತು ಶಾಹಿಯ ಅರ್ಥವ್ಯವಸ್ಥೆಯನ್ನು ಇದೇ ಪದದ ಮೂಲಕ ವಿವರಿಸಿದ್ದಾರೆ. ಉದಾಹರಣೆಗೆ ಮುಕ್ತ ಮಾರುಕಟ್ಟೆಯ ಅರ್ಥವ್ಯವಸ್ಥೆಯಲ್ಲಿ ಯಾವುದೂ ಶ್ರಮ ಹಾಗೂ ಉತ್ಪಾದನೆಗಳನ್ನು ನೇರವಾಗಿ ಅವಲಂಬಿಸಿರುವುದಿಲ್ಲ. ಅವೆಲ್ಲ ಅಗೋಚರವಾಗಿಬಿಟ್ಟು ಮಾರುಕಟ್ಟೆಯ ನಿಯಮಗಳೇ ತಮ್ಮದೇ ತರ್ಕದಿಂದ ಎಲ್ಲಾ ಕಾರುಬಾರುಗಳನ್ನು ನಿರ್ವಹಿಸುತ್ತವೆ. ಇದಕ್ಕಿಂತ ಉತ್ತಮವಾದ ಅರ್ಥವ್ಯವಸ್ಥೆಯನ್ನು ಜೇನುಹುಳುಗಳನ್ನು ರೂಪಕವಾಗಿ ಬಳಸಿ ವಿವರಿಸುತ್ತಾರೆ. ಅವು ತಮಗಾಗಿ ಹೂವುಗಳಿಂದ ಮಕರಂದವನ್ನು ಸಂಗ್ರಹಿಸುವಾಗ ಪರಾಗಸ್ಪರ್ಷವನ್ನು ಉಂಟುಮಾಡಿ ಇಡೀ ಪ್ರಕೃತಿಯ ಜೀವಜಾಲಕ್ಕೆ ತಮ್ಮ ಕೊಡುಗೆಯನ್ನು ನೀಡುತ್ತವೆ. ಆದರೆ ಎಲ್ಲಕ್ಕಿಂತಲೂ ಶ್ರೇಷ್ಠವಾದ ಅರ್ಥವ್ಯವಸ್ಥೆಯನ್ನು ಕುಮಾರಪ್ಪನವರು Service economy ಎಂದು ಕರೆಯುತ್ತಾರೆ. ಇದು ತಾಯಿ ಹಕ್ಕಿ ಮರಿಗಳಿಗಾಗಿ ಮಾಡುವ ಕೆಲಸವನ್ನು ಹೋಲುತ್ತದೆ. ಕುಮಾರಪ್ಪನವರ ವರ್ಗೀಕರಣವು ಸೂಚಿಸುವುದು ಸರಳವಾಗಿದೆ. ಇನ್ನಿತರರು ಶೋಷಣೆ, ಸ್ವಾರ್ಥ ಇವುಗಳಿಂದ ಮುಕ್ತವಾಗಿ ಪ್ರಕೃತಿ ಹಾಗೂ ಇಡೀ ಜೀವಜಾಲದ ಜೊತೆಗೆ ಹೊಂದಿಕೆ ಮಾಡಿಕೊಳ್ಳುವ ಅರ್ಥವ್ಯವಸ್ಥೆಯೇ ಆದರ್ಶವಾದುದು. ಇದನ್ನು ವಿವರಿಸುವಾಗ ಕುಮಾರಪ್ಪ ಹಿಂಸೆ ಹಾಗೂ ಅಹಿಂಸೆಯ ಬಗ್ಗೆ ಅಪರೂಪದ ವ್ಯಾಖ್ಯಾನವನ್ನು ನೀಡುತ್ತಾರೆ. ಪ್ರಕೃತಿಯ ನಿಯಮಗಳ ವಿರುದ್ಧ ಹೋಗುವ ಯಾವುದೇ ಕೆಲಸವು ಹಿಂಸೆಯೇ. ಅದರ ನಿಯಮಗಳಿಗೆ ಹೊಂದಿಕೊಂಡು ಹೋಗುವ ಮನುಷ್ಯ ಕ್ರಿಯೆಗಳು ಅಹಿಂಸೆಯ ಕ್ರಿಯೆಗಳು.

ಇದನ್ನು ಅರ್ಥವ್ಯವಸ್ಥೆಗೆ ಅನ್ವಯಿಸುವುದಾದರೆ ನಮ್ಮ ಶ್ರಮ, ಉತ್ಪಾದನೆ, ಯಂತ್ರಗಳು, ತಂತ್ರಜ್ಞಾನ ಇವುಗಳಲ್ಲಿ ಯಾವುದೂ ಪ್ರಕೃತಿಯ ನಿಯಮಗಳಿಗೆ ವಿರುದ್ಧವಾಗಿರಬಾರದು. ಇದು ಗಾಂಧಿಯವರು ಯಂತ್ರ ನಾಗರೀಕತೆಯ ವಿರುದ್ಧ ಮಾಡಿದ ಪ್ರತಿಭಟನೆಯನ್ನು ಸರಿಯಾಗಿ ವ್ಯಾಖ್ಯಾನಿಸುತ್ತದೆ. ಅಂದರೆ ಯಂತ್ರನಾಗರೀಕತೆಯು ಅವರಿಗೆ ಅನಿಷ್ಟವಾಗಿ ಕಂಡಿದ್ದು ಎರಡು ಕಾರಣಗಳಿಂದಾಗಿ. ಒಂದು ಅದು ಮನುಷ್ಯ ಶ್ರಮಜೀವಿಗಳ ಸ್ಥಾನವನ್ನು ಆಕ್ರಮಿಸಿಕೊಂಡು ಅವರನ್ನು ನಿರುಪಯೋಗಿಗಳನ್ನಾಗಿ ಅಥವಾ ನಿರುದ್ಯೋಗಿಗಳನ್ನಾಗಿ ಮಾಡುತ್ತದೆ. ಗಾಂಧಿ ಹಾಗೂ ಕುಮಾರಪ್ಪ ಇಬ್ಬರೂ ಈ ವಿಷಯದಲ್ಲಿ ಸ್ಪಷ್ಟವಾಗಿದ್ದಾರೆ. ಅವರಿಗೆ ಯಂತ್ರಗಳ ಬಗ್ಗೆ ದ್ವೇಷವಿಲ್ಲ. ಅವುಗಳನ್ನು ನಾಶ ಮಾಡಬೇಕೆನ್ನುವ Luddite ತರಹದ ಚಳುವಳಿಗಳಲ್ಲಿ ನಂಬಿಕೆ ಇಲ್ಲ. ಪ್ರಕೃತಿಯ ನಿಯಮಗಳನ್ನು ಮುರಿಯದೇ ಮನುಷ್ಯನ ಶ್ರಮವನ್ನು ಕಡಿಮೆ ಮಾಡುವ ಆದರೆ ಅವನ ಉದ್ಯೋಗವನ್ನು ದೋಚದ ಯಂತ್ರಗಳ ಬಗ್ಗೆ ಆಕ್ಷೇಪಣೆ ಇಲ್ಲ. ಉದಾಹರಣೆಗೆ ಕುಮಾರಪ್ಪ ಎಣ್ಣೆಕಾಳುಗಳಿಂದ ಎಣ್ಣೆಯನ್ನು ತೆಗೆಯುವ ಗಾಣದ ಬಗ್ಗೆ ಮಾಡಿದ ಪ್ರಯೋಗಗಳನ್ನು ಗಮನಿಸಿ. ಅವರ ಪ್ರಕಾರ ಎಣ್ಣೆ ಮಿಲ್‌ಗಳನ್ನು ಸ್ಥಾಪಿಸಿದರೆ, ಸಾಂಪ್ರದಾಯಿಕವಾಗಿ ಆ ಕೆಲಸವನ್ನು ಮಾಡುತ್ತ ಬಂದಿರುವ ಗಾಣಿಗ ಸಮುದಾಯವು ನಿರುದ್ಯೋಗಿಯಾಗಿಬಿಡುತ್ತದೆ. ಅಲ್ಲದೇ ಎಣ್ಣೆ ಮಿಲ್ ಸ್ಥಳೀಯ ಅವಶ್ಯಕತೆಗಳಿಗಿಂತ ಹೆಚ್ಚಾಗಿ ಉತ್ಪಾದನೆ ಮಾಡುವುದರಿಂದಾಗಿ ಅದು ಬಂಡವಾಳಶಾಹಿಯ ಗುಣಗಳನ್ನು ಬೆಳೆಸಿಕೊಳ್ಳುತ್ತದೆ. ಅಲ್ಲದೇ ಲಾಭಕೋರ ದೃಷ್ಟಿಯಿಂದ ಎಣ್ಣೆಯಲ್ಲಿ ಕಲಬೆರಕೆಯು ಆರಂಭವಾಗುತ್ತದೆ. ಚಿಕ್ಕಂದಿನಲ್ಲಿ ಗಾಣಕ್ಕೆ ಹೋಗಿ ಎಣ್ಣೆ ಮಾಡಿಸಿ ತರುತ್ತಿದ್ದ ನೆನಪು ನನಗೆ ಕೂಡಾ ಇದೆ. ಹಾಗೆಯೇ ಭಾರತದ ಸರಕಾರಗಳು ವನಸ್ಪತಿ ಅಥವಾ ಡಾಲ್ಡಾವನ್ನು ಬೆಂಬಲಿಸಿ ನಿಯಮಗಳನ್ನು ಮಾಡಿದ್ದನ್ನು ಹಾಗೂ ಬೆಲ್ಲವನ್ನು ನಿಷೇಧಿಸಿದ್ದನ್ನು ಕುಮಾರಪ್ಪ ವಿರೋಧಿಸಿ ಸೋತರು. ಹಾಗೆಯೆ ಕಬ್ಬನ್ನು ಬೆಳೆಯುವುದೇ ಆದರೆ ಅದನ್ನು ಆಲೆಮನೆಗಳಲ್ಲಿ ಬೆಲ್ಲ ಮಾಡುವ ಬದಲು ಸಕ್ಕರೆ ಮಿಲ್‌ಗಳು, ಫ್ಯಾಕ್ಟರಿಗಳನ್ನು ಸ್ಥಾಪಿಸಿದ್ದರಿಂದ ಆಗಿರುವ ಪರಿಣಾಮಗಳನ್ನು ನಾವು ನೋಡಿದ್ದೇವೆ. ಸಕ್ಕರೆ ಮಿಲ್‌ಗಳಿಂದ ಬರಬೇಕಾದ ಹಣಕ್ಕೆ ಕಾಯುತ್ತಲೇ ಇರುವ ಕರ್ನಾಟಕದ ರೈತರನ್ನು ನಾವು ಕಂಡಿದ್ದೇವೆ. ಯಾವುದೇ ಬೆಳೆಯು ವ್ಯಾಪಾರಿ ಬೆಳೆಯಾದಾಗ ಅದರಿಂದ ಪರಿಸರ, ಸ್ಥಳೀಯ ಅರ್ಥವ್ಯವಸ್ಥೆ ಹಾಗೂ ಕೃಷಿಯ ಮೇಲೆ ಆಗುವ ಪರಿಣಾಮಗಳನ್ನು ನೋಡಿರುವ ಯಾರಿಗಾದರೂ ಕುಮಾರಪ್ಪನವರ ಒಳನೋಟದ ಮಹತ್ವ ಗೊತ್ತಾಗುತ್ತದೆ.

ಇನ್ನೊಂದು ಕಾರಣವೆಂದರೆ, ಗಾಂಧಿ, ಕುಮಾರಪ್ಪ ಇಬ್ಬರೂ ಅರ್ಥವ್ಯವಸ್ಥೆಯನ್ನು ಆತ್ಯಂತಿಕವಾಗಿ ವಿಕೇಂದ್ರಿತವಾದ ನೆಲೆಯಲ್ಲಿ ಮಾತ್ರ ಒಪ್ಪುತ್ತಿದ್ದರು. ಅಂದರೆ ಪ್ರತಿಯೊಂದು ಗ್ರಾಮವೂ ಸ್ವಾಯತ್ತತೆ ಹೊಂದಿರಬೇಕು ಹಾಗೂ ತನ್ನ ಅವಶ್ಯಕತೆಗಳಿಗೆ ಬೇಕಾದದ್ದನ್ನು ಸ್ಥಳೀಯವಾಗಿಯೇ ಉತ್ಪಾದಿಸಬೇಕು. ಹೆಚ್ಚುವರಿ ಉತ್ಪಾದನೆಯು ಲೋಭಕ್ಕೆ ಆಸ್ಪದವಾಗುತ್ತದೆ ಮಾತ್ರವಲ್ಲ ಮಾರುಕಟ್ಟೆ ಆಧಾರಿತವೂ ಆಗತೊಡಗುತ್ತದೆ. ಉದಾಹರಣೆಗೆ ಗಾಂಧಿ ರೈಲು ವ್ಯವಸ್ಥೆಯನ್ನು ವಿರೋಧಿಸಿದ್ದಕ್ಕೆ ಒಂದು ಕಾರಣವೆಂದರೆ ತಾವು ಬೆಳೆದದ್ದಕ್ಕೆ ಎಲ್ಲಿ ಹೆಚ್ಚಿನ ಬೆಲೆ ಸಿಕ್ಕುತ್ತಿದೆಯೋ ಅಲ್ಲಿಗೆ ಮಾರಲು ಅದನ್ನು ತೆಗೆದುಕೊಂಡು ಹೋಗುವುದಕ್ಕೆ ರೈಲು ಅನುಕೂಲವಾಗುತ್ತದೆಯೆನ್ನುವುದು. 1909ರಲ್ಲಿ ಬಹಳ ಜನ ಇದನ್ನು 'ಹಿಂದ್ ಸ್ವರಾಜ್' ನಲ್ಲಿ ಓದಿ ಅದನ್ನು ವಿಕ್ಷಿಪ್ತ ತರ್ಕವೆಂದು ವ್ಯಾಖ್ಯಾನಿಸಿದ್ದರು. ಆದರೆ ಕುಮಾರಪ್ಪನವರ ಅನುಭವವು ಗಾಂಧೀವಾದವನ್ನು ಸಮರ್ಥಿಸಿತು. ಕೆಲವು ಪ್ರದೇಶಗಳಲ್ಲಿ ಅಕ್ಕಿಯನ್ನು ಹೆಚ್ಚುವರಿಯಾಗಿ ಬೆಳೆದು ಅದನ್ನು ದೂರದ ಪ್ರದೇಶಗಳಿಗೆ ರೈಲಿನ ಮೂಲಕ ಸಾಗಾಣಿಕೆ ಮಾಡುವ ಸ್ಥಿತಿಯಲ್ಲಿ ತೂಕ ಕಡಿಮೆಯಾಗಬೇಕೆಂದು ಅಕ್ಕಿಯನ್ನು ಪಾಲಿಷ್ ಮಾಡುವುದು ಅನಿವಾರ್ಯವಾಯಿತು. ಅಲ್ಲದೇ ಅದು ಬಹಳ ದಿನ ಉಳಿಯಲೆಂದು ಕೀಟನಾಶಕಗಳನ್ನು ಬಳಸಲಾಯಿತು. ಇದರ ಬಗ್ಗೆ ಕುಮಾರಪ್ಪನವರ ಟಿಪ್ಪಣಿ ಮಾರ್ಮಿಕವಾಗಿತ್ತು. ಪ್ರಾಣಿಗಳಲ್ಲೇ ಅತಿ ಬುದ್ಧಿವಂತನಾದ ಮನುಷ್ಯ ತಾನು ಬೆಳೆದ ಬೆಳೆಯ ಅತ್ಯಂತ ಪೌಷ್ಟಿಕವಾದ ಅಂಶವನ್ನು ತೆಗೆದು ಅದನ್ನು ಪ್ರಾಣಿಗಳಿಗೆ, ಹಂದಿಗಳಿಗೆ ಉಣಬಡಿಸುತ್ತಾನೆ! ಈ ಸಾಮಾನ್ಯವಾದ ಘಟನೆಗಳನ್ನು ಗಮನಿಸಿದರೆ ಮತ್ತು ಅವುಗಳನ್ನು ಕುಮಾರಪ್ಪ ಗ್ರಹಿಸಿದ ಬಗೆಯನ್ನು ನೋಡಿದರೆ ಅತ್ಯಂತ ಪ್ರಬುದ್ಧವಾದ ಲೋಕದೃಷ್ಟಿಯೊಂದು ಅದರ ಹಿಂದೆ ಗೋಚರವಾಗುತ್ತದೆ. ವಿಕೇಂದ್ರೀಕರಣದ ವ್ಯವಸ್ಥೆಯೊಳಗೆ ಪ್ರತಿ ಹಳ್ಳಿಯೂ ಸ್ವಾಯತ್ತವಾಗಿ, ತನ್ನ

(೨೯ನೇ ಪುಟಕ್ಕೆ

ಗಾಂಧಿಯವರತ್ತ ನೋಟ-೬

ಗಾಂಧಿವರೊಂದಿಗೆ ಒಂದು ಸಮಾಜವಾದಿ ಮಾತುಕತೆ

೧೯೩೪ರಲ್ಲಿ ಜಯಪ್ರಕಾಶ್ ನಾರಾಯಣರ ನೇತೃತ್ವದಲ್ಲಿ ಮತ್ತು ಆಚಾರ್ಯ ನರೇಂದ್ರದೇವ ಮತ್ತು ಸಂಪೂರ್ಣಾನಂದರ ಮಾರ್ಗದರ್ಶನದಲ್ಲಿ ಕಾಂಗ್ರೆಸ್ ಪಕ್ಷದೊಳಗೇ ಒಂದು ಉಪ ಪಕ್ಷವಾಗಿ ಕಾಂಗ್ರೆಸ್ ಸಮಾಜವಾದಿ ಪಕ್ಷ ಸ್ಥಾಪಿತವಾಗುವ ಸಂದರ್ಭದಲ್ಲಿ, ರಷಿಯಾದ ಅಕ್ಟೋಬರ್ ಕ್ರಾಂತಿಯಿಂದ ಪ್ರೇರಣೆ ಪಡೆದು ಮಾರ್ಕ್ಸ್‌ವಾದವನ್ನು ತನ್ನ ತಾತ್ವಿಕತೆಯಾಗಿ ಸ್ವೀಕರಿಸಿದ್ದ ಉದ್ದೇಶಿತ ಪಕ್ಷ, ಅದಕ್ಕೆ ಗಾಂಧಿಯವರ ಬೆಂಬಲ ಪಡೆಯಬಯಸಿತು. ಅದು ತನ್ನ ನೀತಿ-ಕಾರ್ಯಕ್ರಮಗಳ ಪತ್ರವನ್ನು ಅವರಿಗೆ ನೀಡಿ ಚರ್ಚಿಸಲು ಮಿನೂ ಮಸಾನಿಯವರನ್ನು ನಿಯೋಜಿಸಿತು. ಈ ಸಂಬಂಧವಾಗಿ ಮಸಾನಿಯವರು ೧೯೩೪ರ ಮೇ ೨೫ರಂದು ಗಾಂಧಿಯವರೊಂದಿಗೆ ನಡೆಸಿದ ಮಾತುಕತೆಯ ದಾಖಲೆಯೊಂದನ್ನು ಇಲ್ಲಿ ನೀಡುತ್ತಿದ್ದೇವೆ.

ಈ ಮಾತುಕತೆಗೆ ಮುನ್ನ ಗಾಂಧಿಯವರು ಕಾಂಗ್ರೆಸ್ ಸಮಾಜವಾದಿ ಪಕ್ಷದ ಉದಯದ ಪ್ರಸ್ತಾವನೆಯನ್ನು ಸ್ವಾಗತಿಸಿದ್ದರಾದರೂ, ಅದರ ಕೆಲವು ಕಾರ್ಯಕ್ರಮಗಳ ಬಗ್ಗೆ-ವಿಶೇಷವಾಗಿ ಖಾಸಗಿ ಬಂಡವಾಳ ಕುರಿತ ಸಗಟು ವಿರೋಧ ಮತ್ತು ಖಾಸಗಿ ಆಸ್ತಿಯನ್ನು ಪರಿಹಾರ ನೀಡದೆ ಪ್ರಭುತ್ವ ವಶಪಡಿಸಿಕೊಳ್ಳುವ ನೀತಿ-ತಮ್ಮ ಆಕ್ಷೇಪಣೆಯನ್ನುವ್ಯಕ್ತಪಡಿಸಿದ್ದರು. ಈ ಹಿನ್ನೆಲೆಯಲ್ಲಿ ಈ ದಾಖಲೆ ಗಾಂಧಿವರ ಆರ್ಥಿಕ ದೃಷ್ಟಿಕೋನ ಕುರಿತು ವಿಶೇಷ ಬೆಳಕು ಚೆಲ್ಲುವಂತಿದೆ-ಸಂ.

ಮಸಾನಿ: ತಮ್ಮ ಮುಖ್ಯವಾದ ಬಿನ್ನಾಭಿಪ್ರಾಯ ಸಮಾಜವಾದದ ಕಾರ್ಯವಿಧಾನದಲ್ಲೋ ಅಥವಾ ಸಮಾಜವಾದವೆಂಬುದು ಹಿಂಸೆಯ ಆಧಾರದಲ್ಲಿ ರೂಪುಗೊಂಡಿದೆ ಎಂಬ ಸಂಶಯವೋ?

ಗಾಂಧಿ : :ಅದು ಸಂಶಯದ ಪ್ರಶ್ನೆ ಅಲ್ಲ, ಬದಲಾಗಿ ಸತ್ಯ ಸಂಗತಿಯಾಗಿದೆ. ಹಿಂಸೆ ಎನ್ನುವುದು ಕೇವಲ ಭೌತಿಕವಾಗಿಯೇ ಇರಬೇಕಾಗಿಲ್ಲ. ನಿಮ್ಮ ಸಮಾಜವಾದ. ಬಲಪ್ರಯೋಗವನ್ನು ನಂಬಿದೆ.

ಮ: ಆದರೆ ಈ ಬಲಪ್ರಯೋಗ ಮಾರ್ಗವಷ್ಟೆ ಗುರಿಯಲ್ಲ. ಒಂದು ಆದರ್ಶವನ್ನು ಸಾಧಿಸಲು ಅಥವಾ ಬಹುಜನರ ಒಳಿತಿಗಾಗಿ ಬಳಸಲ್ಪಡುತ್ತದೆ, ಅಷ್ಟೇ.

ಗಾ: ಹಿಂಸೆ ಅಸಹಿಷ್ಣುತೆಯ ಸಂಕೇತ. ಅಹಿಂಸೆ ತಾಳ್ಮೆಯ, ಸಹಿಷ್ಣುತೆಯ ಸಂಕೇತ. ಮಹತ್ವದ ಸುಧಾರಣೆಗಳನ್ನು ಅಸೀಮ ತಾಳ್ಮೆ ಮತ್ತು ಸಮಾಧಾನಗಳಿಂದ ಮಾತ್ರ ಸಾಧಿಸಲು ಸಾಧ್ಯ. ಹಿಂಸೆಯ ವಿಧಾನ ಬಹಳ ದಿನ ಬಾಳದು; ಮುಂದೊಂದು ದಿನ ಅದು ವಿಫಲವಾಗುವುದು ಸತ್ಯ.ಹಿಂಸೆಯಲಗಲಿ ಬಿಫಲತೆಯ ಬೀಜ ಅಡಗಿದೆ. ಉದಾಹರಣಗೆ ನೂರು ಜನರ ಸಮೂಹವೊಂದರಲ್ಲಿ ಐದು ಮಂದಿ ಶಸ್ತ್ರಸಜ್ಜಿತರೂ ಮತ್ತು ಬಲಿಷ್ಠರೂ ಆಗಿದ್ದು ಅವರ ಆಳ್ವಿಕೆಯನ್ನು ವಿರೋಧಿಸುವ ಉಳಿದ ತೊಂಬತ್ತೈದು ಅಸಹಾಯಕ ಜನರ ರುಂಡವನ್ನು ಕಡಿದು ಹಾಕುವ ಶಕ್ತಿಯುಳ್ಳವರೂ ಆಗಿದ್ದಾರೆ ಎಂದುಕೊಳ್ಳಿ. ಆದರೂ ಈ ಐದು ಜನರ ಪಾಲಿಗೆ ಅದು ಅವರ ಸಂಪೂರ್ಣ ವೈಫಲ್ಯವೇ ಆಗಿದೆ ಎನ್ನಬೇಕು. ಅಥವಾ ಆ ತೊಂಬತ್ತೈದು ಜನರಲ್ಲಿ ಯಾರಾದರು ಒಬ್ಬ ಉಳಿದ ತೊಂಬತ್ನಾಲ್ಕು ಜನರ ಅಭಿಪ್ರಾಯವನ್ನು ಕಡೆಗಣಿಸಿ ಈ ಐದು ಜನರನ್ನು ಕೊಂದು ಅಧಿಕಾರವನ್ನು ಗಳಿಸಿಕೊಳ್ಳುತ್ತಾನೆಂದು ಇಟ್ಟುಕೊಳ್ಳಿ. ಆಗಲೂ ಈ ಹೊಸ ಆಡಳಿತವು ಎಲ್ಲರಿಗೂ ಒಪ್ಪಿತವಾಗಿದೆ ಮತ್ತು ಒಳ್ಳೆಯದಾಗಿರುತ್ತದೆ ಎಂದು ತಿಳಿಯುವ ಹಾಗಿಲ್ಲ. ಅಬ್ಬಬ್ಬಾ ಎಂದರೆ ಒಂದು ದುಷ್ಟ ಆಡಳಿತವು ತೊಲಗಿ ಇನ್ನೊಂದು ದುಷ್ಟ ಆಳ್ವಿಕೆಯು ಆ ಸ್ಥಾನವನ್ನು ಆಕ್ರಮಿಸಿಕೊಂಡಿತು ಎಂದು ಹೇಳಬಹುದಷ್ಟೆ.

ಮ: ಆದರೆ ಉಳಿದ ತೊಂಬತ್ನಾಲ್ಕು ಜನರ ಆಕಾಂಕ್ಷೆ ಮತ್ತು ಸಕ್ರಿಯ ಸಹಕಾರವಿಲ್ಲದೆ ಒಬ್ಬನು ಅಧಿಕಾರವನ್ನು ಗಳಿಸಿಕೊಳ್ಳಲಾಗುವುದಿಲ್ಲವಲ್ಲ?

ಗಾ: ಆದರೆ ನಾವು ಉಳಿದ ಜನರ ಆಸೆ- ಆಕಾಂಕ್ಷೆಗಳು ಇಲ್ಲವೆಂದು ಭಾವಿಸಿ ಮಾತಾಡುತ್ತಿದ್ದೇವೆ.

ಮ: ಆದರೆ ನಮ್ಮ ಮಟ್ಟಿಗೆ ಜನರಲ್ಲಿ ತೀವ್ರತರವಾದ ಆಕಾಂಕ್ಷೆಗಳು ಇದೆ ಮತ್ತು ಸಮಾಜವಾದಿ ಕಾರ್ಯಕ್ರಮಗಳನ್ನು ಜನರು ಅರ್ಥಮಾಡಿಕೊಂಡು ಒಪ್ಪಿಕೊಳ್ಳಬಲ್ಲರು

ಗಾ: ನಮ್ಮ ಒರಿಸ್ಸಾದ ರೈತಾಪಿ ಜನರೊಟ್ಟಿಗೆ ನೀವು ಹೇಳುವ ವ್ಯಾಪಾರದ ಏಕಸ್ವಾಮ್ಯತೆಯ ಬಗ್ಗೆ ಮತ್ತು ಕೈಗಾರಿಕೆಗಳ ಸಾಮಾಜೀಕರಣದ ಬಗ್ಗೆ ಒಮ್ಮೆ ಮಾತಾಡಿ ನೋಡಿ. ಅವರಿಗೆ ಅದರ ತಲೆಬುಡ ಅರ್ಥವಾಗುವುದಿಲ್ಲ.

ಮ: ಆದರೆ ನಮ್ಮ ಗುಜರಾತ ಮತ್ತು ದಖ್ಖನ್ ಪ್ರದೇಶದ ರೈತರಿಗೆ ಭೂಸುಧಾರಣೆಯ ಬಗ್ಗೆ ಚೆನ್ನಾಗಿ ಗೊತ್ತಿದೆ.

ಗಾ: ಸರಿ, ಆದರೆ ನಾನು ಸಾಕಷ್ಟು ಚೆನ್ನಾಗಿ ಬಲ್ಲಂತೆ ಗುಜರಾತಿ ರೈತರು ತಮ್ಮ ಹಳ್ಳಿಗಳಲ್ಲಿ ಸಂಸ್ಕೃತೀಕರಣಗೊಂಡ ಬನಿಯಾಗಳ ಶಕ್ತಿ ಕೇಂದ್ರಗಳನ್ನು ಒಪ್ಪಿಕೊಂಡು ಅವರೇ ತಮ್ಮ ಉದ್ಧಾರಕರು ಮತ್ತು ರಕ್ಷಕರು ಮತ್ತು ಸಂಕಷ್ಟಗಳ ನಿವಾರಕರು ಎಂದೆಲ್ಲ ತಿಳಿದಿದ್ದಾರೆ. ಇಂತಹ ಮನಸ್ಥಿತಿಯುಳ್ಳ ಜನರನ್ನು ಮೊದಲು ಎಚ್ಚರಿಸಬೇಕಾಗಿದೆ. ಆರಂಭದಲ್ಲೇ ಅತಿಯಾದ ಮಹತ್ವಾಕಾಂಕ್ಷೆಯುಳ್ಳ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ನಾನು ಅತ್ಯಂತ ವ್ಯಾವಹಾರಿಕ ಮನುಷ್ಯ. ನಿಮ್ಮ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ನಾನು ವಾಸ್ತವಿಕವಾಗಿ ಏನು ಮಾಡಬಹುದೋ ಅಷ್ಟಕ್ಕೆ ಕಡಿತಗೊಳಿಸುತ್ತೇನಷ್ಟೆ.

ಮ: ವರ್ತಮಾನದಲ್ಲಿ ಕೃಷಿರಂಗದಲ್ಲಿ ವಿಕೇಂದ್ರೀಕರಣದ ಪ್ರವೃತ್ತಿ ಕಂಡುಬರುತ್ತಿದೆ. ಉತ್ಪಾದನೆಯನ್ನು ಹೆಚ್ಚಿಸುವ ಸಂದ್ರ ಕೃಷಿ ಮಾದರಿಯು ಸಣ್ಣ ಪ್ರಮಾಣದ ಹಿಡುವಳಿಗಳಲ್ಲಷ್ಟೇ ಸಾಧ್ಯವಿದೆ. ಆದರೆ ಕೈಗಾರಿಕೆಯಲ್ಲಿ ದೊಡ್ಡ ಪ್ರಮಾಣದ ಉತ್ಪಾದನೆ ಮತ್ತು ನಂತರ್ಲದರ ಮೇಲೆ ಅದೇ ಪ್ರಮಾಣದ ನಿಯಂತ್ರಣವನ್ನು ಸಾಧಿಸುವ ಪ್ರವೃತ್ತಿ ಕಂಡುಬರುತ್ತಿದೆ. ಇಂಥ ಸಂದರ್ಭಗಳಲ್ಲಿ ಅನಿವಾರ್ಯವಾಗಿ ಕಾರ್ಮಿಕ ಶಕ್ತಿಗೂ ಮತ್ತು ಬಂಡವಾಳಕ್ಕೂ ಸಂಘರ್ಷ ಪ್ರಾರಂಭವಾಗುತ್ತದೆ. ಇನ್ನು ಕೆಲವು ಕೈಗಾರಿಕೆಗಳಂತೂ ಅವುಗಳ ಮೂಲ ಸ್ವರೂಪದಲ್ಲೇ ಬೃಹತ್ ಪ್ರಮಾಣದ್ದಾಗಿರುತ್ತದೆ.

ಗಾ: ಸಾರಿಗೆ, ವಿಮೆ, ಷೇರು ವಿನಿಮಯ, ತೈಲ ಮುಂತಾದ ಬೃಹತ್ ಪ್ರಮಾಣದ ಬಂಡವಾಳವನ್ನು ಬೇಡುವ ಕೈಗಾರಿಕೆಗಳ ಮಾಲೀಕತ್ವ ಸರಕಾರದ ಹಿಡಿತದಲ್ಲಿರಬೇಕು. ಆದರೆ ಎಲ್ಲ ದೊಡ್ಡ ಕೈಗಾರಿಕೆಗಳನ್ನು ಸರಕಾರ ವಹಿಸಿಕೊಳ್ಳಬೇಕು ಎಂದು ನಾನು ಒತ್ತಾಯಿಸುವುದಿಲ್ಲ. ಒಂದೊಮ್ಮೆ ಒಬ್ಬ ವ್ಯಕ್ತಿ ತನ್ನಲ್ಲಿ ಸಾಕಷ್ಟು ಬುದ್ಧಿ, ಅನುಭವ ಮತ್ತು ಪರಿಣತಿ ಇದ್ದು ಸಮಾಜದ ಒಳಿತಿಗಾಗಿ ತನ್ನ ಕುಶಲತೆಗಳನ್ನು ಬಳಸಿಕೊಂಡು ಬೃಹತ್ ಕೈಗಾರಿಕೆಯನ್ನು ಅತಿ ಕಡಿಮೆ ಪ್ರತಿಫಲದಲ್ಲಿ ನಡೆಸುತ್ತೇನೆಂದು ಸ್ವ-ಇಚ್ಛೆಯಿಂದ ಮುಂದೆ ಬಂದರೆ ಅಂಥ ಸಂದರ್ಭದಲ್ಲಿ ಅದಕ್ಕೆ ಅವಕಾಶ ಕೊಡುವುದಕ್ಕೆ ನಮ್ಮ ವ್ಯವಸ್ಥೆಯನ್ನು ಅಷ್ಟರಮಟ್ಟಿಗೆ ಮುಕ್ತವಾಗಿ, ನಮ್ಯವಾಗಿ ಇಟ್ಟುಕೊಂಡಿರಬೇಕೆಂದು ನಾನು ಬಯಸುತ್ತೇನೆ.

ಮ: ಎಲ್ಲ ಖಾಸಗಿ ಲಾಭದ ನಿರ್ಮೂಲನೆ ಮಾಡುವುದೇ ಉದ್ದೇಶವಾಗಿದ್ದರೆ ಇಂಥ ನಮ್ಯತೆ ಉಳ್ಳ ವ್ಯವಸ್ಥೆಗೆ ನನ್ನದೂ ಯಾವ ಅಭ್ಯಂತರವಿಲ್ಲ. ಸಮಾಜಕ್ಕೆ ಕೆಲಸ ಮಾಡುವ ಇಚ್ಛೆಯುಳ್ಳ ಯಾವುದೇ ವ್ಯಕ್ತಿಗೆ ವ್ಯವಸ್ಥೆಯಲ್ಲಿ ಅವಕಾಶ ತೆರೆದಿರಬೇಕು. ಆದರೆ ಅಂಥ ಕೈಗಾರಿಕೆಗಳು ರಾಷ್ಟ್ರೀಯ ಮಾದರಿಯಲ್ಲಿ ನಡೆಯಬೇಕೆಂದು ನನ್ನ ಅಭಿಪ್ರಾಯ. ಆದರೆ ಕೈಗಾರಿಕೆಗಳ ಆಡಳಿತ ವ್ಯವಸ್ಥೆ ಪ್ರಾತಿನಿಧಿಕತೆಯ ಆಧಾರದಲ್ಲಿ ನಡೆಯಬೇಕು ಮತ್ತು ಅದರಲ್ಲಿ ವಿಭಾಗವೂ ತನ್ನದೇ ಪ್ರಾತಿನಿಧ್ಯವನ್ನು ಹೊಂದಿರಬೇಕು ಎಂದು ಬಯಸುತ್ತೇನೆ.

ಗಾ: ವಯಸ್ಕ ಮತದಾನ ಪದ್ಧತಿ ಜಾರಿಯಲ್ಲಿರುವ ಪ್ರಭುತ್ವವೊದರಲ್ಲಿ ಇದರ ಅಗತ್ಯವೇ ಇರಲಾರದು. ಭಾರತವು ಕೃಷಿ ಪ್ರಧಾನ ದೇಶವಾಗಿದ್ದು, ವಯಸ್ಕ ಮತದಾನ ಪದ್ದತಿಯು, ಕೃಷಿ ಕ್ಷೇತ್ರಕ್ಕೆ ಸಹಜವಾಗಿಯೇ ಹೆಚ್ಚಿನ ಪ್ರಾಧಾನ್ಯತೆಯನ್ನು ಒದಗಿಸುತ್ತದೆ.

ಮ: ರಷ್ಯಾ ದೇಶದಲ್ಲಿ ಸ್ವಲ್ಪ ಬೇರೆಯದೇ ಆದ ವ್ಯವಸ್ಥೆ ಇದೆ. ನಗರ ಪ್ರದೇಶದ ಕಾರ್ಮಿಕರ ಮತಕ್ಕೆ ಹೆಚ್ಚಿನ ತೂಕ/ಬೆಲೆಯನ್ನು ಕಟ್ಟಲಾಗಿದೆ-ನಾಲ್ಕು ಕೃಷಿಕರ ಮತಗಳು ಒಂದು ನಗರದ ಮತಕ್ಕೆ ಸಮಗೊಳಿಸಲಾಗಿದೆ. ಉಳಿದಂತೆ ಚುನಾವಣಾ ಪದ್ದತಿಯು, ನಮ್ಮ ಕಾಂಗ್ರೆಸ್ ಪಕ್ಷದ ಚುನಾವಣೆಯಂತೆ, ಪರೋಕ್ಷವಾಗಿಯೇ ನಡೆಯುತ್ತದೆ.

ಗಾ: ಆದರೆ ನಾನು ನಗರದ ಮತಗಳಿಗೆ ಆ ರೀತಿಯ ಆದ್ಯತೆ ಕೊಡುವುದನ್ನು ಒಪ್ಪುವುದಿಲ್ಲ. ದುಂಡು ಮೇಜಿನ ಪರಿಷತ್ತಿನಲ್ಲಿ ನಾನು ವಯಸ್ಕ ಮತದಾನ ಪದ್ಧತಿಯನ್ನು ಮತ್ತು ಗ್ರಾಮೀಣ ಜನರಿಗೆ ಮತದಾನದ ಹಕ್ಕನ್ನು ಜಾರಿಗೆ ತರಲು ಒತ್ತಾಯಿಸಿದೆ. ಆದರೆ ಈ ಪ್ರಸ್ತಾವನೆಯನ್ನು ತಿರಸ್ಕರಿಸಲಾಯಿತು. ಏಕೆಂದರೆ ದುಂಡು ಮೇಜಿನ ಪರಿಷತ್ತೇ ಪ್ರಾತಿನಿಧಿಕವಾಗಿರಲಿಲ್ಲ.

ಮ: ಹೌದು, ಭೂಮಾಲಿಕರು ಮತ್ತು ಬಂಡವಾಳಶಾಹಿಗಳು ಪ್ರತಿನಿಧಿಸುವಂಥ ಯಾವುದೇ ಪರಿಷತ್ತು ವಯಸ್ಕ ಮತದಾನ ಪದ್ಧತಿಯನ್ನು ತಿರಸ್ಕರಿಸುವುದು ಸಹಜವೆ. ಅವರು ಹೇಳುವುದೇ ಒಂದು, ಮಾಡುವುದು ಇನ್ನೊಂದು.

ಗಾ: ಆಗ ಅವರ ಮನವೊಲಿಸಿ ನಮ್ಮ ನಿಲುವಿಗೆ ಪರಿವರ್ತಿಸಬೇಕು. ನನಗೆ ನೀವು ಹೇಳುವ ವರ್ಗ ಸಂಘರ್ಷದಲ್ಲಿ ನಂಬಿಕೆಯಿಲ್ಲ.

ಮ: ಆದರೆ ನಾವು ವ್ಯಕ್ತಿಯನ್ನು ಪರಿವರ್ತಿಸಬಹುದೇ ಹೊರತು ವ್ಯವಸ್ಥೆಯನ್ನಲ್ಲ. ಉದಾಹರಣೆಗೆ ಚಂಪಾರಣ್ ತೋಟಗಳ ಮಾಲೀಕರನ್ನೇ ತೆಗೆದುಕೊಳ್ಳೋಣ. ಕೊನೆಯವರೆಗೂ ಅವರು ಬದಲಾಗಲೇ ಇಲ್ಲ. ಅಲ್ಲಿನ ಗವರ್ನರ್ ಒತ್ತಡ ತರದ ಹೊರತು ಅಲ್ಲಿ ಏನೂ ಮಾಡಲಾಗುತ್ತಿರಲಿಲ್ಲ.

ಗಾ: ಹಾಗೆಂದು ನಾನು ಖಚಿತವಾಗಿ ಹೇಳಲಾರೆ. ಕೆಲವು ಮಾಲೀಕರು ಸಾಕಷ್ಟು ಪರಿವರ್ತನೆ ಕಂಡು ಬಂದಿತ್ತು. ಅಲ್ಲಿನ ಆಡಳಿತ ಮತ್ತು ಬೆಳೆಗಾರರು ಯಾವ ಪಾತ್ರವನ್ನು ವಹಿಸಿದರು ಎಂದು ನನಗೆ ಸರಿಯಾಗಿ ತಿಳಿದಿಲ್ಲ. ಸರಿಯಾಗಿ ತಿಳಿದಿರುವುದೇನೆಂದರೆ ಮಾಲೀಕರ ಸಹಕಾರ ಇಲ್ಲದೇನೆ ಆಡಳಿತವು ಅಲ್ಲಿ ಏನು ಮಾಡಲಾಗುತ್ತಿರಲಿಲ್ಲ.

ಮ: ಆದರೆ ಗವರ್ನರ್ ಪ್ರತಿಕೂಲವಾಗಿ ನಡೆದುಕೊಂಡಿದ್ದರೆ ತೋಟಗಳ ಮಾಲೀಕರು ಕೊನೆ ತನಕವೂ ಪ್ರತಿರೋಧ ಒಡ್ಡುತ್ತಿದ್ದರು.

ಗಾ: ಈಗ ನಮ್ಮ ಮಾತುಕತೆಯ ದಿಕ್ಕನ್ನು ಬದಲಿಸುವ ಅಗತ್ಯವಿಲ್ಲ. ಕೆಲವು ಮಾಲೀಕರು ಖಂಡಿತವಾಗಿಯೂ ಬದಲಾಗಿದ್ದಾರೆ ಎಂದು ಹೇಳಬಲ್ಲೆ. ಭಾರತದಲ್ಲಿ ಯುರೋಪಿಯನ್ನರು ನಾಲ್ಕು ವರ್ಗಗಳಾಗಿ ನೆಲೆ ಇದ್ದಾರೆ- ವ್ಯಾಪಾರಸ್ಥರು,ಸೈನಿಕರು,ನಾಗರಿಕರು ಮತ್ತು ಮತ ಭೋದಕರು. ಇವರಲ್ಲಿ ಯಾವುದೇ ವ್ಯಕ್ತಿಗಳು ಪರಿವರ್ತನೆಯಾಗಲಾರರು ಎಂದು ನೀವು ಸೂಚಿಸುವುದಿಲ್ಲವಷ್ಟೆ? ನೀವು ಮೊದಲು ಹಿಂಸೆಯಲ್ಲಿನ ನಂಬಿಕಕೆಯನ್ನು ತೊರೆಯಿರಿ. ಹಿಂಸೆ ತೊರೆದಾಗ ನಮ್ಮಿಬ್ಬರಲ್ಲಿ ಯಾವ ಭೇದವು ಇಲ್ಲವೆಂಬ ಅರಿವಾಗುತ್ತದೆ. ನಾವಿಬ್ಬರೂ ಹಸಿವಿನಿಂದ ನರಳುತ್ತಿರುವ ಲಕ್ಷಾಂತರ ಜನರ ಕಲ್ಯಾಣವನ್ನೇ ಬಯಸುತ್ತಿದ್ದೇವಲ್ಲವೇ.

ಈ ಮಾತುಕತೆಯನ್ನು ದಾಖಲಿಸಿದ ಗಾಂಧೀಜಿಯವರ ಹಂಗಾಮಿ ಕಾರ್ಯದರ್ಶಿಯಾಗಿದ್ದ ಎನ್.ಆರ್.ಮಲ್ಕಾನಿ ಯವರು ಈ" ದಾಖಲೆಯನ್ನು" ಪ್ರಕಟಿಸಲು ಗಾಂಧೀಜಿಯವರು ಅನುಮೋದನೆ ಕೊಟ್ಟಿದ್ದರು ಎಂದು ಈ ಚರ್ಚೆಯ ತಮ್ಮ ಪರಿಚಯಾತ್ಮಕ ಟಿಪ್ಪಣಿಯಲ್ಲಿ ತಿಳಿಸಿದ್ದಾರೆ. ಶ್ರೀ ಮಲ್ಕಾನಿಯವರು ಅದರಲ್ಲಿ ಈ ಮಾತುಕತೆಯ ಸಂದರ್ಭವನ್ನು ವರ್ಣಿಸಿರುವುದು ಹೀಗೆ : "ಅಂದು ೧೯೩೪ನೇ ಇಸವಿ ಮೇ ೨೫ ನೇ ತಾರೀಕು, ಶುಕ್ರವಾರ. ನಾವು ಸಿಸುವಾ ಗ್ರಾಮದಿಂದ ಪಾಠಪುರಕ್ಕೆ ಬೆಳಿಗ್ಗೆಯೇ ಸುಮಾರು ಐದು ಮೈಲು ದೂರ ನಡಿಗೆಯಲ್ಲೇ ಹೊರಟೆವು. ಗಾಂಧೀಜಿಯವರು ತಲೆಯ ಮೇಲೆ ಒಂದು ಸಣ್ಣ ವಸ್ತ್ರವನ್ನು ಹೊದ್ದು, ನಮ್ಮಿ್ಲ ಆತ್ಮೀಯತೆಯನ್ನೂ, ಹಿತಭಾವವನ್ನೂ ಉಂಟು ಮಾಡುವಂತೆ ಒಂದು ಕೈಯನ್ನು ಶ್ರೀ ಮಸಾನಿಯವರ ಹೆಗಲ ಮೇಲೂ ಇನ್ನೊಂದು ಕೈಯನ್ನು ನನ್ನ ಹೆಗಲ ಇರಿಸಿಕೊಂಡು ನಮ್ಮ ಮನವೊಳಿಸುವಂತೆ ಮಾತಾಡುತ್ತಾ, ಆಗಾಗ್ಗೆ ನಮ್ಮ ಮಾತುಗಾರಿಕೆಯ ಓಟವನ್ನು್ನ ನಿಯಂತ್ರಿಸುತ್ತಾ ಬರಿಗಾಲಿನಲ್ಲೇ ನ್ತ ಈ ಮಾತುಕತೆಯಲ್ಲಿ "ಮ" ಎನ್ನುವುದು ಮಲ್ಕಾನಿ ಮತ್ತು ಮಸಾನಿ ಇಬ್ಬರೂ ಎಂದು ಅರ್ಥ ಮಾಡಿಕೊಳ್ಳುವುದು.

(ಇದು ಮೊದಲು ೧೯೩೪ರ ಆಗಸ್ಟ್ ೪ರ ಹಿಂದುಸ್ಥಾನ್ ಟೈಮ್ಸ್‌ನಲ್ಲಿ ಪ್ರಕಟವಾಯಿತು ಮತ್ತು ಸಂಪುಟ ೬೪ ಮಹಾತ್ಮ ಗಾಂಧಿಯವರ ಸಂಗ್ರಹಿತ ಕೃತಿ **ಸಂಪುಟ-೬೪ರಲ್ಲೂ ಸೇರಿದೆ.)**



(ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪಕ ಸದಸ್ಯರಲ್ಲೊಬ್ಬರಾದ ಮಿನೂ ಮಸಾನಿ ಮುಕ್ತ ಚಿಂತಕರಾಗಿದ್ದು ನಂತರದ ಕೆಲವೇ ವರ್ಷಗಳ್ಲಿ ತಾತ್ವಿಕವಾಗಿ ಭಿನ್ನ ವಿಚಾರಗಳಿಂದ ಆಕರ್ಷಿತರಾಗಿ ಮುಕ್ತ ಉದ್ಯಮಶೀಲತೆಯನ್ನು ಬೆಂಬಲಿಸುವ ಸ್ವತಂತ್ರ ಪಕ್ಷ ಸೇರಿದರು)

೨೭ನೇ ಪುಟದಿಂದ)

ಅವಶ್ಯಕತೆಗಳನ್ನು ತಾನೇ ಪೂರೈಸಿಕೊಳ್ಳುವ ಅರ್ಥವ್ಯವಸ್ಥೆ ಕೃಷಿ ಇತ್ಯಾದಿಗಳನ್ನು ರೂಪಿಸಿಕೊಂಡು ಪ್ರಕೃತಿಯ ನಿಯಮಗಳಿಗೆ ವಿರುದ್ಧವಾಗದಂತೆ ಬದುಕತೊಡಗಿದರೆ ಬದುಕು ಹಸನವಾಗಿರುತ್ತದೆ. ಅರ್ಥವ್ಯವಸ್ಥೆ ಮನುಷ್ಯನನ್ನು ಕೇವಲ ಬಳಕೆದಾರನನ್ನಾಗಿ ನೋಡದೇ ಮನುಷ್ಯನನ್ನಾಗಿ ನೋಡಿ ಪ್ರಜಾಪ್ರಭುತ್ವದ ಜೀವಾಳವಾದ ಸಮಾನತೆಗೆ ತಾನೂ ಬೆಂಬಲವಾಗುತ್ತದೆ. ಆದರೆ ಈ ಅರ್ಥವ್ಯವಸ್ಥೆಗೆ ವೇಗವಿಲ್ಲ. ರಭಸವಿಲ್ಲ. ಒಂದೇ ದಿನದಲ್ಲಿ ಅಪಾರ ಸಂಪತ್ತನ್ನು ಸೃಷ್ಟಿಸುವ ಹಪಾಹಪಿಯಿಲ್ಲ. ಅದು ಬದುಕಿನ ನಿಧಾನ ಲಯಗಳಿಗೆ ತಕ್ಕಂತೆ ನಿಧಾನವಾಗಿಯೇ ಕೆಲಸ ಮಾಡುವಂಥಹುದು. ಆದರೆ ಆಧುನಿಕತೆ ತಂದ ಅಭಿವೃದ್ಧಿಯ ಪರಿಕಲ್ಪನೆ ಕುಮಾರಪ್ಪ ಬಯಸುವ ಸರಳ ಜೀವನ, ನಿಧಾನ ಹಾಗೂ ನಿಸ್ವಾರ್ಥಗಳನ್ನು ಒಪ್ಪುವುದಿಲ್ಲ. ಅದಕ್ಕೆ ಬಡತನವೆಂದರೆ ಒಂದು ಶಾಪ; ಅನಾಧುನಿಕತೆಯ ಲಕ್ಷಣ. ಅದಕ್ಕೆ ರಾಕ್ಷಸ ಸದೃಶವಾದ ಶಕ್ತಿ ಹಾಗೂ ವೇಗಗಳು ಬೇಕು. ಈ ಅಭಿವೃದ್ಧಿಯು ಮನುಷ್ಯನನ್ನು ಮಾರುಕಟ್ಟೆಯ ಕುರುಡು ನಿಯಮಗಳನ್ನು ಅನುಸರಿಸುವ, ತನ್ನ ಆಯ್ಕೆಗಳೇ ಇಲ್ಲದ ವಸ್ತುವನ್ನಾಗಿ ಪರಿವರ್ತಿಸುತ್ತದೆ. ಕುಮಾರಪ್ಪನವರ ಅರ್ಥವ್ಯವಸ್ಥೆಯಲ್ಲಿ ಮನುಷ್ಯ ತನ್ನ ನೈತಿಕ ಆಯ್ಕೆಗಳನ್ನು ಮಾಡಬಲ್ಲ ಸ್ವಾಯತ್ತತೆ ಉಳ್ಳ ವ್ಯಕ್ತಿ. ಹೀಗಾಗಿ ಬೆಲೆ ಸ್ವಲ್ಪ ಹೆಚ್ಚಾದರೂ ದೇಶೀ ಖಾದಿಯನ್ನು ಕೊಳ್ಳುವುದು ಅವನ ಆಯ್ಕೆಯಾಗಬಹುದು. ಅಥವಾ ಬಡತನದಂತೆ ಕಾಣುವ ಸರಳ ಜೀವನ ಅವನ ಆಯ್ಕೆಯಾಗಿರಬಹುದು. ಆದರೆ ಈ ವ್ಯವಸ್ಥೆಯಲ್ಲಿ ಎಲ್ಲವೂ ಪರಸ್ಪರ ಸಂಬಂಧ ಹೊಂದಿದೆ. ಪರಸ್ಪರ ಅವಲಂಬಿತವಾಗಿವೆ. ಹೀಗಾಗಿ ಪ್ರಬಲವಾದ ಪ್ರಭುತ್ವವನ್ನು (state) ಕೇಂದ್ರೀಕೃತ ಅಧಿಕಾರವನ್ನು ಸಮರ್ಥಿಸುತ್ತ ಈ ಅರ್ಥವ್ಯವಸ್ಥೆಯನ್ನು ಬೆಂಬಲಿಸಲಾಗದು. ಹೀಗೆ, ಕುಮಾರಪ್ಪನವರ ಚಿಂತನೆಯು ಒಂದು ಸುಸಂಬದ್ಧವಾದ ಪರ್ಯಾಯವನ್ನು ರಚಿಸಿಕೊಡುತ್ತದೆ. ಆದರೆ ಸ್ವಾತಂತ್ರ್ಯ ಬರುವ ಮೊದಲೇ ಅಧಿಕಾರದ ರುಚಿಕಂಡ ಕಾಂಗ್ರೆಸ್ ಹಾಗೂ ಆಧುನಿಕತೆ ಹಾಗೂ ನಂತರ ರಷ್ಯಾದ ಬೃಹತ್ ಕೈಗಾರಿಕಾ ಕ್ರಾಂತಿಯ ಆರಾಧಕ ನೆಹರು ಅವರಿಂದಾಗಿ ಕುಮಾರಪ್ಪನವರು ಮೂಲೆಗುಂಪಾಗುತ್ತ ಹೋದರು. ಗಾಂಧಿ ಹತ್ಯೆಯ ಬಹಳ ಮೊದಲೇ ಗಾಂಧಿ ದರ್ಶನವನ್ನು ಆಧುನಿಕ ಭಾರತವು ತಿರಸ್ಕರಿಸಿತ್ತು. ಈಗಂತೂ ಜಾಗತೀಕರಣದ ಕಾಲದಲ್ಲಿ ಅತಿ ವೇಗದಿಂದ ಬೆಳೆಯುತ್ತಿರುವ ಅರ್ಥವ್ಯವಸ್ಥೆಯಾಗಿ ಕುಮಾರಪ್ಪನವರಂಥ "ಅನಾಧುನಿಕ ವಿಕ್ಷಿಪ್ತ" ರಿಂದ ಅದು ಬಹುದೂರ ಸಾಗಿದೆ. ಅತಿ ಶ್ರೀಮಂತಿಕೆ, ಕಡು ಬಡತನಗಳ ಮಧ್ಯ ಹಗಲುಗನಸು ಹಾಗೂ ಭ್ರಮೆಗಳ ಬೆನ್ನೇರಿ ಅಭಿವೃದ್ಧಿ ಹೊಂದುತ್ತಿದೆ.

:[ಈ ಲೇಖನದಲ್ಲಿ ನಾನು ವೇಣು ಮಾಧವ ಗೋವಿಂದು ಮತ್ತು ದೀಪಕ್ ಮಲ್ಘನ್ ಅವರ ' The Web of Freedom' ಎನ್ನುವ ಶ್ರೇಷ್ಠ ಕೃತಿಯ ಮೂಲಕ ಅರ್ಥಮಾಡಿಕೊಂಡ ಕುಮಾರಪ್ಪನವರ ಬಗ್ಗೆ ಬರೆದಿದ್ದೇನೆ. ಹಾಗಾಗಿ ಇದನ್ನು ಆ ಕೃತಿಯ ಪರಿಚಯ ಹಾಗೂ ಅದರ ಮೇಲಿನ ಟಿಪ್ಪಣಿಯೆಂದು ಪರಿಗಣಿಸಬೇಕೆಂದು ಸೂಚಿಸುತ್ತೇನೆ]



(ಲೇಖಕ ರಾಜೇಂದ್ರ ಚೆನ್ನಿಯವರು ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದು, ನಮ್ಮ ನಡುವಣ ಓರ್ವ ಶ್ರೇಷ್ಠ ಸಾಹಿತ್ಯ ಮತ್ತು ಸಾಮಾಜಿಕ ಚಿಂತಕರಾಗಿದ್ದಾರೆ)

ಭಾಷೆ, ಸಾಹಿತ್ಯ, ಸಂಸ್ಕೃತಿ, ಪ್ರಶಸ್ತಿ ಇತ್ಯಾದಿ ಕೆಲವು ಟಿಪ್ಪಣಿಗಳು

ನಾನು ರಾಜ್ಯೋತ್ಸವ ಪ್ರಶಸ್ತಿಯನ್ನು ಸ್ವೀಕರಿಸದಿರುವ ನಿರ್ಧಾರವನ್ನು ಹಲವು ಮಾಧ್ಯಮಗಳು ಪ್ರಶಸ್ತಿಯ ತಿರಸ್ಕಾರ ಎಂದು ಬಣ್ಣಿಸಿವೆ. ನನ್ನ ಕೆಲವು ಮಿತ್ರರೂ ಹಾಗೇ ಭಾವಿಸಿದ್ದಾರೆ. ಆದರೆ ಅದು ನನ್ನ ನಿಲುವಿನ ನಿಖರ ವರ್ಣನೆ ಅಲ್ಲ. ಏಕೆಂದರೆ ನಾನು ಪ್ರಶಸ್ತಿ ಸ್ವೀಕಾರ ಮಾಡುವುದಿಲ್ಲ ಎಂದು ಹೇಳಿರುವೆನೇ ಹೊರತು, ನನಗೆ ನೀಡಿದ ಪ್ರಶಸ್ತಿಯನ್ನು ನಿರಾಕರಿಸಿಲ್ಲ ಮತ್ತು ಪ್ರಶಸ್ತಿಗೆ ನನ್ನನ್ನು ಆಯ್ಕೆ ಮಾಡಿದ್ದಕ್ಕಾಗಿ ಸರ್ಕಾರಕ್ಕೆ ನನ್ನ ವಂದನೆ ತಿಳಿಸಿರುವೆ. ಪ್ರಶಸ್ತಿ ಸ್ವೀಕರಿಸಲಾರೆ ಎಂದು ನಾನು ನೀಡಿದ ಪತ್ರಿಕಾ ಹೇಳಿಕೆಯನ್ನು ಮಾಧ್ಯಮಗಳು ಪೂರ್ಣವಾಗಿ ಪ್ರಟಿಸದಿರುವುದೇ ಇದಕ್ಕೆ ಕಾರಣವಿರಬಹುದು.

ನನ್ನನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂಬುದು ನನಗೆ ಗೊತ್ತಾದದ್ದು, ಅಕ್ಟೋಬರ್ ೩೦ರ ರಾತ್ರಿ, ಟಿವಿ ವಾಹಿನಿಗಳ ಮೂಲಕ, ಅದೂ ಗೆಳೆಯರಿಂದ ಅಭಿನಂದನೆಯ ಕರೆಗಳು ಬರಲಾರಂಭಿಸಿದಾಗ. ಆಗ ನಾನು ಪ್ರಶಸ್ತಿ ಸ್ವೀಕರಿಸುವುದೋ ಬೇಡವೋ ಎಂಬ ಎಂಬ ದ್ವಂದ್ವಕ್ಕೆ ಬಿದ್ದೆ. ಕನ್ನಡದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನಾದರೂ ಕನ್ನಡದಲ್ಲಿ ಒದಗಿಸಲಾಗದ ಸರ್ಕಾರ ರಾಜ್ಯೋತ್ಸವ ಆಚರಿಸುವುದು ಮತ್ತು ರಾಜ್ಯೋತ್ಸವದ ಸಂದರ್ಭದಲ್ಲಿ ಅದು ನೀಡುವ ಪ್ರಶಸ್ತಿಯನ್ನು ಸ್ವೀಕರಿಸುವುದು ಪ್ರಜ್ಞಾವಂತ ಕನ್ನಡಿಗನಾಗಿ ಕನ್ನಡ ಮಾಧ್ಯಮದ ಮೂಲಕ ಏಕರೂಪದ ಶಿಕ್ಷಣವನ್ನು ಪ್ರತಿಪಾದಿಸುತ್ತಾ ಬಂದಿರುವ ನನಗೆ ಆತ್ಮದ್ರೋಹವೆನಿಸಿತು ಆದರೆ ಬಹುಬೇಗ ಸ್ವೀಕರಿಸದಿರಲು ನಿರ್ಧರಿಸಿದೆ.

ಮಾರನೆಯ ಬೆಳಿಗ್ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕರೆ ಬಂದು ಪ್ರಶಸ್ತಿ ಸ್ವೀಕಾರ ಸಮರಂಭಕ್ಕೆ ಬರಬೇಕೆಂದು ಆಹ್ವಾನ ನೀಡಿದಾಗ ಪ್ರಶಸ್ತಿ ಸ್ವೀಕರಿಸದಿರಲು ಕಾರಣವನ್ನು ವಿವರಿಸುವ ಹೇಳಿಕೆಯನ್ನು ಸಿದ್ಧಪಡಿಸಿ, ಆ ನಿರ್ದೇಶನಾಲಯಕ್ಕೆ ಮೇಲ್ ಮಾಡಿದೆ. ಇಲಾಖೆಯ ನಿರ್ದೇಶಕರು ಅದನ್ನು ಇಲಾಖೆಯ ಸಚಿವೆ ಉಮಾಶ್ರೀ ಅವರ ಗಮನಕ್ಕೆ ತಂದಾಗ ಅವರು ನನಗೆ ಕರೆ ಮಾಡಿ ಸಮಾರಂಭಕ್ಕೆ ಬರಲು ಒತ್ತಾಯಸಿದರಲ್ಲದೆ, ಕನ್ನಡ ಮಾಧ್ಯಮಕ್ಕಾಗಿ ಸರ್ಕಾರ ಮಾಡಬೇಕಾದ್ದನ್ನೆಲ್ಲವನ್ನೂ ಮಾಡಿದೆ ಎಂದೂ, ಇನ್ನು ಮಾಡಬೇಕಾದ ಕೆಲಸ ಕೇಂದ್ರ ಸರ್ಕಾರದ್ದೆಂದೂ ಹೇಳಿದರು. ನಾನು ಅವರಿಗೆ ರಾಜ್ಯ ಸರ್ಕಾರದ ಪ್ರಯತ್ನದ ಬಗ್ಗೆ ನನಗೆ ಗೌರವವಿದೆಯೆಂದೂ, ಆದರೆ ಅದು ಮಾಡಬೇಕಾದ ಕೆಲಸ ಇನ್ನೂ ಇದೆಯೆಂದು ಹೇಳಿ, ನನ್ನ ಪತ್ರವನ್ನು ಪೂರ್ಣವಾಗಿ ಓದಲು ಕೋರಿದೆ. ಅವರು ಪೂರ್ಣ ಪತ್ರವನ್ನು ಓದಿದರೋ ಇಲ್ಲವೋ ತಿಳಿಯದು. ಆದರೆ ಅದನ್ನು ಕೂಡಲೇ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದೆಂದೂ ಹೇಳಿದರು. ನಾನು ಅವರಿಗೆ ವಂದನೆ ಸಲ್ಲಿಸಿದೆ. ಮತ್ತು ನನ್ನ ಹೇಳಿಕೆಯನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿದೆ.

ಕನ್ನಡ ಮತ್ತು ಸಂಸ್ಕೃತಿ ಸಚಿವರು ನನ್ನ ಪತ್ರವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದರೆಂದು ಕಾಣುತ್ತದೆ. ಏಕೆಂದರೆ ಮಾರನೆಯ ದಿನದ ಒಂದು ಪತ್ರಿಕೆಯಲ್ಲಿ ಮುಖ್ಯಮಂತ್ರಿಗಳು ಕನ್ನಡ ಮಾಧ್ಯಮನ್ನು ಕಡ್ಡಾಯವಾಗಿ ಜಾರಿಗೆ ತರಲು ಅಡ್ಡಿಯಾಗಿರುವ ಸಂವಿಧಾನದ ವಿಧಿಗಳನ್ನು ತಿದ್ದುಪಡಿ ಮಾಡುವಂತೆ ಪ್ರಧಾನಮಂತ್ರಿಗಳಿಗೆ ಮೂರು ಪತ್ರಗಳನ್ನು ಬರೆದಿರುವುದಾಗಿಯೂ, ಕನ್ನಡ ಮಾಧ್ಯಮಕ್ಕೆ ತಾವು ಬದ್ಧರಾಗಿರುವುದಾಗಿಯೂ ಹೇಳಿರುವುದನ್ನು ಓದಿದೆ. ಆ ತಮ್ಮ ಹೇಳಿಕೆಯಲ್ಲಿ, ಮುಂದೇನು ಮಾಡಬೇಕೆಂದು ಪ್ರೊ. ಚಂದ್ರಶೇಖರ ಪಾಟೀಲರ ಸಲಹೆ ಪಡೆದು ಮಾಡುವುದಾಗಿಯೂ ಅವರು ಹೇಳಿದ್ದರು. ಮಾರನೆಯ ದಿನ ರಾಜ್ಯೋತ್ಸವ ಸಮಾರಂಭದಲ್ಲೂ ಅವರು ಈ ಬಗ್ಗೆ ಮಾತನಾಡಿ, ತಾವು ಈ ಸಂಬಂಧವಾಗಿ ಏಳು ಪತ್ರಗಳನ್ನು ಬರೆದಿರುವುದಾಗಿ ಪತ್ರಗಳ ಸಂಖ್ಯೆಯನ್ನು ತಿದ್ದುಪಡಿ ಮಾಡಿಕೊಂಡರು.

ಆದರೆ ನನ್ನ ಪ್ರಶ್ನೆ, ಕಳೆದ ನಾಲ್ಕು ವರ್ಷಗಳಿಂದ ರಾಜ್ಯವೊಂದರ ಮುಖ್ಯಮುಮಂತ್ರಿಯಾಗಿ ನುರಿತ ಆಡಳಿತಗಾರರೆನಿಸಿಕೊಂಡಿರುವ ಸಿದ್ಧರಾಮಯ್ಯನವರಿಗೆ, ಸಂವಿಧಾನ ತಿದ್ದುಪಡಿ ಎಂಬುದು ಪತ್ರ ಮುಖೇನ ಆಗಲಾಗದ ಕೆಲಸವೆಂದು, ಅದೂ ಏಳು ಪತ್ರಗಳನ್ನು ಬರೆದರೂ ಏನೂ ಪ್ರತಿಕ್ರಿಯೆ ಇಲ್ಲದಿರುವುದರಿಂದಲಾದರೂ ಗೊತ್ತಾಗಲಿಲ್ಲವೆ? ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದು ಮೂರು ವರ್ಷಗಳಾದರೂ ಕನ್ನಡ ಮಾಧ್ಯಮಕ್ಕೆ ಬದ್ಧವಾದ ಸರ್ಕಾರವೊಂದು ಆ ದಿಸೆಯಲ್ಲಿ ಮಾಡಬಹುದಾದುದು ಪತ್ರ ಬರೆಯುವುದಷ್ಟೇಯೇ? ಸಿದ್ಧರಾಮಯ್ಯನವರ ಸರ್ಕಾರ 'ಕನ್ನಡ' ಕ್ಕೆ ನಿಜವಾಗಿ ಬದ್ಧರಾಗಿದ್ದರೆ ಈ ಹೊತ್ತಿಗೆ ಸಂವಿಧಾನದಲ್ಲಿ ಆಗಬೇಕಾದ ತಿದ್ದುಪಡಿಯ ಬಗ್ಗೆ ನುರಿತ ಸಂವಿಧಾನ ತಜ್ಞರೊಂದಿಗೆ ಚರ್ಚಿಸಬೇಕಿತ್ತು. ಅದರ ಆಧಾರದ ಮೇಲೆ ಇತರ ರಾಜ್ಯ ಸರ್ಕಾರಗಳೊಂದಿಗೆ ಸಮಾಲೋಚಿಸಿ ಸಂಘಟಿತ ಪ್ರಯತ್ನವೊಂದನ್ನು ಆರಂಭಿಸಬೇಕಿತ್ತು. ಇದೆಲ್ಲದಕ್ಕೆ ಅವರಿಗೆ ಬಿಡುವಿಲ್ಲದಿದ್ದರೆ, ಈ ಕೆಲಸಕ್ಕಾಗಿಯೇ ಈ ವಿಷಯಕ್ಕೆ ಬದ್ಧರಾದ ಭಾಷೆ, ಶಿಕ್ಷಣ ಮತ್ತು ಸಂವಿಧಾನ ಕ್ಷೇತ್ರಗಳ ಪರಿಣತರ ಒಂದು ಸಮಿತಿ ರಚಿಸಿ ಅದಕ್ಕೆ ಕಾಲಬದ್ಧವಾಗಿ ಈ ಜವಾಬ್ದಾರಿಯನ್ನು ವಹಿಸಬಹುದಿತ್ತು. ಆದರೆ ಇದಾವುದನ್ನೂ ಮಾಡದೆ, ಅಧಿಕಾರಿಗಳು ಬರೆದುಕೊಟ್ಟ ಪತ್ರಕ್ಕೆ ಸಹಿ ಹಾಕಿ ಕಳಿಸುವುದು ಎಂತಹ ಕನ್ನಡದ ಕೆಲಸವೆನ್ನಿಸಿಕೊಂಡೀತು. ಅದಕ್ಕೇ ನಾನು ಪ್ರಶಸ್ತಿ ಸ್ವೀಕರಿಸದಿರಲು ಕಾರಣ ವಿವರಿಸಿರುವ ಪತ್ರದಲ್ಲಿ, ಕನ್ನಡ ಮಾಧ್ಯಮದ ವಿಷಯ ಮುಗಿದ ಅಧ್ಯಾಯದಂತೆ ಸರ್ಕಾರ ಭಾವಿಸಿದಂತಿದೆ ಎಂದು ಹೇಳಿ ಎಚ್ಚರಿಸಿದ್ದು ಮತ್ತು ತಡ ಮಾಡದೆ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಲು ಆಗ್ರಹಿಸಿರುವುದು.

ಪತ್ರಿಕೆಯು ಮುದ್ರಣಕ್ಕೆ ಅಂತಿಮವಾಗಿ ಸಿದ್ಧವಾಗುತ್ತಿರುವ ಈ ಹೊತ್ತಿನಲ್ಲಿ ಮೈಸೂರಿನಲ್ಲಿ ನಡೆದಿರುವ ಸಾಹಿತ್ಯ ಸಮ್ಮೇಳನದಲ್ಲಿ ಮುಖ್ಯ ಮಂತ್ರಿಗಳು ಮತ್ತೆ ಸಂವಿಧಾನ ತಿದ್ದುಪಡಿಗೆ ತಾವು ಬದ್ಧರಾಗಿರುವುದಾಗಿ ಹೇಳಿರುವರು. ಅವರ ಸರ್ಕಾರ ಚುನಾವಣೆಗಳು ಹತ್ತಿರ ಬರುತ್ತಿದ್ದಂತೆ ಹಲವು ಜನಪ್ರಿಯ ಕಾರ್ಯಕ್ರಮಗಳ ಜೊತೆಗೇ ಖಾಸಗಿ ಆಸ್ಪತ್ರೆಗಳ ನಿಯಂತ್ರಣ, ಮೌಢ್ಯ ನಿಷೇಧ, ಸರ್ಕಾರಿ ನೌಕರರ ಮಕ್ಕಳಿಗೆ ಸರ್ಕಾರಿ ಶಾಲೆ ಕಡ್ಡಾಯ ಇತ್ಯಾದಿ 'ಸಮಾಜವಾದಿ ಶಾಸನಗಳನ್ನು ಜಾರಿಗೆ ತರುವ ತುರ್ತಿನಲ್ಲಿದೆ. ಈ ತುರ್ತಿನಲ್ಲೇ ಕನ್ನಡ ಮಾಧ್ಯಮಕ್ಕಾಗಿ ಸಂವಿಧಾನ ತಿದ್ದುಪಡಿಗಾಗಿ ಅವರ ಸರ್ಕಾರ ಒಂದು ಅಧಿಕೃತ ನಿರ್ಣಯ ಸ್ವೀಕರಿಸಿ ಮುಂದಡಿ ಇಟ್ಟರೆ ಅವರು ನಿಜವಾದ 'ಸಮಾಜವಾದಿ' ಕೆಲಸ ಮಾಡಿದಂತಾಗುತ್ತದೆ. ಇದು ಕೇಂದ್ರದ ಮಟ್ಟದಲ್ಲಿ ಆಗಿಯೇ ಆಗುತ್ತದೆ ಎಂದು ಯಾರೂ ಖಚಿತವಾಗಿ ಹೇಳುತ್ತಿಲ್ಲ. ಆದರೆ ನಮ್ಮ ಕಡೆಯಿಂದ ಪ್ರಾಮಾಣಿಕ ಪ್ರಯತ್ನ ಬೇಡವೆ? ಇದರ ಕೊರತೆಯ ಬಗ್ಗೆ ನನ್ನ ಅಸಮಧಾನ ಸೂಚಿಸಿಯಷ್ಟೇ ನಾನು ಪ್ರಶಸ್ತಿ ಸ್ವೀಕರಿಸಲು ಮನಸ್ಸಾಗುತ್ತಿಲ್ಲ ಎಂದು ಹೇಳಿದ್ದು. ಈ ಸಂಬಂಧದ ನನ್ನ ಹೇಳಿಕೆಯ ಕೆಲವು ಮುಖ್ಯ ಮಾತುಗಳನ್ನು ಇಲ್ಲಿ ಉಲ್ಲೇಖಿಸುವುದು ಉಚಿತವೆಂದು ಭಾವಿಸುತ್ತೇನೆ:

> **"ರಾಜ್ಯೋತ್ಸವವೆಂಬುದು ನಮ್ಮ ಕನ್ನಡ ರಾಜ್ಯೋದಯದ ಸಂಭ್ರಮದ ಆಚರಣೆಯೇ ಆಗಿದೆ. ಈ ರಾಜ್ಯೋದಯಕ್ಕೆ ಕಾರಣವಾದ ಕರ್ನಾಟಕ ಏಕೀಕರಣ ಆಂದೋಲನದ ಕೇಂದ್ರ ಕಾಳಜಿಯಾಗಿದ್ದುದು, ಕರ್ನಾಟಕದ ಮಕ್ಕಳು ಕನ್ನಡವನ್ನು ತಮ್ಮ ಬದುಕಿನ ಭಾಷೆಯಾಗಿ ಬಳಸಿ ಬೆಳಸಬೇಕೆಂಬುದು. ಇದನ್ನು ಸಾಧ್ಯಮಾಡುವ ಏಕೈಕ ಮಾರ್ಗವೆಂದರೆ, ಕನ್ನಡವು ಶಿಕ್ಷಣದ ಮಾಧ್ಯಮವಾಗುವುದು. ಆದರೆ ಪ್ರಾಥಮಿಕ ಶಾಲಾ ಶಿಕ್ಷಣದ ಹಂತದವರೆಗಾದರೂ ಕರ್ನಾಟಕದ ಮಕ್ಕಳಿಗೆ ಶಿಕ್ಷಣ ಮಾಧ್ಯಮವು ಕನ್ನಡವಾಗಿರಬೇಕೆಂಬ ಕರ್ನಾಟಕದ ಜನತೆಯ ಪ್ರತಿನಿಧಿಯಾದ ಕರ್ನಾಟಕ ಸರ್ಕಾರದ ಸಂಕಲ್ಪ ಇನ್ನೂ ಈಡೇರಿಲ್ಲ. ಅದರ ಎರಡು ದಶಕಗಳ ನ್ಯಾಯಾಂಗ ಹೋರಾಟವೂ ವಿಫಲವಾಗಿದೆ. ಇದಕ್ಕೆ ಕಾರಣ ನಮ್ಮ ರಾಷ್ಟ್ರ ಕಲ್ಪನೆಯ ಪ್ರಣಾಳಿಕೆಯಂತಿರುವ ನಮ್ಮ ಸಂವಿಧಾನವೇ ಅದಕ್ಕೆ ವಿರೋಧವಾಗಿರುವುದು. ರಾಷ್ಟ್ರ ಕಲ್ಪನೆಯಲ್ಲಿನ ಈ ಸಾಂವಿಧಾನಿಕ ವಿರೋಧಾಭಾಸವನ್ನು ಸರಿಪಡಿಸಿ ನಮ್ಮ ರಾಷ್ಟ್ರದ ಸಾಂಸ್ಕೃತಿಕ ಅಸ್ತಿತ್ವದ ಮೂಲಾಧಾರವಾದ ಜನಸಮುದಾಯಗಳ ಭಾಷೆಗಳ ಪ್ರಾಧಾನ್ಯತೆಯನ್ನು ರಾಷ್ಟ್ರದ ಬದುಕಿನಲ್ಲಿ ಮರುಸ್ಥಾಪಿಸಬೇಕಾದ್ದು ಜನತೆಯ ಪ್ರತಿನಿಧಿಯಾದ ಸರ್ಕಾರದ ಕರ್ತವ್ಯ."**

ಕೊನೆಯಲ್ಲಿ ಈ ಸಂಬಂಧದ ಎರಡು ಮಾತುಗಳನ್ನು ಹೇಳಬೇಕು. ಒಂದು: ಸಿದ್ಧರಾಮಯ್ಯನವರು ಏಳು ಪತ್ರಗಳನ್ನು ಮೋದಿಯವರೇಕೆ ಒಂದು ಪತ್ರಕ್ಕೂ ಒಂದು ಸಾಲಿನ ಉತ್ತರವನ್ನೂ ನೀಡಿಲ್ಲ? ನಮ್ಮ ರಾಜ್ಯದ ಬಿಜೆಪಿ ನಾಯಕರು ಕಾರಣ ತಿಳಿದು ಕನ್ನಡ ಜನತೆಗೆ ತಿಳಿಸಬೇಕು. ಎರಡು: ಭಾರತೀಯ ಭಾಷೆಗಳ ಸಂರಕ್ಷಣೆಗೆ ಇದು ಸುಸಂದರ್ಭ. ಏಕೆಂದರೆ ವೈಯಕ್ತಿಕವಾಗಿ ನರೇಂದ್ರ ಮೋದಿಯವರು ಮತ್ತು ಅವರ ಮಾರ್ಗದರ್ಶಕ ಸಂಘಟನೆಯಾದ ಆರೆಸ್ಸೆಸ್ ತಾತ್ವಿಕವಾಗಿ ಮಾತೃಭಾಷಾ ಶಿಕ್ಷಣ ಮಾಧ್ಯಮಕ್ಕೆ ಬದ್ಧವಾದವರು. ಹಾಗಾಗಿ ರಾಜ್ಯ ಸರ್ಕಾರ ಈ ಸುಸಂದರ್ಭವನ್ನು ಬಳಸಿಕೊಳ್ಳಬೇಕು.

ಇನ್ನು ಈ ಸಂಚಿಕೆಯ ಮುಂದಿನ ಹೆಚ್ಚಿನ ಸಾಹಿತ್ಯ ಪುಟಗಳು ನಿಮಗೆ ಇಷ್ಟವಾಗುತ್ತವೆ ಎಂದು ಭಾವಿಸುವೆ.

–ಡಿ.ಎಸ್. ನಾಗಭೂಷಣ


ಒಂದು ಗಪದ್ಯ :

-ಸವಿತಾ ನಾಗಭೂಷಣ



ಅಯ್ಯೋ ಶಿವನೇ!

(ಈ ಹೊತ್ತಿನ ಕಾವ್ಯ ನಿ-ವೇದನೆ)



ಚಿತ್ರ : ರೂಪ ಹಾಸನ

ಹಿತ್ತಲಲ್ಲಿ.

ವಾಷಿಂಗ್ ಮಷೀನು, ಬಟ್ಟೆ ಕಲ್ಲು, ಕಸದ ಡಬ್ಬಿ, ಮುಸರೆ ತಪ್ಪಲೆ, ಕಡ್ಡಿ ಪರಕೆ, ದೊಡ್ಡವು ಚಿಕ್ಕವು ಬಣ್ಣ ಬಣ್ಣದ ಬಕೀಟು-ಮಗ್ಗುಗಳು, ಬಟ್ಟೆ ಸೋಪು, ಸೋಪಿನ ಪುಡಿ, ನೀಲಿ, ವೈಟ್‌ನರ್, ಡೆಟಾಲು, ಫಿನಾಯಿಲ್, ಫ್ರ್ಯಾಗ್ನರ್, ಹಾರ್ಪಿಕ್ಕು, ಫ್ಲೋರ್ ಕ್ಲೀನರ್ರು, ರಂಗೋಲೆ ಹಿಟ್ಟು, ಇರುವೆ ಪುಡಿ, ಬ್ಲೀಚಿಂಗ್ ಪೌಡರ್ರು, ಬ್ರಷ್ಷು, ಬಟ್ಟೆ ಒಣಗಿಸೋ ಸ್ಟ್ಯಾಂಡು, ತೂಗಾಡೋ ತಂತಿ ಇತ್ಯಾದಿ, ಇತ್ಯಾದಿ ಇತ್ಯಾದಿ

ಶಿವನೇ! ಒಂದೇ ಎರಡೇ!!

ಬಾತ್‌ರೂಂನಲ್ಲಿ.

ಸ್ವದೇಶಿ-ವಿದೇಶಿ ಕಮೋಡು, ಹಿತ್ತಾಳೆ ಹಂಡೆ, ಟಬ್ಬು, ಸೋಲಾರು, ಗೀಸರ್ರು, ಶವರ್ರು, ತರಾವರಿ ಡಿಸೈನರ್ ನಲ್ಲಿಗಳು, ಬಗೆ ಬಗೆಯ ಸೋಪುಗಳು, ಶಾಂಪುಗಳು, ಕಂಡೀಶನರ್ರು, ಮಾಯಿಶ್ಚರೈಸರ್ರು, ಹಲ್ಲು ತಿಕ್ಕೋಕೆ, ಕಾಲು ತಿಕ್ಕೋಕೆ, ಬೆನ್ನು ತಿಕ್ಕೋಕೆ ಬ್ರಷುಗಳು, ಟಂಗ್ ಕ್ಲೀನರ್ರು, ಮೌತ್ ಫ್ರೆಶ್‌ನರ್ರು, ಸೆನ್ಸೊಡೆಂಟು, ಪೆಪ್ಸೊಡೆಂಟು, ವಜ್ರಕ್ರಾಂತಿ, ದಂತಭ್ರಾಂತಿ, ನಂಜನಗೂಡು ಹಲ್ಲುಪುಡಿ, ಶೀಗೆ ಪುಡಿ, ಹರಳೆಣ್ಣೆ, ಹೇರ್ ಅಂಡ್ ಕೇರು, ಶೇವಿಂಗ್ ಕ್ರೀಮು, ನೈಲ್ ಕಟರ್ರು, ಮೀಸೆ ಕತ್ತರಿ ಇತ್ಯಾದಿ, ಇತ್ಯಾದಿ!

ಶಿವನೇ! ಒಂದೇ, ಎರಡೇ!!

ಅಡಿಗೆ ಕಂ ಡೈನಿಂಗು...

ಫ್ರಿಜ್ಜಿನ ತುಂಬ ಹಣ್ಣು, ಮಾಂಸ-ಮಡ್ಡಿ, ಮೊಟ್ಟೆ-ಮೀನು. ಜೂಸು, ಕ್ವಾಷು, ಮಜ್ಜಿಗೆ-ಮೊಸರು, ಐಸ್‌ಕ್ರೀಮು, ಚಾಕ್ಲೇಟು, ಚೀಸು, ಜಾಮು, ಸೋಡಾ,ದೋಸೆ ಹಿಟ್ಟು, ಲಿಂಬೆ ಹಣ್ಣು, ವೀಳೆದೆಲೆ-ಸುಣ್ಣ, ಸೊಪ್ಪುಸದೆ, ತರಕಾರಿ,,,,

ಮೂಲೇಲಿ ಮಣ್ಣಿನ ಹೂಜಿ, ಅಕ್ವಾಗಾರ್ಡು

ಅಡಿಗೆ ಮನೆ ಕಟ್ಟೆ ಮೇಲೆ: ಗ್ಯಾಸು, ಓವನ್ನು, ಇಂಡಕ್ಷನ್ ಒಲೆ, ಕುಕ್ಕರ್ರು, ಮಿಕ್ಸರ್ರು, ಗ್ರೈಂಡರ್ರು-ಟೋಸ್ಟರ್ರು, ಜೂಸರ್ರು, ಟಪ್ಪರ್‌ವೇರು, ಗ್ಲಾಸು, ಅನ್‌ಬ್ರೇಕಬಲ್ಲು, ಸ್ಟೀಲ್ ಡಬ್ಬಿಗಳು, ಭರಣಿ, ತಾಮ್ರದ ಕಟಾರು, ರೊಟ್ಟಿ ಮಿಷೀನು, ದೋಸೆ ಕಾವಲಿ, ಪಡ್ಡಿನ ಕಾವಲಿ, ಕಡುಬಿನ ಪಾತ್ರೆ, ಶಾವಿಗೆ ಮಣೆ, ಲಟ್ಟಣಿಗೆ, ಕುಟ್ಟಾಣಿ, ಮರಿಗೆ, ಚರಿಗೆ, ಬಾಂಡ್ಲಿ, ತಟ್ಟೆ-ಲೋಟ, ಮೊರ, ಸಾಣಿಗೆ, ಕುಡಗೋಲು, ಚಾಕು, ಈಳಿಗೆ ಮಣೆ, ತುರಿಯೋ ಮಣೆ, ಮುದ್ದೆ ಕೋಲು. ಮಜ್ಜಿಗೆ ಕೋಲು, ಅಕ್ಕಿ-ಕಡಲೆ-ಬೇಳೆ-ಬೆಲ್ಲ-ಮೆಣಸು-ಹುಣಿಸೆ-ಸಾಸುವೆ-ಸಿರಿಧಾನ್ಯ ಇತ್ಯಾದಿ ಇತ್ಯಾದಿ, ಇತ್ಯಾದಿ,...

ಶಿವನೇ! ಒಂದೇ ಎರಡೇ!!

ಡೈನಿಂಗ್ ಟೇಬಲ್ ಮೇಲೆ...

ನಿಂಬೆ ಜೂಸು, ಜೇನು ತುಪ್ಪ, ಬ್ರೆಡ್ಡು-ಬಿಸ್ಕತ್ತು, ಪಿಕಲ್ಲು, ಸಾಲ್ಟು, ಓಟ್ಸು, ಕೆಲ್ಲಾಗ್ಸು ನೂಡಲ್ಸು, ಹುರಿಟ್ಟು, ಡ್ರೈಫ್ರೂಟ್ಸು.... ದೊಡ್ಡ ಬುಟ್ಟಿ ತುಂಬ ಆಯುರ್ವೇದ, ಅಲೋಪತಿ, ಹೋಮಿಯೋಪತಿ, ನಾಟಿ, ಹರ್ಬಲ್ಲು-ಲೋಕಲ್ಲು ಮಾತ್ರೆಗಳು

ಡ್ರೆಸ್ಸಿಂಗ್ ರೂಂನಲ್ಲಿ...

ಪೌಡರ್ರು, ಕ್ರೀಮು, ಸ್ನೋ, ನೈಲ್ ಪಾಲೀಷು, ನತ್ತು-ಮುತ್ತು-ಸರ-ಬಳೆ-ವಾಚು=ಬಿಂದಿ-ಕುಂಕುಮ, ಕಾಡಿಗೆ, ಮಸ್ಕರ, ಲಿಪ್‌ಸ್ಟಿಕ್ಕು, ಬಾಚಣಿಗೆ, ಡ್ರೈಯರ್ರು, ಬ್ಲೀಚರ್ರು, ಬ್ರೋಚರ್ರು, ವೈಟ್‌ವಾಚರ್ರು,, ಟ್ರೆಡ್‌ಮಿಲ್ಲು

ವಾರ್ಡ್ರೋಬಿನ ತುಂಬಾ...

ನೈಟಿ, ಸೀರೆ, ಚೂಡಿದಾರು, ಲೆಗ್ಗಿನ್ಸು, ಶಾಲು-ವೇಲು, ಕೋಟು-ಶರ್ಟು, ಹ್ಯಾಟು, ಜಾಕೀಟು, ಪೆಟ್ಟಿ ಕೋಟು, ಬನೀನು, ಬ್ರೇಸಿಯರ್ರು, ಅಂಡರ್‌ವೇರ್ರು, ವಿಸ್ಪರ್ರು-ಸ್ಟೇಫ್ರೀ, ಪರ್ಸು, ಬ್ಯಾಗು ಇತ್ಯಾದಿ, ಇತ್ಯಾದಿ,...

ಶಿವನೇ! ಒಂದೇ ಎರಡೇ!

ದೇವರಕೋಣೆಯಲ್ಲಿ...

ಸಾವಿರಾರು ದೇವರುಗಳು, ವಿಷ್ಣು ಸಹಸ್ರನಾಮ, ಸ್ತೋತ್ರ ಭಜನೆ, ಪಂಚಾಂಗ, ಹನುಮಾನ್ ಚಾಲೀಸಾ, ಅರಿಶಿಣ-ಕುಂಕುಮ, ದೀಪ-ಧೂಪ-ಗಂಧ-ಕರ್ಪೂರ, ಊದುಗಡ್ಡಿ, ನಾಮ-ವಿಭೂತಿ, ಯಂತ್ರ-ಮಂತ್ರ ಇತ್ಯಾದಿ, ಇತ್ಯಾದಿ,...

ಶಿವನೇ! ಒಂದೇ ಎರಡೆ!!

ಪಡಸಾಲೆಯಲ್ಲಿ...

ಕುರ್ಚಿ, ಮೇಜು, ಟೀಪಾಯಿ-ದೀವಾನು, ಸ್ಟ್ಯಾಂಡು-ಸಫಾ ಸೆಟ್ಟು, ಈಸಿ ಚೇರು, ಟ್ಯೂಬ್‌ಲೈಟ್-ಶಾಂಡಿಲೇರು, ಕಂಪ್ಯೂಟರು, ಟೀವಿ-ಸಿಡಿ ಪ್ಲೇಯರ್ರು, ಕೇಬಲ್ಲು, ಕೂಲರ್ರು, ಫ್ಯಾನು, ಇನ್ವರ್ಟರ್ರು, ಲ್ಯಾಂಡು, ಮೊಬೈಲು, ಐಪ್ಯಾಡು, ಇಂಗ್ಲಿಷ್ ಪೇಪರ್ರು ಇತ್ಯಾದಿ ಇತ್ಯಾದಿ...

ಶಿವನೇ! ಒಂದೇ ಎರಡೇ!!

ವರಾಂಡಾದಲ್ಲಿ...

ಚಪ್ಪಲಿಗಳು, ಶೂಗಳು, ಸಾಕ್ಸುಗಳು, ವ್ಯಾಕ್ಯೂಮ್ ಕ್ಲೀನರ್ರು, ಇತ್ಯಾದಿ, ಇತ್ಯಾದಿ,...

ಗ್ಯಾರೇಜಿನಲ್ಲಿ...

ಕಾರು, ಬೈಕು, ಸ್ಕೂಟಿ, ಸೈಕಲ್ಲು...


ಶಿವನೇ! ಒಂದೇ ಎರಡೆ!!
ಶಿವನೇ ಒಂದೇ ಎರಡೇ?

ಸರಕು ಸರಕು ಕಿರಿಕು
ಅತ್ತೆ ಕಿಟ್ಟಿ ಪಾರ್ಟಿಗೆ, ಮಾವ ಕ್ಲಬ್ಬಿಗೆ
ಗಂಡ ಆಫೀಸಿಗೆ
ಮಕ್ಕಳು ಟ್ಯೂಷನ್ನಿಗೆ
ನಾನೊಬ್ಬಳೇ ಮನೆಯಲ್ಲಿ!
ನನ್ನದೇ ಸೂಪರ್‌ವಿಷನ್ನು, ಮೇಂಟೇನನ್ಸು..
ಎಲ್ಲ ಇದೆ, ಆದ್ರೂ ಬೇಜಾರು, ಬೋರು, ಡಿಪ್ರೆಷನ್ನು
ಏನೋ ಒಂಥರ ಫ್ಯಟೀಗ್ಗು, ವೀಕ್‌ನೆಸ್ಸು, ತಲೆ ನೋವು, ಕಿರಿಕಿರಿ
ಟೆರೇಸ್ ಮೇಲೆ ಹೋಗಿ ಒಂದು ಗಳಿಗೆ ನಿಲ್ತೀನಿ
ಆಹಾ! ಗಾಳಿ ಬೀಸ್ತಾ ಇದೆ, ಗಿಡ ಮರ ತೂಗ್ತಾ ಇದೆ
ಸಂಪಿಗೆ ಘಮ್ ಅನ್ತಾ ಇದೆ
ದೊಡ್ಡ ದೊಡ್ಡ ಕಟ್ಟಡಗಳ ಸಂದೀಲಿ ಚೂರೇ ಚೂರು ಅಕಾಶ ಕಾಣ್ತಾ ಇದೆ
ಅದರಲ್ಲೇ ಒಂಚೂರು ಚಂದ್ರ ಬೆಳಗತಾ ಅವನೆ
ಹಾಗೇ ಒಂದು ಗಳಿಗೆ ನೋಡ್ತಾನೇ ನಿಲ್ತೀನಿ
ಏನೋ ಒಂಥರಾ ನೆಮ್ಮದಿ, ಅಸೀಮ ಶಾಂತಿ!!
ಶಾಂತಿ! ಶಾಂತಿ! ಶಾಂತಿ!

ಇಲ್ಲಿರುವುದು ಸುಮ್ಮನೆ

(ನಾಟಕದ ಒಂದು ದೃಶ್ಯ)

ವಿವೇಕ ಶಾನಭಾಗ





ವಿಕ್ರಮ್	೪೮ ವರ್ಷ	ಇಪ್ಪತ್ತೈದು ವರ್ಷದ ನಂತರ ಬೆಂಗಳೂರಿಗೆ ಬರುತ್ತಿದ್ದಾನೆ
ಮೋಹನ್	೬೩ ವರ್ಷ	ವಿಮಾನದಲ್ಲಿ ವಿಕ್ರಮ್‌ನ ಸಹಪ್ರಯಾಣಿಕ
ಸೇತು	೪೫ ವರ್ಷ	ಮೋಹನನ ಡ್ರೈವರ್
ಯುವಕ	೨೪ ವರ್ಷ	ಶೇಷಾದ್ರಿಯ ಮಗ
ಶೇಷಾದ್ರಿ	೫೫ ವರ್ಷ	ಮನೆಯಾತ

ದೃಶ್ಯ ಒಂದು :

ಪುರಪ್ರವೇಶ

ಬೆಂಗಳೂರು ವಿಮಾನ ನಿಲ್ದಾಣ. ನಡು ರಾತ್ರಿಯ ಸಮಯ. ಇಪ್ಪತ್ತೈದು ವರ್ಷಗಳ ನಂತರ ವಿಕ್ರಮ್ ಅಮೇರಿಕಾದಿಂದ ಬಂದಿದ್ದಾನೆ. ಈ ಪ್ರಯಾಣದಲ್ಲಿ ಅವನಿಗೆ ಪರಿಚಯವಾದ ಮೋಹನ್‌ರಾವ್ ಜೊತೆಗಿದ್ದಾರೆ. ಮೋಹನ್ ಒಂದೊಂದಾಗಿ ಬ್ಯಾಗುಗಳನ್ನು ಪೇರಿಸಿಕೊಳ್ಳುತ್ತಿದ್ದಾರೆ. ವಿಕ್ರಮ ಅವರಿಗಾಗಿ ಕಾಯುತ್ತಿದ್ದಾನೆ. ವಿಕ್ರಮನದು ಒಂದೇ ದೊಡ್ಡ ಬ್ಯಾಗು.

ವಿಕ್ರಮ್: ಇನ್ನೂ ಇದೆಯಾ ಮೋಹನ್? ನೀವು ಹೋಗಿದ್ದು ಮೂರು ವಾರಕ್ಕೋ ಮೂರು ವರ್ಷಕ್ಕೋ?

ಮೋಹನ್: ತಮಾಷೆ ಮಾಡ್ತಾ ಇದೀರಾ? ಇನ್ನೊಂದೇ ಒಂದು. ನಿಮ್ಮ ಪೆಟ್ಟಿಗೆಗಳು ಬರೋ ಹೊತ್ತಿಗೆ ನಂದೂ ಬಂದಿರತ್ತೆ.

ವಿಕ್ರಮ್: ನಂದಿಷ್ಟೇ.

ಮೋಹನ್: ಇಪ್ಪತ್ತೈದು ವರ್ಷಗಳ ನಂತರ ಬರ್ತಾ ಇದೀರಾ ಒಂದು ಪೆಟ್ಟಿಗೆ ಹಿಡ್ಕೊಂಡು. ನನ್ನ ನೋಡಿ, ಇಪ್ಪತ್ತೈದು ದಿನಗಳ ಲಗೇಜು!

ವಿಕ್ರಮ್: ಆಗ ಇದರ ನಾಲ್ಕರಷ್ಟು ತಗೊಂಡು ಹೋಗಿದ್ದೆ. ಅದರಲ್ಲಿ ಪುಟಾಣಿ ಈಳೀಗೆಮಣೆನೂ ಇತ್ತು.

ಮೋಹನ್: ನಂದೂಂತ ಇದರಲ್ಲಿರೋದು ನಾಲ್ಕು ಬಟ್ಟೆ. ಹುಂ... ಉಳಿದದ್ದೆಲ್ಲಾ ಉಡುಗೊರೆ. 'ಎಲ್ಲಾ ಇಲ್ಲೇ ಸಿಗತ್ತೆ' ಎಂದು ಹೇಳ್ತಾನೇ ಇಸ್ಕೋತಾರೆ. ಖಾಲಿ ಕೈಯಲ್ಲಿ ಬಂದ್ರೆ ಆಡ್ಕೋತಾರೆ.

ವಿಕ್ರಮ್: ನಿಮ್ಮಿಂದಾಗಿ ಸಮಯ ಹೋದದ್ದು ಗೊತ್ತಾಗಲಿಲ್ಲ. ನಿಮಗೆ ಸಿನಿಮಾ ನೋಡಬೇಕಿತ್ತೇನೋ. ನಾನು ಅದಕ್ಕೂ ಕಲ್ಲು ಹಾಕಿದೆ.

ಮೋಹನ್: ನಾನು ಕನ್ನಡ ಚಿತ್ರ ಮಾತ್ರ ನೋಡೋದು. ಅದನ್ನೆಲ್ಲ ಈ ವಿಮಾನದಲ್ಲಿ ಎಲ್ಲಿ ತೋರಿಸುತ್ತಾರೆ.

ವಿಕ್ರಮ್: ಯಾರೂ ಕೇಳಿಲ್ಲ ಅನ್ಸತ್ತೆ ನೂರು ಜನ ಕೇಳಿದ್ರೆ ಹಾಕೇಹಾಕ್ತಾರೆ. ನಿಮ್ಮ ಕನ್ನಡಪ್ರೇಮವೇ ನನಗೆ ಥ್ರಿಲ್ಲಿಂಗ್. ನಿಮ್ಮ ಮಾತು ಕೇಳೋದಿಕ್ಕೆ ಸೊಗಸಾಗಿರತ್ತೆ

ಮೋಹನ್: ಈ ಆಯಾತ ನಿರ್ಯಾತ ವ್ಯಾಪಾರದಲ್ಲಿ ಇರೋದರಿಂದ ಹಲವು ಭಾಷೆ ಕಲಿತಿದೀನಿ. ಹಿಂದಿ ಮಾತನಾಡಿದರೆ ಉತ್ತರದವನು ಅನಿಸಬೇಕು ಹಾಗಿರತ್ತೆ ನನ್ನ ಪಲುಕು.

ವಿಕ್ರಮ್: ಅದೇನು ವ್ಯಾಪಾರ ಅಂದ್ರಿ?

ಮೋಹನ್: ಆಯಾತ ನಿರ್ಯಾತ. ಆಮದು ರಫ್ತು. ಇಂಗ್ಲೀಷಿನಲ್ಲಿ ಇಂಪೋರ್ಟ್ ಎಕ್ಸ್‌ಪೋರ್ಟ್. ನೋಡಿ ಬಂದೇ ಬಿಡ್ತು ಕೊನೆಯ ಗುಡಾಣ. ಬನ್ನಿ, ಜೊತೆಗೇ ಹೋಗೋಣ.

ಇಬ್ಬರೂ ಹೊರಗೆ ಬರುವರು.

ಮೋಹನ್: ಒಂದು ನಿಮಿಷ, ಬಂದ್ಬಿಡ್ತೀನಿ.

ವಿಕ್ರಮ್: ಅಲ್ಲೇ ಒಳಗೇ ಇತ್ತಲ್ಲಾ.

ಮೋಹನ್: ಛೆ ಛೆ ಅದಕ್ಕಲ್ಲ. ಮಣ್ಣನ್ನು ಮುಟ್ಟಬೇಕು.

ವಿಕ್ರಮ್: ಏನಂದ್ರಿ?

ಮೋಹನ್: ಕನ್ನಡದ ಮಣ್ಣು.

ವಿಕ್ರಮ್: ಏನು?

ಮೋಹನ್: ತಾಯಿನೆಲದ ಮಣ್ಣು ಸಾರ್. ವಿದೇಶದಿಂದ ಬಂದ ಕೂಡಲೇ ನಮ್ಮ ನೆಲ ಮುಟ್ಟಿ ಕಣ್ಣಿಗೊತ್ತಿಕೊಳ್ಳೋದು ನನ್ನ ಪದ್ಧತಿ.

ವಿಕ್ರಮ್: ಕನ್ನಡ ಸಿನೇಮಾದ ಪ್ರಭಾವವೋ ಅಂತೀನಿ.

ಮೋಹನ್: ಇಷ್ಟು ವರ್ಷದ ನಂತರ ತವರಿಗೆ ಬಂದರೂ ನಿಮಗೆ ಅನಿಸಲಿಲ್ಲ. ನನಗೆ ಇಪ್ಪತ್ತೈದು ದಿನಗಳಲ್ಲೇ ಕನ್ನಡ ಭೂಮಿಗೆ ಸಾಷ್ಟಾಂಗ ಹಾಕಬೇಕು ಅನಿಸಿತು. ಅವರವರ ಭಾವ.

ವಿಕ್ರಮ್: ಒಬ್ಬೊಬ್ರು ಒಂದೊಂದು ಥರಾ ಮಿಸ್ ಮಾಡ್ಕೋತಾರೆ. ತವರು ಅಂದರಲ್ಲ, ಇಂಟರೆಸ್ಟಿಂಗ್ ಶಬ್ದ.

ಮೋಹನ್: ಇದೆಲ್ಲ ಹಾಗೇ. ಬಿಟ್ರೆ ಹೋಗೇ ಬಿಡತ್ತೆ. ಸದಾ ಸಂಪರ್ಕದಲ್ಲಿದ್ದರೇನೆ ಪ್ರೀತಿ. ಇಲ್ಲದಿದ್ರೆ ವಿರಹವೂ ಅಭ್ಯಾಸವಾಗಿಬಿಡತ್ತೆ.

ಡ್ರೈವರ್ ಸೇತು ಬಂದು ಮೋಹನ್‌ನ ಬ್ಯಾಗುಗಳ ತಳ್ಳುಗಾಡಿಯನ್ನು ಇಸಕೊಳ್ಳುವನು.

ಮೋಹನ್: ಸೇತು, ಇವರ ಪೆಟ್ಟಿಗೆ ತಗೊ. ಇವರನ್ನು ಮನೆಗೆ ಬಿಟ್ಟು ಹೋಗೋಣ.

ವಿಕ್ರಮ್: ನೀವು ತುಂಬಾ ತೊಂದರೆ ತಗೋತಾ ಇದೀರಾ ಮೋಹನ್.

ಮೋಹನ್: ತೊಂದರೆ ಏನು ಬಂತು? ರಾತ್ರಿ ಹೊತ್ತಲ್ಲಿ ಖಾಲಿ ರಸ್ತೇಲಿ ಝುಮ್ಮಂತ ಹೋಗಬಹುದು. ಹೀಗೆ ಬನ್ನಿ, ಈ ಕಡೆ ಹೋದರೆ ಗಾರೆ ನೆಲ ಮುಗಿದು ಮಣ್ಣು ಸಿಗತ್ತೆ.

ಮೋಹನ್ ಮಣ್ಣು ನೆಲದಲ್ಲಿ ಸಾಷ್ಟಾಂಗ ನಮಸ್ಕಾರ ಹಾಕುವನು

ಮೋಹನ್: ಒಂಥರಾ ಎದೆ ಉಕ್ಕಿ, ಕಣ್ಣಲ್ಲಿ ನೀರು ಬರತ್ತೆ. ಅದೆಲ್ಲ ಬಿಡಿ, ಬೆಂಗಳೂರಿನ ನೆಲಕ್ಕೆ ಈಗ ಚಿನ್ನಕ್ಕಿಂತ ಜಾಸ್ತಿ ಬೆಲೆ!

ವಿಕ್ರಮ್: ಇನ್ನೇನು ಬೇಕು ಸಾಷ್ಟಾಂಗಕ್ಕೆ! ಇನ್ನೂ ಒಂದೆರಡು ಹಾಕಿಬಿಡಿ.

ಮೋಹನ್: ತಮಾಷೆಯಲ್ಲ ವಿಕ್ರಮ್. ಬೀಜ ಬಿತ್ತಿ ಬೆಳೆ ತೆಗೆಯೋ ನೆಲ ವ್ಯಾಪಾರದ ವಸ್ತುವಾಗಿಹೋಯಿತು. ಹಂ...
ಸೇತು ನನ್ನ ಚರವಾಣಿಗೊಂದು ಕರೆ ಮಾಡಪ್ಪ.

ಮೊಬೈಲ್ ರಿಂಗ್‌ಟೋನ್‌ನಲ್ಲಿ ಜೋಗದ ಸಿರಿ ಬೆಳಕಿನಲ್ಲಿ ಹಾಡು ಬರತೊಡಗುತ್ತದೆ. ಮೊದಲು ಮೊಬೈಲ್ ಹುಡುಕಾಡುತ್ತಾನೆ. ಅದು ಸಿಕ್ಕೊಡನೆ ಕರೆ ಸ್ವೀಕರಿಸದೇ ಹಾಡನ್ನೇ ಒಂದು ನಿಮಿಷ ಕೇಳುತ್ತಾನೆ.

ಮೋಹನ್: ಈ ಹಾಡು ಕೇಳಿಸಿಕೊಳ್ತಾ ಇದ್ರೆ ಫೋನ್ ಎತ್ತೋದೇ ಬೇಡಾ ಅನ್ಸತ್ತೆ

ವಿಕ್ರಮ್: ನಂಗೂ ಕನ್ನಡ ಹಾಡುಗಳು ಇಷ್ಟ.

ಮೋಹನ್: ಎಲ್ಲಾ ಥರದ ಹಾಡುಗಳು ನನ್ನ ಕಾರಿನಲ್ಲೇ ಇವೆ. ಪುರಪ್ರವೇಶ ಮಾಡ್ತಾ ಕೇಳಿಸ್ತೇನೆ.

ಇಬ್ಬರೂ ದೊಡ್ಡ ಎಸ್‌ಯುವಿ ವಾಹನದಲ್ಲಿ ಹೊರಡುವರು. ಅವರ ಸುತ್ತ ಮುತ್ತ, ಹಿಂದೆ ಮುಂದೆ ಬರೇ ಲಗೇಜು ತುಂಬಿದೆ. ವಾಹನ ರಭಸದಿಂದ ನಗರದತ್ತ ಹೊರಡುತ್ತದೆ. ವಿಕ್ರಮ್ ನಗರದ ಬೆಳವಣಿಗೆಯಿಂದ ತುಸು ಆಶ್ಚರ್ಯಚಕಿತನಾಗಿದ್ದಾನೆ.

ವಿಕ್ರಮ್: ಯಾವ ಊರಿದು? ಗುರುತೇ ಸಿಗ್ತಾ ಇಲ್ವಲ್ಲ ಸಾರ್.

ಮೋಹನ್: ಬೆಂಗಳೂರು. ನಮ್ಮ ಬೆಂಗಳೂರು!

ವಿಕ್ರಮ್: ಇದೇನಿದು? ಹಾವಿನ ಹಾಗೆ ಎಲ್ಲೆಂದರಲ್ಲಿ ತಲೆ ಮೇಲೆ ಎರಗಿದೆಯಲ್ಲ.

ಮೋಹನ್: ಮೆಟ್ರೋ, ನಮ್ಮ ಮೆಟ್ರೋ.

ವಿಕ್ರಮ್: ಹುತ್ತವನ್ನು ಬಿಟ್ಟು ಇದ್ಯಾಕೆ ಹೊರಗೆ ಬಂದಿದೆ?
ಮೋಹನ್: ಕೇಳಬೇಕೆಂದರೆ ಎಷ್ಟೊಂದು ಪ್ರಶ್ನೆಗಳಿವೆ ಈ ಊರಿನಲ್ಲಿ. ನಿಮ್ಮ ಮನೆ ಎಲ್ಲಿ ಅಂದಿರಿ?
ವಿಕ್ರಮ್: ಸೀತಾಲಕ್ಷ್ಮಿಪುರ.
ಮೋಹನ್: ಸೇತು, ಕೇಳಿಸ್ಕೊಂಡೆಯಾ?
ಸೇತು: ದಾರೀಲೇ ಇದೆ ಸಾರ್.
ವಿಕ್ರಮ್: ಅಲ್ಲೊಂದು ಕೆರೆ ಇದೆ ನೋಡಿ. ಸೀತಾಲಕ್ಮಿ ಕೆರೆ ಅಂತಾ. ಅದರ ಹತ್ತಿರಾನೇ ನಮ್ಮ ಮನೆ.
ಮೋಹನ್: ಕೆರೆನಾ? ಸೇತು, ಗೊತ್ತೇನಪ್ಪಾ?
ಸೇತು: ಈಗಲೂ ಇದೆಯಾ ಸಾರ್? ಅಲ್ಲೆಲ್ಲೂ ಕೆರೆ ಕಂಡ ನೆನಪಿಲ್ಲ.
ವಿಕ್ರಮ್: ಇರದೇ ಎಲ್ಲಿ ಹೋಗತ್ತೆ? ಕೆರೆ ಓಡಿ ಹೋಗತ್ತಾ?
ಮೋಹನ್: ಬೆಂಗಳೂರಲ್ಲಿ ಏನೆಲ್ಲಾ ಆಗತ್ತೆ ವಿಕ್ರಮ್. ಕೆರೆಗಳ ಮೇಲೆ ದೊಡ್ಡವರ ಕಣ್ಣು ಬೀಳತ್ತೆ. ದೃಷ್ಟಿಯಾಗಿ ಬತ್ತಿಬಿಡತ್ವೆ.
ವಿಕ್ರಮ್: ಇದು ನಮ್ಮೂರಂತ ನಂಬಕ್ಕೇ ಆಗ್ತಾ ಇಲ್ಲಾ. ಇಂಟರ್‌ನೆಟ್ಟಲ್ಲಿ ಓದಿದ್ದೆ. ಫೋಟೋ ನೋಡಿದ್ದೆ. ಸಿನೆಮಾದಲ್ಲಿ ನೋಡಿದ್ದೆ. ಆದರೂ ನಿಜದಲ್ಲಿ ಎಲ್ಲವೂ ಬೇರೆ. ಖಾಲಿ ರಸ್ತೆಗಳೆಲ್ಲ ರಾತ್ರಿ ಸುಂದರವಾಗಿ ಕಾಣಿವೆ ನಗರದೇವತೆಯ ಮೈಮೇಲಿನ ಆಭರಣಗಳ ಹಾಗೆ.
ಮೋಹನ್: ಯಾವಾಗ್ಲೂ ನಡುರಾತ್ರಿಯಲ್ಲಿ ಓಡಾಡೋ ಹಾಗಿದ್ರೆ ಮಾತ್ರ ಇದು ಸುಂದರ. ಆಭರಣ ಅಂದಿರಲ್ಲ, ಅವೆಲ್ಲ ಹಾವು ಚೇಳುಗಳ ಹಾಗೆ ಕಾಣ್ತವೆ ಹಗಲಿನ ಕಿಷ್ಕಿಂಧೆಯಲ್ಲಿ.
ಸೇತು: ಐದು ನಿಮಿಷದಲ್ಲಿ ಸೀತಾಲಕ್ಷ್ಮೀಪುರ ಬರತ್ತೆ. ಯಾವ ಕ್ರಾಸು ಮೇನು ಅಂತಾ ಹೇಳಿದ್ರೆ...
ವಿಕ್ರಮ್: ಐದನೇ ಮೇನು. ದೊಡ್ಡ ಕಂಪೌಂಡ್. ಒಳಗೆ ಭಾರೀ ಹಲಸಿನ ಮರ ಇದೆ. ಮನೆ ಎದುರಿಗೇ ಒಂದು ಗ್ರೌಂಡ್ ಇದೆ. ಏರಿಯಾದ ಮಕ್ಕಳೆಲ್ಲಾ ಸಂಜೆ ಅಲ್ಲೇ ಬರೋರು. ಪಕ್ಕದ ಮನೆಯವರಂತೂ ದನ ಕರು ಕಟ್ಟಿ ಅಲ್ಲೊಂದು ಡೈರೀನೇ ಮಾಡ್ಕೊಂಡಿದ್ರು.
ಸೇತು: ಸಾರ್ ಇದು ನಾಲ್ಕನೇ ಮೇನು. ಇನ್ನು ಬರ್ತಾ ಇರೋ ಐದನೇ ಮೇನು ಅಡ್ಡಡ್ಡಲಾಗಿ ಎಲ್ಲಾ ಕ್ರಾಸನ್ನೂ ಕಟ್ ಮಾಡತ್ತೆ ಯಾವ ಕಡೆ ಹೋಗಲಿ?
ವಿಕ್ರಮ್: ಎಂಟನೇ ಕ್ರಾಸ್‌ಲ್ಲಿ ಮನೆ. ಮುಂದೆ ಹೋಗಿ, ನಾನು ತೋರಿಸ್ತೀನಿ.
ಸೇತು: ಬಂದ್ವಿ, ಇದೇ ನೋಡಿ.
ವಿಕ್ರಮ್: ಇದೇನಾ? ಇದಲ್ವಲ್ಲ.
ಸೇತು: ಇದೇ ಸಾರ್. ಎಂಟನೇ ಕ್ರಾಸು.
ವಿಕ್ರಮ್: ಮನೆಯ ಟೆರೇಸಿನಿಂದ ಕೆರೆ ಕಾಣೋದು. ಕೆರೆ ಹತ್ರಾನೇ ಮನೆ.
ಸೇತು: ಇನ್ನೂ ಮುಂದೆ ಹೋಗ್ಲಾ?
ವಿಕ್ರಮ್: ಹೂಂ.
ಮೋಹನ್: ಸೇತುಗೆ ಗೊತ್ತಿಲ್ದೇ ಇರೋ ಏರಿಯಾನೇ ಇಲ್ಲ.
ಸೇತು: ಬೆಂಗಳೂರಲ್ಲಿ ಇದೊಂದೇ ಸಾರ್ ಸೀತಾಲಕ್ಷ್ಮಿಪುರ ಇರೋದು.
ವಿಕ್ರಮ್: ಆಟದ ಗ್ರೌಂಡ್ ಅಂತೂ ಮನೇ ಎದುರಿಗೇ ಇತ್ತು. ಯಾರನ್ನಾದ್ರೂ ಕೇಳೋಣ್ವೇ?
ಸೇತು: ಈ ಹೊತ್ತಲ್ಲಿ ಎಬ್ಬಿಸಿ ಕೇಳಿದ್ರೆ ಪೂಜೆಯಾಗತ್ತೆ ಅಷ್ಟೆ.
ವಿಕ್ರಮ್: ಸರಿ ಕೊನೆವರೆಗೂ ಹೋಗಿ ನೋಡೋಣ. ಸಿಗಲಿಲ್ಲಾ ಅಂದರೆ ಇನ್ನೊಂದು ಕೊನೆವರೆಗೂ ಹೋಗೋಣ.

ಕೊನೆಯವರೆಗೂ ಹೋಗುತ್ತಾರೆ. ಆದರೆ ಮನೆ ಕಾಣಿಸುವುದಿಲ್ಲ. ಮೋಹನ್ ನಿದ್ದೆಗೆ ಜಾರಿದ್ದಾನೆ.

ಸೇತು: ಇದೇ ಕೊನೆ ಸಾರ್. ತಿರುಗಿ ಹೋಗೋಣ್ವೆ? ನಾನು ಈ ರಸ್ತೇಲಿ ಬಂದಿದ್ದೀನಿ. ಇಲ್ಲೆಲ್ಲೂ ಕೆರೆ ಕಂಡಂಗಿಲ್ಲ. ಗ್ರೌಂಡ್ ಕೂಡ ಇದ್ದಂಗಿಲ್ಲ.
ವಿಕ್ರಮ್: ರಸ್ತೆ ಪಕ್ಕ ಕೆರೆ ಇರಲಿಲ್ಲಪ್ಪ. ಎರಡು ರಸ್ತೆ ಆಚೆ ಇತ್ತು. ಇಷ್ಟೊಂದು ಅಂಗಡಿಗಳು, ಎತ್ತರದ ಬಿಲ್ಡಿಂಗು ಇರಲೇ ಇಲ್ಲ. ನನಗೂ ಕನಫ್ಯೂಸ್ ಆಗ್ತಾ ಇದೆ. ಹುಡುಕೋಣ. ಮನೆಯಂತೂ ಇರಲೇಬೇಕಲ್ಲ.

ತಿರುಗಿ ಮೇನ್ ಕೊನೆಯವರೆಗೂ ಹೋಗುತ್ತಾರೆ. ಆದರೆ ಮನೆ ಕಾಣಿಸುವುದಿಲ್ಲ.

ಸೇತು: ನೋಡಿ ಸಾರ್, ಇದೇನಾ?
ವಿಕ್ರಮ್: ಇದಾ? ಛೆ ಛೆ, ಅಲ್ಲಪ್ಪ. ದೊಡ್ಡ ಜಾಗ. ಮಧ್ಯದಲ್ಲಿ ಮನೆ. ಅದೇ ಹೇಳಿದೆನಲ್ಲ ಎದೂ...ರಿಗೆ ದೊಡ್ಡ ಹಲಸಿನ ಮರ.
ಮೋಹನ್: (ಒಮ್ಮೆಲೇ ಎಚ್ಚರಾಗಿ) ಬಂತಾ? ಸಿಕ್ತಾ? ಇದೇನಾ?
ವಿಕ್ರಮ್: ಇಲ್ಲೇ ಎಲ್ಲೋ ಇದೆ. ಬೀದಿ ಗುರುತೇ ಸಿಗ್ತಾ ಇಲ್ಲ.
ಮೋಹನ್: ನೀವು ಅತೀ ಖುಷಿಯಾಗಿಬಿಟ್ಟಿದೀರಾ ವಿಕ್ರಮ್. ನಿಧಾನ ನಿಧಾನ. ಆರು ತಿಂಗಳು ಕಳೆದು ಒಂದು ರಸ್ತೆಗೆ ಬಂದರೇನೇ ಗುರುತು ಬದಲಾಗಿರತ್ತೆ. ಇನ್ನು ಇಪ್ಪತ್ತೈದು ವರ್ಷವೇನು ಕಡಿಮೆ ಕಾಲವೇ? ಸೇತು ಬೇಗ ಹುಡುಕಪ್ಪಾ. ನಮಗೂ ತಡ ಆಗತ್ತೆ. ಹುಂ...
ವಿಕ್ರಮ್: ಎಕ್ಸೈಟ್ ಆಗದೇ ಇರೋಕ್ಕಾಗತ್ತಾ ಸಾರ್. ಎಷ್ಟೊಂದು ವರ್ಷಗಳ ಮೇಲೆ ಬರ್ತಾ ಇದೀನಿ.
ಮೋಹನ್: ನಿಮ್ಮ ಮನೇಲಿ ಯಾರಿರ್ತಾರೆ?
ವಿಕ್ರಮ್: ಯಾರೂ ಇಲ್ಲ. ಮನೇನ ಹಾಗೇ ಇಟ್ಕೊಂಡಿದೀನಿ. ಎರಡು ರೂಮಿನ ಔಟ್‌ಹೌಸ್ ಇದೆ. ಅದರಲ್ಲಿ ನಮಗೆ ಗೊತ್ತಿರೋರು ಬಾಡಿಗೆಗೆ ಇದಾರೆ. ಹೆಸರಿಗೆ ಬಾಡಿಗೆ ಅಷ್ಟೇ. ಅದಕ್ಕಿಂತ ಜಾಸ್ತಿ ಖರ್ಚಾಗತ್ತೆ. ಯಾರಾದರೂ ಕೇರ್‌ಟೇಕರ್ ಅಂತಾ ಇರೋದು ಒಳ್ಳೇದಲ್ವೇ?
ಮೋಹನ್: ಈಗಿನ ಕಾಲದಲ್ಲಿ ಮನೆ ಬಾಡಿಗೆಗೆ ಕೊಡೋದೂ ಕಷ್ಟ ಬಿಡ್ತಾರೋ ಇಲ್ವೋ ಅಂತ ಭಯವಾಗತ್ತೆ.
ವಿಕ್ರಮ್: ಶ್ರೀನಿವಾಸ ಅಂತ ನನ್ನಪ್ಪನಿಗೆ ಗೊತ್ತಿರೋ ಜನಾನೇ. ಬೇಕಾದಾಗ ಬಿಡ್ತೀವಿ ಅಂತಾನೂ ಹೇಳಿದಾನೆ.
ಮೋಹನ್: ಗೊತ್ತಿರೋರೇ ನಾಮ ಹಚ್ಚೋದು. ಒಳಗಿನದೆಲ್ಲ ಗೊತ್ತಿರತ್ತೆ. ಅವರ ಮೇಲೆ ವಿಶ್ವಾಸ ಬೇರೆ ಇಟ್ಟಿರ್ತೀವಿ. ಬೆಂಕಿ ಗಾಳಿ ಸೇರಿದ ಹಾಗಾಗತ್ತೆ.
ವಿಕ್ರಮ್: ಅದಕ್ಕೇ ಬಂದಿರೋದು. ಸ್ವತಃ ನೋಡೋಣ ಅಂತ.
ಮೋಹನ್: ಎಲ್ಲಪ್ಪಾ ಇದೀವಿ ಸೇತೂ?
ಸೇತು: ಮನೆ ನಂಬರ್ ಹೇಳಿ ಸಾರ್.
ವಿಕ್ರಮ್: ೧೯೮೫. ನೋಡಿ ಅಂಗಡಿ ಬೋರ್ಡ್ ಮೇಲೆ ವಿಳಾಸ ಇದೆ. ಎಂಟನೇ ಕ್ರಾಸ್. ಇದೇ ಬೀದಿ.
ಸೇತು: ಇಲ್ಲೆಲ್ಲ ನಂಬರು ಸಾವಿರದ ಮೇಲೇನೇ ಇದೆಯಲ್ಲ.
ಮೋಹನ್: ಈ ಕಡೆ ನೋಡಿ
ವಿಕ್ರಮ್: ಸಾವಿರದ ಒಂಭೈನೂರ ಎಂಬತ್ತೈದು.
ಸೇತು: ಇನ್ನೊಂದು ರೌಂಡ್ ಹೋಗಿಬರೋಣ ಸಾರ್. ಸಿಗದೇ ಎಲ್ಲಿ ಹೋಗತ್ತೆ. ನೀವು ನಂಬರು ನೋಡಿ.

ಮತ್ತೆ ಇನ್ನೊಂದು ಸುತ್ತು ಹೊರಡುವರು. ಮೋಹನ್ ನಿಧಾನ ತಾಳ್ಮೆ ಕಳೆದುಕೊಳ್ಳುತ್ತಿದ್ದಾನೆ.

ಮೋಹನ್: . . . . ಸಮಯಾ ಹಾಳು ಮಾಡಬೇಡ.
ಸೇತು: ಕೊನೇ ರೌಂಡು.
ವಿಕ್ರಮ್: ಈ ಕಡೆ ನಂಬರುಗಳೆಲ್ಲ ಏರ್ತಾ ಇವೆಯಲ್ಲ. ಅಲ್ಲೊಂದು ಇಲ್ಲೊಂದು ಮನೆ ಬಿಟ್ರೆ ಬರೇ ಅಂಗಡಿಗಳೇ. ಮನೆಗಳೆಲ್ಲಾ ಏನಾದವು?
ಮೋಹನ್: ಆ ಮನೇಲಿ ದೀಪ ಉರೀತಾ ಇದೆ. ಹೋಗಿ ಕೇಳಿ. ಈ ರಾತ್ರೀಲಿ ಎಷ್ಟೂಂತ ಸುತ್ತೋದು. ಸೇತು ನಿಲ್ಸಪ್ಪಾ ಒಂದು ನಿಮಿಷ.

ವಾಹನ ನಿಲ್ಲಿಸಿ ವಿಕ್ರಮ್ ಹಾಗೂ ಸೇತು ಆ ಮನೆಗೆ ಹೋಗಿ ಬಾಗಿಲು ತಟ್ಟುವರು. ಬೆಲ್ ಬಾರಿಸಿದರೆ ಸದ್ದು ಬರುತ್ತಿಲ್ಲ. ಒಂದೆರಡು ಬಾರಿ ಬಾಗಿಲು ತಟ್ಟಿದ ಮೇಲೆ ಎಷ್ಟೋ ಹೊತ್ತಿನ ನಂತರ ಯುವಕನೊಬ್ಬ ಕಿಟಕಿಯಿಂದ ನೋಡಿ, ಬಾಗಿಲು ತೆರೆಯುವನು. ಇಷ್ಟು ಹೊತ್ತಿನಲ್ಲಿಯೂ ನಿರಾಳವಾಗಿರುವನು. ಕಿವಿಗೆ ಇಯರ್ ಫೋನ್ ಸಿಕ್ಕಿಸಿಕೊಂಡಿದ್ದಾನೆ.

ವಿಕ್ರಮ್: ೧೯೮೫ ನೇ ನಂಬರಿನ ಮನೆ ಯಾವ ಕಡೆ ಬರತ್ತೆ ಗೊತ್ತಾ?
ಯುವಕ: ವಾಟ್?
ವಿಕ್ರಮ್: ಹೌಸ್ ನಂಬರ್ ೧೯೮೫.
ಯುವಕ: ವಿಲ್ ಆಸ್ಕ್ ಮೈ ಡ್ಯಾಡ್... ಅಪಾ...

ಕರೆಯುತ್ತ ಮತ್ತೆ ಕಿವಿಗೆ ಇಯರ್ ಫೋನ್ ಹಾಕಿಕೊಂಡು ಒಳಗೆ

ಹೋಗುವನು.

ಮೋಹನ್: ಬೇಡ ಬಿಡಿ. ಈ ಹೊತ್ತಲ್ಲಿ ಎಬ್ಬಿಸಬೇಡಿ. ರೀ, ಬೇಡ ಬಿಡಿ...

ಯುವಕನು ಮೋಹನನ ಮಾತಿಗೆ ಗಮನ ಕೊಡದೇ ಒಳಗೆ ಹೋಗುವನು. ಇಬ್ಬರೂ ಕಾಯುತ್ತಾರೆ.

ವಿಕ್ರಮ್: ಒಂದೇ ಒಂದು ಜಾಗದ ಗುರುತು ನನಗೆ ಹತ್ತತಾ ಇಲ್ಲ. ಒಂದು ಹಳೆಯ ಎಳೆ ಸಿಕ್ಕರೆ ಸಾಕು ಮನೆ ಕಂಡುಹಿಡಿತೀನಿ.

ಸೇತು: ಇದೊಂದೇ ಸೀತಾಲಕ್ಷ್ಮೀಪುರ. ಬೆಂಗಳೂರು ಬೆಳೀತಾ ಇದೆ. ಆದರೆ ಒಂದೇ ಹೆಸರನ್ನು ಎರಡು ಬಡಾವಣೆಗೆ ಇಟ್ಟಿರೋದು ನನಗಂತೂ ಗೊತ್ತಿಲ್ಲ. ಇಷ್ಟು ಹಳೇ ಹೆಸರನ್ನಂತೂ ಇಡಲ್ಲ.

ಒಳಗಡೆಯಿಂದ ಶೇಷಾದ್ರಿ ಬರುತ್ತಾರೆ. ನಿದ್ದೆಗಣ್ಣಲ್ಲಿದ್ದಾರೆ.

ಶೇಷಾದ್ರಿ: ಏನ್ರೀ ಇದು? ಈ ಹೊತ್ತಲ್ಲಿ ಯಾರಾದ್ರೂ ಅಡ್ರೆಸ್ ಕೇಳಕ್ಕೆ ಬರ್ತಾರಾ? ಇವ್ನು ಬಾಗಿಲು ಬೇರೆ ತೆಗೆದಿಟ್ಟು ಹೋಗಿದಾನೆ.

ವಿಕ್ರಮ್: ಸಾರಿ ಸರ್. ದೀಪ ಉರೀತಾ ಇತ್ತು. ಅದಕ್ಕೇ ಬಂದ್ವಿ.

ಶೇಷಾದ್ರಿ: ಮನೆ ಅಡ್ರೆಸ್ ಹೇಳಿ.

ಸೇತು: ಮನೆ ನಂಬರ್ ೧೩೭.

ಶೇಷಾದ್ರಿ: ಹೊಸಾ ನಂಬರಾ ಹಳೇದಾ?

ವಿಕ್ರಮ್: ಹಳೇದೇ ಅನ್ಸತ್ತೆ. ಮನೆ ನಂಬರು ಬದಲಾದ ನೆನಪಿಲ್ಲವಲ್ಲ. ತುಂಬಾ ವರ್ಷದ ಮೇಲೆ ಬರ್ತಾ ಇದೀನಿ ಸಾರ್. ಅಮೇರಿಕಾದಿಂದ.

ಶೇಷಾದ್ರಿ: ಅಂದರೆ ಹೊಸಾದೇ ಅಂತೀರಾ?

ವಿಕ್ರಮ್: ಇಲ್ಲ ಇಲ್ಲ. ಹಳೇದೇ.

ಶೇಷಾದ್ರಿ: ಫುಲ್ ಅಡ್ರೆಸ್ ಹೇಳಿ.

ವಿಕ್ರಮ್: ೧೩೭ ಐದನೇ ಮೇನ್ ಸೀತಾಲಕ್ಷ್ಮೀಪುರ.

ಶೇಷಾದ್ರಿ: ನಮ್ಮದು ಹೊಸಾ ನಂಬರು ೨೩೮೭. ಹಳೇದು ೪೩೮ ಆಗಿತ್ತು. ಎಡಗಡೆಗೆ ಹೋದರೆ ಏರತಾ ಹೋಗತ್ತೆ. ನೀವೇ ಲೆಕ್ಕಾ ಹಾಕ್ಕೊಳ್ಳಿ.

ವಿಕ್ರಮ್: ಇದೇ ರಸ್ತೆಯಲ್ಲೊಂದು ಮನೆ ಇತ್ತಲ್ಲಾ. ಮನೆಯೆದುರಿಗೇ ಹಲಸಿನ ಮರ.

ಶೇಷಾದ್ರಿ: ಹಳೇ ಕಾಲದ ಕತೆ ಹೇಳ್ತಾ ಇದೀರಾ. ನನಗೆ ನೆನಪಿರೋ ಹಾಗೆ ಯಾವುದೂ ಇಲ್ಲಪ್ಪ. ನಾನಿಲ್ಲಿಗೆ ಬಂದು ಹತ್ತು ವರ್ಷ ಆಯ್ತಷ್ಟೇ. ಮನೇ ಯಜಮಾನರ ಹೆಸರು ಏನಂದ್ರಿ?

ವಿಕ್ರಮ್: ಸಂಪತ್‌ಕುಮಾರ್. ಸೈಂಟಿಸ್ಟ್ ಆಗಿದ್ರು.

ಶೇಷದ್ರಿ: ನೀವು ಅವರಿಗೆ ಏನಾಗಬೇಕು?

ವಿಕ್ರಮ್: ಅವರು ನಮ್ಮಪ್ಪ. ಈಗಿಲ್ಲ.

ಶೇಷಾದ್ರಿ: ಸಂಪತ್‌ಕುಮಾರ್! ಹೆಸರು ಕೇಳಿದ ಹಾಗೆ ಇಲ್ಲವೇ.

ಸೇತು: ಹಳೇ ನಂಬರು ಹೊಸ ನಂಬರು ಹಿಡಿದು ಲೆಕ್ಕ ಹಾಕಿ ಸಾರ್.

ವಿಕ್ರಮ್: ೨೦೬೬ ಆಗತ್ತೆ.

ಸೇತು: (ಅವಸರ ಮಾಡುತ್ತ) ಬನ್ನಿ ಮತ್ತೆ. ಬಲಗಡೆಗೆ ಹೋದರೆ ಸಿಗತ್ತೆ. ನಡಕೊಂಡೇ ಹೋಗೋಣ.

ವಿಕ್ರಮ್: ಥ್ಯಾಂಕ್ಯೂ. ಎಬ್ಬಿಸಿದ್ದಕ್ಕೆ ಸಾರಿ.

ಶೇಷಾದ್ರಿ: ಪರವಾಗಿಲ್ಲ. ಯಾವ ಮನೆಯಲ್ಲಿ ಹಲಸಿನ ಮರಕ್ಕೆ ಜಾಗ ಇರತ್ತೆ ಈಗ? ಹುಡುಕಿ. ಸಿಕ್ಕರೂ ಸಿಗಬಹುದು.

ಇಬ್ಬರೂ ೨೦೬೬ ನಂಬರಿನ ಕಟ್ಟಡದ ಎದುರಿಗಿದ್ದಾರೆ.

ಸೇತು: ಇದೇ ೨೦೬೬. ಆದರೆ ಇದು ಅಪಾರ್ಟ್‌ಮೆಂಟು. ಮನೆ ಎಲ್ಲಿ?ವಿಕ್ರಮ್: ಕೃಷ್ಣಾ ಸಿಲ್ವರ್‌ಲೈನ್ ಅಪಾರ್ಟ್‌ಮೆಂಟ್ಸ್. ಇಲ್ಲೇನೋ ತಪ್ಪಾಗಿದೆ ಸೇತು. ಒಂದೋ ಈ ಏರಿಯಾನೇ ತಪ್ಪು. ಅಥವಾ ರಸ್ತೆನೇ ತಪ್ಪು ಅಥವಾ ಮನೆ ನಂಬರು ತಪ್ಪು.

ಸೇತು: ವಿಳಾಸ ಮಾತ್ರ ಇದೇ ಸಾರ್.

ವಿಕ್ರಮ್: ಒಂದೋ ತಪ್ಪು ಜಾಗಕ್ಕೆ ಬಂದು ಕಳೆದುಹೋಗಿದೇನೆ. ಜಾಗ ಸರಿಯಾಗಿದೆ ಅಂದರೆ ಮನೆನೇ ಕಳೆದುಹೋಗಿದೆ. (ಹ್ಯಾಂಡ್ ಬ್ಯಾಗಿನಿಂದ ಬೀಗದ ಕೈ ತೆಗೆಯುವನು) ನೋಡಿ. ಮನೆಯ ಬೀಗದ ಕೈ. ಒಂದು ನನ್ನ ಹತ್ರ. ಇನ್ನೊಂದು ಶ್ರೀನಿವಾಸನ ಹತ್ರ.

ಸೇತುವಿನ ಮೊಬೈಲ್ ರಿಂಗ್ ಆಗುತ್ತದೆ. ಮೋಹನ್ ಫೋನ್ ಮಾಡಿದಾನೆ.

ಸೇತು: ಅಡ್ರೆಸ್ ಸಿಕ್ತು ಸಾರ್. ಆದರೆ ಮನೆ ಕಳೆದುಹೋಗಿದೆ ಅನ್ಸತ್ತೆ ಇಲ್ಲ ಸರ್. ಈಗಲೇ ಬಂದೆ ಸರ್. ಇಲ್ಲ ಸರ್. ಬಂದೆ ಸರ್. ಬಂದೆ ಸರ್. ಗರಮ್ ಆಗಿದಾರೆ ಸಾಹೇಬರು. ಹೂಂಕಾರ ಜಾಸ್ತಿ ಆಗಿದೆ ಅಂದ್ರೆ ನಂಗೆ ಬಂತು ಗ್ರಹಚಾರ. ಬರ್ಲಾ ಸಾರ್. ಇದೇ ನಂಬರು ೨೦೬೬. ಇಲ್ಲೇ ಇರಿ. ನಿಮ್ಮ ಲಗೇಜು ಇಳಿಸಿ ಹೋಗ್ತೀನಿ.

ವಿಕ್ರಮ್: ಈ ರಾತ್ರಿ ಹೊಟೇಲಿನಲ್ಲಿದ್ದು ನಾಳೆ ಬೆಳಿಗ್ಗೆ ಮನೆ ಹುಡುಕ್ತೀನಿ. ಏನೋ ತಪ್ಪುಗಂಟಾಗಿದೆ... ಶ್ರೀನಿವಾಸನಿಗೆ ಫೋನ್ ಮಾಡ್ತೀನಿ ಒಂದು ನಿಮಿಷ ಇರಿ.

ಶ್ರೀನಿವಾಸ ಫೋನ್ ರಿಸೀವ್ ಮಾಡುವುದಿಲ್ಲ.

ವಿಕ್ರಮ್: ರಿಂಗ್ ಆಗ್ತಿದೆ. ತಗೋತಾ ಇಲ್ಲ. ನಾನು ಬರೋದು ಗೊತ್ತಿದೆ, ಆದರೂ...

ಸೇತು: ಆದರೂ ಅಲ್ಲ ಅದಕ್ಕೇ... ನನ್ನ ಫೋನಿಂದ ಮಾಡಿ ಸಾರ್ ನೋಡೋಣ.

ವಿಕ್ರಮ್ ತನ್ನ ಫೋನಿನಲ್ಲಿ ಶ್ರಿನಿವಾಸನ ನಂಬರು ಹುಡುಕಿ ಸೇತುವಿನ ಫೋನಿನಿಂದ ಕರೆ ಮಾಡುತ್ತಾನೆ.

ಸೇತು: ಬೇಗ ಮುಗಿಸಿ. ಬಾಸ್ ಬೀಪಿ ಏರ್ತಾ ಇದೆ. ನಿದ್ದೆ ಬಂತೂ ಅಂದ್ರೆ ಅವರಿಗೆ ತಲೆಕೆಟ್ಟು ಹೋಗತ್ತೆ ಒಮ್ಮೆಲೇ ರಾಂಗ್ ಹೊಡೀತಾರೆ.

ವಿಕ್ರಮ್: ಹಲೋ ಹಲೋ ಶ್ರೀನಿವಾಸ್? ನಾನು ಕಣ್ರೀ ವಿಕ್ರಮ್ ಮಾತಾಡೋದು.

ಶ್ರೀನಿವಾಸ: ಯಾರ್ರೀ ಅದು? ಹೊತ್ತುಗೊತ್ತಿಲ್ವಾ? ಇಷ್ಟೊತ್ತಲ್ಲಾ ಫೋನ್ ಮಾಡೋದು?

ವಿಕ್ರಮ್: ಶ್ರೀನಿವಾಸ್. ನಾನೂರೀ ಅಮೇರಿಕಾದ ವಿಕ್ರಮ್. ಸಂಪತ್‌ಕುಮಾರ್ ಮಗ.

ಶ್ರೀನಿವಾಸ: ಏಯ್ ಅಮೇರಿಕಾ ಅಂತೆ. ಲೋಕಲ್ ನಂಬರ್ ಇದು.

ವಿಕ್ರಮ್: ಬೆಂಗಳೂರಿಂದ್ಲೇ ಫೋನ್ ಮಾಡ್ತಿರೋದು. ಮನೇನೇ ಸಿಗ್ತಾ ಇಲ್ಲ. ಐದನೇ ಮೇನಲ್ಲಿದೀನಿ.

ಶ್ರೀನಿವಾಸ: ಮನೇ ಸಿಗದಿದ್ರೆ ನಾಯೇನೋ ಮಾಡ್ಲಿ? ಅಡ್ರೆಸ್ ಸರಿಯಾಗಿ ನೋಡ್ಕೊ. ಯಾವನೋ ಬೇವರ್ಸಿ...

ವಿಕ್ರಮ್: ಯಾಕ್ರೀ ಹೀಗಾಡ್ತೀರಾ? ನಾನು ನಿಜವಾಗ್ಲೂ ವಿಕ್ರಮ್ ಕಣ್ರೀ. ಐದನೇ ಮೇನ್‌ಲ್ಲೇ ಇದೀನಿ. ಮನೆ ಸಿಗ್ತಿಲ್ಲ... ಐ ಆಮ್ ಶಾಕ್ಡ್.

ಶ್ರೀನಿವಾಸ: ಕಂಪ್ಲೇಂಟ್ ಕೊಡು ಕಳೆದ್ಹೋಗಿದೆ ಅಂತಾ.

ವಿಕ್ರಮ್: ತಮಾಷೆ ಮಾಡ್ತಾ ಇದೀರಾ? ನಿಜವಾಗ್ಲೂ ಕಳೆದ್ಹೋಗಿದೆ ಅನ್ನಿಸ್ತಾ ಇದೆ. ಸೈಟ್ ನಂಬರು ಬದಲಾಗಿದೆ. ಹಲಸಿನ ಮರ ಇಲ್ಲ. ಔಟ್ ಹೌಸ್ ಇಲ್ಲ. ಮನೆಯಂತೂ ಇಲ್ಲವೇ ಇಲ್ಲ. ಇರೋದು ಕೃಷ್ಣಾ ಸಿಲ್ವರ್‌ಲೈನ್ ಅಪಾರ್ಟ್‌ಮೆಂಟ್ಸ್! ಈಗಲಾದ್ರೂ ನಾನೇ ವಿಕ್ರಮ್, ನಾನಿಲ್ಲೇ ಇದೀನಿ ಅಂತ ಗೊತ್ತಾಯ್ತಾ?

ಶ್ರೀನಿವಾಸ: ಏಯ್... ಮುಚ್ಚಯ್ಯಾ. ಹೇಳಿದ್ನಲ್ಲ... ವಿಕ್ರಮ್ ಅನ್ನೋನು ಯಾರೂ ಗೊತ್ತಿಲ್ಲಾಂತ. ಮತ್ತೆ ಫೋನ್ ಮಾಡಿದ್ರೆ ಚಚ್ಚಾಕಿಬಿಡ್ತೀನಿ.

ವಿಕ್ರಮ್: ಚಚ್ಚಕ್ಕಾದ್ರೂ ಬರಬೇಕಲ್ವಾ? ಈಗಲೇ ಬಂದ್ರೆ ಒಳ್ಳೇದು. ಬಿ ಸೀರಿಯಸ್.

ಫೋನ್ ತುಂಡಾಗುತ್ತದೆ. ಮತ್ತೆ ಫೋನ್ ಮಾಡುವನು. ಶ್ರೀನಿವಾಸ ಎತ್ತುವುದಿಲ್ಲ. ಆಗ ಕೈಲಿದ್ದ ಫೋನ್ ರಿಂಗಾಗುತ್ತದೆ. ವಿಕ್ರಮ್ ಅದರ ಸ್ಕ್ರೀನ್ ನೋಡಿ ಸೇತುಗೆ ಕೊಡುತ್ತಾನೆ.

ವಿಕ್ರಮ್: ಶನಿ ಅನ್ನೋರು ಯಾರೋ.

ಸೇತು: ಅಯ್ಯೋ ಸುಮ್ನಿರಿ. (ಕರೆ ಸ್ವೀಕರಿಸಿ) ಬಂದ್ಬಿಟ್ಟೆ ಸಾರ್. ನನ್ನ ಫೋನ್ ಇಸ್ಕೊಂಡಿದ್ರು. ಇಲ್ಲೇ ಬಿಟ್‌ಬಿಟ್ಟು ಬರ್ತೀನಿ. ಹಾಂ, ಹೌದು ಸಾರ್ ಓಡ್ಕೊಂಡು ಬರ್ತೀನಿ. ಓಡ್ತಾ ಇದೀನಿ. ಓಡ್ತಾ... ಓಡ್ತಾ... (ವಿಕ್ರಮನಿಗೆ) ಬರ್ತೀನಿ ಇವರೇ. ಮನೇ ಬೇಗ ಸಿಗಲಿ.

~~~~~~~~~~~~
~~~~~~~~~~~~

ಪುಸ್ತಕಾವಲೋಕ

ಪುಸ್ತಕ :**ಕಾಲುದಾರಿಯ ಕಥನಗಳು**(ಜಾನಪದ-ಜೀವನ-ಕಥನ) ಲೇ: **ಕೃಷ್ಣಮೂರ್ತಿ ಹನೂರು** ಪ್ರ: ಮನೋಹರ ಗ್ರಂಥಮಾಲಾ, ಧಾರವಾಡ ಪು: ೨೯೪ ಬೆಲೆ : ರೂ. ೨೬೦/-

ಅಲೆದಾಟವೊಂದರ ಅದ್ಭುತ ಕಥನ



ಇದು ಮೂಲತಃ, ಕೃಷ್ಣಮೂರ್ತಿ ಅವರು ನಲವತ್ತು ವರ್ಷಗಳ ಹಿಂದೆ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆಯ ಕಾಲೇಜೊಂದರಲ್ಲಿ ಕನ್ನಡ ಧ್ಯಾಪಕರಾಗಿದ್ದಾಗ ಜಾನಪದದಲ್ಲಿ ಆಸಕ್ತಿ ತಾಳಿ ನಡೆಸಿದ ಕ್ಷೇತ್ರಕಾರ್ಯದ ಕಥನ. ಆದರೆ ಅದು ಅಷ್ಟಕ್ಕೇ ನಿಲ್ಲದೆ, ಅವರ ಈ ಆಸಕ್ತಿ ಅವರನ್ನು ರಾಜ್ಯದ ಮತ್ತು ದೇಶದ ಇತರ ಕಡೆಗಳಿಗೂ ಕರೆದುಕೊಂಡು ಹೋದ ಅಥವಾ ಅನ್ಯಕಾರ್ಯನಿಮಿತ್ತ ಹೋದ ಸ್ಥಳಗಳಲ್ಲಿ ಅವರ ಈ ಆಸಕ್ತಿ ಕೆರಳಿ ಅಲ್ಲೆಲ್ಲ ಅವರಿಗೆ ಕಾಣಿಸಿದ, ಕೇಳಿಸಿದ ಕಥನ ಚಿತ್ರಗಳೂ ಇಲ್ಲಿ ಜೋಡಣೆಗೊಂಡಿವೆ.

ಜೋಡಣೆ ಎಂದೆ. ಹಾಗೆ ನೋಡಿದರೆ ಈ ಜೋಡಣೆಯೇ ಈ ಪುಸ್ತಕವನ್ನು ವಿಶಿಷ್ಟಗೊಳಿಸಿ ಅದನ್ನು ಓದುವ ಕುತೂಹಲವನ್ನು ಹುಟ್ಟಿಸಿರುವುದು. ಈ ಹಲವು ಕಥನಗಳ ಜೋಡಣೆಯಲ್ಲಿ ಮೂಡುವ ಹಲವು ವ್ಯಕ್ತಿಚಿತ್ರಗಳು, ಹಲವು ಜನಪದ ಸಮುದಾಯಗಳ ಸಾಂಸ್ಕೃತಿಕ ಅನನ್ಯತೆಗಳು ಮತ್ತು ಹಲವು ಜನಪದ ಪ್ರಕಾರಗಳ ಸೌಂದರ್ಯ ವಿಶೇಷಗಳು ಗರಿಗೆದರಿ ನಿಂತು ನಮ್ಮನ್ನು ಬೆರಗುಗೊಳಿಸುತ್ತವೆ.

ಈ ಕಥನದ ಮುಖ್ಯ ಕ್ರಿಯಾಕ್ಷೇತ್ರ ಹಲವು ಜಾತಿ-ಬುಡಕಟ್ಟುಗಳ ಮಿಶ್ರ ಸಂಸ್ಕೃತಿಯ ಸಮಾಜವಿರುವ ಚಿತ್ರದುರ್ಗ ಜಿಲ್ಲೆ. ಇಲ್ಲಿನ ಪ್ರಬಲ ಕುಲಗಳೆನಿಸಿದ ಲಿಂಗಾಯತ, ಕುಂಚಿಟಿಗ ಮತ್ತು ರೆಡ್ಡಿ ಸಮಾಜಗಳ ಹೊರತಾಗಿಯೂ, ಈ ಜಿಲ್ಲೆಯ ಬಹುತೇಕ ಭಾಗ (ವಿಶೇಷವಾಗಿ ಪೂರ್ವ ಭಾಗ) ಒಂದು ಜಾನಪದ ಮಹಾಕ್ಷೇತ್ರವೇ ಆಗಿದೆ. ಮ್ಯಾಸ ಬೇಡರು, ಊರು ಬೇಡರು ಮತ್ತು ಕಾಡುಗೊಲ್ಲರು, ಊರು ಗೊಲ್ಲರು ಎಂಬ ನಾಲ್ಕು ಮುಖ್ಯ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಸಾರವೇ ಈ ಇಡೀ ಜಿಲ್ಲೆಯ ಸಂಸ್ಕೃತಿಗೆ ಒಳಸತ್ವವನ್ನು ನೀಡಿರುವುದು. ಜಿಲ್ಲೆಯ ಬಹುಭಾಗ ಇನ್ನೂ ನಗರ ಸಂಸ್ಕೃತಿಯ ಹಪಾಹಪಿಯಿಂದ ದೂರವಿರುವ ಗ್ರಾಮೀಣ ಸಮಾಜವಾಗಿದ್ದು, ತನ್ನ ಆರ್ಥಿಕ ಮತ್ತು ಸಾಂಸ್ಕೃತಿಕ ಸ್ವಾಯತ್ತತೆಯಲ್ಲೇ ಸಮಾಧಾನದಿಂದ ಬದುಕುತ್ತಿದೆ. ಅದು 'ಶ್ರೀಮಂತಿಕೆ'ಯಿಂದ ಕಣ್ಣು ಕುರುಡು ಮಾಡಿಕೊಂಡು ಹೋದ ಹೊರಗಿನವರಿಗೆ ಬಡತನದ ಸಮಾಜವಾಗಿ ಕಾಣಬಹುದಷ್ಟೆ. ಸ್ವತಃ ಅವರಿಗೆ ಆ ಭಾವನೆ ಇಲ್ಲ. ಹಾಗಾಗಿಯೇ ಅವರು ಹೊರಗಿನಿಂದ ಹೋದವರು ಕರುಬುವಷ್ಟು ಪ್ರಸನ್ನಚಿತ್ತರು.

ಕೃಷ್ಣಮೂರ್ತಿ ಅವರು ಈ ಪುಸ್ತಕದಲ್ಲಿ ತಮ್ಮ ಕಥನಗಳ ಮೂಲಕ ಚಿತ್ರಿಸುವ ಸಮಾಜ ನಲವತ್ತು ವರ್ಷಗಳಷ್ಟು ಹಳೆಯದು. ಆದರೆ ಅದು ಹಳೆಯದೆಂದು ಹಳಿಯಲಾಗದಂತಹದ್ದು ಮತ್ತು ಅಪ್ರಸ್ತುತವಾಗದಂತಹದ್ದು, ಏಕೆಂದರೆ, ಆ ಸಮಾಜದ ಪ್ರಸನ್ನಚಿತ್ತತೆ ಇಂದು ನಾವು ಬಹು ಪ್ರಗತಿ ಹೊಂದಿ ಆಧುನಿಕರಾಗಿ ಏನೆಲ್ಲ ಗಳಿಸಿ ಏನೆಲ್ಲ ಕಳೆದುಕೊಂಡಿದ್ದೇವೆ ಎಂಬುದನ್ನು ಈ ಕಥನಗಳು ನಮ್ಮನ್ನು ಆಳದಲ್ಲಿ ಕಾಡಿ ನೆನಪಿಸುತ್ತವೆ. ಇದನ್ನೇ ಈ ಪುಸ್ತಕದ ಶೀರ್ಷಿಕೆಯನ್ನೇ ಬಳಸಿ ಹೇಳುವುದಾದರೆ ನಾವು ಚತುಷ್ಪಥ ರಸ್ತೆಗಳನ್ನು ಗಳಿಸಿಕೊಂಡು ಕಾಲುದಾರಿಗಳನ್ನು ಕಳೆದುಕೊಂಡಿದ್ದೇವೆ. ಆ ಕಾಲುದಾರಿಗಳ ಪಕ್ಕದ ನೆಲ-ಜಲ-ಜನ-ಜಾನುವಾರುಗಳು ತಮ್ಮಷ್ಟಕ್ಕೆ ತಾವಿದ್ದುಕೊಂಡು ಸುಖಿಸುವ ಜೀವಂತ ಚಿತ್ರಗಳನ್ನೇ ಕಳೆದುಕೊಂಡಿದ್ದೇವೆ. ಈ ಪುಸ್ತಕ ಅಂತಹ ಜೀವಂತ ಚಿತ್ರಗಳನ್ನು ನಮಗೆ ಕಟ್ಟಿಕೊಡುತ್ತದೆ. ಜಾನಪದ ಹಾಡುಗಾರರಾದ ಸಿರಿಯಜ್ಜಿ, ದಾನಮ್ಮ, ಜಯಮ್ಮ, ಕತ್ತೆಗಳನ್ನು ಮೇಯಿಸುತ್ತಾ ಊರೂರು ಅಲೆಯುತ್ತಾ ಕತೆ ಹೇಳುವ ಕಲೆಯನ್ನು ಕಲಿತಿರುವ ಎಂಭತ್ತರ ನರಸಜ್ಜ, ಒಂಬತ್ತು ಎಕರೆ ಜಮೀನು ಉಳಿಸಿಕೊಳ್ಳಲು ಐವತ್ತು ಎಕರೆ ಜಮೀನು ಕಳೆದುಕೊಂಡ ತನ್ನ ಕಥೆಯಷ್ಟೇ ಸ್ವಾರಸ್ಯಕರವಾಗಿ ಜಾನಪದ ಕಥೆಗಳನ್ನು ಹೇಳುವ ಗಿರಿಯಯ್ಯ, ತನ್ನ ಕಸುಬಿನಿಂದಾಗಿಯೇ ಹೆಂಡತಿಯನ್ನು ಕಳೆದುಕೊಂಡರೂ ಕೋತಿ ಕುಣಿಸುವ ಕಸುಬಿನಲ್ಲೇ ತನ್ನ ಬದುಕಿನ ತತ್ವ ಅರಸುತ್ತಿರುವ ಬೊಮ್ಮಣ್ಣ, ಗುಂಡೇರಿ ಬಳಿಯ ಅಮೃತ ಮಹಲ್ ಕಾವಲಿನ ಚರವಾಯಿಗಳು, ನಾಟಿ ಪಶುವೈದ್ಯ ಪಾಲನಾಯಕ ಮುಂತಾದ ಜಾನಪದರ ಬದುಕಿನ ಕೆಲವೊಮ್ಮೆ ರೋಚಕವೆನಿಸುವ ಸ್ವಾರಸ್ಯಕರ ಚಿತ್ರಗಳು ಮತ್ತು ಅವರು ಹೇಳುವ ಹಾಡು ಕತೆಗಳ ವಿವರಗಳ ಜೊತೆಗೇ, ಈ ಜಾನಪದ ಸಂಪತ್ತಿನ ಮಧ್ಯೆಯೇ ಮೂಡಿದ ಒಂದು ವಿಶಿಷ್ಟ ವ್ಯಕ್ತಿತ್ವವೆನಿಸುವ ಬೆಳಗೆರೆ ಕೃಷ್ಣಶಾಸ್ತ್ರಿ ಮತ್ತು ಅವರ ತಂದೆ ಚಂದ್ರಶೇಖರ ಶಾಸ್ತ್ರಿಗಳ ಕತೆಗಳೂ ಜೋಡಿಸಿಕೊಂಡು ಈ ಕಥನ ಯಾತ್ರೆ ಒಂದು ಹೊಸ ಆಯಾಮವನ್ನೇ ದೊರಕಿಸಿಕೊಂಡುಬಿಡುತ್ತದೆ. ಇದು ನಾವು ಅಧ್ಯಯನಕ್ಕೆ ಆರಂಭಿಸಿದ ಜಾನಪದ-ಶಿಷ್ಟ, ವೈದಿಕ-ಅವೈದಿಕ ಎಂಬ ಸಾಂಸ್ಕೃತಿಕ ವಿಂಗಡಣೆಗಳು ಇಂದು ಅಧ್ಯಯನದ ಗುರಿ-ಉದ್ದೇಶಗಳಿಂದಲೇ ನಮ್ಮನ್ನು ಚ್ಯುತಿಗೊಳಿಸಿ ಅಗ್ಗದ ಸಾಂಸ್ಕೃತಿಕ ರಾಜಕಾರಣದತ್ತ ಒಯ್ದಿರುವ ದುರಂತದ ಕತೆಯನ್ನು ಹೇಳುತ್ತದೆ.

ಬೆಳಗೆರೆ ಕೃಷ್ಣಶಾಸ್ತ್ರಿಗಳ ಮತ್ತು ಅವರನ್ನು ಮೀರಿಸಿದ ಅನ್ವೇಷಣಾತ್ಮಕತೆಯ ಬದುಕು ನಡೆಸಿದ ಅವರ ತಂದೆಯವರ ಕಥೆಯನ್ನು (ಮತ್ತು ಈ ಕಥೆಗಳ ಜೊತೆಗೇ ಬಂದು ಸೇರಿಕೊಳ್ಳುವ ಗದುಗಿನ ಭಾರತದ ರಾಮಯ್ಯ ಮತ್ತು ಭಜನೆ ಬುಡೇನ್ ಸಾಬ್‌ರ ಕಥೆಗಳನ್ನು ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ, ಕೃಷ್ಣಶಾಸ್ತ್ರಿಗಳು ಹೇಳುವ ದಂತ ಕಥೆಯಂತಿರುವ ಮುಕುಂದೂರು ಸ್ವಾಮಿಗಳ ಕಥೆಯನ್ನು) ಜಾನಪದವೆಂದು ಕರೆಯುವುದೋ, ಶಿಷ್ಟವೆಂದು ಕರೆಯುವುದೋ? ಶಿಷ್ಟ-ಜಾನಪದ ವಿಂಗಡಣೆಯ ಗೆರೆಗಳ ನಡುವೆ ಇಂತಹವರ ಕತೆಗಳು ಕಳೆದು ಹೋಗುವ ಮತ್ತು ಆ ಕತೆಗಳು ಹೇಳುವ ಸತ್ಯಗಳಿಂದ ಅಧ್ಯಯನ ವಂಚಿತವಾಗುವ ಅಪಾಯದ ಬಗ್ಗೆ ನಾನು ಇಲ್ಲಿ ಹೇಳುತ್ತಿರುವೆ. ಇಂತಹ ಕಾರಣಗಳಿಂದಲೇ ಇವೊತ್ತು ತತ್ವಪದಗಳ ಬಗ್ಗೆ ಹುಟ್ಟಿರುವ ಹೊಸ ಉತ್ಸಾಹವೂ ಈ ಅಪಾಯಕ್ಕೆ ಪಕ್ಕಾಗುವ ಎಲ್ಲ ಸೂಚನೆಗಳೂ ಇವೆ ಎಂಬುದನ್ನೂ ಇಲ್ಲಿ ಹೇಳಬಹುದು.

ಇಂತಹ ಮಹತ್ವದ ಪ್ರಶ್ನೆಗಳನ್ನು ಓದುಗರಲ್ಲಿ ಈ ಕಥನ ಯಾತ್ರೆ ಹುಟ್ಟಿಸುವುದು ಜಾನಪದ-ಶಿಷ್ಟಗಳ ಮಡಿ ಮೈಲಿಗೆಗಳಿಲ್ಲದೆ ಬೆರೆತು ಉಂಟಾಗಿರುವ ಅದರ ವಿಶಿಷ್ಟ ವಿನ್ಯಾಸದಿಂದಾಗಿ ಎಂಬುದನ್ನೂ ಇಲ್ಲಿ ಕಾಣಿಸಬೇಕು. ಚಿತ್ರದುರ್ಗದ ನಾಯಕರ ಆಡಳಿತದ ವೈಭವೀಕೃತ ಕಥೆಗಳ ಮಧ್ಯೆ ಥಣ್ಣನೆ ನಮ್ಮನ್ನು ಕೊರೆಯುವ ಹಲವು ರುದ್ರ ಕಥೆಗಳು, ಕಲ್ಲೇದೇವರ ಪುರದಲ್ಲಿ ಪಶುವೈದ್ಯರನ್ನು ಕಾಣಲು ಹೋಗಿ ಅಲ್ಲಿ ಬಸವಣ್ಣನ ಶಾಸನದ ಕತೆಯ ಜೊತೆಗೆ ಅಲ್ಲಿ ಅಲ್ಲಮನ ಕಾಲುದಾರಿಯಲ್ಲಿ ಈವರೆಗೆ ಎಲ್ಲೂ ಪತ್ತೆಯಾಗದ ಗುಹೇಶ್ವರನ ಗುಡಿಯನ್ನೂ, ಗೊಹೇಸ್ವರಪ್ಪನ ಅಂಕಿತವಿರುವ ಹಾಡುಗಳನ್ನೂ ಕಾಣುವಂತಾಗುವ ಮತ್ತು ಅಲ್ಲಿ ರಾತ್ರಿ ಕೇಳುವ ಒಂಟಿ ಹೆಂಗಸಿನ ಆರ್ತನಾದ ಹಾಗೂ ನಂತರದಲ್ಲೇ ಸಹಜ ತರ್ಕವೆಂಬಂತೆ ಕಾಣಿಸಿಕೊಳ್ಳುವ ಚಿರತೆಯ ಕತೆ, ಎ.ಕೆ. ರಾಮಾನುಜನ್‌ರ ಜೊತೆಯಲ್ಲಿ ಕೂತು ನೋಡಿದ ಗೊಲ್ಲರ ಕೋಲಾಟದ ಸಂಕೀರ್ಣತೆಯ ಬೆರಗು, ಮೊಳಕಾಲ್ಮೂರಿನ ಬಳಿ ಮ್ಯಾಸಬೇಡರ ಕಂಪಳರಂಗನ ಜಾತ್ರೆ ನೋಡಲು ಹೋಗಿ ಬರುವಾಗ ಮಾರ್ಗದ ಊರೊಂದರಲ್ಲಿ ಕಂಡ ಒಂದು ಪೌರಾಣಿಕ ನಾಟಕದ ಒಂದು ಸ್ವಾರಸ್ಯದ ಪ್ರಸಂಗ, ಹೆಂಡದಂಗಡಿಯೊಂದರಿಂದ ಕಂಡು ಕೇಳಿದ ಬಸಜ್ಜನ ಇಂದ್ರಾ ಗಾಂಧಿ ಪ್ರಸಂಗ, ಹಕ್ಕಿಪಿಕ್ಕರ ಹಂದಿ ಭೋಜನದ ಸಿದ್ಧತೆಯ ರೌದ್ರ ವಿವರ ಇತ್ಯಾದಿಗಳು ಸಾವಯವವಾಗಿ ಒಂದಕ್ಕೊಂದು ಹೆಣೆದುಕೊಂಡು ಧ್ವನಿಪೂರ್ಣವಾಗಿ ಚರಿತ್ರೆಯನ್ನು ಬಹು ಸೂಕ್ಷ್ಮದಲ್ಲಿ ವರ್ತಮಾನದೊಳಕ್ಕೆ ನುಸುಳಿಸುವ ಸೃಜನಶೀಲತೆಯನ್ನು ಮೆರೆಯುತ್ತವೆ.

ಆದರೆ ಅವರ ಕಥೆಗಳಲ್ಲಿ ಕಾಣುವ ದೌರ್ಬಲ್ಯಗಳೂ ಇಲ್ಲಿ ಸೇರಿಕೊಂಡು ಇಡೀ ಕಥನಕ್ಕೆ ಸಿಗಬಹುದಾಗಿದ್ದ ಒಂದು ದರ್ಶನದ ನೋಟವನ್ನು ಮುಕ್ಕಾಗಿಸಿದೆ ಎಂಬುದನ್ನೂ ಇಲ್ಲಿ ಹೇಳಬೇಕು. ಚಿತ್ರದುರ್ಗದ ಕಥೆಗಳ ಜೊತೆಗೇ ತಮ್ಮ ಇತ್ತೀಚಿನ ಪ್ರಿಯ ವಸ್ತುವಾದ ನಿಯೋಗ ಪದ್ಧತಿ ಕುರಿತು ತಾವು ಮಾಡಹೊರಟಿರುವ ಸಂಶೋಧನೆಗಳ ಕಥೆಗಳನ್ನೂ, ಮೈಸೂರು ಜಿಲ್ಲೆಯ ನಂಜುಂಡೇಶ್ವರ, ಮಂಟೇಸ್ವಾಮಿ, ಬಿಳಿಗಿರಿ ರಂಗ, ಮಲೆ ಮಾದೇಶ್ವರರಿಗೆ ಸಂಬಂಧಿಸಿದ ಜಾನಪದ ಐತಿಹ್ಯಗಳ ತಮ್ಮ ವ್ಯಾಖ್ಯಾನಗಳನ್ನೂ, ತಿರುಪತಿ ದೇವರ ವಿಗ್ರಹದ ಜೀವಂತಿಕೆ ಕುರಿತು ತಾವು ಕೇಳಿದ ಕರ್ಣಾಕರ್ಣಿಕವಾದ ಕಥೆಯನ್ನೂ, ಭದ್ರಾಚಲದ ಬಳಿ ಕಂಡ ಒಂದು ಕಪಟ ಜಾನಪದ ಆಚರಣೆಯ ವಿವರಗಳನ್ನೂ ಈ ಪುಸ್ತಕದ


ಚೌಕಟ್ಟಿನೊಳಕ್ಕೆ ನುಗ್ಗಿಸಿ ಅದಕ್ಕಾಗಿ ಹೊಸೆದಂತೆ ಕಾಣುವ ವ್ಯಾಖ್ಯಾನಗಳ ಹಿಂದಿನ ಮಹತ್ವಾಕಾಂಕ್ಷೆಯನ್ನು ಈ ಪುಸ್ತಕದ ಮುಖ್ಯ ಕಥಾನಕ ಹೊರಲಾಗದೆ ಪುಸ್ತಕದ ಅಂತ್ಯ ಭಾಗ ಬಸವಳಿದಿದೆ. ಪುಸ್ತಕದ ಮಂಗಳ ಗೀತೆಯಂತಿರುವ, ಕೃಷ್ಣಶಾಸ್ತ್ರಿಗಳ ಗುಡಿಸಿಲಿನ ಇಂದಿನ ಚಿತ್ರದ ಕಾವ್ಯಮಯ ವರ್ಣನೆಯ ಒಂದಿಷ್ಟು ತಂಗಾಳಿ ಈ ಬಸವಳಿಕೆಯನ್ನು ಸ್ವಲ್ಪ ಕಡಿಮೆ ಮಾಡುತ್ತದಾದರೂ.

ನಾನು ಕಂಡಂತೆ ಈ ಜಿಲ್ಲೆಯಲ್ಲಿ ಆಗಿ ಹೋದ ಸಾಧು ಸಂತರ ಸಂಖ್ಯೆ ಜಾಸ್ತಿ. ಅಂತಹವರ ಸಮಾಧಿಗಳೂ, ಅವುಗಳ ಭಕ್ತ ಸಮೂಹಗಳೂ ಇಲ್ಲಿ ಅಲ್ಲಲ್ಲಿ ಇವೆ. ಈಗಲೂ ಅಲ್ಲಿ ಜನಸಂದಣಿಯ ಮಧ್ಯೆ ಕಾಣದಂತಹ ಯೋಗಿಗಳೂ, ಸಿದ್ದರೂ, ಅವಧೂತರೂ ಅಲ್ಲಿರುವವರೆಂದು ಹೇಳಲಾಗುತ್ತದೆ. ಅಂತಹವರ ಭಕ್ತ ಸಮೂಹಗಳೂ ಈಗಲೂ ಅಲ್ಲಿವೆ. ದೊಡ್ಡೇರಿಯಲ್ಲಿ ಈಗ ಒಂದು ಸಂಸ್ಥಾನವನ್ನೇ ಕಟ್ಟಿರುವ ಸತ್‌ಉಪಾಸಿ ಮಲ್ಲಣ್ಣನವರ ಕಥೆ ಬಹು ಜನಜನಿತ. ಚಿತ್ರದುರ್ಗದ ಈವೊಂದು ವಿಶಿಷ್ಟ ಪರಂಪರೆಯ ಕಥೆಗಳನ್ನೂ-ಕೃಷ್ಣಶಾಸ್ತ್ರಿಗಳ ಕಥೆಗೆ ಸಂವಾದಿಯಾಗಿ-ಹನೂರರು ತಮ್ಮ ಕಥನದಲ್ಲಿ ಜೋಡಿಸುವಂತಾಗಿದ್ದರೆ ಇದರ ಸಾಂಸ್ಕೃತಿಕ ಆಯಾಮಕ್ಕೊಂದು ಹೊಸ ಬೆಡಗು ಪ್ರಾಪ್ತಿಯಾಗುತ್ತಿತ್ತೇನೋ! ಈ ಎರಡು ಕೊರತೆಗಳನ್ನು ಬಿಟ್ಟರೆ ಇದೊಂದು ಆಧುನಿಕ ಕನ್ನಡ ವಾಙ್ಮಯಕ್ಕೇ ಅಪರೂಪದ ಕೊಡುಗೆ ಎಂದು ಹೇಳಬಹುದು.

-ಡಿ.ಎಸ್. ನಾಗಭೂಷಣ

ಪು: **ಮಾರಿಬಿಡಿ : ಈ ಕಾಲದ ತಲ್ಲಣಗಳು** (ಕವನ ಸಂಗ್ರಹ) ಲೇ: ಎಂ. ಆರ್. ಕಮಲ ಪ್ರ :**ಕಥನ ಪ್ರಕಾಶನ**, ಬೆಂಗಳೂರು ಪು : ೮೮ ಬೆಲೆ : ರೂ. ೧೨೫/-

ಮಾರುಕಟ್ಟೆ ಜಗತ್ತಿನ ಆರ್ದ್ರ ಕವಿತೆಗಳು



ಎಂಭತ್ತರ ದಶಕದ 'ಶಕುಂತಲೋಪಾಖ್ಯಾನ' ಎಂಬ ಕವನ ಸಂಕಲನದ ಮೂಲಕದ ಮೂಲಕ ಹೆಣ್ಣಿನದ ಒಡಲ ದನಿಯನ್ನು ಶೋಧಿಸಿ, ಮೃದುವಾಗಿ ಆದರೆ, ದಿಟ್ಟವಾಗಿ ಅಚ್ಚೊತ್ತುವಂತೆ ಮಾಡಿದ ಎಂ.ಆರ್. ಕಮಲ ನಂತರದ ಎರಡು ಕವನ ಸಂಗ್ರಹಗಳು ಮತ್ತು ಆಫ್ರಿಕನ್ ಮತ್ತು ಅರಬ್ ಮಹಿಳಾ ಕಾವ್ಯದಲ್ಲಿ ವಿಶೇಷ ಪರಿಣತಿಯಿಂದ ತಮ್ಮ ಸಂವೇದನಾ ವಲಯವನ್ನು ವಿಸ್ತರಿಸಿಕೊಂಡವರು. ಅವರ ಇತ್ತೀಚೆಗೆ 'ಮಾರಿಬಿಡಿ' ಕವನ ಸಂಕಲನವು ವರ್ತಮಾನದ ತಲ್ಲಣಗಳನ್ನು ಪಕ್ವ ಸ್ತ್ರೀ ನೋಟವೊಂದರ ಮೂಲಕ ಅರಿಯುತ್ತ, ಪ್ರತಿಕ್ರಿಯಿಸುತ್ತ ನಡೆಯುವ ಪರಿಯಿಂದಾಗಿ ಮುಖ್ಯವೆನಿಸುತ್ತದೆ.

'ಮಾರಿಬಿಡಿ' ಎಂಬುದುಒಂದು ಹೇಳಿಕೆಯಾಗಿ, ಆಜ್ಞೆ, ಅಹವಾಲು, ನಿವೇದನೆ, ಸಂಕಟದ ಸುಯ್ಲುಏನೆಲ್ಲವೂ ಆಗಿ ಇಡೀ ಸಂಕಲನದಲ್ಲಿ ಬೇರೆ ಬೇರೆ ಸ್ತರದಲ್ಲಿ ಧ್ವನಿಸುತ್ತ ಹೋಗುತ್ತದೆ. ನಡುವಯಸ್ಕ ಹೆಣ್ಣುಜೀವವೊಂದು ಹಳೆಯ ಜೀವಪರ ಮೌಲ್ಯಗಳಿಗೆ ಹಂಬಲಿಸುತ್ತ, ಹೊಸದಕ್ಕೆ ಒಗ್ಗಿಕೊಳ್ಳಲು ಕಲಿಯುತ್ತ, ಬದುಕೆಂದರೆ ಚಲಿಸುತ್ತಿರುವುದು ಎಂಬ ವಾಸ್ತವದ ಎಚ್ಚರದಲ್ಲೂ ಒಮ್ಮೊಮ್ಮೆ ತಲ್ಲಣಿಸುತ್ತ ನಡೆಯುವ ಒಂದು ಯಾನದಂತೆ ಇಲ್ಲಿನ ಕವಿತೆಗಳಿವೆ. ತನ್ನ ಪಾಡಿಗೆ ತಾನು ಹರಿಯುವ ಹೊಳೆಯಂತೆ ಎಂ.ಆರ್.ಕಮಲಾರ ಕವಿತೆಗಳಿವೆ. ತನ್ನೊಳಗನ್ನೇ ಒಡ್ಡಿಕೊಂಡು ತಾನೇ ನೇಯುವ ಗೂಡುಗಳಂತೆ ಇಲ್ಲಿನ ಕವಿತೆಗಳು ಕಾಣಿಸುತ್ತವೆ. ಆದ್ದರಿಂದಲೇ ಇಲ್ಲಿಕಡ ತರದ ವಿಚಾರಗಳಿಗಿಂತ ತನ್ನನ್ನೇತಾನು ಉರಿಸಿ ಪಡೆದುಕೊಂಡ ಬೆಳಕಿಗೆ ಮಹತ್ವವಿದೆ.

ಎದೆಯೊಳಗೆ ನೋವಿನ ಗೂಡು ಹೆಣೆಯುವುದು
ಹರಣದುರಿ ಹೊತ್ತಿ ಬೆಂಕಿ ಬೆಳಕಾಗುವುದು.
(ಭಾವೋದ್ರೇಕದ ಕೊಂಬೆಗಳಲಿ ತೂಗುವುದೆಂದರೆ)

ಹೀಗೆ ತನ್ನನ್ನೇ ತಾನು ಕಂಡುಕೊಳ್ಳುವುದೆಂದರೆ ಅದೊಂದು ಒಂಟಿತನದ ಪಯಣ ಎಂಬ ಅರಿವು ಕವಯತ್ರಿಗಿದೆ. ಹಾಗಾಗಿಯೇ 'ನಕ್ಷತ್ರಗಳೂ ಒಂಟಿ'ಎಂಬುದು ಅವರಕಾವ್ಯದಲ್ಲಿ ಪ್ರತಿಫಲಿಸುತ್ತದೆ. ಕೋಟ್ಯಾಂತರ ನಕ್ಷತ್ರಗಳು ಪಕ್ಕಪಕ್ಕದಲ್ಲೇ ಮಿನುಗುತ್ತಿರುವಂತೆತೋರುತ್ತದೆ. ಅದರವು ಬಿಗಿದಪ್ಪಿಕೊಳ್ಳುವಂತಿಲ್ಲ! ಒಬ್ಬರ ದಾರಿ ಇನ್ನೊಬ್ಬರು ತುಳಿಯುವಂತಿಲ್ಲ. ತಾವೇಉರಿಯದೆ ತಮಗೆ ಬೆಳಕಿಲ್ಲ! ಇದು ಸತ್ಯ. ಬದುಕನ್ನು ಬದುಕಿಯೇ ತೀರಿಸಬೇಕು. ಎಲ್ಲರ ನಡುವೆಯೂ, ಎಲ್ಲದರ ನಡುವೆಯೂ ಕಾಡುವ ಒಂಟಿತನವನ್ನು ಕೂಡ ಅನುಭವಿಸಿಯೇ ಗೆಲ್ಲಬೇಕು ಆಗಲೇ ನಿಜದ ನೆಲೆ ಸಿಗುವುದು ಎಂಬಂತಹ 'ದರ್ಶನ' ಕಮಲಾರ ಕಾವ್ಯಕ್ಕಿದೆ. ಇದೇ ಭಾವ ಅವರ 'ಉದುರಿಹೋಗುತ್ತದೆ' ಎಂಬ ಕವಿತೆಯಲ್ಲೂ ಅನುರಣಿಸುತ್ತದೆ. ಅಂಟಿದ್ದೆಲ್ಲವೂ ಉದುರಿಹೋಗುತ್ತದೆ. ಹುಟ್ಟುವಾಗ ಇದ್ದ ಶುದ್ಧ ಬೆತ್ತಲು ಸ್ಥಿತಿ, ಮಗುನತಕ್ಕೆ ಏನೆಲ್ಲಾ ಆವರಣಗಳು ಅಂಟುತ್ತ ನಿಜರೂಪವೇ ಮರೆಯಾಗಿ ಹೋಗುವುದು ಬದುಕಿನ ವ್ಯಂಗ್ಯ. ಆದರೆ ಕಾಲ ಸನ್ನಿಹಿತವಾದಾಗಅಂಟಿದ್ದು ಕಳಚಿ ಬೀಳಲೇಬೇಕು. ಎಲೆಯುದುರುವಂತೆ!

ಉದುರುವುದೆಂದರೆ ಕಳೆದುಕೊಳ್ಳುವುದಲ್ಲ
ತಾನಾಗೇ ಉಳಿಯುವುದು!

ಇಂಥ ಗಹನವಾದ ಬಿಂಬಗಳು ಕಮಲಾರಕಾವ್ಯದುದ್ದಕ್ಕೂ ಎದುರಾಗುತ್ತವೆ. ಇಲ್ಲೆಲ್ಲ ಕಾಣಿಸಿಗುವುದು ಒಂಟಿತನದ ಮಂದ್ರ ಛಾಯೆ. ಅಲ್ಲಿಯೇ ನಿಜವಾಗುವ ಧ್ಯಾನಸ್ಥ ಕ್ಷಣಗಳು.

ಈ ಸಂಕಲನದಎಲ್ಲ ಕವಿತೆಗಳೂ ಹೀಗೆ ಧ್ಯಾನಸ್ಥವೇನಲ್ಲ. ಅವು ಈ ಲಾಭಕೋರ ವ್ಯವಹಾರಿಕ ಬದುಕಿನ ರೂಕ್ಷತೆಯ ಬಗ್ಗೆ, ಅದು ತಂದಿಕ್ಕುವ ದಿಗ್ಭ್ರಾಂತಿಯ ಬಗ್ಗೆಯೂ ಮಾತನಾಡುತ್ತವೆ. ಬಳಸಿ ಹಳತಾದ ವಸ್ತುಗಳನ್ನು ಮಾರಿಬಿಡಿ.. ಮುಲಾಜೇಕೆ? ಎಂಬ ಧ್ವನಿಯೇ ಅತ್ಯಂತ ಕ್ರೌರ್ಯದಿಂದ ಕೂಡಿದ್ದು. ಆದರೆ ಅದು ವರ್ತಮಾನದ ಕಿವಿಗೆ ಸಹಜವಾಗಿ ಕೇಳಿಸುವ ಸೊಲ್ಲು. ವಸ್ತು ಪ್ರಪಂಚ ಹಾಗೂ ಅದನ್ನು ತಬ್ಬಿಕೊಂಡಿರುವ ಭಾವಪ್ರಪಂಚ ಎರಡೂ ಬಿಡಿಸಲಾಗದ ಏಕತೆಯನ್ನು ಉಸಿರಾಡುತ್ತವೆ. ಅದನ್ನು ಬೇರ್ಪಡಿಸಿದಾಗ ಕರುಳಲ್ಲಿ ಕತ್ತರಿಯಾಡಿಸಿದಂತಹ ನೋವೊಂದು ಕದಲುತ್ತದೆ :

ಅಮ್ಮನ ಒಂದು ಜೊತೆ ಬಂಗಾರದ ಬಳೆ
ಅವಳ ಬದುಕಿನಂತೆಯೇ ನವೆದು, ಸವೆದು
ಬಣ್ಣ ಕಳಕೊಂಡು ಕೊನೆಗೀಗ ಮುರಿದೇ ಹೋಗಿದೆ
'ಮಾರಿಬಿಡಿ'... ಯಾರೋ ಟಿ.ವಿಯಲ್ಲಿ ಅರಚುತ್ತಿದ್ದಾರೆ.
(ಹಾಗಾದರೆ ಮಾರಿಬಿಡಿ)

ಮುರಿದು ಬಳೆಯನ್ನು ಮಾರಬಹುದು. ಅದರೆ, ಆ ಬಳೆಯ ಜೊತೆಗೆ ಬೆಸೆದ ನೋವು, ನಲಿವು, ಸಂಭ್ರಮ, ದೈನಂದಿನದ ಅನುಭವ ಜಗತ್ತುಗಳನ್ನು ಮಾರಬಹುದೆ? ಎಂದು ಕವಯತ್ರಿ ಪ್ರಶ್ನಿಸುತ್ತಾರೆ. ಈ 'ಮಾರುವ' ಮಾರಿ ಹೆಣ್ಣು ದೇಹವನ್ನೂ ಆವರಿಸಿ ಕಂಗೆಡಿಸಿದೆ. ದೇಹ ಮಾರುವುದನ್ನು 'ಕಾನೂನುಬದ್ಧ'ಗೊಳಿಸುವ ಚಿಂತನೆಗಳೂ ನಡೆಯುತ್ತಿವೆ! 'ಪತಿಗಳೆನ್ನನು ಮಾರಿ ಧರ್ಮಸ್ಥಿತಿಯನ್ನು ಕೈಗೊಂಡರು' ಎಂದು ವಿಷಾದಪಡುವದ್ರೌಪದಿ, ಹರಾಜು ಕಟ್ಟೆಯಲ್ಲಿ ನಿಂತ ಚಂದ್ರಮತಿ! ಒಂದೇ, ಎರಡೇ... ಹೀಗೆ ಮಾರಿ ಹೋಗಿ ಚೂರುಚೂರಾಗಿ ಮುರಿದು ಬಿದ್ದ ಹೆಣ್ತನದ ನೋವನ್ನು ದರ್ಶನ ಮಾಡಿಸುತ್ತಲೇ ನೀವು ಅವಳ ತಾಯ್ತನವನ್ನು, ಹೆಣ್ತನದ ಘನತೆಯನ್ನು ಮಾರಲಾಗದು ಎಂಬ ಧನಾತ್ಮಕ ಚಿಂತನೆಯಲ್ಲಿ ಕವಿತೆ ಕೊನೆಯಾಗುತ್ತದೆ. ಒಳಗಿನ ಚೈತನ್ಯವನ್ನು ಘಾಸಿಯಾಗದಂತೆ ಕಾಪಿಟ್ಟುಕೊಂಡ ಹೆಣ್ಣು ಲೋಕದ ಸ್ವಯಂಪ್ರಭೆಯರನ್ನು ಕಮಲಾ ಕಾವ್ಯದಲ್ಲಿ ಜೀವಂತಗೊಳಿಸಿರುವುದು ಹೀಗೆ.

ಈ ಮಾರುವ ಧಾವಂತದಲ್ಲಿ ಪರದೇಸಿತನದ ನೋವೊಂದು ಮರೆಯಲ್ಲಿ ಕಾಡುತ್ತಲೇ ಹೋಗುತ್ತದೆ. 'ಮುಖವಾಡಗಳ ಮಾರುವ ಊರಿನಲ್ಲೊಂದು ಸುತ್ತು' ಕವಿತೆ ಕೂಡ ಇದೇ ನೋವಿನ ಆವರ್ತನವೇಆಗಿದೆ. ಇಲ್ಲಿ ಮುಖವಾಡಗಳನ್ನು ಧರಿಸಬೆಕಿಲ್ಲ. ಅವು ಛರ್ಮವೇ ಆಗಿಬಿಟ್ಟಿವೆ. ಇದು ವ್ಯಾಪಾರೀ ಜಗತ್ತು. ಅದಕ್ಕೆ ತಾಯಿಭಾಷೆಯೇ ಬೇಕಾಗಿಲ್ಲ! ವ್ಯಾಪಾರವಾಗುವುದು ಮಾತ್ರ ಇಲ್ಲಿ ಮುಖ್ಯ.ತಾಯ್ತನ ಸೋಲುತ್ತಿದೆಯೇ ಎಂಬ ಸಣ್ಣ ದುಗುಡವನ್ನು ಕವಿತೆ ವ್ಯಕ್ತಪಡಿಸುತ್ತದೆ.

'ಮಾರಿಬಿಡಿ' ಸಂಕಲನದ ಕವಿತೆಗಳು ಒಂದು ಅವ್ಯಕ್ತ ಅನಾಥ ಪ್ರಜ್ಞೆಯೊಂದಕ್ಕೆ ಕನ್ನಡಿ ಹಿಡಿಯುತ್ತದೆ. ಈ ತಬ್ಬಲಿತನವನ್ನು ತನ್ನ ತೆಕ್ಕೆಯಲ್ಲಿಟ್ಟು ಸಂತೈಸಬೇಕೆಂಬ ತಾಯ್ತನವೂ ಇಲ್ಲಿ ಒಟ್ಟೊಟ್ಟಿಗೆ ಮುಖಾಮುಖಿಯಾಗುತ್ತವೆ. ಆ ಮೂಲಕ ಅಮ

ತನ್ನೊಳಗಿನ ಖಾಲಿತನವನ್ನೇ ತುಂಬಿಕೊಳ್ಳಲು ಚಡಪಡಿಸುವಂತಿದೆ. ತಾಯಿಯ ಈ ತಬ್ಬಲಿತನದ ನಾಗರೀಕತೆಯು ಶೂನ್ಯವಾಗಿದೆ, ಶುಷ್ಕವಾಗಿದೆ ಎಂಬುದನ್ನೇ ಪರೋಕ್ಷವಾಗಿ ಹೇಳುತ್ತಿದೆ. 'ಮೌನೇಶರೊಂದಿಗೆ ವಾಕಿಂಗ್' ಹಾಗೂ 'ಸರದಿ ಸಾಲಿನಲ್ಲಿ' ಎಂಬ ಕವಿತೆಗಳಲ್ಲಿ ಹೊಸ ಪೀಳಿಗೆಯ ಶುಷ್ಕತೆಯನ್ನು ಸೂಚ್ಯವಾಗಿ ಕವಯತ್ರಿ ಕಾಣಿಸುತ್ತಾರೆ. ಇಪ್ಪತ್ತರ ಹುಡುಗನಿಗೆ ಕೀಲಿಮಣಿಯೇ ಪ್ರಪಂಚ. ಪ್ರೀತಿ, ಮುನಿಸು, ಜಗಳ ಎಲ್ಲವೂ ಅದೇ ಅದೃಶ್ಯ ಜಗತ್ತಿನಲ್ಲಿಯೇ. ರೂಪ, ರಸ, ಗಂಧಗಳ ಜಗತ್ತೇ ಅವನಲ್ಲಿ ಗೈರುಹಾಜರಾಗಿದೆ. ಯಾರದೋ ಕಣ್ಣುಗಳಲ್ಲಿ ಪ್ರೀತಿ ಹುಡುಕುವ ಅಮ್ಮಂದಿರ ಕಣ್ಣು ಇವನಿಗೆ ಸ್ಪಂದಿಸಲು ಅವಕಾಶವೇ ಇಲ್ಲ. ಆಗ ಸಹಜವಾಗಿ ಹಿರಿಯರೂ 'ಗುಡ್‌ಮಾರ್ನಿಂಗ್' ಸಂದೇಶಗಳನ್ನೊತ್ತಿ ಈ ಭ್ರಮಾಜಗತ್ತಿಗೆ ಸರಿಯುವ ವ್ಯಂಗ್ಯ ಈ ಕವಿತೆಯಲ್ಲಿ ಪರಿಣಾಮಕಾರಿಯಾಗಿದೆ. 'ಮುಖ ಪುಸ್ತಕವೆಂಬ ಮಾರುಕಟ್ಟೆ' ಎಂಬ ಕವಿತೆ ಕೂಡ ಫೇಸ್‌ಬುಕ್ ಲೋಕದ ಕೃತಕ ಮೌಲ್ಯಗಳನ್ನು ಮೆಲ್ಲಗೆ ಛೇಡಿಸುತ್ತದೆ. ಇಲ್ಲಿ ನಮ್ಮ ಚಹರೆ ಮರೆತು 'ಗುಂಪು ಮರಗಳ ತಂಪಿನಲ್ಲೇ' ಬರಬೇಕು. ಗಮನ ಸೆಳೆಯುವುದೇ ಮುಖ್ಯವಾದಾಗ ಒಳದನಿ ಮುಚ್ಚಿಹೋಗುತ್ತದೆ. ಕಾಯುವ, ಧ್ವನಿಸುವ, ಧ್ಯಾನಿಸುವ, ಧರಿಸುವ ಕ್ಷಣಗಳೆಲ್ಲ ಮರೆಯಾಗಿ 'ಸೂಪರ್ ಮಿನಿಟ್' ಎಂಬ ತತ್ತಪಡಿ ದಿಢೀರ್ ಆಗಿ ಕಡತಂದ ಸಾಲುಗಳು ಕವಿತೆಯಾಗಿಬಿಡುತ್ತದೆ!.


ಹೀಗೆ ಸಮಕಾಲೀನ ಕವಿತೆಗಳ ಬಗೆಗೂ 'ಮಾರಿಬಿಡಿ' ತತ್ವ ಅನ್ವಯವಾಗುವುದನ್ನು ಎಂ.ಆರ್.ಕಮಲಾ ಗಮನಿಸುತ್ತಾರೆ. ಕಲಸಿ ಹೋದ ಆಧುನಿಕತೆಯ ಭಾಷೆ, ದೇಶಾವರಿ ನಗೆ, ಮಂಕುಬೂದಿಯೆರಚುವ ತೆಳು ಮಾತುಗಳು, ಮೂಲ ವಿಗ್ರಹವನ್ನೇ ಮರೆತು ಉದ್ಭವ ಮೂರ್ತಿಯಂತಾದ ಬದುಕು, ಮೇಲಿಂದ 'ಫೀಲಿಂಗ್ ಹ್ಯಾಪಿ! 'ಫೀಲಿಂಗ್‌ಅಸಮ್' ಎಂದು ಕೃತಕ ಉಲಿ! ಇಂಥಜಗತ್ತಿನ ನಡುವೆ 'ತಾಯ್ತನವನ್ನು ಹುಡುಕುವ ಅರ್ತತೆ, ಅರ್ದ್ರತೆಗೆ 'ಧ್ವನಿ ಕೊಡಲು 'ಮಾರಿಬಿಡಿ'ಯ ಕವಿತೆಗಳು ಹಂಬಲಿಸುತ್ತವೆ. ಅವು ಮಥುರೆಯ ಬೃಂದಾವನದ ಬರಿಗೊರಳ ರಾಧೆಯರ ಒಂಟಿತನದ ಸುಯ್ಲನ್ನು ಕೇಳಿಸಿಕೊಳ್ಳುತ್ತವೆ, ಸಿದ್ಧರ ಗುಡ್ಡದ ಸೆಳೆತಕ್ಕೆ ಸಿಕ್ಕಿ ಜಾಲಾರಿ ಹೂಗಳ ಪರಿಮಳದಲ್ಲಿ ಮೈಮರೆಯುತ್ತವೆ, ಸರದಿ ಸಾಲಿನಲ್ಲಿ ನಿಂತ ಖಾಲಿ ಕಣ್ಣಿನ ಒಂಟಿ ಮುದುಕರನ್ನು ಕಂಡು ಕನಲುತ್ತವೆ... ಮತ್ತು ಅಂತಹ ಸರತಿ ಸಾಲಿನಲ್ಲಿ ತಾನೂ ಇರಬಹುದೆಂದು ನೆನೆದು ವಿಹ್ವಲಗೊಳ್ಳುತ್ತವೆ. ಕವಿತೆ ಕೇಳಿಸಿಕೊಳ್ಳಬೇಕಾದದ್ದೇ ಇಂಥ ಕೇಳದ ಸ್ವರಗಳನ್ನು. ಅದು ಆಕಾರ ಕೊಡಬೇಕಾದದ್ದೇ ಇಂಥ ಆಕಾರ ವಿಹೀನ ನೋವುಗಳಿಗೆ. ಇಂಥ ನೋವಿನಲ್ಲಿಯೇ ನಿಜಮುಖದ 'ದರ್ಶನವಾಗುವುದು.

'ನೋವು' ಯಾರೋಕೂಗಿದರು
ಹೆಣ್ಣುಮಕ್ಕಳೆಲ್ಲ ದಬದಬನೆ
ಹೊರಗೋಡಿ ಸಿಕ್ಕ ಸಿಕ್ಕವರ
ಕಣ್ಣಲ್ಲೆಲ್ಲ ಮುಖ ನೋಡಿಕೊಂಡರು! *(ನೋವು)*

–ಡಾ. ಗೀತಾ ವಸಂತ

ಪು : ಹಿಪ್ಪೇಮರ (ಜೀವನ ವೃತ್ತಾಂತ ಕಥನ) ಲೇ: **ಸತ್ಯನಾರಾಯಣ ರಾವ್ ಅಣತಿ** ಪ್ರ: **ಕಾಲ ಪ್ರಕಾಶನ**, ಬೆಂಗಳೂರು ಪು: ೨೧೬ ಬೆಲೆ. ರೂ.೧೫೦/-

ಒಳಶೋಧನೆ ಇಲ್ಲದ ಉತ್ಸಾಹಿ ಬದುಕೊಂದರ ದಾಖಲೆ



ಸತ್ಯನಾರಾಯಣರಾವ್ ಅಣತಿಯವರು ತಮ್ಮ ಬದುಕಿನ ನೆನಪುಗಳನ್ನು ಆತ್ಮವೃತ್ತಾಂತ ಕಥನ ಎಂಬ ಪುಸ್ತಕದಲ್ಲಿ ಪ್ರಕಟಿಸಿದ್ದಾರೆ. ಅದನ್ನು ವೃತ್ತಾಂತವೆಂದೂ ಕಥನವೆಂದೂ ಎರಡು ಬಗೆಯಲ್ಲಿ ಹೇಳಿ ನಮ್ಮ ನಿರೀಕ್ಷೆಗಳನ್ನು ಹೆಚ್ಚಿಸಿದ್ದಾರೆ. ಅದನ್ನು ಸಾಹಿತ್ಯ ಕೃತಿಯಂತೆ ಓದಬೇಕೋ ಅಥವಾ ಕೇವಲ ಒಬ್ಬ ವ್ಯಕ್ತಿಯ ಬದುಕಿನ ಆಶೆ ಆಕಾಂಕ್ಷೆ, ಏಳು ಬೀಳಿನ ವಿವರಗಳನ್ನಾಗಿ ಓದಬೇಕೋ ಗೊತ್ತಿಲ್ಲ. ಹಾಗೆಯೇ ಒಬ್ಬ ವ್ಯಕ್ತಿ ತನಗೆ ಸರಿಕಂಡ ಬಗೆಯಲ್ಲಿ ಬಾಳಿ ಬದುಕಿದ ಬಗೆಯನ್ನು ಸಾರ್ವಜನಿಕ ಪರೀಕ್ಷೆಗೆ ಒಡ್ಡುವುದು ಎಷ್ಟು ಸರಿಯೋ ಗೊತ್ತಿಲ್ಲ.

ತಮ್ಮ ಆತ್ಮ ವೃತ್ತಾಂತವನ್ನು ನಾಲ್ಕು ಅಧ್ಯಾಯಗಳಲ್ಲಿ ಹರಡಿರುವ ಕಥನದ ಕ್ರಮದಲ್ಲಿ ಅಣತಿಯವರು ವಿವರಿಸಿದ್ದಾರೆ. ಮಧ್ಯೆ ಮಧ್ಯೆ ಬಹಳ ನಾಟಕೀಯವಾದ ಶೈಲಿಯನ್ನು ಅಳವಡಿಸಿಕೊಂಡು ತನಗೆ ತಾನೇ ಸ್ವದೂರದ ಆವರಣವನ್ನು ನಿರ್ಮಿಸಿಕೊಂಡು ಕಥನವನ್ನು ಕಟ್ಟುವ ಯತ್ನವನ್ನು ಮಾಡಿದ್ದಾರೆ. ಬಾಲ್ಯ ಯೌವನ ವೃತ್ತಿಜೀವನದ ಸಣ್ಣ ತುಂಡುಗಳನ್ನು ಪೋಣಿಸಿ ಕಥನವನ್ನು ಕಟ್ಟಿದರೂ ಅದನ್ನು ಎಲ್ಲಿಯೂ ಲಂಬಿಸಿ ಒಂದು ನಿಶ್ಚಿತ ಪರಿಣಾಮವನ್ನು ಉಂಟು ಮಾಡುವ ರೀತಿಯಲ್ಲಿ ಬರೆದಿಲ್ಲ. ಬಾಲ್ಯದ ಬಡತನ, ಯೌವನದ ತಾಕಲಾಟಗಳನ್ನು ವಿವರಿಸುವಾಗ ಮರುಕ ಮೆಚ್ಚುಗೆಗಳಿಗೆ ಇಂಬಾಗುವ ರೀತಿ ಇಲ್ಲಿಲ್ಲ. ಹಾಗೆಯೇ ಸಾಹಿತ್ಯ–ವೃತ್ತಿ–ಪ್ರವೃತ್ತಿ ಜೀವನದ ಧ್ಯೇಯ ಧೋರಣೆಗಳನ್ನು ಹೇಳುವಾಗ ಅದೇ ಸರಿಯೆಂದು ಪ್ರತಿಪಾದಿಸದೆ, ಅದು ತಾನು ಕಂಡುಕೊಂಡ ಕ್ರಮ ಎಂಬಂತೆ ಬರೆದಿರುವುದು ಗಮನಾರ್ಹವಾಗಿದೆ.

ತಮ್ಮ ಬಾಲ್ಯ–ಯೌವನದ ಜೀವಿತಾವಧಿಯ ವಿವರಗಳನ್ನು ಓದುತ್ತ ಹೋದಂತೆ ಅಲ್ಲಿ ಬರುವ ವ್ಯಕ್ತಿಗಳು ಘಟನೆಗಳನ್ನು ಬಹಳ ವಿಶೇಷವಾಗಿ ಉಲ್ಲೇಖಿಸಿದಂತೆ ಕಾಣುವುದಿಲ್ಲ. ಕುಮಾರವ್ಯಾಸ ಭಾರತವನ್ನು ಓದಲು ಕಲಿಸಿದ ಅಪ್ಪ, ಸ್ಮಾರ್ತರಾಗಿದ್ದೂ ಮಾಧ್ವರ ಹುಡುಗನನ್ನು ಮೆಚ್ಚಿ ಮದುವೆಯಾದ ಪೋಲಿಯೋ ಪೀಡಿತ ತಂಗಿ ಮೊದಲಾದವರ ವಿಚಾರಗಳು ಮುಖ್ಯವಾಗಿ ಕಾಣುತ್ತವೆ. ಮುಂದೆ ತಮ್ಮ ಸಂವೇದನೆ ಹಾಗೂ ವ್ಯಕ್ತಿತ್ವವನ್ನು ಆವರಿಸಿಕೊಂಡ ವೈಚಾರಿಕತೆ–ಸಾಹಿತ್ಯದ ಅಭಿರುಚಿಗಳು ಬಾಲ್ಯದಲ್ಲಿ ಹೇಗೆ ರೂಪುಗೊಂಡವು ಎಂಬುದನ್ನು ಅಣತಿಯವರು ಶೋಧಿಸಿಕೊಂಡಂತೆ ಕಾಣುವುದಿಲ್ಲ. ಅದಕ್ಕಾಗಿಯೇ ಇಲ್ಲಿ ಬರುವ ವಿವರಗಳು ವೃತ್ತಾಂತದಂತೆ ಕಾಣುತ್ತವೆಯೋ ಹೊರತು ತನ್ನೊಳಗನ್ನು(ಅಥವಾ ಹೊರಗನ್ನು) ಮಥಿಸಿ ವಿಶ್ಲೇಷಿಸುವ ಕಥನದಂತೆ ಕಾಣುವುದಿಲ್ಲ. ಒಟ್ಟಾಗಿ ಇಡೀ ಕೃತಿಯಲ್ಲಿ ಅವರ ಬದುಕಿನ(ನಮಗೆ ಗೊತ್ತಿಲ್ಲದ) ಹೊರ ವಿವರಗಳು ಗೊತ್ತಾಗುತ್ತವೆಯೇ ಹೊರತು ಅವರ ಒಳಗಣ ಲೋಕ–ತಾಕಲಾಟಗಳು ನಮ್ಮೆದಿರು ಬಿಚ್ಚಿಕೊಳ್ಳುವುದಿಲ್ಲ. ನಿರೂಪಣೆಯ ಉದ್ದಕ್ಕೂ ಅಣತಿಯವರು ಬಳಸಿರುವ ಸ್ವ–ದೂರದ ಶೈಲಿಯೂ ಇದಕ್ಕೆ ಒಂದು ಕಾರಣವಾಗಿದೆ.

ಯೌವನದ ದಿನಗಳಲ್ಲಿ ಬೆಂಗಳೂರಿನ 'ಭಿಕ್ಷಾನ್ನದ ಬ್ರಾಹ್ಮಣ'ರ ಹಾಸ್ಟೆಲಿಗೆ ಹೋದಾಗ ಅಲ್ಲಿ ಭಿಕ್ಷಾನ್ನ ಎಂಬ ಹಣೆಪಟ್ಟಿಯನ್ನು ತಮ್ಮ ಬಡತನದ ಅಸಹಾಯಕತೆಯ ನಡುವೆಯೇ ವಿರೋಧಿಸುವುದು, ಕೆಲಸ ಬಿಟ್ಟು, ಸ್ವಂತ ತಂದೆಯನ್ನೂ ಒಳಗೊಂಡಂತೆ ಯಾರ ಸಹಾಯವನ್ನೂ ನಿರೀಕ್ಷಿಸದೆ, ಉನ್ನತ ಶಿಕ್ಷಣವನ್ನು ಪಡೆಯುವ ಸಾಹಸ ಮಾಡುವುದು ಮತ್ತು ವೃತ್ತಿ ಬದುಕಿನಲ್ಲಿ ಸಂಪ್ರದಾಯವಾದಿಗಳ ವಿರೋಧದ ನಡುವೆಯೇ ತನ್ನ ಕ್ರಿಯಾಶೀಲತೆಯನ್ನು ರೂಪಿಸಿಕೊಳ್ಳುವುದನ್ನು ನೋಡಿದರೆ ಅವರ ವ್ಯಕ್ತಿತ್ವ ನಿಧಾನವಾಗಿ ಹೇಗೆ ಸ್ಫುಟಗೊಂಡಿತು ಎಂಬುದು ಗೊತ್ತಾಗುತ್ತದೆ. ಹಾಗೆ ನೊಡಿದರೆ ಅವರ ಶಿವಮೊಗ್ಗೆಯ ವೈಚಾರಿಕ ಹಾಗೂ ಸಾಂಸ್ಕೃತಿಕ ಜೀವನದ ವಿವರಗಳೇ ಕೃತಿಯ ಕೇಂದ್ರವಾಗಿವೆ. ಇಲ್ಲಿಯೂ ಸಹ ಅಣತಿಯವರು ತಮ್ಮ ವೈಚಾರಿಕ ಸಾಹಸಗಳು, ನೋವು ನಲಿವು ಆತಂಕಗಳನ್ನು ವಿವರಿಸುತ್ತಾರೆಯೇ ವಿನಾ ಅಂದಿನ ಒಟ್ಟು ಸಾಂಸ್ಕೃತಿಕ ಪರಿಸರವನ್ನು ಕಥಿಸುವ ಯತ್ನ ಮಾಡುವುದಿಲ್ಲ. ಅಣತಿಯವರು ಬಹಳ ಕ್ರಿಯಾಶೀಲವಾಗಿ ತೊಡಗಿಕೊಂಡಿದ್ದ ದಿನಗಳಲ್ಲಿ ಬಿರುಸಾಗಿದ್ದ ಸಮಾಜವಾದಿ, ದಲಿತ, ರೈತ ಚಳವಳಿಗಳನ್ನು 'ತಮ್ಮ' ಕಣ್ಣಲ್ಲಿ ಹೇಗೆ ನೋಡಿದರು ಎಂಬ ವಿವರಗಳು ದೊರಕುವುದಿಲ್ಲ. ಏನಿದ್ದರೂ, ಅನಂತಮೂರ್ತಿ, ಕಡಿದಾಳು ಶಾಮಣ್ಣ ಮೊದಲಾದ ವ್ಯಕ್ತಿಗಳ ಜೊತೆಗಿನ ಭೇಟಿ– ಆಪ್ತ ಸಂವಾದಗಳ ವಿವರಗಳು ದೊರಕುತ್ತವೆಯೇ ಆ ದಶಕಗಳ ಇನ್ನೊಂದು ಪಾರ್ಶ್ವನೋಟ ನಮಗೆ ದಕ್ಕುವುದಿಲ್ಲ. ಜೀವನವೃತ್ತಾಂತ ಮತ್ತು ಕಥನಗಳ ನಡುವಿನ ವ್ಯತ್ಯಾಸದ ಅರಿವು ಉಂಟಾಗುವುದು ಇಲ್ಲಿಯೇ.

ಕವಿಯೊಬ್ಬನ ನಿಜವಾದ ಆತ್ಮಚರಿತ್ರೆ ನಿಜವಾಗಿ ದೊರಕುವುದು ಅವನ ಕಾವ್ಯದಲ್ಲಿಯೇ ಹೊರತು ಇನ್ನೆಲ್ಲಿಯೂ ಅಲ್ಲ ಎಂಬ ಒಂದು ಮಾತಿದೆ. ಆದರೆ ಇಲ್ಲಿ ತಮ್ಮ ಕವನಗಳಿಗೂ ತಮ್ಮ ಜೀವನದ ಅನುಭವಗಳಿಗೂ ಅಂಟುಹಾಕಿ ನೋಡುವ ಪ್ರಯತ್ನವಿದೆ. ತಮ್ಮ ಕವನಗಳನ್ನು ಕುರಿತ ಅಭಿಪ್ರಾಯಗಳನ್ನು ಕಾವ್ಯವನ್ನು ಅರ್ಥೈಸುವ ಮಾರ್ಗಸೂಚಿಯ ಹಾಗೆ ಬಳಸಿಲ್ಲ.


ಸಾಹಿತ್ಯ–ನಾಟಕ–ಚಳವಳಿ–ವಿಚಾರವಾದದ ಹಲವು ಮುಖಗಳನ್ನು ಕಂಡಿರುವ ಅಣತಿಯವರು ಎಂಬತ್ತೆರಡರ ಹದವಾದ ಹರೆಯದಲ್ಲಿಯೂ ಎಲ್ಲಿಯೂ ಹಳಹಳಿಕೆ–ಸಿನಿಕತೆಗೆ ಒಳಗಾಗಿಲ್ಲ ಎಂಬುದೇ ಬಹಳ ಮುಖ್ಯವಾದ ಸಂಗತಿಯಾಗಿದೆ. ತಮ್ಮ ಬರಹದ ಶ್ರದ್ಧೆಗೆ, ತಾವು ರೂಢಿಸಿಕೊಂಡ ನೈತಿಕ ತತ್ವಗಳಿಗೆ

ಬದ್ಧರಾಗಿ ಯಾವುದರ ಬಗ್ಗೆಯೂ ಕಹಿಯಾಗದೆ ಬದುಕುತ್ತಿರುವುದು ಮಹತ್ವದ ಸಂಗತಿಯಾಗಿದೆ. ಆರ್‌ಎಸ್‌ಎಸ್ ಅವರ ವಿರುದ್ಧವಿದ್ದಾಗಲೂ, ಎಮರ್ಜೆನ್ಸಿಯ ದಿನಗಳಲ್ಲಿ ಅದೇ ಸಂಘಟನೆಗೆ ಸೇರಿದ ಹುಡುಗನೊಬ್ಬ ಪೋಲೀಸರಿಂದ ತಪ್ಪಿಸಿಕೊಳ್ಳಲು ತಮ್ಮ ಮನೆಗೆ ಬಂದಾಗ ಅವನಿಗೆ ಕಾಫಿ ಕುಡಿಸಿ ಉಪಚರಿಸುವುದು, ಪೋಲಂಕಿಯವರ 'ಸೀತಾಯಣ' ಪುಸ್ತಕ ಬಿಡುಗಡೆಯ ಸಂದರ್ಭದಲ್ಲಿ ತಮ್ಮ ಮೇಲೆಯೇ ಹಲ್ಲೆ ಮಾಡಿದ್ದ ಅರ್ಚಕರ ಮನೆಗೆ ಹೋಗಿ ಮಾತುಕತೆಗೆ ಕೂರುವುದು- ಇವೆಲ್ಲವುಗಳು ಅಣತಿಯವರ ಬದುಕಿನ ಅರ್ಥಪೂರ್ಣ ಕ್ಷಣಗಳಾಗಿವೆ. ಬದುಕಿನ ಜೀವಂತಿಕೆಗಾಗಿ ಸದಾ ಹಾತೊರೆಯುವ ಅಣತಿಯವರು ತಾನು ಹಳೆಯ ಗೊಡ್ಡಲ್ಲ, ಎಪ್ಪತ್ತೈದು ದೇಹಕ್ಕೆ ಮಾತ್ರವೇ ಮನಸ್ಸಿಗಲ್ಲ ಎಂದು ಸೂಚಿಸಲು ಒಂದು ಪೆಗ್ ಹಾಕಿಕೊಂಡು ಹಳೆಯ ನೆನಪುಗಳ ಕೇರಿಗೆ ನುಗ್ಗಲು ಪ್ರೇರೇಪಿಸುವ ಕಾಲ್ಪನಿಕ ಸ್ನೇಹಿತನೊಬ್ಬನ ಪಾತ್ರವನ್ನು ತಮ್ಮ ನಿರೂಪಣೆಯ ನಡುವೆ ಸೃಷ್ಟಿಸಿಕೊಂಡಿದ್ದಾರೆ. ಇಳಿ ವಯಸ್ಸಿನಲ್ಲಿ ಡ್ರೈವಿಂಗ್ ಕಲಿತು, ಕಾರಿನ ಸ್ಟೀರಿಂಗ್ ತಿರುವುತ್ತ, ತಮ್ಮದೇ ಕವನದ ಸಾಲುಗಳನ್ನು ಗುನುಗುನಿಸುತ್ತ ತಮ್ಮ ಬರಹವನ್ನು ಮುಗಿಸಿರುವ ಕ್ರಮವನ್ನು ನೋಡಿದರೆ, ಎಂದಿಗೂ ಕುಗ್ಗದ ಜೀವನೋತ್ಸಾಹದ ಚಿಲುಮೆ ಅವರಲ್ಲಿ ನಿರಂತರವಾಗಿ ಹರಿಯುತ್ತಿದೆ ಅನಿಸುತ್ತದೆ. ಅಂಥ ಜೀವನಪ್ರೀತಿಗೆ ಅವರು ರೂಢಿಸಿಕೊಂಡ ರುಚಿ ಅಭಿರುಚಿ ಚಿಂತನೆಗಳೂ ಕಾರಣ ಎಂಬುದು ಅವರ ಬರಹದಲ್ಲಿ ಕಾಣುತ್ತದೆ.

-ಡಾ. ಎಸ್. ಸಿರಾಜ್ ಅಹಮದ್

ಪು :**ಇಂದಿಗೆ ಬೇಕಾದ ಗಾಂಧಿ** ಲೇ: **ಡಿ.ಎಸ್. ನಾಗಭೂಷಣ** ಪ್ರ: **ಮೆ. ಮೂನಿಸ್ವಾಮಿ ಅಂಡ್ ಸನ್ಸ್**, ಬೆಂಗಳೂರು ಪು :೧೦೪ ಬೆಲೆ: ರೂ.೫೦/-

ಗಾಂಧಿ ಇಂದು ಜೀವಂತವಾಗುವ ಬಗೆಗಳು



'ಗಾಂಧಿ ಪಂಥ ಎಂಬುದೊಂದಿಲ್ಲ. ನನ್ನ ತರುವಾಯ ಯಾವ ಪಂಥವನ್ನೂ ಉಳಿಸಿ ಹೋಗುವ ಇಚ್ಛೆ ನನಗಿಲ್ಲ. ನಾನು ಯಾವುದಾದರೂ ನೂತನ ತತ್ವದ ಅಥವಾ ಸಿದ್ಧಾಂತದ ಮೂಲ ಪುರುಷ ಎಂಬ ಭಾವನೆ ನನಗಿಲ್ಲ' ಎಂಬ ಸ್ವತಃ ಗಾಂಧಿಯವರ ಸರಳ ಮನಸ್ಸಿನ ಮಾತನ್ನು ಮೀರಿ 'ಗಾಂಧಿ ಸಾಹಿತ್ಯ' ವಿಪುಲವಾಗಿ ಬೆಳೆಯುತ್ತ ಬಂದಿದೆ. ಬಹುಶಃ ಇದಕ್ಕೆ ಮುಖ್ಯ ಕಾರಣ: ಗಾಂಧಿಯವರು ಒಂದು ಸಮುದಾಯದ ನೆಮ್ಮದಿಯ ಜೀವನವನ್ನು ಒಬ್ಬ ವ್ಯಕ್ತಿಯ ನೆಮ್ಮದಿಯ ಜೀವನದ ವಿಸ್ತರಣೆಯಾಗಿ ಸೂಕ್ಷ್ಮವಾಗಿ ನೋಡಿರುವುದು.

ಈ ದೃಷ್ಟಿಯಿಂದ ಪ್ರಸ್ತುತ ಪುಸ್ತಕವು ಸಹ ಇತ್ತೀಚಿನ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ತಲ್ಲಣಗಳ ನಡುವೆ ಗಾಂಧಿ ನಮಗೆಷ್ಟು ಪ್ರಸ್ತುತ ಎಂಬುದನ್ನು ಸರಳವಾಗಿ, ನೇರವಾಗಿ ಪ್ರಸ್ತುತಪಡಿಸುತ್ತಾ ನಮ್ಮ ಗಮನ ಸೆಳೆಯುತ್ತದೆ. ಇಲ್ಲಿರುವ ವಿವಿಧ ಲೇಖನಗಳಲ್ಲಿ ಗಾಂಧಿ ವ್ಯಕ್ತಿತ್ವ, ಸಿದ್ಧಾಂತ, ಚಳುವಳಿ ಮತ್ತು ರಾಜಕಾರಣಗಳನ್ನು ಸೂಕ್ಷ್ಮವಾಗಿ ಅವಲೋಕಿಸಲಾಗಿದ್ದು, ಇವುಗಳಿಗೆ ಸವಾಲಾದ ಸನ್ನಿವೇಶಗಳನ್ನೂ, ವಿರೋಧಾಭಿಪ್ರಾಯಗಳನ್ನೂ ಗಮನದಲ್ಲಿರಿಸಿಕೊಂಡು ಬರೆದಿರುವ ಲೇಖನಗಳಾದ್ದರಿಂದ ಇವುಗಳಿಗೆ ಒಟ್ಟಾರೆಯಾಗಿ 'ಇಂದಿಗೆ ಬೇಕಾದ ಗಾಂಧಿ' ಎಂಬ ಶೀರ್ಷಿಕೆ ಕೊಟ್ಟಿರುವುದು ಉಚಿತವೇ ಆಗಿದೆ.

ಈ ಪುಸ್ತಕದ ಮುಖ್ಯ ಮಿಡಿತವೆಂದರೆ, ಗಾಂಧೀಜಿ ಮುಖ್ಯರಾಗುವುದು ಸಾಂಪ್ರದಾಯಿಕ ಅರ್ಥದ ದೇಶಭಕ್ತಿಯಿಂದಲ್ಲ, ಪ್ರತಿ ಮನುಷ್ಯನಲ್ಲೂ ಆತ್ಮಗೌರವವನ್ನು ಉದ್ದೀಪಿಸಿದ್ದರಿಂದಾಗಿ ಎಂದು ಹೇಳುತ್ತಾ, ಅದನ್ನು ವಿವರಿಸುವ ಬಗೆ. ದಕ್ಷಿಣ ಆಫ್ರಿಕಾದಲ್ಲಿ ನಡೆದ ರೈಲು ಡಬ್ಬಿಯ ಘಟನೆಯನ್ನು ತಮ್ಮದೇ ಆದ ವೈಯಕ್ತಿಕ ಘನತೆ, ಆತ್ಮಗೌರವದ ಪ್ರಶ್ನೆಯಾಗಿ ನೋಡಿದ್ದು ಮತ್ತು ಇದು ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಗೆ ಪ್ರೇರಣೆಗಿಂತ ಹೆಚ್ಚಾಗಿ 'ಸ್ವ'-ರಾಜ್ಯ ಎಂಬ ಪರಿಕಲ್ಪನೆಗೆ ಬುನಾದಿಯಾದ ಕಥೆ ಇಲ್ಲಿದೆ. ಅಲ್ಲಿಯ ಭಾರತೀಯರನ್ನು ವರ್ಣಭೇದದ ಆಧಾರದ ಮೇಲೆ ಮೂಲೋತ್ಪಾಟನೆಗೊಳಿಸುತ್ತಿದ್ದ ಸರ್ಕಾರದ ವಿರುದ್ಧದ ಹೋರಾಟದಲ್ಲಿ ಗಾಂಧಿ ತಮ್ಮನ್ನು ತಾವು ('ಸ್ವ') ಕಂಡುಕೊಳ್ಳುತ್ತಾರೆ. ಅವರ ಗ್ರಾಮ ಸ್ವ-ರಾಜ್ಯದ ಕಲ್ಪನೆ ಉದಯವಾಗುವುದು ಆ ನೆಲೆಯಲ್ಲೇ. ಈ ದೃಷ್ಟಿಯಿಂದ ಈ ಪುಸ್ತಕಕ್ಕೆ ಶೀರ್ಷಿಕೆಯೂ ಆಗಿರುವ 'ಇಂದಿಗೆ ಬೇಕಾದ ಗಾಂಧಿ' ಲೇಖನ ಪ್ರಸ್ತುತವಾಗುತ್ತದೆ.

ಈ ಪುಸ್ತಕದ ಸ್ವಾರಸ್ಯಪೂರ್ಣ ಲೇಖನವೆಂದರೆ ಗಾಂಧೀಜಿಯವರ 'ಅಸ್ವಾದ ವ್ರತ'ವನ್ನು ಕುರಿತದ್ದು. ಅವರು ರೂಪಿಸಿದ ಹನ್ನೊಂದು ವ್ರತಗಳಲ್ಲಿ ಇದೊಂದು. ಮನುಷ್ಯನ ಶರೀರಕ್ಕೆ ಅಗತ್ಯವಾದ ಆಹಾರದ ವೈಜ್ಞಾನಿಕತೆಯನ್ನು, ಅದರಲ್ಲು ಸಸ್ಯಾಹಾರದ ಮಹತ್ವವನ್ನು ಅವರು ಕಂಡುಕೊಂಡ ಬಗೆ ಇಲ್ಲಿ ಸಕಲ ವಿವರಗಳಿಂದ ನಿರೂಪಿತವಾಗಿ ಕುತೂಹಲ ಹುಟ್ಟಿಸುವಂತಿದೆ. ಗಾಂಧಿ ಪ್ರಕಾರ ಆಹಾರ ಸೇವನೆ ಭೋಗಕ್ಕೂ ಅಲ್ಲ, ರುಚಿಯನ್ನು ತಣಿಸುವುದಕ್ಕೂ ಅಲ್ಲ- ನಮ್ಮ ಶರೀರ, ಮನಸ್ಸುಗಳ ಆರೋಗ್ಯವನ್ನು, ಸಂಯಮವನ್ನು, ಕಂಡುಕೊಳ್ಳಲು. ಈ ಲೇಖನದ ಕೊನೆಯಲ್ಲಿ ಬದುಕಿಗೆ 'ಅಗತ್ಯ ಅನಗತ್ಯ'ಗಳ ಮನಗಾಣುವಿಕೆ ಬಗೆಗೆ ನೀಡಿರುವ ಗಾಂಧಿಯವರ ಅನುಭವ-ಚಿಂತನೆ ಅರ್ಥಪೂರ್ಣವಾಗಿದೆ.

'ಗಾಂಧಿ ಚರಿತ್ರೆ' ಲೇಖನದಲ್ಲಿ ಗೋ.ಕೃ.ಗಾಂಧಿ (ಗಾಂಧಿಯವರ ಮೊಮ್ಮಗ)ಯವರ The Oxford India Gandhi : Essential writing ಪುಸ್ತಕದ ಕೆಲವು ಕುತೂಹಲಕಾರಿ ಘಟನೆಗಳನ್ನು ಅನುವಾದಿಸಿ ನೀಡಲಾಗಿದೆ. ಈ ಪ್ರಸಂಗಗಳು ಗಾಂಧಿ ಸಾಹಿತ್ಯ ತತ್ವಗಳ ಬಗ್ಗೆ ಆತ್ಮೀಯತೆಯನ್ನು ಉಂಟುಮಾಡುತ್ತವೆ.

ಅಹಿಂಸಾ ಚಳವಳಿಯ ಪರಿಣಾಮಗಳ ತೀವ್ರತೆಯನ್ನು ವಿವಿಧ ಘಟನೆಗಳ ಮೂಲಕ 'ಗಾಂಧಿ ಪುರಾಣ' ಲೇಖನದಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪಿಸಲಾಗಿದೆ. ಇಲ್ಲಿ ದಾಖಲಾಗಿರುವ ಎಂ.ವಿ.ಕಾಮತರು ಗಾಂಧಿ ಚಳುವಳಿ ಸಂಬಂಧವಾಗಿ ಹೇಳಿದ ಒಂದು ಘಟನೆಯಂತೂ ಮನ ಕಲಕುತ್ತದೆ.

'ವರ್ಣ ಮತ್ತು ಜಾತಿ ಪದ್ಧತಿ'ಯ ಬಗೆಗೆ ಗಾಂಧಿಯವರ ಮರುಚಿಂತನೆ, ಟೀಕೆಗಳನ್ನು ಎದುರಿಸಿದ ಅವರ ಅನುಭವಪೂರ್ಣ 'ಚಿಂತನೆ'ಗಳನ್ನು ಒಳಗೊಂಡ ದೀರ್ಘವಾದ ಲೇಖನ, ಡಾ. ಅಂಬೇಡ್ಕರ್ ಅವರನ್ನು ಕಡು ವಿರೋಧಿಯೆಂಬಂತೆ ಬಿಂಬಿಸುತ್ತ ಬಂದಿರುವ ಇಂದಿನ ಸನ್ನಿವೇಶಗಳ ಜಿಜ್ಞಾಸೆಗಳ ಯಥಾರ್ಥತೆಯನ್ನು ಕಂಡು ಹಿಡಿಯಲು ಇಲ್ಲಿ ಯತ್ನಿಸಲಾಗಿದೆ. ವರ್ಣಧರ್ಮ ಗ್ರಾಮಸಮುದಾಯದ ಹಿತ ಕಾಯುವ ಏಕೈಕ ಗುರಿಯುಳ್ಳ ಸೇವೆಗಳೆ ಹೊರತು ಶ್ರೇಣೀಕರಣವಲ್ಲ; ಜಾತಿ ವರ್ಣಧರ್ಮದ ಅವನತಿಗೊಂಡ ರೂಪ; ಇಂದಿನ ಸಂದರ್ಭದಲ್ಲಿ ರಾಟೆ ಬ್ರಾಹ್ಮಣನಿಗೆ ವೇದಜ್ಞಾನವೆಂದರೆ ಚರಕದ ಧರ್ಮ;- ಹೀಗೆ ವಿವಿಧ ಆಯಾಮಗಳಲ್ಲಿ, ಅಂಬೇಡ್ಕರ್ ಚಿಂತನೆಗಳನ್ನು ಮುಖಾಮುಖಿಯಾಗಿಸಿ ವಿವೇಚಿಸಿರುವುದು ಚಿಂತನಾರ್ಹವಾಗಿದೆ.

'ಗಾಂಧಿ ಕಾಲ ಮುಗಿಯಿತು' ಎಂದು ಗೊಣಗುಟ್ಟುವುದು ಈಗ ಸಾಮಾನ್ಯವಾಗಿದೆ. ನಿಜ ಬದುಕಿನ ದಾರಿ ತೋರಿಸುವ ಈ ಸಿದ್ಧಾಂತಕ್ಕೆ ಈಗ ವಾರಸುದಾರಿಕೆ ಇಲ್ಲದೆ ಅಂತ್ಯ ಕಾಣುತ್ತಿದೆಯೇ? ಏಕೆ? ಇಂತಹ ವಿಚಿತ್ರ ಪರಿಸ್ಥಿತಿಗೆ ನಮ್ಮ ದೇಶದ ಲೇಖಕ-ಬುದ್ಧಿಜೀವಿಗಳು ಹೇಗೆ ಕಾರಣವೆಂಬುದನ್ನು ಇಲ್ಲಿನ ಲೇಖನವೊಂದು ಪರಿಣಾಮಕಾರಿಯಾಗಿ ಮನಗಾಣಿಸುತ್ತದೆ.


ಓಶೋ(ಆಚಾರ್ಯ ರಜನೀಶ್) ಗಾಂಧಿಯವರ ಬಗೆಗೆ ಮಾಡಿರುವ ಪ್ರವಚನಗಳಲ್ಲಿ ಆತನ ವಿಕೃತ ಅಭಿಪ್ರಾಯಗಳಿಗೆ ಇಲ್ಲಿಯ ಲೇಖನ ಪ್ರತಿಕ್ರಿಯಿಸುತ್ತದೆ. ಲೌಕಿಕ ಆಸೆ, ಉಪಭೋಗಗಳನ್ನು ನಂಬಿ ಹೊಸ ಪಂಥ/ಮತ ಸೃಷ್ಟಿಸಿದ ಈ 'ಗುರು' ಗಾಂಧಿಯವರನ್ನು 'ಹಿಟ್ಲರ್‌ನಂತೆ' ಎಂಬ ಅಭಿಪ್ರಾಯವನ್ನಲ್ಲದೆ ಮತ್ತೇನನ್ನು ಹೇಳಬಹುದು? ಈ ಸಂಬಂಧದ ನಾಗಭೂಷಣ ಅವರ ಲೇಖನ ಇಲ್ಲಿ ಸಮರ್ಥವಾಗಿ ಮೂಡಿಬಂದಿದೆ.

ಗಾಂಧಿ 'ಧರ್ಮ'ದ ಹಿಂದಿರುವ ವೈಚಾರಿಕತೆ ಮತ್ತು ನೈತಿಕತೆಯನ್ನು ಪ್ರಸ್ತಾಪಿಸುತ್ತ, ಅದು 'ಆತ್ಮಸಾಕ್ಷಿಯ ನಿಕಷದಲ್ಲಿ ತೇರ್ಗಡೆಯಾಗದ ಹೊರತು ಅದು ಧರ್ಮವೆನಿಸುತ್ತಿರಲಿಲ್ಲ' ಎನ್ನುತ್ತಾರೆ. ಆದ್ದರಿಂದಲೇ ಅವರಿಗೆ ಧರ್ಮ ಮತ್ತು ನೀತಿಗಳ ನಡುವೆ ಪ್ರಥಮ ಆಯ್ಕೆ - ನೀತಿ. ಹಾಗಾಗಿ ಧರ್ಮವನ್ನು 'ಅಫೀಮು' ಎಂದು ಆಧುನಿಕರು (ಉದಾ : ಮಾರ್ಕ್ಸ್) ಕರೆದುದಕ್ಕೆ ಪ್ರತಿಯಾಗಿ, ಗಾಂಧಿ ಲೌಕಿಕ ನೆಲೆಯದ್ದೇ ಆದ ಒಂದು ಹೊಸ ಅರ್ಥ ನೀಡಿದ್ದನ್ನು ಇಲ್ಲಿನ ಒಂದು ಪುಟ್ಟ ಲೇಖನ ಪರಿಣಾಮಕಾರಿಯಾಗಿ ವಿವರಿಸುತ್ತದೆ.

ಕನ್ನಡದ ಗಾಂಧಿ ಸಾಹಿತ್ಯಕ್ಕೆ ಈ ಕೃತಿ ಒಂದು ಉತ್ತಮ ಸೇರ್ಪಡೆ. ಈ ಪುಸ್ತಕದ ಪುಟ ೭೩ ರಲ್ಲಿ ತಿಳಿಸಿರುವಂತೆ, ಗಾಂಧಿಯವರೊಂದಿಗೆ ನೆಹರೂ, ಟ್ಯಾಗೋರ್, ಸುಭಾಷ್ ಮುಂತಾದವರ ತಾತ್ವಿಕ ಸಂವಾದದ ವಿವೇಚನೆಗಳನ್ನು ಕುರಿತ ಇಂತಹ ಪುಟ್ಟ ಕೃತಿಗಳು ಕನ್ನಡದಲ್ಲಿ ಹೊರಬಂದರೆ ಉಪಯುಕ್ತವಾಗುತ್ತದೆ.

-ಎಂ.ಬಿ. ನಟರಾಜ್

ತಿಂಗಳ ಸಾಲುಗಳು...



ಈಶ್ವರನು ನಮ್ಮಲ್ಲಿಯೂ ಇದ್ದಾನೆ. ಆತನ ಮಹಾಜ್ಯೋತಿಯ ಕಿರಣಗಳು ನಮ್ಮ ಬುದ್ಧಿಯಲ್ಲಿಯೂ ಪ್ರಕಾಶಿಸುತ್ತವೆ. ಆ ಪ್ರಕಾಶವೇ ಮತಿ. ಆ ಮತಿಯನ್ನು ಮತಿಯನ್ನು ತಿರಸ್ಕರಿಸಿದರೆ ಈಶ್ವರನ ಮಹಾಜ್ಯೋತಿಯನ್ನು ತಿರಸ್ಕರಿಸಿದಂತಾಗುತ್ತದೆ. ಹಾಗೆ ಮಾಡುವವನೇ ನಾಸ್ತಿಕನು. ಮೌಢ್ಯವೇ ಈಶ್ವರ ನಿಂದೆ.

-ಕುವೆಂಪು

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrail Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568

Rgd No. KA/SK/SMG-1209/2013-15

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204(Karnataka)